ಸದನದಲ್ಲಿ ಇರಲಿಲ್ಲ. ಟೈಮ್ ಆಯಿತು ಆಮೇಲೆ ಸ್ಟೇಟ್‌ಮೆಂಟ್ ಕೊಡುತ್ತೇನೆ. ಇಲ್ಲದಿದ್ದರೆ ನಂತರ ಅವರಿಗೆ ಉತ್ತರವನ್ನು ಕಳುಹಿಸಿಕೊಡುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ, 1996-97

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕೆ ಮುಂಚೆ ಮಾನ್ಯ ಸದಸ್ಯರಾದ ಶಿವಾ ಮೋಹನ್ ಹೀರಾಚಂದರವರು ಮತ್ತು ಮಾನ್ಯ ಸದಸ್ಯರಾದ ಶ್ರೀ ಶ್ರೀಕಾಂತ ದತ್ತಪ್ಪ ಅಂಬರಗಟ್ಟೆಯವರು ಸದನದ ಒಳಗಡೆ ಬಂದಿರುತ್ತಾರೆ. ಅವರುಗಳಿಗೆ ಸುಸ್ವಾಗತವನ್ನು ಬಯಸುತ್ತೇನೆ. ಅವರುಗಳು ಅಪರೂಪಕ್ಕೆ ಸದನದ ಒಳಗೆ ಬಂದಿರುವುದರಿಂದ ಸ್ವಾಗತ.

ಶ್ರೀಮತಿ ಎಸ್, ಪ್ರಮೀಳಾ ನೇಸರ್ಗಿ : ನಾವೂ ಅವರುಗಳನ್ನು ನೋಡಬೇಕು.

ಅಧ್ಯಕ್ಷರು : ನೀವು ಯಾರನ್ನು ಯಾರು ನೋಡುತ್ತೀರೋ ಇಲ್ಲವೋ ಅವರ ನಾನು ಎಲ್ಲರನ್ನು ನೋಡುತ್ತೇನೆ. ಯಾರು ಕೆಲವರು ಅಪರೂಪಕ್ಕೆ ಬರುತ್ತಾರೆ. ಅಂತಹ ಸದಸ್ಯರು ಸದನದ ಒಳಕ್ಕೆ ಬಂದಾಗ ನನಗೆ ಸಂತೋಷವಾಗುತ್ತದೆ ನಾನು ಅವರಿಗೆ ಸ್ವಾಗತವನ್ನು ಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಪರೂಪಕ್ಕೆ ಯಾರು ಬರುತ್ತಿದ್ದಾರೆ ಎಂದು ಗೊತ್ತಾಗಲಿ ಎಂದು ಅಷ್ಟೇ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಶ್ರೀ ಬಿ.ಎಸ್. ಯಡಿಯೂರಪ್ಪನವರೇ ನಾನು ಮಾತನಾಡುವುದಕ್ಕೆ ಎರಡು ನಿಮಿಷ ಅವಕಾಶವನ್ನು ಕೊಡಬೇಕು. ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರುವುದಕ್ಕೆ ಇಚ್ಛೆಯನ್ನು ಪಡುವುದೇನೆಂದರೆ ಈ ಸದನ ಪ್ರಾರಂಭವಾದಾಗಿನಿಂದ ನಾನು ನೋಡುತ್ತಿರುವಂತೆ ಈ ಸದನದ ಒಬ್ಬ ಸದಸ್ಯರಾದ ಶ್ರೀ ಹೆಚ್. ಎನ್. ನಂಜೇಗೌಡರು ಪಾರ್ಲಿಮೆಂಟಿನಲ್ಲಿ ಕೆಲಸವನ್ನು ಮಾಡಿದ್ದಾರೆ. ಇದು ಏಕೆ ಕೇಳುತ್ತಿದ್ದೇನೆ ಎಂದರೆ ಶ್ರೀ ಹೆಚ್. ಎನ್. ನಂಜೇಗೌಡರು ಪಾರ್ಲಿಮೆಂಟಿನಲ್ಲಿ ಕೆಲಸವನ್ನು ಮಾಡಿದ್ದಾರೆ. ಬಹಳ ಉನ್ನತವಾದಂತಹ ಒಂದು ಕಾಣಿಕೆಯು ಅವರು ಪಾರ್ಲಿಮೆಂಟಿನಲ್ಲಿ ಇದ್ದಾಗ ಸಿಕ್ಕದ ಹಾಗೆಯೇ ಈ ಸದನಕ್ಕೂ ಕೂಡ ಅವರು ಎರಡನೇ ಸಾರಿಯೋ ಮೂರನೇ ಸಾರಿಯೋ ಆಯ್ಕೆಯಾಗಿ ಬಂದಿರುವುದು.

ಅಧ್ಯಕ್ಷರು : ನಿಮ್ಮ ಗೌಡರ ಗದ್ದಲ ನೀವೇ ವಿಚಾರಿಸಿಕೊಳ್ಳಿ. ನಮಗೆ ಏಕೆ? ನಮಗೆ ಸಂಬಂಧವಿಲ್ಲದ ವಿಚಾರವಾಗಿರುತ್ತದೆ. ಮಾನ್ಯ ಗೌರವಸ್ಥಿತ ಸದಸ್ಯರಿಗೆ ವಿನಂತಿಸುವುದೇನೆಂದರೆ ಈ ವಿಚಾರ ಈ ಸದನಕ್ಕೆ ಸಂಬಂಧವಿಲ್ಲ.

(ಗೊಂದಲ)

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಹತ್ತು ದಿನಗಳ ಕಾಲ ಸದನ ನಡೆದರು

ಸಹ ಅವರು ಸದನಕ್ಕೆ ಹಾಜರಾಗದೇ ಇರುವುದರಿಂದ ಅವರ ಮೇಲೆ ಕಾನೂನಿನ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಮತ್ತು ಅವರ ಪ್ರತಿಭಟನೆ ಇದು ಈ ಸದನಕ್ಕೆ ಬೇಕಾಗುತ್ತದೆ. ಅವರು ಅನೇಕ ಸಂದರ್ಭಗಳಲ್ಲಿ ಈ ಸದನದಲ್ಲಿಯೂ ಕೂಡ ಮಾತನಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು : ಇದು ನಮ್ಮ ವ್ಯಾಪ್ತಿಗೆ ಬರತಕ್ಕಂತಹ ವಿಚಾರವಲ್ಲ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ದಯಮಾಡಿ ನನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿ ಒಂದು ಘಳಿಗೆಯೂ ಸಹ ಕೆಲಸವನ್ನು ಮಾಡುವುದಿಲ್ಲ. ಯಾರೇ ಸದಸ್ಯರು ಸದನಕ್ಕೆ ಬರುವುದಕ್ಕೆ ತೊಂದರೆಯಾಗಿ ಗೈರು ಹಾಜರಿಗೆ ಬರದರೆ ಈ ಸಭೆಯ ಮುಂದೆ ಇಡುತ್ತೇನೆ. ಮತ್ತು ಸಭೆಯ ಅನುಮತಿಯನ್ನು ಪಡೆಯುತ್ತೇನೆ

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರು; ಯಾವುದೇ ಸದಸ್ಯರು ಸದನಕ್ಕೆ 10 ದಿವಸಗಳ ಕಾಲ ಬರದೇ ಇರುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ.

ಅಧ್ಯಕ್ಷರು : ನಾನು ಏಕೆ ಶಿಶಿರೇ ರವಾ ಹೋಮನ್ ಹಿರಾಬಂದರವರ ಬಗ್ಗೆ ಮತ್ತು ಮಾನ್ಯ ಸದಸ್ಯರಾದ ಶ್ರೀ ಶ್ರೀಕಾಂತ ರುದ್ರಪ್ಪ ಅಂಬರಗಟ್ಟೆಯವರ ಬಗ್ಗೆ ಪ್ರಸ್ತಾಪ ಮಾಡಿದೆ ಎಂದರೆ, ಹೊಸ ಸದಸ್ಯರು ಮೊದಲನೆಯ ಸಲ ಆಯ್ಕೆಯಾಗಿ ಬಂದಿದ್ದಾರೆ, ಸದನದ ಒಳಗಡೆಯೇ ಬರುವುದಿಲ್ಲ ಅವರಿಗೆ ಈ ರೀತಿಯಾಗಿ ಸ್ವಾಗತವನ್ನು ಮಾಡಿದರೆ ಇನ್ನು ಮುಂದೆ ಸರಿಯಾಗಿ ಬರುತ್ತಾರೆ ಮತ್ತೆ ಬೇರೆಯವರಿಗೆ ಒಂದು ಮಾರ್ಗವಾಗಲಿ ಎಂದು ಹೇಳಿದೆ ಅಷ್ಟೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಶ್ರೀ ಹೆಚ್. ಎನ್. ನಂಜೇಗೌಡರು ಸದನ ಪ್ರಾರಂಭವಾಗಿನಿಂದಲೂ ಸದನದ ಒಳಗಡೆ ಕಾಲು ಇಟ್ಟಿಲ್ಲ. ಇದಕ್ಕೆ ಕಾರಣವೇನು ಎಂದು ಆಷ್ಟೇನೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರಿಗೆ ಆರೋಗ್ಯ ಸರಿ ಇದೆ ಎಂದು ಗೊತ್ತಾಗಿದೆ .

ಅಧ್ಯಕ್ಷರು : ತಾವುಗಳೆಲ್ಲರೂ ದಯಮಾಡಿ ಕುಳಿತುಕೊಳ್ಳಿ, ಅವರವರ ಆರೋಗ್ಯವನ್ನು ಅವರು ನೋಡಿಕೊಳ್ಳುತ್ತಾರೆ, ಬೇಕಾದರೆ ಅವರ ಚಿಕಿತ್ಸಕರು ನೋಡಿಕೊಳ್ಳುತ್ತಾರೆ. ತಾವುಗಳು ಎಲ್ಲರೂ ಅವರಿಗೆ ಅನುಕಂಪವನ್ನು ತೋರಿಸಬೇಕಾಗಿಲ್ಲ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಬೈರೇಗೌಡರಿಗೆ ಶ್ರೀ ಹೆಚ್.ಎನ್. ನಂಜೇಗೌಡರ ಬಗ್ಗೆ ಬಹಳ ಕಾಳಜಿ ಇದೆ. ಬಹುಶಃ ಇಂತಹ ಸುದ್ದಿಗಳನ್ನು ಪ್ರಚಾರ ಮಾಡುವುದರಲ್ಲಿ ಶ್ರೀ

ಬೈರೇಗೌಡರು ಎತ್ತಿದ ಕೈ. ಶ್ರೀ ವೀರಪ್ಪಮೊಯಿಲಿಯವರು ಟೇಪ್ ಪ್ರಕರಣವನ್ನು ಇಡೀ ಕರ್ನಾಟಕ ರಾಜ್ಯಾದ್ಯಂತ ಟೇಪುಗಳನ್ನು ಹಾಕಿ ಪ್ರಚಾರ ಮಾಡಿದಂತಹ ಶ್ರೀ ಬೈರೇಗೌಡರು ಇವತ್ತು ಶ್ರೀ ಹೆಚ್. ಎನ್. ನಂಜೇಗೌಡರ ಬಗ್ಗೆ ಹೇಳಲು ಬಂದಿದ್ದಾರೆ. ಇಂತಹ ಕುಯುಕ್ತಿಯ ಕೆಲಸವನ್ನು ಮಾಡಬಾರದು ಎಂದು ನಾನು ಹೇಳುತ್ತೇನೆ.

(ಗೊಂದಲ)

ಶ್ರೀ ಜಿ. ಬಿ. ಶಿವಣ್ಣ : ತಾವು ಮಂತ್ರಿಗಳಾಗಿದ್ದೀರಿ, ಈ ರೀತಿಯಾಗಿ ಸದನದಲ್ಲಿ ವ್ಯವಹಾರವನ್ನು ಮಾಡಿದರೆ, ಹೊಸದಾಗಿ ಬಂದಿರುವವರು ಈ ರೀತಿಯಾಗಿ ಪ್ರಚಾರವನ್ನು ಮಾಡುವುದರಲ್ಲಿ ಸನ್ಮಾನ್ಯ ಬೈರೇಗೌಡರು ಎತ್ತಿದ ಕೈ ಎಂದು ತಿಳಿದುಕೊಳ್ಳುತ್ತಾರೆ. ಅದರಲ್ಲಿ ಏನೇನು ವ್ಯತ್ಯಾಸ ಇಲ್ಲ ಎಂದು ಮೇಲೆ ಇಂತಹ ಕುಯುಕ್ತ ಸುದ್ದಿಗಳನ್ನು ಇತರ ಪಕ್ಷಗಳ ಮೇಲೆ ಎತ್ತಿ ಕಟ್ಟುವುದು ಸರಿಯಲ್ಲ.

(ಗೊಂದಲ)

ಮಾನ್ಯ ನಂಜೇಗೌಡರ ಬಗ್ಗೆ ನಮಗೆ ಬಿಡಿ. ನಾವು ನೋಡಿಕೊಳ್ಳುತ್ತೇವೆ. ನಿಮ್ಮದು ಏನಿದೆ ಅದನ್ನು ನೋಡಿಕೊಳ್ಳಿ.

(ಗೊಂದಲ)

ನಿಮ್ಮದು ಯಾದವೀ ಕಲಹ. ಅದರೆ ನಮ್ಮದು ಗಂಡಹೆಂಡಿರ ಜಗಳ. ರಾತ್ರಿ ಉಂಡು ಮಲಗಿದ ಮೇಲೆ ತೀರ್ಮಾನವಾಗುತ್ತದೆ. ನಿಮ್ಮದನ್ನು ನೀವು ನೋಡಿಕೊಳ್ಳಿ. ನಿಮ್ಮ ಎಲ್ಲೆಯಲ್ಲಿ ಕತ್ತೆ ಸತ್ತು ಬಿದ್ದಿದೆ, ನಮ್ಮ ಎಲೆಯಲ್ಲಿ ನೊಣ ಸತ್ತು ಬಿದ್ದಿರುವುದಕ್ಕೆ ನೀವು ಏತಕ್ಕೆ ಹುಡುಕುತ್ತಿದ್ದೀರಿ? ನಿಮ್ಮ ಎಲೆಯಲ್ಲಿ ಏನು ಬಿದ್ದಿದೆ ಅದನ್ನು ಹುಡುಕಿಕೊಳ್ಳಿ.

ಶ್ರೀ ಸಿ. ಬೈರೇಗೌಡ : ನಮ್ಮ ಕಡೆ ಸತತವಾಗಿ ಯಾರೂ ಖಾಲಿ ಇಲ್ಲ. ನಿಮ್ಮದೂ ಈ ಸದನ ಪ್ರಾರಂಭವಾದಾಗಿನಿಂದ ಸತತವಾಗಿ ಖಾಲಿ ಇದೆ.

+ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಬೈರೇಗೌಡರು ನಮ್ಮ ಮಾನ್ಯ ನಂಜೇಗೌಡರ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಬೈರೇಗೌಡರ ಮತ್ತು ಮಾನ್ಯ ಮುಖ್ಯಮಂತ್ರಿಗಳಾದ ದೇವೇಗೌಡರ ಅಭಿಪ್ರಾಯ ಎಂದರೆ ಎಲ್ಲ ಪಕ್ಷಗಳೂ ಚೆನ್ನಾಗಿರಬೇಕು, ಪಕ್ಷಗಳು ಬೆಳೆಯಬೇಕೆಂಬ ಉದ್ದೇಶದಿಂದ ಅವರು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ. ಕಳೆದ ೩. ತಿಂಗಳ ಹಿಂದೆ ಆ ಸದನದಲ್ಲಿ ನಾವು ಪ್ರತಿಭಟನೆ ಮಾಡಿ ವಾಕೌಟ್ ಮಾಡಿ ಹೋದಾಗ ನಮ್ಮ ಸಭಾ ನಾಯಕರಾದ ಮಾನ್ಯ ದೇವೇಗೌಡರು ಇಲ್ಲಿಗೆ ಬಂದರು. ಇಲ್ಲಿ ಮಾನ್ಯ ಶಿವಪ್ಪನವರಿದ್ದಾರೆ, ಪತ್ರಿಕರ್ತರಿದ್ದಾರೆ, ಸುರೇಶ್ ಕುಮಾರ್‌ರವರಿದ್ದಾರೆ, ಅವರೆಲ್ಲರ ಮುಂದೆ ಹೇಳಿದರು, ಮಾನ್ಯ ಯಡಿಯೂರಪ್ಪನವರು ಈ ಪಕ್ಷವನ್ನು ಹಾಳುಮಾಡಿ ಬಿಡುತ್ತಾರೆ, ತುಂಬಾ ಎಚ್ಚರಿಕೆಯಿಂದ ಇರಿ ಎಂದು, ಅವರು ಇಲ್ಲಿಗೆ ಬಂದು ತಮ್ಮ ಹಿತವಚನಗಳನ್ನು

ಹೇಳುತ್ತಿದ್ದರು. ಮಾನ್ಯ ಭೈರೇಗೌಡರು ತುಂಬಾ ಕಳಕಳಿಯಿಂದ ಹೇಳಿದ್ದಾರೆ. ನಾನು ಒಂದು ಮಾತನ್ನು ಮಾತ್ರ ಹೇಳಬಯಸುತ್ತೇನೆ. ಮಾನ್ಯ ನಂಜೇಗೌಡರು ಇದ್ದಾರೆ, ಅವರು ಬರುತ್ತಾರೆ, ಅವರ ಈ ರೀತಿ ವಿಷ ಬೀಜವನ್ನು ಬಿತ್ತಿ, ಜಾತಿ ರಾಜಕಾರಣವನ್ನು ಮಾಡಿ ರಾಜಕೀಯ ಲಾಭವನ್ನು ಮಾಡಿಕೊಳ್ಳುತ್ತೇವೆಂಬ ಭ್ರಮೆಯಲ್ಲಿ ಮಾನ್ಯ ದೇವೇಗೌಡರಾಗಲಿ, ಮಾನ್ಯ ಭೈರೇಗೌಡರಾಗಲಿ ಇದ್ದರೆ ಅದು ಸಾಧ್ಯವಾಗುವುದಿಲ್ಲ ಎನ್ನತಕ್ಕ ಮಾತನ್ನು ಹೇಳಬಯಸುತ್ತೇನೆ.

(ಗೊಂದಲ)

ಶ್ರೀ ಆರ್. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಈಗ ಏನು ಮಾತನಾಡಿದರೋ ಅವರೇ ತಮ್ಮ ಪಕ್ಷದಲ್ಲಿ ವಿಷ ಬೀಜವನ್ನು ಬಿತ್ತಿ, ತಮ್ಮ ಪಕ್ಷವನ್ನು ಒಡೆದುಕೊಳ್ಳುತ್ತಿದ್ದಾರೆ. ಅವರ ಕುರ್ಚಿಗೆ ಕುತ್ತು ಬಂದಾಗ ಈ ರೀತಿ ಮಾತನಾಡುತ್ತಿದ್ದಾರೆ. ಇದು ಮಾನ್ಯ ವಿರೋಧಪಕ್ಷದ ನಾಯಕರಿಗೆ ಯೋಗ್ಯವಾದುದಲ್ಲ, ಅವರು ತಮ್ಮ ಮಾತನ್ನು ವಾಪಸ್ಸು ತೆಗೆದುಕೊಳ್ಳಲಿ.

ಅಧ್ಯಕ್ಷರು : ಈಗ ಬಜೆಟಮೇಲೆ ಚರ್ಚೆಯನ್ನು ತೆಗೆದುಕೊಳ್ಳೋಣ, ದಯವಿಟ್ಟು ಕುಳಿತುಕೊಳ್ಳಿ. ನಮ್ಮ ಸಮೂಹವು ಜನರಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರೆ ಬಜೆಟ್‌ಮೇಲೆ ಸಾಮಾನ್ಯ ಚರ್ಚೆಯನ್ನು ಪ್ರಾರಂಭ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಮ್ಮ ಕಛೇರಿಯಿಂದ ನನಗೆ ಒಂದು ಆದೇಶ ಬಂದಿದೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಚರ್ಚೆಮಾಡಿದಂತೆ ನನ್ನ ಪಕ್ಷಕ್ಕೆ 3 ಗಂಟೆ 15 ನಿಮಿಷವನ್ನು ನಿಗದಿಮಾಡಿದ್ದೇವೆ. ಅದನ್ನು ನೀವೇ ಒಪ್ಪಿಕೊಂಡಿದ್ದೀರಿ.

ಅಧ್ಯಕ್ಷರು : ಇಲ್ಲಿರತಕ್ಕ ಸದಸ್ಯರ ಒಟ್ಟು ಸಂಖ್ಯಾ ಬಲವನ್ನು ಲೆಕ್ಕಹಾಕಿ ನಮ್ಮ ಕಛೇರಿಯವರು ಮಾಹಿತಿಯನ್ನು ಒದಗಿಸಿಕೊಟ್ಟಿದ್ದಾರೆ. ಅದು ಕಛೇರಿಯವರು ಮಾಡುವಂಥ ಕಟ್ಟುನಿಟ್ಟಿನ ಕೆಲಸ. ಅದರಮೇಲೆ ನಾನು ನನ್ನ ವಿವೇಚನೆಯನ್ನು ಉಪಯೋಗಿಸಿ ನಿಮಗೆ ಇನ್ನೂ 50 ನಿಮಿಷ ಹೆಚ್ಚಿಗೆ ಅಲಾಟ ಮಾಡಿದ್ದೇನೆ. ನಿನ್ನೆ ಮಾನ್ಯ ಸದಾನಂದಗೌಡರು ಇದ್ದರು, ನಾವು ಇಲ್ಲಿ ಟೈಂನ್ನು ಇಟ್ಟುಕೊಂಡು ಪ್ರತಿಯೊಂದು ನಿಮಿಷವನ್ನು ನೋಡುವುದಕ್ಕಾಗುವುದಿಲ್ಲ. ಸ್ವಲ್ಪಮಟ್ಟಿಗೆ ನಮ್ಮ ರಾಜಕೀಯ ವಿವೇಚನೆಯನ್ನೂ ಬಳಸಬೇಕಾಗುತ್ತದೆಂಬ ಕಾರಣದಿಂದ ಕಾಂಗ್ರೆಸ್ ಪಕ್ಷಕ್ಕೂ ಸ್ವಲ್ಪ ಹೆಚ್ಚು ಸಮಯವನ್ನು ಕೊಟ್ಟಿದ್ದೇನೆ. ಅದೇರೀತಿ ನಿಮ್ಮ ಪಕ್ಷಕ್ಕೂ ಸ್ವಲ್ಪ ಹೆಚ್ಚು ಸಮಯ ಅಲಾಟ್ ಮಾಡಿದ್ದೇನೆ. ಆದರೆ ಯಾರು ಅಲಾಟ ಆದ ಸಮಯವನ್ನು ಉಪಯೋಗಿಸಿಕೊಳ್ಳುವುದಿಲ್ಲ, ಇವರ ಜೊತೆಗೆ ಆಡಳಿತ ಪಕ್ಷದವರಿಗೂ ಕೂಡ ಸ್ವಲ್ಪಮಟ್ಟಿನ ಸಮಯವನ್ನು ಕಡಿಮೆ ಮಾಡಿ ಅದನ್ನೆಲ್ಲಾ ನಿಮಗೆ ಅಲಾಟ್ ಮಾಡಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಮ್ಮ ಬಗ್ಗೆ ಎರಡು ಮಾತೇ ಇಲ್ಲ. ಏಕೆಂದರೆ ತಾವು ನಮ್ಮ ವಿರೋಧಪಕ್ಷದ ಬಗ್ಗೆ ಎಷ್ಟು ಉದಾರವಾಗಿ ನಡೆದುಕೊಳ್ಳುತ್ತಿದ್ದೀರಿ ಎಂಬುದನ್ನು ನೋಡಿದರೆ ಅದು ಶ್ಲಾಘನೆ ಮಾಡುವಂಥದ್ದು. ನಮ್ಮ ಹೊಸ ಸದಸ್ಯರಿಗೆ ಅವಕಾಶವನ್ನು ಮಾಡಿಕೊಡುತ್ತಿದ್ದೀರಿ. ಸಂತೋಷ. ಆದರೆ ದುಃಖಕರ ಸಂಗತಿ ಎಂದರೆ, ಮಾನ್ಯ ರಾಜ್ಯಪಾಲರ ಭಾಷಣ ಆದಂಥ ಸಂದರ್ಭದಲ್ಲಿ, ಬಜೆಟ್ ಮಂಡನೆ ಮಾಡಿ ಚರ್ಚೆಮಾಡುವ ಕಾಲದಲ್ಲಿ ಏನೋ ಕಾಟಾಚಾರಕ್ಕೆ ಕೆಲವು

ವಿಷಯಗಳನ್ನು ಮಾತನಾಡುವುದು, ಕಳೆದ ಅನೇಕ ತಿಂಗಳ ಅಪಹೃತ ವೈಖರಿಯ ಬಗ್ಗೆ ಬೆಳಕನ್ನು ಚೆಲ್ಲಿ ಅವರಿಗೆ ನ್ಯಾಯವನ್ನು ಒದಗಿಸಿಕೊಡಬೇಕೆಂಬ ಉದ್ದೇಶದಿಂದ ನಾವು ಇಲ್ಲಿಗೆ ಏನು ಬಂದಿದ್ದೇವೆ ಇದರ ಉದ್ದೇಶವೇ ಸಫಲವಾಗುತ್ತಿಲ್ಲ. 100 ದಿವಸ ಅಧಿವೇಶನ ನಡೆಯಬೇಕೆಂದು ಯೋಚನೆ ಮಾಡಿದ್ದೆವು. ಬಜೆಟ್ ಬಗ್ಗೆ 6-7 ದಿವಸದವರೆಗೆ ಚರ್ಚೆ ಆಗಿರುವುದನ್ನು ನಾವು ನೋಡಿದ್ದೇವೆ. ಪೂರ್ಣ ಬಜೆಟನ್ನು ಮಂಡನೆ ಮಾಡಿದಂಥ ಸಂದರ್ಭದಲ್ಲೂ ಕೂಡ ನಾವು 4 ತಿಂಗಳಿಗೆ ವೋಟ್ ಆನ್ ಅಕೌಂಟ್ ಪಾಸ್ ಮಾಡಿದಂಥ ಸಂದರ್ಭದಲ್ಲಿ ಏನು ಚರ್ಚೆ ಆಗಬೇಕಾಗಿತ್ತೋ ಅದಕ್ಕೆ ಇವತ್ತು ಇಂಥ ದುರ್ಗತಿ ಬಂದಿದೆಯಲ್ಲಾ. ಮುಂದಾಲೋಚನೆ ಮಾಡಿ ಹದಿನೈದು ದಿನಗಳವರೆಗೆ ಇಲ್ಲಿ ನಿರಂತರವಾಗಿ, ನಿರರ್ಗಳವಾಗಿ ಇಲ್ಲಿ ಕುಳಿತು ಚರ್ಚೆಮಾಡಿ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡದೇ ಇರುವುದಕ್ಕೆ ಈ ಸರ್ಕಾರ ಏನು ಮಾಡಿ ಎಂದು ಜನರು ಪ್ರಶ್ನೆ ಮಾಡುತ್ತಿದ್ದಾರೆ. ಪೂರ್ವಬಾವಿ ಚಿಂತನ ಆಗಬೇಕಾಗುತ್ತದೆ. ಯಾವು ಯಾವುದಕ್ಕೆ ಎಷ್ಟೆಷ್ಟು ಸಮಯ ಅವಶ್ಯಕತೆ ಬೇಕಾಗುತ್ತದೆ ಎಂಬ ಬಗ್ಗೆ ಮಾನ್ಯ ಅಧ್ಯಕ್ಷರ ಜೊತೆ ಸಮಾಲೋಚನೆ ಮಾಡಿ ಸದನದ ಕಾರ್ಯಕಲಾಪಗಳು ಸಮಯೋಚಿತವಾಗಿ ನಡೆಯುವಂಥ ಸಂದರ್ಭಗಳು ಬರದೇಹೋದರೆ ಈರೀತಿ ಪರಿಸ್ಥಿತಿ ಬರುತ್ತದೆ. ನನ್ನ ಕಡೆಯವರು ಇನ್ನೂ 5-6 ಜನ ಮಾನ್ಯ ಸದಸ್ಯರು ಮಾತನಾಡಬೇಕಾಗಿರುವುದರಿಂದ ಕೆಲವು ಸಂದರ್ಭದಲ್ಲಿ ಅನಿವಾರ್ಯವಾಗಿ ಮೊಟಕುಗೊಳಿಸಬೇಕಾಗುತ್ತದೆ. ನಾಳೆ ಮಾನ್ಯ ಬೈರೇಗೌಡರೇ ಹೇಳಬಹುದು, ಮಾನ್ಯ ವಿರೋಧಪಕ್ಷದ ನಾಯಕರು ಅಗತ್ಯವಿರುವಷ್ಟು ವಿಷಯಗಳನ್ನೂ ಪ್ರಸ್ತಾಪ ಮಾಡಲಿಲ್ಲ, ಇಂಥವರು ಇವತ್ತು ವಿರೋಧಪಕ್ಷದ ನಾಯಕರಾಗಿದ್ದಾರೆಂದು ನೀವು ಸದನದ ಒಳಗೂ ಮಾತನಾಡಬಹುದು, ಬಹುಶಃ ಹೊರಗಡೆ ಕೂಡ ಮಾತನಾಡಬಹುದು. ಆದ್ದರಿಂದ ಈ ವಿಷಯಲ್ಲಿ ಹೆಚ್ಚು ಚರ್ಚೆ ಮಾಡುವುದಕ್ಕೆ ನಿಮ್ಮ ಸರ್ಕಾರ ಪೂರ್ವಬಾವಿ ಯೋಚನೆ ಮಾಡಿ ಹೆಚ್ಚು ದಿನಗಳನ್ನು ಅಲಾಟ್‌ಮಾಡಿ ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಆಗದ ರೀತಿಯಲ್ಲೂ ಮಾಡಿ ಉಸಿರುಕಟ್ಟುವಂಥ ಪರಿಸ್ಥಿತಿಯನ್ನು ಉಂಟುಮಾಡಿದ ಕೀರ್ತಿ ಕೂಡ ನಿಮ್ಮ ಸರ್ಕಾರಕ್ಕೆ ತಲುಪಬೇಕಾಗಿದೆ ಎಂಬ ಉದ್ದೇಶದಿಂದ ನಾನು ಏನು ಹೇಳಿದೆ ಎಂಬುದನ್ನು ತಾವು ಕೇಳಿಸಿಕೊಳ್ಳಲಿಲ್ಲ. ನಮ್ಮ ಪಕ್ಷದವರಿಗೆ 3 ಗಂಟೆ 15 ನಿಮಿಷ ಕಾಲಾವಧಿ ಸಿಕ್ಕಿದೆ.

ಶ್ರೀ ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಇದು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾಗಿರುವಂಥ ವಿಚಾ. ಅಲ್ಲಿ ಮಾನ್ಯ ಯಡಿಯೂರಪ್ಪನವರೂ ಮತ್ತು ಬೇರೆ ವಿರೋಧಪಕ್ಷದ ನಾಯಕರೂ ಇದ್ದರು.

(ಗೊಂದಲ)

ಶ್ರೀ ಸಿ. ಬೈರೇಗೌಡ : ಇದು ಅಲ್ಲಿ ತೀರ್ಮಾನವಾಗಿರುವಂಥ ವಿಚಾರ. ಇದು ಅಲ್ಲೇ ಚರ್ಚೆ ಆಗಬೇಕಾಗಿತ್ತು.

ಶ್ರೀ ಜಿ. ಎಸ್. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾವೆಲ್ಲರೂ ಒಪ್ಪಿಕೊಂಡಿರುವ ಬಗ್ಗೆ....

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಬಹಳಷ್ಟು ಚರ್ಚೆ ಮಾಡಿದ್ದಾರೆ. ಅದೇರೀತಿ ಬಜೆಟ್ ಬಗ್ಗೆ ಕೂಡ ಮಾನ್ಯ ವಿರೋಧಪಕ್ಷದವರು ಮಾತನಾಡುವುದಕ್ಕೆ ಬಹಳಷ್ಟು ಅವಕಾಶ ಇದೆ. ಇದನ್ನು ಮೊದಲೇ ಒಪ್ಪಂದವಾಗಿರುವುದರಿಂದ ಮತ್ತೆ ಮತ್ತೇ ಅದನ್ನೇ ಪ್ರಸ್ತಾಪ ಮಾಡುವುದರಲ್ಲಿ ಅರ್ಥವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಕಡೆ ಕುಳಿತು ನಾವು ಮಾತನಾಡುವಂಥಾದ್ದು ಯಾವುದೂ ಕೂಡ ಅರ್ಥವಿಲ್ಲದಂತಾಗಿದೆ. ಏಕೆಂದರೆ ಅದನ್ನು ತಗೆದುಕೊಳ್ಳುವ ಧಾಟಿ ಆರೀತಿ ಇದೆ. ನಾನು ಹೇಳಿದ್ದೇನೆಂದರೆ, ಸರ್ಕಾರ ಮುಂದಾಲೋಚನೆ ಮಾಡಿ ಬಜೆಟ್ ಅಧಿವೇಶನವನ್ನು ಕರೆಯುವ ಸಂದರ್ಭದಲ್ಲಿ ಲೋಕಸಭಾ ಚುನಾವಣೆ ಬರುತ್ತದೆಂದು ಗೊತ್ತಿದ್ದಾಗ ಇನ್ನೂ 15 ದಿವಸ ಮುಂಚೆ ಸದನದ ಕಾರ್ಯಕಲಾಪಗಳನ್ನು ನಡೆಸಿದ್ದಿದ್ದರೆ ಪ್ರತಿವರ್ಷದ ವಾಡಿಕೆಯಂತೆ ಈ ಸದನವನ್ನು ನಡೆಸಬಹುದಿತ್ತು. ಆದರೆ ಇದರ ಬಗ್ಗೆ ಪೂರ್ವಭಾವಿ ಚಿಂತನೆ ಆಗಲಿಲ್ಲ. ಆದ್ದರಿಂದ ಇನ್ನುಮುಂದೆ ಇಂಥ ಅಪರಾಧ ಆಗಬಾರದೆಂದು ನಾನು ಹೇಳುತ್ತಿದ್ದೇನೆ. ನಾನು ಇಲ್ಲಿನಿಂತು ಈ ಮಾತನ್ನು ಹೇಳದೇ ಹೋದರೆ ನಾಳೆ ಮಾನ್ಯ ಬೈರೇಗೌಡರು ಹೇಳಬಹುದು, ಅದನ್ನೂ ಕೂಡ ಹೇಳಲಿಲ್ಲ, ಕೇಳಲಿಲ್ಲ ಎಂದು ಹೇಳಬಹುದು.

ಅಧ್ಯಕ್ಷರು : ನೀವು ಜೋಕೆಂದೇ ಮಾಡುತ್ತಿದ್ದೀರಿ ಎನಿಸುತ್ತದೆ. ಮೊದಲು ನೀವೆಲ್ಲರೂ ಜೊತೆಯಲ್ಲೇ ಇದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಬೈರೇಗೌಡರು ಏನೋ ಒಂದು ಮಾತನ್ನು ಹೇಳಿದರು. ಆದರೆ ಅದು ಏನೆಂದು ನಮಗ ಗೊತ್ತಾಗಲಿಲ್ಲ. ಅದು ಪಾರ್ಲಿಮೆಂಟರಿಯೋ, ಅನ ಪಾರ್ಲಿಮೆಂಟರಿಯೋ ಗೊತ್ತಿಲ್ಲ.

ಅಧ್ಯಕ್ಷರು : ಅದು ಏನು?

ಶ್ರೀ ಸಿ. ಬೈರೇಗೌಡ : ಜನರು ನಾಳೆ ಕೇಳುತ್ತಾರೆ ಎಂದು ಹೇಳಿದರು. ವಿರೋಧಪಕ್ಷದವರಿಂದ ಇದನ್ನು ಕೇಳಿಸಿಕೊಳ್ಳಬೇಕೆಂಬ ತೀಟೆ ನಮಗೇನೂ ಇಲ್ಲ ಎಂದು ನಾನು ಹೇಳಿದೆ ಅಷ್ಟೆ. ಇದು ಅನಪಾರ್ಲಿಮೆಂಟರಿ ಏನೂ ಅಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಬಜೆಟ್ ಮೇಲೆ ತಮ್ಮ ಚರ್ಚೆಯನ್ನು ಆರಂಭ ಮಾಡಿದಾಗ ಕನಿಷ್ಠ ಮುಖ್ಯಮಂತ್ರಿಗಳಾದರೂ ಸೌಜನ್ಯಕ್ಕಾದರೂ ಇರಬೇಕಾದುದು ಕರ್ತವ್ಯ ಇದೆಯೆಂದು ನಾನು ಅಂದುಕೊಂಡಿದ್ದೇನೆ. ಯಾರು ಬೇಕಾಗಿಲ್ಲ, ನಾನು ಮಾತನಾಡುತ್ತೇನೆಂದು ಅವರು ಹೇಳುವುದಾದರೆ ಅದಕ್ಕೆ ನನ್ನ ಅಭ್ಯಂತರವಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಈ ಸಂದರ್ಭದಲ್ಲಿ ಇರಬೇಕಾದುದು ಒಂದು ಸೌಜನ್ಯ ಮತ್ತು ಸಂಪ್ರದಾಯ.

ಅಧ್ಯಕ್ಷರು : ನೀವು ನನ್ನ ನೆರವಿಗೆ ಬರುತ್ತೀರಿ ಎಂದು ತಿಳಿದಿದ್ದರೆ, ನೀವು ಇನ್ನೊಂದು ವಿವಾದವನ್ನು ತಂದಿಟ್ಟಿರಿ. ಇದನ್ನು ಪರಿಹರಿಸಿದರೆ ಸಾಕು ಎಂದು ನಾನು ಇದ್ದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ವಿರೋಧಪಕ್ಷದ ನಾಯಕರೇ ಈ ಮಾತನ್ನು ಕೇಳಬೇಕು. ಮಾನ್ಯ ವಿರೋಧಪಕ್ಷದ ನಾಯಕರು ಆಯವ್ಯಯದ ಮೇಲೆ ಭಾಷಣವನ್ನು ಪ್ರಾರಂಭ ಮಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿರತಕ್ಕದ್ದು ಸೌಜನ್ಯಕ್ಕಿಂತ ಹೆಚ್ಚಾದದು.

ಶ್ರೀ ಸಿದ್ಧರಾಮಯ್ಯ : ಮಾನ್ಯ ವಾಟಾಳ್ ನಾಗರಾಜರವರು ಏನೇ ಹೇಳಿದರೂ ಮಾನ್ಯ ಯಡಿಯೂರಪ್ಪನವರು ಅದನ್ನು ಕೇಳದೆ ತಮ್ಮ ಭಾಷಣವನ್ನು ಪ್ರಾರಂಭ ಮಾಡಿದ್ದಾರೆ.

ಶ್ರೀಮತಿ ಎಸ್. ಪ್ರಮೀಳಾ ನೇಸರ್ಗಿ : ನೀವು ಬರುವುದೇ ಇಲ್ಲವೆಂದು ತೀರ್ಮಾನ ಮಾಡಿದರೆ ನಾವು ಏನು ಮಾಡಬೇಕು? ತಾವು ಇರಬಹುದು, ಆದರೆ ಮಾನ್ಯ ಮುಖ್ಯಮಂತ್ರಿಗಳಾದರೂ ಇಲ್ಲಿ ಇರಬೇಕಾಗಿತ್ತಲ್ಲಾ.

11.00 ಎ.ಎಂ

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, 1996-97ರ ಮುಂಗಡ ಪತ್ರ ನಮ್ಮೆಲ್ಲರ ಮುಂದಿದೆ.

ಶ್ರೀ ವಾಟಾಳ್ ನಾಗರಾಜ್ : ಯಡಿಯೂರಪ್ಪನವರೆ, ನನ್ನ ಮಾತಿಗೆ ನೀವು ಬೆಂಬಲ ಕೊಡಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಕೇಳುವುದಿಲ್ಲ, ನೀವು ಕೇಳುವುದಕ್ಕೆ ನನ್ನ ಸಹಮತ ಇದೆ. ಯಾರ ಬಗ್ಗೆ ಇಲ್ಲಿ ಯಾವ ರೀತಿ ನಡೆದುಕೊಳ್ಳಬೇಕೆಂದು ನಮ್ಮೆಲ್ಲರಿಗೆ ಅಧ್ಯಕ್ಷರು ನಿರೀಕ್ಷೆ ಮಾಡುತ್ತಾರೆ, ಅದು ಅವರಿಗೆ ಬಿಟ್ಟದ್ದು. ನಾವು ಒತ್ತಾಯ ಮಾಡುವುದಕ್ಕಾಗುವುದಿಲ್ಲ. ತಾವು ಹೇಳಿದ್ದೀರಿ, ಪ್ರತಿಪಕ್ಷದ ನಾಯಕರು ನಿಂತಾಗ, ಸಭಾನಾಯಕರು ನಿಂತಾಗ ಉಳಿದವರೆಲ್ಲ ಹೇಗೆ ನಡೆದುಕೊಳ್ಳಬೇಕೆಂದು ಹೇಳಿದ್ದೀರಿ; ಅಷ್ಟೇ ಸಾಕು. ನನ್ನ ಬಾಯಿಂದ ಏಕೆ ಏನಾದರೂ ಹೇಳಿಸುತ್ತೀರಿ? ನಿಮಗೆ ಹೇಳುವಂತ ಅಧಿಕಾರ ಇದೆ, ಹಕ್ಕು ಇದೆ, ನೀವು ಹೇಳಿದ್ದೀರಿ. ಒಬ್ಬ ಸದಸ್ಯರಾಗಿ ಹೇಳಿದ್ದು ನಾವು ಎಲ್ಲರೂ ಗಮನಿಸಿದ್ದೇವೆ. ನಿನ್ನೆ ನೋಡಲಿಲ್ಲ ಏನಾಯಿತು ಎಂದು? ನೀವು ಹೊರಗಡೆ ಹೋಗಿ ಹ್ಯಾಂಡಬಿಲ ಹಂಚುತ್ತೀರಿ ಅಪಚಾರ ನಡೆದಿದೆ ಎಂದು. ಅಲ್ಲಿ ಮಾಡಿಕೊಳ್ಳಿ, ಇಲ್ಲಿ ಉತ್ತರ ಕೊಡುವುದಿಲ್ಲವೆಂದು ಪ್ರತಿ ಪಕ್ಷದ ನಾಯಕರು ಕೇಳಿದ ಕ್ಲಾರಿಫಿಕೇಷನಗೆ ನನಗೆ ಮಾಡಿದ ಅಪಮಾನ್. ಈ ಸ್ಥಾನಕ್ಕೆ ನಾನು ಇರಬಹುದು, ಹೋಗಬಹುದು, ಸಾಯಬಹುದು, ಇದೇನು ಶಾಶ್ವತವೇನಲ್ಲ. ಆದರೆ ಇಲ್ಲಿ ಕುಳಿತಂತವರಿಗೆ ಯಾವ ರೀತಿ ಬಂದಿದ್ದವರು ನಡೆದುಕೊಂಡು, ಯಾವ ರೀತಿ ನಿನ್ನೆ ಆಯಿತು, ಅದಕ್ಕೆ ನೀವೆಲ್ಲ ಸಾಕ್ಷೀಭೂತರಾಗಿದ್ದೀರಿ. ಮತ್ತೆ ಏಕೆ ನನ್ನ ಬಾಯಿಂತ ಹೇಳಿಸುತ್ತೀರಿ?

ಸನ್ಮಾನ್ಯ ಅಧ್ಯಕ್ಷರೇ, 1996-97ರ ಮುಂಗಡ ಪತ್ರ ನಮ್ಮೆಲ್ಲರ ಮುಂದಿದೆ. 8ನೇ ಯೋಜನೆಯು

ಒಂದು ಅಂತಿಮ ವರ್ಷದ ಬಜೆಟ್ಟನ್ನು ನಮ್ಮ ಹಣಕಾಸಿನ ಸಚಿವರಾದ ಸಿದ್ಧರಾಮಯ್ಯನವರು ಮಂಡಿಸಿದ್ದಾರೆ. ಆದರೆ ಇದರಲ್ಲಿ ಹೊಸ ಚಿಂತನೆಯ ಅಭಾವ ಇರತಕ್ಕದ್ದು ಎದ್ದು ಕಾಣುತ್ತಿದೆ. ಒಂದು ರಾಜಕೀಯ ಇಚ್ಛಾಶಕ್ತಿ ಇಲ್ಲದ, ಒಂದು ಶಕ್ತಿ ಸಾಮರ್ಥ್ಯ ಇಲ್ಲದ ನಿಸ್ಸತ್ವ ಬಜೆಟ್ ಇದಾಗಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಂದು ಒಬ್ಬ ಅರ್ಥಸಚಿವ ಪದವಿಯಲ್ಲಿ ಹೊಸಬರಾಗಿ, ಯೋಜನೆ ಹಾಗೂ ಒಂದು ಅಭಿವೃದ್ಧಿ ಕಾರ್ಯಗತ ಮಾಡುವ ಪದವಿಯ ಘಟಾನುಘಟಿಗಳು ಅದಕ್ಕಾಗಿ ಅಗತ್ಯ ಇರುವಂತ ಸಲಹೆಯನ್ನು ಕರೆಯಲಾಗುತ್ತದೆಂಬ ಮಾತನ್ನು ನಾವು ಬಹಿರಂಗವಾಗಿ ಹೇಳಿದ್ದೇವೆ. ಆದರೆ ಇವತ್ತು ಈ ಬಜೆಟ್ ಲೋಕಸಭಾ ಚುನಾವಣೆಯ ದೃಷ್ಟಿಯಲ್ಲಿ ಮಂಡನೆ ಮಾಡಿರತಕ್ಕದ್ದು, ಮುಂದೆ ಹೆಚ್ಚಿನ ತೆರಿಗೆಯ ಭಾರವನ್ನು ಈ ನಾಡಿನ ಜನ ಹೊರಬೇಕಾಗುತ್ತದೆಂಬ ಮಾತನ್ನು ಸ್ಪಷ್ಟವಾಗಿ ನಾವು ಹೇಳಿದ್ದೇವೆ. ನಿಜ. ಈ ಬಜೆಟ್ಟಿನಲ್ಲಿ ಹೊಸದಾಗಿ ಹೆಚ್ಚಿನ ತೆರಿಗೆಯನ್ನು ನಾವು ವಿಧಿಸಿಲ್ಲ. ಕಾರಣವೇನೆಂದರೆ, 1995-96ರಲ್ಲಿ ಬಹುಶಃ ಈ ರಾಜ್ಯದ ಇತಿಹಾಸದಲ್ಲಿ ಮೊದಲಬಾರಿಗೆ 245 ಕೋಟಿಗೂ ಹೆಚ್ಚು ತೆರಿಗೆಯನ್ನು ನಾವು ಹಾಕಿದ್ದೇವೆ ಈ ರಾಜ್ಯದ ಜನರ ಮೇಲೆ. ಆದರೆ ಈ ವರ್ಷವನ್ನು ಗಮನಿಸಿಕೊಂಡು ಲೋಕಸಭಾ ಚುನಾವಣೆ ಬರುತ್ತಾ ಚುನಾವಣೆಯ ನಂತರ ಈ ನಾಡಿನ ಜನ ಈ ವಿದ್ಯುಚ್ಛಕ್ತಿ ವಲಯದಲ್ಲಿ, ಸಾರಿಗೆ ವಲಯದಲ್ಲಿ ಬೇರೆ ಬೇರೆ ರೀತಿಯಲ್ಲಿ ಹೆಚ್ಚಿನ ತೆರಿಗೆಯನ್ನು ಹೊರಬೇಕಾಗುತ್ತದೆ. ಇದು ಕೇವಲ ಒಂದು ಸ್ವಪ್ನದ ಲೇಪವನ್ನು ಮಾಡಿರತಕ್ಕ ಸಮಿತಿಗಳಿಗೆ ಈ ಬಜೆಟ್ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಪ್ರಾರಂಭದಲ್ಲಿ ಒಂದು ಮಾತು ಹೇಳಿದ್ದರೆ ಅಪರಾಧವಾದೀತು. ಈ ಸದನದಲ್ಲಿ ಎಲ್ಲ ಸಿಬ್ಬಂದಿಯು ಕುಳಿತು ಚರ್ಚೆ ಮಾಡಿ ಲೋಕಸಭೆಯಲ್ಲಿ ವ್ಯವಸ್ಥೆ ಇರುವಂತೆ ವಿಷಯ ಸಮಿತಿ ರಚನೆ ಮಾಡಿ ಶಾಸಕರು ಅಧಿಕಾರಿಗಳು ಒಟ್ಟಾಗಿ ಸೇರಿ ಕೆಲವು ಸಲಹೆಗಳನ್ನು ಕೊಡತಕ್ಕ ಹೊಸ ಪದ್ಧತಿಯನ್ನು ಇಲ್ಲಿ ಜಾರಿಗೆ ತಂದಿದ್ದೇವೆ. ಆದರೆ ಒಂದು ದುಃಖಕರ ಸಂಗತಿ ಎಂದರೆ ಅಧಿಕಾರಿಗಳು ಎಷ್ಟು ಶ್ರಮ ಹಾಕಿ ಸಲಹೆ ಕೊಟ್ಟು, ಶಾಸಕರು ಶ್ರಮ ಹಾಕಿ ವರದಿ ಕೊಟ್ಟಾಗ ಸರ್ಕಾರ ಆ ವರದಿಯನ್ನು ಮುಚ್ಚಿಬಿಟ್ಟಿದ್ದೀರಾ ಎಂಬ ಸಂಶಯ ಬರುತ್ತದೆ. ಬಹುಶಃ ಅದು ಧೂಳು ಹಿಡಿದು ಮೂಲೆಗುಂಪಾಗಿರಬೇಕು. ಏಕೆಂದರೆ ಅನೇಕ ವರದಿಗಳನ್ನು ನೋಡಿದಾಗ ಏನೇ ರೆಕಮಂಡೇಷನ್ಸ್ ಮಾಡಿದರು ಕೂಡ ಅದು ಯಾವುದನ್ನೂ ಸಹ ಕಾರ್ಯರೂಪಕ್ಕೆ ತಂದುಕೊಡುವುದಾಗಲೀ ತರುವ ಯಾವುದೇ ಒಂದು ಪ್ರಯತ್ನ ಆಗಿಲ್ಲವೆಂದು ಸ್ಪಷ್ಟವಾಗಿ ಇದರಿಂದ ಗೊತ್ತಾಗುತ್ತದೆ. ಯಾವುದೇ ಒಂದು ಮುಂಗಡ ಪತ್ರ 3 ಅಂಶಗಳನ್ನು ಒಳಗೊಂಡಿರಬೇಕಾಗುತ್ತದೆ. ಅದು ಮುಂಗಡ ಪತ್ರದ ಒಂದು ಅಂದಾಜು ಆ ದೃಷ್ಟಿಯಲ್ಲಿ ಅಕ್ಷರಶಃ ಮಾಡಿದಂತಹ ವೆಚ್ಚಗಳು, ಮುಂಬರುವಂತಹ ಒಂದು ವರ್ಷಕ್ಕೆ ಆರ್ಥಿಕ ನೀತಿ ಸಹಿತ. ಒಂದೇ ಪಟ್ಟಿಯಲ್ಲಿ ಹೇಳುವುದಾದರೆ ಹಿಂದಿನ ವರ್ಷದ ಸಾಧನೆ ಏನು, ಮುಂದಿನ ವರ್ಷದ [illegible] ಏನು ಎಂಬುದು ಸ್ಪಷ್ಟವಾಗಿರಬೇಕಾಗುತ್ತದೆ. ನಾನು ಬಜೆಟ್ ಭಾಷಣ ಓದತಕ್ಕ ಕಾಲದಲ್ಲಿ [illegible] ನಾವು ನೋಡಿದ್ದರೆ ಯಾವ ಬಾಬಿನಲ್ಲಿ ಎಷ್ಟಿತ್ತು ಎಷ್ಟು ಇಟ್ಟಿರಲಿಲ್ಲವೆಂದು ಹೇಳಿದ್ದರೆ ಇದರ ಬಗ್ಗೆ ಬೆಳಕನ್ನು ಚೆಲ್ಲುವುದಕ್ಕೆ ಸಾಧ್ಯವಾಗುತ್ತಿತ್ತು. ಅಲ್ಲಿ ಕುಳಿತಿರತಕ್ಕ ಅಧಿಕಾರಿಗಳು ಈ ಒಂದು ಚರ್ಚೆಯ ಆಧಾರದ ಮೇಲೆ ಎಲ್ಲಿ ಲೋಪವಾಗಿದೆ ಎಂದು ತಿದ್ದಿಕೊಳ್ಳುವುದಕ್ಕೆ ಅವಕಾಶವಾಗುತ್ತಿತ್ತು. ನಾವು [illegible] ಗಮನಿಸಿದ್ದೀರಾದರೆ, ಇವತ್ತು ಒಂದು ಅಂಗಳ ಸಮಯ ಇದೆ, ಹಾಗೆಯೇ 15-

20 ದಿವಸ ಉಳಿದಿದೆ, ಆದ್ದರಿಂದ ಪೂರ್ಣ ಅಂಕಿಅಂಶ ಕೊಡುವುದಕ್ಕಾಗುವುದಿಲ್ಲ ಎಂದು. ಆದರೆ ಯಾವತ್ತು ಬಜೆಟ್ ಮಂಡನೆ ಮಾಡುತ್ತೀರಿ, ಫೆಬ್ರವರಿ ಕೊನೆಯವರೆಗಾದರೂ ನಿಮ್ಮ ಸಾಧನೆ ಏನಿತ್ತು, ಪ್ಲಾನ್ ಎಕ್ಸ್‌ಪೆಂಡೀಚರ್ ಎಷ್ಟು ಇಟ್ಟಿದ್ದೀರಿ, ಈಗ ಆದ್ಯತಾ ಕ್ಷೇತ್ರದಲ್ಲಿ ಏನು ಪ್ರಗತಿಯಾಗಿದೆ ಈ ಎಲ್ಲ ವಿವರಗಳನ್ನು ಮುಚ್ಚಿಡುವಂಥ ಒಂದು ಪ್ರಾಮಾಣಿಕ ಪ್ರಯತ್ನವನ್ನು ತಾವು ಮಾಡಿದ್ದೀರಿ. ಒಂದು ರೀತಿ ಆ ಒಂದು ಬಜೆಟ್ಟಿನ ಪಾವಿತ್ರತೆಯನ್ನು ಹಾಳುಮಾಡಿದಂಥ ಒಬ್ಬ ಖಳನಾಯಕರಾಗಿ ಶ್ರೀ ಸಿದ್ಧರಾಮಯ್ಯನವರು ಇದ್ದಾರೆಂಬುದು ದುರ್ದೈವದ ಸಂಗತಿ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ದುಃಖ ತರುವ ಸಂಗತಿ, ಕೇಂದ್ರದ ಒಂದು ನೀತಿಯನ್ನು ತಾವು ಅನುಸರಿಸುತ್ತಿದ್ದೀರಿ.

ಶ್ರೀ ಸಿದ್ಧರಾಮಯ್ಯ : ಯಾವಾಗಲೂ ಮಾನ್ಯ ವಿರೋಧಪಕ್ಷದ ನಾಯಕರು ಖಳನಾಯಕರು ಪಾತ್ರ ವಹಿಸುವುದು, ನಾವಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆದರೆ ಅನಿವಾರ್ಯವಾಗಿ ವ್ಯತ್ಯಾಸವಾಗಿದೆಯಲ್ಲ ಎಂದು. ಇನ್ನೊಂದು ದುಃಖ ತರತಕ್ಕ ಸಂಗತಿ ಎಂದರೆ ಹೆಜ್ಜೆ ಹೆಜ್ಜೆಗೆ ಕೇಂದ್ರ ಸರ್ಕಾರವನ್ನೇ ತಾವು ಅನುಸರಿಸಿಕೊಂಡು ಹೋಗುತ್ತಿದ್ದೀರಿ. ಎಲ್ಲಾ ರಂಗಗಳಲ್ಲಿ ವಿದೇಶಿ ಬಂಡವಾಳಕ್ಕೆ ಶರಣು ಹೋಗುವ ಬಜೆಟ್ ಇದಾಗಿದೆ. ಇದು ತುಂಬಾ ದುಃಖ ತರುವ ಸಂಗತಿ. ವಾಸ್ತವವಾಗಿ ಈ ರಾಜ್ಯದ ಜನರಿಗೆ ಬೇಕಾಗುವ ಸವಲತ್ತು ಒದಗಿಸಿಕೊಡಬೇಕೆಂಬ ಯಾವುದೇ ಕಳಕಳಿ ಇಲ್ಲ. ಅದರ ಬಗ್ಗೆ ಚಿಂತನೆ ಇಲ್ಲ. ನಮ್ಮ ರಾಜ್ಯದ ರೈತ ಕಬ್ಬು ಬೆಳೆದಿದ್ದಾನೆ, ಕಾರ್ಖಾನೆಗಳು ತೆರೆಯಲಿಲ್ಲ. ಆದರೆ ಕಬ್ಬನ್ನು ಅರೆಯುವುದಕ್ಕೆ ಮಹಾರಾಷ್ಟ್ರದ ಮುಂದೆ ಭಿಕ್ಷೆ ಪಾತ್ರೆ ಹಿಡಿದುಕೊಳ್ಳುವಂಥದ್ದು, ಹಾಗೂ ಹೊರರಾಜ್ಯಗಳಿಗೆ ವಿದ್ಯುತ್ ಬೇಕೆಂದು ಭಿಕ್ಷೆ ಬೇಡಿಕೊಂಡು ನಿಂತುಕೊಳ್ಳುವುದು ಒಂದು ದಯನೀಯ ಪರಿಸ್ಥಿತಿ ನಿರ್ಮಾಣವಾಗಿದೆ. ತಮಿಳ್ನಾಡಿನವರು ಮುನಿಸಿಕೊಂಡು, ಟಾರ್ ಕೊಡಲಿಲ್ಲ, ಆದರೆ ಚಾಲೆಂಜ್ ಮಾಡಿ ನೀವು ಕೊಡದಿದ್ದರೆ ನಮ್ಮಗೆ ರಾಜ್ಯ ನಡೆಸುವುದು ಗೊತ್ತಿದೆ ಎಂದು ಬೇರೆ ಕಡೆಯಿಂದ ಟಾರ್ ತಂದು ರಸ್ತೆಗಳನ್ನು ಮಾಡುವುದಕ್ಕೆ ಶಕ್ತಿ ಇಲ್ಲದಿರುವಂತ, ವ್ಯವಸ್ಥೆ ಮಾಡುವುದಕ್ಕೆ ಆಗದ ಇರತಕ್ಕ ಒಂದು ಸರ್ಕಾರ, ನಿರ್ಜೀವ ಸರ್ಕಾರ, ಬದುಕಿದ್ದೂ ಸತ್ತಂತೆ ಇರುವ ಸರ್ಕಾರ ಇವತ್ತು ಕರ್ನಾಟಕ ರಾಜ್ಯದಲ್ಲಿ ಅಸ್ತಿತ್ವದಲ್ಲಿದೆ. 1996-97ನೇ ಸಾಲಿನ ವಾರ್ಷಿಕಯೋಜನೆ 4360 ಕೋಟಿ ಎಂದು ಮುಂಗಡ ಪತ್ರದಲ್ಲಿ ನಮೂದು ಮಾಡಿದ್ದೀರಿ. ಆದರೆ ಈ ಯೋಜನಾ ವೆಚ್ಚಕ್ಕಾಗಿ ನೇರ ಸಂಪನ್ಮೂಲಗಳಿಂದ ಕೇವಲ 3359.67 ಕೋಟಿ ರೂಪಾಯಿಗಳನ್ನು ಮಾತ್ರ ತೆಗೆದಿಟ್ಟಿದ್ದೀರಿ. ಇನ್ನೂ 1635 ಕೋಟಿ ರೂಪಾಯಿಗಳನ್ನು ಯೋಜನೇತರ ಮತ್ತು ಆಂತರಿಕ ಸಂಪನ್ಮೂಲಗಳಿಂದ ಒದಗಿಸಬಹುದೆಂದು ತಾವು ತಿಳಿಸಿದ್ದೀರಿ. ಹೋದ ವರ್ಷ ಮಾಡಿದ ತಪ್ಪನ್ನು ಯಾವ ರೀತಿ ಸರಿ ಮಾಡುತ್ತೀರಿ? ಈ ವರ್ಷ ಹೇಳುತ್ತೀರಿ, 1035 ಕೋಟಿ ರೂಪಾಯಿ ಯೋಜನೇತರ ವೆಚ್ಚ ಮತ್ತು ಆಂತರಿಕ ಸಂಪನ್ಮೂಲ ಒದಗಿಸುವುದು ಇರಲಿ ನೀವು ಹೇಳಿರುವ ಯಾವುದೇ ಅಂಕಿಅಂಶವನ್ನು ಮುಟ್ಟುವುದಕ್ಕೆ ಸಾಧ್ಯವಿಲ್ಲದ ವಿಚಿತ್ರ ಪರಿಸ್ಥಿತಿ ಇದೆ. ಕಳೆದ ಸಾಲಿನಲ್ಲಿ ಏನಾಯಿತು ಇದೇ ಮಾತನ್ನು ಹೇಳಿದ್ದೀರಿ. 1995-96ರಲ್ಲಿ ಇದೇ 3758.28 ಕೋಟಿ ರೂಪಾಯಿಗಳ ಮಹತ್ವಾಕಾಂಕ್ಷೆಯ ಯೋಜನೆಯ ಗುರಿಯನ್ನು ತಾವು

ಇಟ್ಟುಕೊಂಡಿದ್ದೀರಿ. ಆದರೆ ವರ್ಷದೊಳಗೆ ಯೋಜನೆಯ ಗಾತ್ರ ಇವತ್ತು 3100 ಕೋಟಿ ರೂಪಾಯಿಗೆ ಕಡಿತಗೊಳಿಸಿದ್ದೀರಿ. ಕಳೆದ ಬಾರಿ ಇದೇ ಮಾತು ಹೇಳಿದ್ದೀರಿ. ಏತಕ್ಕೆ ಕಡಿತ ಗೊಳಿಸಿದಿರಿ, ಪ್ಲಾನ್ ಎಕ್ಸ್‌ಪೆಂಡಿಚರ್ ಕಡಿತಗೊಳಿಸುವುದರಿಂದ ಆದ್ಯತಾ ಕ್ಷೇತ್ರದ ಮೇಲೆ ದುಷ್ಪರಿಣಾಮವಾಗುವುದೆಂದು ಚಿಂತನೆ ನಿಮಗೆ ಇರಲಿಲ್ಲವೆ? ತಾವು ಹೇಳಿದಿರಿ, ಯೋಜನಾ ವೆಚ್ಚಕ್ಕೆ 2903.29 ಕೋಟಿ ರೂಪಾಯಿಗಳನ್ನು ರಾಜ್ಯದ ನೇರ ಸಂಪನ್ಮೂಲಗಳಿಂದ ಉಳಿದ 854.99 ಕೋಟಿ ರೂಪಾಯಿಗಳನ್ನು ಪ್ರಮುಖ ಉದ್ಯಮಗಳಾದ ಕೆ.ಇ.ಬಿ. ಕೆ.ಪಿ.ಸಿ. ಮತ್ತು ಕೆ.ಎಸ್.ಆರ್.ಟಿ.ಸಿ. ಗಳಿಂದ ಆಂತರಿಕ ಸಂಪನ್ಮೂಲಗಳನ್ನು ನಿರೀಕ್ಷಿಸಲಾಗಿದೆ ಎಂದು. ಎಷ್ಟೆಲ್ಲಿ ಮಾಡುವುದಕ್ಕೆ ಸಾಧ್ಯವಾಯಿತು? ಪರಿಣಾಮ 658 ಕೋಟಿ ರೂಪಾಯಿ ವೆಚ್ಚದಲ್ಲಿ ಕಡಿತವಾಯಿತು. ಈ ಬಾರಿಯೂ ಇದೇ ಆಗುವುದು ಇದೆ 4360 ಕೋಟಿ ರೂಪಾಯಿಗಳು ಯೋಜನಾ ವೆಚ್ಚವೆಂದು ಹೇಳಿ 3300 ಕೋಟಿ ರೂಪಾಯಿಗಳನ್ನು ದಾಟುವುದಕ್ಕೆ ಸಾಧ್ಯವಿಲ್ಲದಿರುವ ಪರಿಸ್ಥಿತಿ. ಇದಕ್ಕೆ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದಕ್ಕೆ ಬೇಕಾದ ಯೋಜನೆಗಳು ಇಲ್ಲ, ರಾಜಕೀಯ ಇಚ್ಛಾಶಕ್ತಿ ಇಲ್ಲ, ಸಂಪನ್ಮೂಲಗಳನ್ನು ಕ್ರೋಢೀಕರಿಸುವುದಕ್ಕೆ ಬೇಕಾದ ಒಂದು ಆರ್ಥಿಕ ಸುಸ್ಥಿತಿ ಸಹ ಇವತ್ತು ನಿಮ್ಮ ಆಡಳಿತ ವೈಖರಿ ನೋಡಿದಾಗ ಇಲ್ಲಿ ಕಾಣುತ್ತಿಲ್ಲ.

ಈ ಯೋಜನಾ ವೆಚ್ಚದ ಗುರಿಯನ್ನು ವರ್ಷದ ಕೊನೆಯೊಳಗೆ ಮುಟ್ಟುವುದಕ್ಕೆ ನಿಮಗೆ ಸಾಧ್ಯ ಆಗದೇ ಇದ್ದರೆ ಈ ಹೊಡೆತ ನೇರವಾಗಿ ಆದ್ಯತೆ ಕ್ಷೇತ್ರವಾದಂಥ ನೀರಾವರಿ ಮೇಲೆ ವಿದ್ಯುತ್ ಮೇಲೆ, ವಸತಿ ಯೋಜನೆಯ ಮೇಲೆ, ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳು ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಧಕ್ಕೆಯಾಗುತ್ತದೆ ಎಂಬುದು ಸನ್ಮಾನ್ಯ ಹಣಕಾಸಿನ ಸಚಿವರಿಗೆ ಗೊತ್ತಿದೆ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಅಂದರೆ ಯಾವ ಯೋಜನಾ ಗುರಿಯನ್ನು ಹೋದವರ್ಷ ತಾವು ಹೊಸ ಹುರುಪಿನಲ್ಲಿ ಬಂದು ಆ ಗುರಿಯನ್ನು ಪ್ರಾರಂಭದ ವರ್ಷದಲ್ಲೇ ಮುಟ್ಟುವುದಕ್ಕೆ ಆಗದೆ ಎಡವಿದ್ದೀರೋ ಅದೇ ಒಂದು ಕರುಣಕಥೆಯನ್ನು ಮುಂದಿನ ವರ್ಷ ಸಹ ಈ ನಾಡಿನ ಜನ ಎದುರಿಸುವಂಥ ಒಂದು ದುಸ್ಥಿತಿ ನಮಗೆ ಬರುತ್ತಾ ಇದೆ ಎನ್ನುವಂಥ ಸಂಗತಿ ಏನೆಂದರೆ ಸನ್ಮಾನ್ಯ ಅಧ್ಯಕ್ಷರೆ, ಯೋಜನೇತರ ವೆಚ್ಚ ಯೋಜನಾ ವೆಚ್ಚಕ್ಕಿಂತ ಮೂರು ಪಟ್ಟು ಇವತ್ತು ಹೆಚ್ಚಾಗಿದೆ. ಪ್ಲಾನ್ ಎಕ್ಸ್‌ಪೆಂಡೀಚರ್ ಹೆಚ್ಚು ಮಾಡಿ ನಾನಪ್ಲಾನ್ ಎಕ್ಸ್‌ಪೆಂಡಿಚರ್ ಕಡಿಮೆ ಮಾಡುವ ಪ್ರಾಮಾಣಿಕ ಪ್ರಯತ್ನ, ಆ ದಿಕ್ಕಿನಲ್ಲಿ ವಿಶೇಷವಾದ ಪರಿಶ್ರಮ ಎಲ್ಲಿಯವರೆಗ ಆಗುವುದಿಲ್ಲ ಅಲ್ಲಿಯವರೆಗೆ ಈ ನಾಡಿನ ಜನರ ಭವಿಷ್ಯಸುಧಾರಣೆ ಯಾರಿಂದಲೂ ಸಾಧ್ಯವಿಲ್ಲ. ಆ ದಿಕ್ಕಿನಲ್ಲಿ ಪ್ರಾಮಾಣಿಕಕ ಪ್ರಯತ್ನ ಈಗಲಾದರೂ ಪ್ರಾರಂಭ ಮಾಡಿ ಎಂದು ಕಳಕಳಿಯ ವಿನಂತಿಯನ್ನು ನಾನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಸ್ವಾಮಿ, ಹೋದವರ್ಷದ ಅಂಕಿಅಂಶ ನಾನು ಮಹಾಲೇಖಪಾಲರ ವರದಿ ಪ್ರಕಾರ ಹೇಳುತ್ತಿದ್ದೇನೆ 1995-96ನೇ ಸಾಲಿನ ಬಜೆಟ್ಟಿನಲ್ಲಿ 12,613,43 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲು ಅವಕಾಶವನ್ನು ತಾವು ಕಲ್ಪಿಸಿದ್ದಿರಿ. ಆದರೆ ಇಲಾಖಾವಾರು ಹಣ ಬಿಡುಗಡೆಯಾದ ಅಂಕಿ ಅಂಶಗಳನ್ನು ನೋಡಿದಾಗ 1995ರ ನವೆಂಬರವರೆಗೆ ತಾವು ಖರ್ಚು ಮಾಡಿರುವ ಹಣ 4854.54 ಕೋಟಿ ರೂಪಾಯಿಗಳು ಮಾತ್ರ. ಇದು ಮಹಾಲೇಖಪಾಲರ ವರದಿ ಪ್ರಕಾರ ಶೇಕಡ 35ಕ್ಕೂ ಕಡಿಮೆ ಇರುವಂಥದ್ದು ಕಾಣುತ್ತಿದೆ. ಇದೇ ಪರಿಸ್ಥಿತಿ ಈಗಲೂ ಇರಬಹುದು. ನಾನು ಏತಕ್ಕೆ

ಈ ಮಾತನ್ನು ಹೇಳುತ್ತಿದ್ದೇನೆ ಅಂದರೆ, ನವೆಂಬರ್ ಡಿಸೆಂಬರ್, ಜನವರಿ, ಫೆಬ್ರವರಿ, ಮಾರ್ಚ್, ನಾಲ್ಕು ತಿಂಗಳು ಅಂದರೆ ಶೇಕಡ 35ರಷ್ಟು ಹಣವನ್ನು ನವೆಂಬರ್ ಕೊನೆಯವರೆಗೆ ನೀವು ಖರ್ಚು ಮಾಡುವುದಕ್ಕೆ ಆಗದೇ ಇರುವಂಥವರು ಇನ್ನು ಬರುವಂಥ ನಾಲ್ಕೇ ತಿಂಗಳಲ್ಲಿ ಅದೆಷ್ಟರಮಟ್ಟಿಗೆ ಈ ಬಜೆಟ್ಟಿನಲ್ಲಿ ಹೇಳಿದಂಥ ಯೋಜನೆಗಳನ್ನು, ಅದಕ್ಕೆ ತೆಗೆದಿಟ್ಟ ಹಣವನ್ನು ಉಪಯೋಗ ಮಾಡಬಹುದು ಎನ್ನುವಂಥ ಒಂದು ಯಕ್ಷಪ್ರಶ್ನೆ ನಮ್ಮನ್ನು ಇವತ್ತು ಕಾಡುತ್ತಾ ಇದೆ. ಅದಕ್ಕಾಗಿ ನಾನು ಪ್ರಾರಂಭದಲ್ಲಿ ಹೇಳಿದ ಈ ಬಜೆಟ್ಟಿನ ಪಾವಿತ್ರ್ಯತೆ ಏನಿದೆ ಒಂದು ಬಾರಿ ಚಿಂತನ ಮಾಡಿ ಹಣವನ್ನು ಅದಕ್ಕೆ ತೆಗೆದಿಟ್ಟು ಇದನ್ನು ಖರ್ಚು ಮಾಡುತ್ತೇವೆ ಎಂದು ಈ ಸದನದಲ್ಲಿ ಭರವಸೆಯನ್ನು ಕೊಟ್ಟಮೇಲೆ ಚಾಚೂತಪ್ಪದ ಆ ಗುರಿಯನ್ನು ಮುಟ್ಟುವಂಥದ್ದು ಮತ್ತು ಆ ಯೋಜನೆಯನ್ನು ಮುಗಿಸುವ ಕಡೆ ಪ್ರಾಮಾಣಿಕ ಪ್ರಯತ್ನ ನಿಮ್ಮಿಂದ ಆಗದಿದ್ದರೆ ಬಹುಶಃ ಈ ಚರ್ಚೆಗೆ, ಈ ಒಂದು ವ್ಯವಸ್ಥೆಗೇ ಅರ್ಥ ಇಲ್ಲದಂತೆ ಆಗಬಹುದು. ಅದೇ ಕೆಲಸವನ್ನು ಸನ್ಮಾನ್ಯ ಸಿದ್ದರಾಮಯ್ಯನವರು ಯುವಕರಾಗಿ ಈ ಒಂದು ಇಲಾಖೆಯನ್ನು ವಹಿಸಿಕೊಂಡಮೇಲೆ ಅದೇ ಪರಿಸ್ಥಿತಿ ಮುಂದುವರೆಯುವಂಥ ಒಂದು ದಾರುಣ ಸ್ಥಿತಿ ಇವತ್ತು ಇದೆಯಲ್ಲ ಎಂದು ನನಗೆ ದುಃಖವಾಗುತ್ತಿದೆ. ಒಂದು, ತಮಗೆ ಅಭಿನಂದನೆಯನ್ನು ಸಲ್ಲಿಸಬೇಕು. ತೆರಿಗೆಯನ್ನು ದೊಡ್ಡ ಪ್ರಮಾಣದಲ್ಲಿ ತಾವು ವಸೂಲು ಮಾಡಿದ್ದೀರಿ. ಇಲ್ಲ ಅಂತ ನಾನು ಹೇಳುವುದಿಲ್ಲ. ಉದಾಹರಣೆಗೆ 1996ರ ಜನವರಿ 31 ರ ಒಳಗೆ 180.40 ಕೋಟಿ ರೂಪಾಯಿಗಳನ್ನು ಅಬಕಾರಿ ತೆರಿಗೆಯಿಂದ ಸಂಗ್ರಹಣೆ ಮಾಡಿದ್ದೀರಿ. ವಾಣಿಜ್ಯ ತೆರಿಗೆ 2724.96 ಕೋಟಿ ರೂಪಾಯಿಗಳಿದ್ದು ಕಳೆದ ಮೂರು ವರ್ಷಗಳ ಇದೇ ಅವಧಿಗೆ ಹೋಲಿಸಿದರೆ ಅಬ್ಕಾರಿ ತೆರಿಗೆಯಲ್ಲಿ ಶೇಕಡ 24.9 ವೃದ್ಧಿಯಾಗಿದೆ. ವಾಣಿಜ್ಯ ತೆರಿಗೆಯಲ್ಲಿ ಸುಮಾರು 29.5ರಷ್ಟು ವೃದ್ಧಿಯಾಗಿದೆ. ಗ್ರಾನೈಟಿನಿಂದ 1994-95ರಲ್ಲಿ 38 ಕೋಟಿ 12 ಲಕ್ಷ ಹೋದಸಾರಿ ವಸೂಲಿಯಾಗಿದ್ದರೆ 1995-96ನೇ ಸಾಲಿನಲ್ಲಿ 55 ಕೋಟಿ 10 ಲಕ್ಷ ರೂಪಾಯಿ ಇದುವರೆಗೆ ಸಂಗ್ರಹ ಮಾಡಿದ್ದೀರಿ. ಸ್ಟಾಂಪ್ ಡ್ಯೂಟಿ ಇಡೀ ದೇಶದಲ್ಲೇ ಏಕೆ ಇಡೀ ಪ್ರಪಂಚದಲ್ಲೇ ಅತ್ಯಂತ ದುಬಾರಿ. ಮತ್ತೆ ಮೋಟಾರ್ ವೆಹಿಕಲ್ ಟ್ಯಾಕ್ಸ್, ಪಾಪ, ತಮ್ಮ ಕಣ್ಣು ಅವರ ಮೇಲೂ ಬಿತ್ತು. ದೊಡ್ಡ ಪ್ರಮಾಣದಲ್ಲಿ ಹಣವನ್ನು ಸಂಗ್ರಹಣೆ ಮಾಡಿದಿರಿ. ಸುಮಾರು 250 ಕೋಟಿಗೂ ಹೆಚ್ಚು ತೆರಿಗೆಯನ್ನು ಈ ಎರಡೇ ಬಾಬಿನಲ್ಲಿ ಸಂಗ್ರಹಣೆ ಮಾಡಿದ್ದೀರಿ. ಮತ್ತು ಸಣ್ಣ ಉಳಿತಾಯದಿಂದ ಹಿಂದೆಂದೂ ಇಲ್ಲದಷ್ಟು ಹೆಚ್ಚು ಹಣವನ್ನು ಸಂಗ್ರಹ ಮಾಡಿದ್ದೀರಿ. ಶೇಕಡ 90 ಭಾಗಕ್ಕಿಂತ ಹೆಚ್ಚು ಹಣವನ್ನು ನಮ್ಮ ರಾಜ್ಯ ಸರ್ಕಾರ ನಮ್ಮ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡುವುದಕ್ಕೆ ಕೇಂದ್ರ ಸರ್ಕಾರದ ಅನುಮತಿ ಇದೆ ಎಂದು ನಾನಾದರೂ ಭಾವಿಸಿದ್ದೇನೆ. ಇಷ್ಟಾದರೂ ಸಹ ನನಗೆ ದುಃಖ ತರುವಂಥ ಸಂಗತಿ ನಿಮ್ಮ ಪ್ಲಾನ್ ಪ್ರೋಗ್ರಾಂಗಳಿಗೆ ಏನು ಹಣವನ್ನು ತೆಗೆದಿಟ್ಟು ನೀವು ಖರ್ಚು ಮಾಡಬೇಕಾಗಿತ್ತೋ ಆ ಕೆಲಸವನ್ನು ಮಾಡಿಲ್ಲ. ಯಾವುದೇ ವಿವರಣೆಯನ್ನು ತಾವು ಎಷ್ಟು ನಿಂತು ಹೇಳಬೇಕಾಗುತ್ತದೆ ತಾವು ಉತ್ತರ ಕೊಡುವ ಕಾಲದಲ್ಲಿ. ಯಾವ ಒಂದು ಪ್ರಮುಖ ವಲಯಗಳಲ್ಲಿ ಪ್ಲಾನ್ ಪ್ರೋಗ್ರಾಮಿಗೆ ಅಗತ್ಯ ಇರುವಷ್ಟು ಹಣವನ್ನು ಪೂರ್ಣ ಖರ್ಚು ಮಾಡಿದ್ದೇವೆ ಎಂದು ಧೈರ್ಯವಾಗಿ ಹೇಳುವುದಕ್ಕಾಗದೇ ಇರುವಂಥ ಒಂದು ಪರಿಸ್ಥಿತಿ. ಅಂದರೆ ಈ ನಾಡಿನ ಜನ ತಾವು ಸಂಕಷ್ಟದಲ್ಲಿ ಸಿಕ್ಕಿದರೂ ಸಹ ಹೆಚ್ಚಿನ ತೆರಿಗೆಯನ್ನು ಅನಿವಾರ್ಯವಾಗಿ ಸರ್ಕಾರಕ್ಕೆ ಪಾವತಿ

ಮಾಡಿದಮೇಲೂ ಸಹ ಅವರಿಗೆ ಅನುಕೂಲವಾಗುವಂಥ ಕ್ಯಾಶ್ ಕ್ರೆಡಿಟ್‌ಗೆ ಹಣವನ್ನು ಬಿಡುಗಡೆ ಮಾಡಲಿಲ್ಲ. ಅಂದರೆ ಈ ವರ್ಷ ಅವ್ಯವಸ್ಥೆಯಾಯಿತು. ಮುಂದೆ ಹೆಚ್ಚು ಆಯಿತು. ಅನಗತ್ಯ ಕ್ಷೋಭೆ ಬಿಡುಗಡೆಯಾಯಿತು. ನಮ್ಮ ಈ ನಾಡಿನ ಜನರ ಅಭಿವೃದ್ಧಿ ಮಾಡಿ ಬಡಜನರಿಗೆ ನ್ಯಾಯವನ್ನು ಕೊಡುತ್ತೇವೆ ಎನ್ನುವ ನಿಜವಾದ ಪರಿಪಾಲನೆ ಮಾಡುವಂಥ ಒಂದು ಸರ್ಕಾರ ಎಂದು ಹೇಳಿ ಮತವನ್ನು ಕೇಳಿ ಅಧಿಕಾರಕ್ಕೆ ಬಂದಂಥ ನಿಮಗೆ ಶೋಭೆ ತರುವಂಥ ಸಂಗತಿಯಲ್ಲ ಎಂದು ಈ ಸಂದರ್ಭದಲ್ಲಿ ಸನ್ಮಾನ್ಯ ಅಧ್ಯಕ್ಷರ ಮೂಲಕ ಕೇಳುವುದಕ್ಕೆ ಇಚ್ಛಿಸುತ್ತೇನೆ. ಬಜೆಟ್ ಭಾಷಣದ ಪ್ರಾರಂಭದಲ್ಲೇ ಒಂದು ಮಾತನ್ನು ನೀವು ಹೇಳಿದ್ದೀರಿ. ಹಿಂದಿನ ಉತ್ತಮ ಕಾರ್ಯನಿರ್ವಹಣೆ ಮಾಡಿದ್ದರ ಪರಿಣಾಮವಾಗಿ ರಾಜ್ಯದ ತೆರಿಗೆ ಆದಾಯ 1995-96ರಲ್ಲಿ ಶೇಕಡ 26ರಷ್ಟು ಗಮನಾರ್ಹ ಪ್ರಮಾಣದಲ್ಲಿ ಹೆಚ್ಚಾಗಿರುತ್ತದೆ. ಈ ಪ್ರಯತ್ನಗಳಿಂದಾಗಿ ಬಜೆಟಿನಲ್ಲಿ ಬಿಲ್ಲುಗಳ ಪಾವತಿಯಲ್ಲಿ ಇದ್ದ ಅಂಥ ವಿಳಂಬವನ್ನು ನಿವಾರಿಸಿದ್ದು ಅಲ್ಲದೆ 1995-96ರಲ್ಲಿ ಈವರೆಗೂ ರಿಸರ್ವ್ ಬ್ಯಾಂಕಿನಿಂದ ಓವರ್‌ಡ್ರಾಫ್ಟನ್ನು ಪಡೆದಿಲ್ಲ ಎಂದು ಹೇಳಿದ್ದೀರಿ. ನಾನು ನಿಮ್ಮನ್ನು ಕೇಳುತ್ತೇನೆ, ಇವತ್ತು ಶೇಕಡ 26ರಷ್ಟು ಗಮನಾರ್ಹ ಪ್ರಮಾಣದಲ್ಲಿ ಆದಾಯ ಹೆಚ್ಚು ಬಂದಿದ್ದರೂ ಸಹ ನೀವು ಪ್ರಾಮಾಣಿಕವಾಗಿ ಹೇಳುತ್ತೀರೋ? ಕಳೆದ ಎರಡು ತಿಂಗಳಿಂದ ಇವತ್ತು ಪಿ.ಡಬ್ಲ್ಯು.ಡಿ. ಇರಬಹುದು ಇರಿಗೇಷನ್ ಇರಬಹುದು. ಹಾಗೂ ಎಲ್.ಓ.ಸಿ. ಬಿಡುಗಡೆ ಮಾಡಿಲ್ಲ. ಹೊಸದಾಗಿ ಬಂದಾಯಿತು ಯಾಕೆ ಅಧ್ಯಕ್ಷರೆ? [illegible] ಅಧಿಕಾರಕ್ಕೆ ಬಂದತಕ್ಷಣ ಮುಖ್ಯಮಂತ್ರಿಗಳು ಹೇಳಿದರು. ಎಲ್ಲಾ ಕಡೆ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ, ಬಿಲ್ ಪಾಸ್ ಮಾಡುತ್ತಿದ್ದಾರೆ, ಅನ್ಯಾಯ ಆಗುತ್ತಿದೆ ಎಂದು ಕಾವೇರಿ ಬೇಸಿನ್‌ನಲ್ಲಿ ಕೃಷ್ಣಾ ಬೇಸಿನ್‌ನಲ್ಲಿ ಎಲ್ಲಾ ಕಡೆ ಕೆಲಸ ಸ್ಥಗಿತ ಮಾಡಿದಿರಿ. ಇದರ ಪರಿಣಾಮ ಆ ವರ್ಷ ಆಗಬೇಕಾದಂಥ, ವರ್ಷದ ಕೊನೆಯಲ್ಲಿ ಮೂರು ನಾಲ್ಕು ತಿಂಗಳು ಆಗಬೇಕಾದ ಎಲ್ಲಾ ಪ್ರಗತಿ ಕುಂಠಿತ ಆಯಿತು. ಅದೇ ಹಾಳಾದ ಕೆಲಸ ಇವತ್ತು ಮಾಡುತ್ತಿದ್ದೀರಿ. ರೋಡ್ ಮಾಡುವುದಕ್ಕೆ ಟಾರ್ ಇಲ್ಲ. ಬಿಲ್ಡಿಂಗ್ ಕಟ್ಟುವುದಕ್ಕೆ ಸ್ಟೀಲ್ ಇಲ್ಲ, ಸಿಮೆಂಟ್ ಇಲ್ಲ. ಕಂಟ್ರಾಕ್ಟರ್‌ಗೆ ಹೇಳಿದ್ದೀರಿ ನೀವೇ ಸಿಮೆಂಟ್ ತಗೊಳ್ಳಿ, ನೀವೇ ಸ್ಟೀಲ್ ತಗೊಳ್ಳಿ, ಎಂದು ಮೌಖಿಕ ಸೂಚನೆ ಕೊಟ್ಟಿದ್ದೀರಿ. ಇದರ ಪರಿಣಾಮ ಎಲ್ಲಾ ಪಬ್ಲಿಕ್ ಕೆಲಸ ಇರಬಹುದು, ಪಿ.ಡಬ್ಲ್ಯು.ಡಿ. ಇರಬಹುದು ಬೇರೆ ಇಲಾಖೆಗಳಿರಬಹುದು ಯಾವುದೇ ರೀತಿಯ ಒಂದು ಪ್ರಗತಿ ಆಗಲಿಲ್ಲ. ಇದರಿಂದ ಏನಾಗುತ್ತದೆ? ಈಗ ಅದೇ ಹಿಂದಿನ ಹಾದಿಗೆ ಬಂದಿರಿ. ಅದೇ ಬಿಲ್ ಪಾಸ್ ಕೊಡುವುದಕ್ಕೆ ಬಂದಿರಿ. ನೀವು ಅವತ್ತು ನಿಲ್ಲಿಸಿದ್ದು ಏತಕ್ಕೆ? ಇವತ್ತು ಮಾಡುತ್ತಿರುವುದು ಏತಕ್ಕೆ? ಅಂದರೆ ನೀವು ಬಂದ ತಕ್ಷಣ ಏನೋ ಒಂದು ಪ್ರದರ್ಶನ ಮಾಡುವುದಕ್ಕೆ, ಏನೋ ಕ್ರಾಂತಿ ಮಾಡುತ್ತೇವೆಂದು, ಏನೋ ಬದಲಾವಣೆ ಮಾಡುತ್ತೇವೆಂದು. ನಾವು ಅತ್ಯಂತ ಪ್ರಾಮಾಣಿಕ ವ್ಯಕ್ತಿಗಳು ಎಂದು ತೋರಿಸಿಕೊಳ್ಳುವುದಕ್ಕೆ ಅಧಿಕಾರಿಗಳ ಬಗ್ಗೆ ಅನುಮಾನಪಡುತ್ತ ನೋಡಿದ್ದೀರಿ. ಅದರ ನಮ್ಮಲ್ಲಿ ಪ್ರಾಮಾಣಿಕ ಅಧಿಕಾರಿಗಳಿಲ್ಲವೇನು? ನೀವು ಅವರನ್ನು ಅನುಮಾನ ದೃಷ್ಟಿಯಲ್ಲಿ ನೋಡಿ ಇವತ್ತು ಈ ರಾಜ್ಯದ ಒಂದು ಪ್ರಗತಿ ಒಂದು ವರ್ಷದ ಕಾಲ, ನಿಮ್ಮ [illegible] ಬಿಗಿಯಾದ ಕಾರ್ಯಪ್ರಣಾಲಿಯಿಂದ ಸ್ಥಗಿತ ಆಯಿತು, ಹಿಂದೆಯೂ ಅದು ಅತ್ಯಂತ [illegible] ಈ ನಾಡನ್ನು [illegible]. ನಾನು ಪ್ರಾರಂಭದಲ್ಲೇ ಹೇಳಿದಂತೆ ಇವತ್ತು [illegible]

ತೆರಿಗೆಯನ್ನು ನೀವು ಸಂಗ್ರಹ ಮಾಡಿದಮೇಲೂ ಸಹ ಇವತ್ತು ಪ್ಲಾನ್ ಪ್ರೋಗ್ರಾಮಿನಲ್ಲಿ ಸುಮಾರು 600 ಕೋಟಿಗೂ ಹೆಚ್ಚು ಕಡಿತ ಮಾಡಿರುವಂಥದ್ದು ಇದಕ್ಕೆ ಒಂದು ಜೀವಂತ ಸಾಕ್ಷಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ದೊಡ್ಡ ಪ್ರಮಾಣದಲ್ಲಿ ಆದಾಯ ಸಂಗ್ರಹಣೆ ಮಾಡಿದ್ದೇವೆ, ಸೋರಿಹೋಗುತ್ತಾ ಇರುವುದನ್ನು ತಪ್ಪಿಸಿದ್ದೇವೆ, ಬಿಗಿ ಕ್ರಮ ತೆಗೆದುಕೊಂಡಿದ್ದೇವೆ ಎಂಬುದಕ್ಕೆ ಒಂದು ಅಭಿನಂದನೆ ಮಾಡುವ ಬದಲು..... ಮಾನ್ಯ ವಿರೋಧ ಪಕ್ಷದ ನಾಯಕರು ಸ್ವಲ್ಪ ದೊಡ್ಡ ಗುಣ ಬೆಳೆಸಿಕೊಳ್ಳುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ.

ಶ್ರೀ ಬಿ.ಎಸ್. ಯಡಿಯೂರಪ್ಪ : ದೊಡ್ಡಗುಣ ಇಂಗ್ಲೀಷಿನಲ್ಲಿ ಮಾತನಾಡಿದರೆ ಪ್ರಕಟವಾಗುತ್ತದೋ ಏನೋ ಗೊತ್ತಿಲ್ಲ ನನಗೆ. ತಾವು ರೆಕಾರ್ಡ್ ತೆಗೆದು ನೋಡಿ. ನಾನು ಪ್ರಾರಂಭದಲ್ಲೇ 26 ಪರ್ಸೆಂಟಿಗಿಂತ ಹೆಚ್ಚಿನ ಹಣ ತೆರಿಗೆಯನ್ನು ವಸೂಲು ಮಾಡಿದ್ದೀರಿ, ಅದಕ್ಕಾಗಿ ತಾವು ಅಭಿನಂದನಾರ್ಹರು ಎಂದು ಹೇಳಿದ್ದೇನೆ. ಆದರೆ ದುರಾದೃಷ್ಟ ಎಂದರೆ ಇಷ್ಟೆಲ್ಲಾ ಹಣವನ್ನು ಸಂಗ್ರಹ ಮಾಡಿದಮೇಲೆ ದೇವೇಗೌಡರು ಸಿದ್ದರಾಮಯ್ಯನವರು ಏನಾದರೂ ಫಿಕ್ಸೆಡ್ ಡಿಪಾಸಿಟ್ ಇಟ್ಟುಕೊಂಡಿದ್ದಾರೋ ಎಂದು ಅನುಮಾನ ಜನರಿಗೆ ಬರುತ್ತಿದೆ.

ಶ್ರೀ ಸಿದ್ದರಾಮಯ್ಯ : ಕಳೆದ ಒಂದು ವರ್ಷದಿಂದ ಏನು ಮಾಡಿದ್ದೇವೆ ಎಂಬುದನ್ನು ಎಳೆಎಳೆಯಾಗಿ ಇಟ್ಟಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾಡಿದ್ದೀರಿ ಎಂದು ಅಲ್ಲ. ಏನೇನು ಮಾಡಬೇಕು ಎಂದು. ಅವತ್ತು ನೀವು ಇರಲಿಲ್ಲ.

ಶ್ರೀ ಸಿದ್ದರಾಮಯ್ಯ : ಇದ್ದೆ. ಇದ್ದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಲೋಕಸಭಾ ಚುನಾವಣೆ ದೃಷ್ಟಿಯಿಂದ ಸಮಯ ಕಡಿಮೆ ಇರುವುದರಿಂದ ಇಲ್ಲೇ ಒಂದು ಭಾಷಣ ಮಾಡಿಬಿಟ್ಟರು ಪತ್ರಿಕೆಯಲ್ಲಿ ಬಿಟ್ಟಿ ಪ್ರಚಾರ ತೆಗೆದುಕೊಳ್ಳೋಣ ಅಂತ.

ಅಧ್ಯಕ್ಷರು : ನೀವು ಎಲ್ಲರೂ ನಗು ನಗುತ್ತಾ ಇದ್ದೀರಿ, ನನಗೆ ಸಂತೋಷ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಜಾಲಪ್ಪನವರು, ಸಿದ್ದರಾಮಯ್ಯನವರು ಮತ್ತು ಪ್ರಕಾಶರವರು ಮುಂದೆ ಕುಳಿತಾಗ ನಗಲೇಬೇಕಲ್ಲ ಸ್ವಾಮಿ.

ಅಧ್ಯಕ್ಷರು : ಇನ್ನಾ ಒಂದೊಂದು ಸಾರಿ ಜಾಲಪ್ಪನವರು ನೀವು ಜಗಳಕ್ಕೆ ಬೀಳುತ್ತೀರಿ.

ಶ್ರೀ ಆರ್.ಎಲ್. ಜಾಲಪ್ಪ : ಜಗಳ ಏನು ಮಾಡುವುದಕ್ಕಾಗುತ್ತದೆ? ಎಷ್ಟು ದಿವಸ ಅಂತ ಜಗಳ ಮಾಡುತ್ತಾರೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಸರ್ವಜ್ಞ. ಮಾನ್ಯ

ಸರ್ಕಾರಕ್ಕೆ ಯಾವುದೇ ರೀತಿಯ ಬಾಧೆಯಲ್ಲಿ ಹೇಳಿದರೂ ಸಹ ಏನೂ ಪರಿಣಾಮವಾಗುವುದಿಲ್ಲವೆಂದು ಹೇಳಿದ ಮೇಲೆ ನಾನು ಏಕೆ ಆರೋಗ್ಯ ಹಾಳು ಮಾಡಿಕೊಳ್ಳಲಿ? ನಗು ನಗುತ್ತಾ ಇರೋಣ. ಮುಖ್ಯ ಮುಂದೆ ಸದನದಲ್ಲಿ ಬಂದವನೆ ಜಾಣ ಅಂತ. ಹೀಗಿದ್ದಾಗ ನಮ್ಮ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ? ಯಡಿಯೂರಪ್ಪನವರೇ ಹೋಗಿ ಏನ ಏನು ಹೇಳಿದರು? ಪ್ರಸಂಗ ನೋಡಿ, ತಾಲ್ಲೂಕು ಪಂಚಾಯತಿ ನೋಡಿ, ಜಿಲ್ಲಾ ಪಂಚಾಯತಿ ನೋಡಿ ಗೆದ್ದಿರುವ ಸ್ಥಾನಕ್ಕೆ ಹೋಗೋಣವೆಂದು ಹೇಳುತ್ತಿದ್ದಾರೆ. ಅಲ್ಲಿಂದ ಏನ ಎಲ್ಲಿಯವರೆಗೆ ಬಿಟ್ಟು ಕೊಡುತ್ತಾರೋ ಅಲ್ಲಿಯವರೆಗೆ ಬಾಗಿಲ ಕ್ಲೋಸ್ ಮಾಡ್ ಅಂತ ಒಂದು ಗಾದೆ ಇದೆ ಹಾಗೆ ಏನು ಬೇಕಾದರೂ ಮಾಡಬಹುದು ಎನ್ನುವ ತೀರ್ಮಾನಕ್ಕೆ ನೀವು ಬಂದಾಗ, ನಾನು ನಗದೆ ಇನ್ನೇನು ಮಾಡಲಿ ಸ್ವಾಮಿ? ನಗು ನಗುತಾ ಕೆಲಸ ಮಾಡೋಣ ತಪ್ಪೇನೂ ಇಲ್ಲ.

ಶ್ರೀ ಆರ್. ಎಲ್. ಜಾಲಪ್ಪ : ಕೋಪ ಮಾಡಿಕೊಳ್ಳುವುದಕ್ಕೆ 78 ನರ್ವ್ಸ್ ಬೇಕಂತೆ, ನಗು ನಗುತ್ತಾ ಇರುವುದಕ್ಕೆ ಬರೀ 18 ನರ್ವ್ಸ್ ಸಾಕಂತೆ.

MR. SPEAKER : It will have on effect on health. It is not only you are managing a medical college...

ಶ್ರೀ ಆರ್.ಎಲ್. ಜಾಲಪ್ಪ : ಯಾವಾಗಲೂ ನಗು ನಗುತಾ ಇರಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನನ್ನ ನಡವಳಿಕೆಯಲ್ಲಿ ಬಹಳವಾಗಿ ಮಾಡಿಕೊಳ್ಳಬೇಕೆಂದು ಇದ್ದೇನೆ. ನೇರ ಮಾತು, ತಪ್ಪು ಆದಾಗ ತಪ್ಪು ಎಂದು ಹೇಳತಕ್ಕದ್ದು ಇದು ರಾಜಕಾರಣದಲ್ಲಿ ಹಿಡಿಸುವುದಿಲ್ಲ. ನನಗೆ ಈ ಕಡೆಯೂ ಅನುಭವಕ್ಕೆ ಬಂದಿದೆ. ನಮ್ಮ ಜೊತೆಗೆ ನಮ್ಮ ಸಹೋದ್ಯೋಗಿಗಳು ಮತ್ತು ಸ್ನೇಹಿತರ ಜೊತೆಯಲ್ಲೂ ಅನುಭವಕ್ಕೆ ಬಂದಿದೆ. ಏನ ಇವತ್ತು ಅಪೇಕ್ಷೆ ಪಡುವಂತದನ್ನು ಏನೋ ಹೊಂದಿಕೊಂಡು ಹೋಗುವಂತದ್ದು ಅಲ್ಲ ಸ್ವಾಮಿ ಇರುವುದನ್ನು ಇದ್ದಾಗ ಹೇಳುವಂತದ್ದು ತಪ್ಪಾದರೆ ತಪ್ಪೆಂದು ಹೇಳುವಂತದ್ದು ಜನಗಳ ಹಿತದೃಷ್ಟಿಯಿಂದ ಇದಾಗಬೇಕೆಂದು ಹೇಳುವಂತದ್ದು ಇದು ಅಪರಾಧವಾಗುತ್ತದೆನ್ನುವುದು ನನ್ನ ಅನುಭವಕ್ಕೆ ಬಂತು. ಈ ಕಡೆಗೆ ಬಂದಮೇಲೆ ಹೆಚ್ಚು ಅನುಭವಕ್ಕೆ ಬರುತ್ತಾ ಇದೆ. ಅಲ್ಲಿ ಸಭಾನಾಯಕರು ಆಡಳಿತವನ್ನು ನಡೆಸುತ್ತಿರುವಂತಹ ರೀತಿ. ಇದನ್ನು ನೋಡಿದಾಗ ನಾವೇನು ಮಾಡುತ್ತಿದ್ದೇವೆ ಎಂದು ಭಯವಾಗುತ್ತದೆ. ಪ್ರತಿಪಕ್ಷದಲ್ಲಿ ಕುಳಿತುಕೊಂಡು ಹೇಳಿ ಯಾರಾದರೂ ಎದ್ದುನಿಂತುಕೊಂಡು ನಾನು ಏನಾದರೂ ಮುಲಾಜಿಗೆ ಬಂದಿದ್ದೇನೆಯೇ? ಅಧಿಕಾರ ದುರುಪಯೋಗ ಮಾಡಿಕೊಂಡಿದ್ದೇನೆಯೇ? ಸ್ವಂತಕ್ಕೆ ಏನಾದರೂ ಕೇಳುವುದಕ್ಕೆ ನಿಮ್ಮ ಹತ್ತಿರ ಬಂದಿದ್ದೇನೆಯೇ? ಇಲ್ಲ, ಪ್ರಾಮಾಣಿಕವಾಗಿ ನನ್ನದೇ ಆದ ಧಾಟಿಯಲ್ಲಿ, ಭಾಷೆ ಒರಟು ಇರಬಹುದು? ಸರ್ಕಾರ ತಿದ್ದಿಕೊಳ್ಳುವುದಕ್ಕೆ ನಾನು ಪ್ರತಿಪಕ್ಷದ ನಾಯಕನಾಗಿದ್ದುಕೊಂಡು ನನ್ನ ಕರ್ತವ್ಯವನ್ನು ನಿರ್ವಹಿಸುವಂತಹ ಕೆಲಸವನ್ನು ಮಾಡಿದ್ದೇನೆ. ನೀವು ಅದನ್ನು ಯಾವ ದಾಟಿಯಲ್ಲಿ ತಗೆದುಕೊಂಡಿರಿ? ನಾನು ಏನು ಹೇಳಿದೆ ಸ್ವಾಮಿ ನಿನ್ನೆ? ನಾನು ಏಕೆ ಈ ವಿರೋಧ ಪಕ್ಷದ ನಾಯಕನ ಸ್ಥಾನದಲ್ಲಿ ನಿಂತುಕೊಳ್ಳಬೇಕು? ಡಾಕ್ಟರ್ ನಾಗರಾಜರವರು ಇಲ್ಲಿ ಮಾತನಾಡುತ್ತಾ ಹೇಳಿದರು. ಪ್ರತಿಪಕ್ಷದ ನಾಯಕರು ಹೀಗೆ ನಡೆದುಕೊಳ್ಳಬೇಕೆಂದು ತಾವು ಹೇಳಿದಿರಿ. ಏನು ಅಪರಾಧ ಮಾಡಿದ್ದೇನೆ? ನಾನು

ಮುಖ್ಯಮಂತ್ರಿಗಳು ಮಾತನಾಡುವಂತಹ ಕಾಲದಲ್ಲಿ ಯಾವ ವಿದ್ಯುತ್ ಉತ್ಪಾದನೆಯಲ್ಲಿ ವಿಶೇಷವಾದ ಗಮನವನ್ನು ಕೊಟ್ಟಿದ್ದೇನೆ. 400 ಮೆಗಾವಾಟ್ ವಿದ್ಯುತ್ತನ್ನು 6 ತಿಂಗಳಲ್ಲಿ ಉತ್ಪಾದನೆ ಮಾಡುತ್ತೇನೆ. ನಾವಿದಿದ್ದರೆ ಯಾವ ಒಂದು ಕೆಲಸವನ್ನು ಐದಾರು ತಿಂಗಳಿನಲ್ಲಿ ಮುಗಿಸುತ್ತೇವೆಂದು ಹೇಳಿದ್ದಾರೆ, ಮಾಡದಿದ್ದರೆ ಪ್ರತಿನಿತ್ಯ 1 ಲಕ್ಷ ರೂಪಾಯಿ ದಂಡ ಹಾಕುತ್ತೇನೆಂದು ಹೇಳಿದರು. ಅದನ್ನು ನಾವು ಸ್ವಾಗತ ಮಾಡಿದ್ದೇವೆ. ನಾನು ಪ್ರತಿಪಕ್ಷದ ನಾಯಕನ ಸ್ಥಾನದಿಂದ ಎದ್ದುನಿಂತುಕೊಂಡು ಕೋರಮಂಗಲದ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದಾಗ ಅಲ್ಲಿಂದ ಅವಧಿಯೊಳಗಡೆ ಕೆಲಸವಾಗಿದಿದ್ದರೆ 50 ಸಾವಿರ ರೂಪಾಯಿ ದಂಡ ಹಾಕುತ್ತೇನೆಂದು ಹೇಳಿದಿರಿ, ಆದರೆ ಅವರು ಅಲ್ಲಿ ಕೆಲಸ ಮಾಡಿಲ್ಲ ಮೂರು ತಿಂಗಳ ಕಳೆದುಹೋಯಿತು. ಎಷ್ಟು ದಂಡ ಸಂಗ್ರಹವಾಗಿದೆಯೆಂದು ಕೇಳಿದರೆ ನಾನು ಇಲ್ಲಿ ಎದ್ದುನಿಂತುಕೊಂಡು ಕೇಳಿದರೆ, ಯಡಿಯೂರಪ್ಪನವರೇ ನೀವು ನಮ್ಮ ಮೇಲೆ ಆರೋಪ ಮಾಡಿ ಕೂಗುತ್ತಾ ಇದ್ದೀರಿ, ಕುಣಿಯುತ್ತಾ ಇದ್ದೀರಿ ಎನ್ನುವಂತಹ ಮಾತನ್ನು ಪ್ರತಿಪಕ್ಷದ ನಾಯಕನಿಗೆ ಹೇಳಿದ ಮೇಲೆ, ನಾವು ಇನ್ನೂ ಇಲ್ಲಿ ಹೇಗೆ ಹೇಳಬೇಕು? ಅದಕ್ಕಾಗಿ ಅಡ್ಜಸ್ಟ್‌ಮೆಂಟ್ ಮಾಡಿಕೊಳ್ಳಬೇಕಾಗಿದೆ ಸ್ವಾಮಿ. ಇರುವುದನ್ನು ಇದ್ದಹಾಗೆ ಹೇಳಬಾರದು. ಹೊಂದಾಣಿಕೆಯಾಗಬೇಕು ಯಾವರೀತಿ? ಅಧಿಕಾರಿಗಳಿಗೇನೋ ಮುಖ್ಯಮಂತ್ರಿಗಳು ಹೇಳಿದ್ದಾರೆ ಒಂದು ಮಾತು. ಸ್ಟ್ರಿಕ್ಟ್ ಇರಬೇಕು ಅಧಿಕಾರಿಗಳು ನೆನಪಿಡಿ. ಪ್ರಾಮಾಣಿಕ ಅಧಿಕಾರಿಗಳಿಗೆ ಜಾಗವಿಲ್ಲ. ಸ್ವಾಮಿ ಅಂದರೆ ಜನ ಅಲ್ಲ. ಸ್ವಾಮಿ ಅಂದರೆ ಅಧಿಕಾರದಲ್ಲಿರುವಂತಹ ನಾಯಕರ ಜೊತೆಯಲ್ಲಿ ನಿಷ್ಠೆಯಿಂದ ಇದ್ದರೆ ನೀವು ಬದುಕುತ್ತೀರಿ. ಇಲ್ಲದಿದ್ದರೆ ಎತ್ತಂಗಡಿ. ನಿಮ್ಮನ್ನು ಬಿಡಬೇಕಾಗುತ್ತದೆ. ಈ ತರಹದ ಸಂದೇಶವನ್ನೇ ನಮಗೆ ಕೊಡುತ್ತಿರುವಂಥದ್ದು? ಟೀಕೆಮಾಡಿಕೊಂಡು ಕೂಗಿ ಇರುವುದನ್ನು ಇದ್ದಹಾಗೆ ಹೇಳಿ ನಾವೇನು ಮಾಡಿದೆ? ಆಕಸ್ಮಾತ್ ನಾನು ಹೇಳುವಂತಹ ಮಾತಿನಲ್ಲಿ ಪ್ರಾಮಾಣಿಕತೆ ಇದ್ದರೆ ಬಹಿರಂಗವಾಗಿ ಹೇಳುವುದು ಬೇಡ. ಅದನ್ನು ತೆಗೆದುಕೊಂಡು ರಿಪೇರಿ ಮಾಡಿ ಸರಿಪಡಿಸಿಕೊಳ್ಳಬೇಕೆನ್ನುವ ಕಳಕಳಿ ಇದ್ದಾಗ ಇಲ್ಲಿ ಮಾತನಾಡಿದರೆ ಅದಕ್ಕೆ ಅರ್ಥ ಬರುತ್ತದೆ. ಆ ಮಾತಿಗೆ ಗೌರವ ಬರುತ್ತದೆ.

ಶ್ರೀ ಹೆಚ್. ಶಿವಪ್ಪ : ನಿಮಗೆ ಪ್ರಕ್ಷುಬ್ಧತೆ ಇದೆ ಎಂದೆ. ಏಕೆಂದರೆ ಇದುವರೆಗೂ ನಾವು ನೋಡಿದ ಹಾಗೆ ನಮ್ಮ ವಿರೋಧಪಕ್ಷದ ನಾಯಕರು ರಿಜಿಡ್. ಯಾವುದಕ್ಕೂ ಜಾರಿಯಾಗುವುದಿಲ್ಲವೆಂದು ತಿಳಿದುಕೊಂಡಿದ್ದೆ. ತಾವು ಆದರೆ ಈಗ ನಿಮ್ಮ ಭಾಷಣ ಕೇಳಿದ ಮೇಲೆ. ತಾವು ಸಹ ಅಡ್ಜಸ್ಟ್‌ಮೆಂಟ್ ಮಾಡಿಕೊಳ್ಳುವುದಕ್ಕೆ ಸಿದ್ಧರಾಗಿದ್ದೀರೆಂದು ಅರ್ಥವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಶಿವಪ್ಪನವರು ನನ್ನ ಆತ್ಮೀಯರು ಇದ್ದಾರೆ ಅವರು ಏನು ಅರ್ಥಮಾಡಿಕೊಂಡರೋ ಗೊತ್ತಿಲ್ಲ. ಹಿಂದಾಗಿಲ್ಲ. ಮಾನ್ಯ ಅರ್ಥಸಚಿವರಾದ ಸಿದ್ದರಾಮಯ್ಯನವರೇ ತಾವು ಒಂದು ಮಾತನ್ನು ಹೇಳಿದ್ದೀರಿ. ಪಾನನಿಷೇಧವನ್ನು ಹಂತ ಹಂತವಾಗಿ ಜಾರಿಗೆ ತರುತ್ತೇವೆಂದು. ಏನು ಬಡವರುಗಳನ್ನು ಮುಟ್ಟಿಸುವುದಕ್ಕೆ ಈ ಮಾತನ್ನು ಹೇಳಿದ್ದೀರೋ ಜನರನ್ನು ಬದುಕಿಸುವುದಕ್ಕೆ ಈ ಮಾತನ್ನು ಹೇಳಿದ್ದೀರೋ? ಪಾನನಿಷೇಧ ಮಾಡಿದರೆ ನಾವು ಸ್ವಾಗತ ಮಾಡಿದರೆ ನಾವು ಬೆಂಬಲ ಕೊಡುತ್ತೇವೆ ಸ್ವಾಗತ ಮಾಡುತ್ತೇವೆ. ಆದರೆ ನಿಮ್ಮ ಬಜೆಟ್ ಭಾಷಣದಲ್ಲಿ

ಹಂತ ಹಂತವಾಗಿ ಪಾನನಿಷೇಧವನ್ನು ಜಾರಿಗೆ ತರುತ್ತೇವೆಂದು ಹೇಳಿದ ಮೇಲೂ ಸಹಿತ. 1996-97ನೇ ಸಾಲಿನಲ್ಲಿ ಅಬಕಾರಿ ಇಲಾಖೆಯಿಂದ 860 ಕೋಟಿ ಆದಾಯವನ್ನು ನಿರೀಕ್ಷೆ ಮಾಡಿದ್ದೀರಿ. ಹೋದವರ್ಷಕ್ಕಿಂತ ಜಾಸ್ತಿ. ಅಂದರೆ ನಿಮ್ಮಲ್ಲಿ ಪಾನನಿಷೇಧವನ್ನು ಜಾರಿಗೆ ತರುವಂತಹ ಕಳಕಳಿ ನಿಮಗೆ ಇದ್ದರೆ ನಾಡಿನ ಜನರ ಹಿತ ನಿಮ್ಮಲ್ಲಿದ್ದರೆ ಹಂತ ಹಂತವಾಗಿ ಬೇಡ ಈ ವರ್ಷ ಅರ್ಧಭಾಗವನ್ನೇ ತನ್ನಿ. 850 ಕೋಟಿಯಲ್ಲಿ ಕನಿಷ್ಠ 450 ಕೋಟಿ ರೂಪಾಯಿ ಕಡಿಮೆಯಾಗಬೇಕು. ಅದರ ಕಡಿಮೆಯಾದದ್ದನ್ನು ತೋರಿಸಬೇಕು ತಾನೇ! ಅಂದರೆ ನಿಮ್ಮ ಮನಸ್ಸಿನಲ್ಲಿ ಜನರಿಗೆ ಹೇಳುವಂತದ್ದು ಒಂದು, ತಾವು ಮಾಡುವಂತಹದ್ದು ಒಂದು. ಅದನ್ನು ಜಾರಿಗೆ ತರಬೇಕೆನ್ನುವ ಯಾವುದೇ ಕಳಕಳಿಯಿಲ್ಲದಿರುವುದು. ಅಕಸ್ಮಾತ್ ನೀವು ಜಾರಿಗೆ ತಂದಿರಿಯೆಂದು ಇಟ್ಟುಕೊಳ್ಳಿ ಆಗ ನಾವು ಸ್ವಾಗತ ಮಾಡುತ್ತೇವೆ. ಸಂಪೂರ್ಣ ಪಾನನಿಷೇಧವನ್ನು ಜಾರಿಗೆ ತಂದರೆ ನಾವು ಸಂಪೂರ್ಣ ಸಹಕಾರ ಕೊಡುತ್ತೇವೆ. ಇದರಲ್ಲಿ ರಾಜಕಾರಣ ಮಾಡುವುದು ಬೇಡ. ನಿಮಗೆ ಕಳಕಳಿ ಇದೆಯೇನು? ಆ ಇಚ್ಛಾ ಶಕ್ತಿ ಇದೆಯೇನು? ಹಂತ ಹಂತವಾಗಿ ಪಾನ ನಿಷೇಧ ತರತಕ್ಕ ನಿರ್ಣಯ ನೀವು ಮಾಡಿದ ಮೇಲೆ 850 ಕೋಟಿಯಲ್ಲಿ 500 ಕೋಟಿ -450 ಕೋಟಿ ಕಡಿಮೆಯಾಗುವುದಾದರೆ, ಅದು ಪ್ಲಾನ್ ಎಕ್ಸ್‌ಪೆಂಡಿಚರ್ ನಲ್ಲಿ ಹೊರತಾಗುತ್ತದೆ. ಯಾವುದಕ್ಕೆ ಕಡಿತ ಮಾಡುತ್ತೀರ? ಹೆಚ್ಚಿನ ಆದಾಯ ತರುವಂತಹ ಯಾವ ವ್ಯವಸ್ಥೆ ಮಾಡಿಕೊಂಡಿದ್ದೀರಿ? ಅದನ್ನು ಹೇಳಬೇಕಿತ್ತು ಬಜೆಟಿನಲ್ಲಿ. ಹೇಳದಿದ್ದರೆ, ಬಹುಶಃ ನಿಮ್ಮೊಂದು ಮಾತಿಗೆ ಯಾವುದೇ ಒಂದು ಬೆಲೆಯಿಲ್ಲ ಎನ್ನುವಂಥ ಮಾತನ್ನು ನಾನು ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ಕಂಪನಿಗಳ ಕೊರತೆಯಿದೆ. ತೆರಿಗೆಯನ್ನು ಹೆಚ್ಚು ತರುವುದರಲ್ಲಿ ಪ್ರಯತ್ನ ಮಾಡುತ್ತಿದ್ದೀರಿ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಮೊದಲನೆಯ 20 ಜನರ ಒಂದು ಪಟ್ಟಿಯಿದೆ. ಹೆಚ್ಚು ತೆರಿಗೆಯನ್ನು ಕೊಡಬೇಕಾಗಿರುವವರು. ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಭದ್ರಾವತಿ 6281 ಲಕ್ಷ, ಮಕ್ಕೇರಿ ತಾಲ್ಲೂಕು ಕೋಆಪರೇಟಿವ್ ಸೊಸೈಟಿ ಮಕ್ಕೇರಿ 1804 ಲಕ್ಷ. ಸಂಡೂರು ಮ್ಯಾಂಗನೀಸ್ ಮತ್ತು ಕಬ್ಬಿಣದ ಅದಿರು ಹೊಸಪೇಟೆ 1289 ಲಕ್ಷ. ಬಿಂದಾಲ್ ಬೆಳಗಾಂ ಏನು ಮಾಡಿ ಇವರಿಗೆ? 1142 ಲಕ್ಷ. ಸಂಡೂರು ಮ್ಯಾಂಗನೀಸ್ ಮತ್ತು ಕಬ್ಬಿಣದ ಅದಿರು ಹೊಸಪೇಟೆ 691 ಲಕ್ಷ. ಗಾಲಿ ಮತ್ತು ಅಚ್ಚು ಕಾರ್ಖಾನೆ ಯಲಹಂಕ ಬೆಂಗಳೂರು 450 ಲಕ್ಷ. ಜನರಲ್ ಮ್ಯಾನೇಜರ್ ಎಸಿಸಿ ವರ್ಕ್ಸ್ ವಾಡಿ 447 ಲಕ್ಷ. ಭಾರತ್ ಗೋಲ್ಡ್ ಮೈನ್ಸ್ ಕೆಜಿಎಫ್. 352 ಲಕ್ಷ. ಮಹದೇವ ಟೆಕ್ಸ್‌ಟೈಲ್ಸ್ ಮಿಲ್ ಹುಬ್ಬಳ್ಳಿ 341 ಲಕ್ಷ. ದಾಂಡೇಲಿ ಕಾರ್ಖಾನೆ 276 ಲಕ್ಷ. ಮಂಗಳೂರು ಕೆಮಿಕಲ್ಸ್ 259 ಲಕ್ಷ. ಜನರಲ್ ಮ್ಯಾನೇಜರ್ ಎಸಿಸಿ ವರ್ಕ್ಸ್ ಶಹಬಾದ್ 245 ಲಕ್ಷ. ಕೆ.ಆರ್. ಮಿಲ್ಸ್ ಮೈಸೂರು 225 ಲಕ್ಷ. ತುಂಗಭದ್ರಾ ಷುಗರ್ ಗಂಗಾವತಿ 211 ಲಕ್ಷ. ರಾಜಶ್ರೀ ಸಿಮೆಂಟ್ ಕಾರ್ಪೋರೇಷನ್ ಆಫ್ ಇಂಡಿಯಾ ಕುರಗುಂಟ 126 ಲಕ್ಷ. ಗ್ರಾಫೈಟ್ ಇಂಜಿನಿಯರಿಂಗ್ ಜಾಲಹಳ್ಳಿ 117 ಲಕ್ಷ. ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್ ದಾಂಡೇಲಿ 10 ಲಕ್ಷ. ಅಂದರೆ 150 ಕೋಟಿ 20 ಲಕ್ಷ ಬಾಕಿಯಿದೆ 31-3-95ರವರೆಗೆ. ನಿಮಗೆ ಕಳಕಳಿ ಇದ್ದರೆ ಸುಮಾರು 11 ತಿಂಗಳ ನಂತರ ನಾವಿಲ್ಲಿ ಬಂದು ಕೂರುತ್ತಿದ್ದೇವೆ. ಎಷ್ಟು ವಸೂಲಿ ಮಾಡಿದ್ದೀರಿ? ಏನು ಪ್ರಾಮಾಣಿಕ ಪ್ರಯತ್ನ ನಿಮ್ಮ ಸರ್ಕಾರದಿಂದ ಆಗಿದೆ? ವಾಣಿಜ್ಯ ತೆರಿಗೆಯಿಂದ 419 ಕೋಟಿ 23 ಲಕ್ಷ ಬಾಕಿ ಬರಬೇಕೆಂದು ನಿಮ್ಮ ಉತ್ತರದಲ್ಲಿ ಕೊಡುತ್ತೀರಿ. ನಾವು

ಪ್ರಶ್ನೆ ಕೇಳಿದಾಗ. ಅಬಕಾರಿ ಬಾಬ್ತು 255 ಕೋಟಿ 26 ಲಕ್ಷ ಬಾಕಿ ಕೊಡಬೇಕೆಂದು ಹೇಳುತ್ತೀರಿ. ಅಂದರೆ ಈ ಮೂರು ಬಾಬಿನಲ್ಲಿ ವಿದ್ಯುಚ್ಛಕ್ತಿ ಮಂಡಳಿ, ವಾಣಿಜ್ಯ ತೆರಿಗೆ ಇಲಾಖೆ ಮತ್ತು ಅಬಕಾರಿ ಇಲಾಖೆ ಇಲ್ಲಿ ಒಟ್ಟು 8.824 ಕೋಟಿ ರೂಪಾಯಿ ಬಾಕಿಯಿದೆ. ಇದನ್ನು ವಸೂಲಿ ಮಾಡುವಂತಹ ಯಾವುದೇ ಪ್ರಾಮಾಣಿಕ ಪ್ರಯತ್ನ ಆಗಲಿಲ್ಲ. ಕೋರ್ಟಿಗೆ ಹೋಗಿದ್ದಾರೆಂದು ಹೇಳುತ್ತೀರಿ. ಕೋರ್ಟಿಗೆ ಹೋದರೆ ನಿಮ್ಮವರು ಲಾಯರು ಇಲ್ಲವೆ? ನಿಮ್ಮ ಅಡ್ವೋಕೇಟ್ ಜನರಲ್ ಇಲ್ಲವೇ? ವಕೀಲರು ಇವರಲ್ಲ? ನಿಮ್ಮ ಲಾ ಡಿಪಾರ್ಟ್‌ಮೆಂಟ್ ಏಕೆ ಇದೆ? ಈ ಬಾಕಿ ಕೊಡದಿರುವವರನ್ನು ಕೊಡದವರಾಗಿ ನೋಡಿಕೊಂಡು ಅವರನ್ನು ರಕ್ಷಣೆ ಮಾಡುವುದಕ್ಕೋಸ್ಕರ ಇದೆಯೇ? ಈ ದಿಕ್ಕಿನಲ್ಲಿ ಯಾವುದೇ ಪ್ರಾಮಾಣಿಕ ಪ್ರಯತ್ನ ವಿಲ್ಲ? ಯಾವುದೋ ನಂಟು ಯಾವುದೋ ಸಂಬಂಧದಿಂದ ರಾಜಕೀಯದ ಪ್ರಭಾವದಿಂದಾಗಿ ಈ ಪರಿಸ್ಥಿತಿ ಉಂಟಾಗಿದೆ ಕೋಟ್ಯಾಂತರ ರೂಪಾಯಿ ಬಾಕಿಗೆ ಬಡ್ಡಿ ವಿಧಿಸಲಾಯಿತು? ನಮ್ಮ ಅಭಿವೃದ್ಧಿ ಕೆಲಸಕ್ಕೆ ಸಾಲ ತರುತ್ತಿದ್ದೇವೆ. ಕೃಷ್ಣಾ ಜಲಭಾಗ್ಯ ನಿಗಮಕ್ಕೆ ಬಡ್ಡಿಕೊಟ್ಟು ಹಣವನ್ನು ಸಾಮಾನ್ಯ ಜನರಿಂದ ವಸೂಲಿ ಮಾಡುತ್ತೇವೆ. ಬಾಕಿಯಿರತಕ್ಕ ಹಣವನ್ನು ವಸೂಲಿ ಮಾಡಲು ಕಳಕಳಿಯಿಲ್ಲದಿರತಕ್ಕ ನೀವು ಅಧಿಕಾರದಲ್ಲಿ ಮುಂದುವರಿಯುವಂತಹ ನೈತಿಕ ಹಕ್ಕು ಇದೆಯೇ ಎಂದು ಜನ ಪ್ರಶ್ನೆ ಮಾಡಬೇಕೆನ್ನುವ ಮಾತ್ರ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಇವತ್ತು ತಾವೇ ಕೊಟ್ಟಿರುವಂತಹ ಅಂಕಿ-ಅಂಶ ಯೋಜನೆ ಮತ್ತು ಯೋಜನೇತರ ವೆಚ್ಚ ಒಂದು ರೂಪಾಯಿನಲ್ಲಿ ಯಾವುದಕ್ಕೆ ಎಷ್ಟು ಖರ್ಚಾಗುತ್ತದೆನ್ನುವುದನ್ನು ತಾವು ಹೇಳಿದ್ದೀರಿ. ನೀರಾವರಿಗೆ ಯಾರು ಈ ನಾಡಿನ ಜನರ ಒಂದು ಅಭ್ಯುದಯಕ್ಕೋಸ್ಕರ, ಅಭಿವೃದ್ಧಿಗೋಸ್ಕರ ಭೂಮಿಯ ಒಳಗಡೆ ಇರುವಂತಹ ನೀರನ್ನು ಹೊರಗೆ ರೈತನ ಹೊಲಕ್ಕೆ ನೀರು ಕೊಡುವಂತಹ ಕೆಲಸಕ್ಕೆ ಆದ್ಯತೆಯನ್ನು ಕೊಡಬೇಕಾಗಿತ್ತೋ ಒಂದು ರೂಪಾಯಿಯಲ್ಲಿ ನೀವು ಖರ್ಚು ಮಾಡುತ್ತಿರುವುದು 11 ಪೈಸೆಯನ್ನು ನೀವು ಖರ್ಚು ಮಾಡುತ್ತಾ ಇದ್ದೀರಿ. ವಿದ್ಯುಚ್ಛಕ್ತಿಗೆ ಅದರ ಅಭಿವೃದ್ಧಿಗೆ 3 ಪೈಸೆ. 45 ಅಥವಾ 50 ಪೈಸೆಯನ್ನ ಖರ್ಚುಮಾಡಿ ಇನ್ನು 50 ಪೈಸೆಗಿಂತ ಹೆಚ್ಚು ಹಣ ನೂರಕ್ಕೆ ಐವತ್ತು ರೂಪಾಯಿ ರೂಪಾಯಿಯಲ್ಲಿ 8 ಆಣೆ ನಮ್ಮ ಸರ್ಕಾರಿ ಸಿಬ್ಬಂದಿ ವೆಚ್ಚಕ್ಕಾಗಿ ಖರ್ಚು ಮಾಡುತ್ತಿದ್ದೇವೆ. ಈ ರೀತಿ ಕೋಟ್ಯಾಂತರ ರೂಪಾಯಿ ಬಾಕಿ ಇದ್ದಾಗ ಅಧಿಕಾರಿಗಳ ಇದರ ಕಡೆಗೆ ಗಮನ ಕೊಡದಿದ್ದರೆ ಅವರ ಕಿವಿ ಹಿಂಡಿ ಕೆಲಸ ಮಾಡಿಸಿಕೊಳ್ಳಬೇಕಲ್ಲ. ಯಾವ ಅಧಿಕಾರಿ ಸಂಪನ್ಮೂಲವನ್ನು ವರ್ಷ ಪೂರ್ತಿ ಅಲ್ಲಿರುತ್ತಾನೋ ಎನ್ನುವ ವಿಶ್ವಾಸವನ್ನು ಕಳೆದುಕೊಂಡಾಗ ಜೀತದಾಳುಗಳ ಹಾಗೆ ಮಂತ್ರಿಗಳ ಮನೆಯ ಮುಂದುಗಡೆ ಮತ್ತು ಮುಖ್ಯಮಂತ್ರಿಗಳ ಮನೆಯ ಮುಂದುಗಡೆ ಕೈಕಟ್ಟಿ ನಿಂತು ಹೇಳಿರುವಂತಹ ಆದೇಶವನ್ನು ಅದು ಕಾನೂನಿನ ಒಳಗೆ ಇದೆಯೋ ಹೊರಗೆ ಇದೆಯೋ, ತಾವು ಹೇಳಿದ ಹಾಗೆ ಮಾಡಿದರೆ ಮಾತ್ರ ಅವನಿಗೆ ರಕ್ಷಣೆ. ಇಲ್ಲದಿದ್ದರೆ ಉಸಿರುಕಟ್ಟುವಂತಹ ಬದುಕಲಿಕ್ಕೆ ಆಗದೇ ಇರುವಂತಹ ಒಂದು ಪರಿಸ್ಥಿತಿ ಬರುತ್ತದೆ. ಈ ರಾಜ್ಯದಲ್ಲಿದ್ದಾಗ ಏನಾದರೂ ಬದಲಾವಣೆ ಮಾಡುವುದಕ್ಕೆ ಸಾಧ್ಯವಿದೆಯೇ ಎಂದು ತಾವು ಪ್ರಾಮಾಣಿಕವಾಗಿ ತಾವು ವಿಚಾರ ಮಾಡಬೇಕು.

11.30 ಎ.ಎಂ.

ಇನ್ನು ಗೃಹಸಚಿವರು ಇಲ್ಲ. ಕೊಲೆ, ಸುಲಿಗೆ ನಿರಂತರವಾಗಿ ನಡೆಯುತ್ತಿದೆ.....

ಅಧ್ಯಕ್ಷರು : ಇದ್ದರಲ್ಲಿ. ಗೃಹಸಚಿವರು ಈಗ ಬಂದಹಾಗೆ ಇತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮರ್ಡರ್ 1994ರಲ್ಲಿ 1438 ಇತ್ತು. 1995 ರಲ್ಲಿ 1460 ಆಯಿತು. ಈ ವರ್ಷ ಡಿಸೆಂಬರ್ 31 ರವರೆಗೆ 1715. Attempt to murder 1994ರಲ್ಲಿ 890. 1995ರಲ್ಲಿ 1019 ಮತ್ತು 1996ರಲ್ಲಿ ಇಲ್ಲಿಯವರೆಗೆ 1219. ಕಸ್ಟಡಿಯಲ್ಲಿ ರೇಪ್ ಆಗಿರುವಂಥಾದ್ದು 1994ರಲ್ಲಿ 3. 1995 ರಲ್ಲಿ 2 ಮತ್ತು 1996 ರಲ್ಲಿ ಇಲ್ಲಿಯವರೆಗೆ 3. ಕಿಡ್ನಾಪ್ 1994 ರಲ್ಲಿ 498. 1995ರಲ್ಲಿ 292. 96ರಲ್ಲಿ ಇಲ್ಲಿಯವರೆಗೆ 295. ರಾಬರಿ- 1994ರಲ್ಲಿ 466. 1995ರಲ್ಲಿ 292. 96ರಲ್ಲಿ 587. ಥೆಫ್ಟ್- 1994ರಲ್ಲಿ 18.300 1995ರಲ್ಲಿ 19.079. ಮತ್ತು 96 ರಲ್ಲಿ 19.081. ಸ್ವಾಮಿ. ಇದು ಯಾಕೆ ಕೆಲವು ಅಂಕಿಅಂಶಗಳನ್ನು ಹೇಳುತ್ತಿದ್ದೇನೆ ಎಂದರೆ ಯಾವರೀತಿ ಲಾ ಅಂಡ್ ಆರ್ಡರ್ ಸಿಚ್ಯುಯೇಶನ್ ನಮ್ಮ ರಾಜ್ಯದಲ್ಲಿ ಇತ್ತು ಎಂಬುದನ್ನು ಸರ್ಕಾರದಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದೆ. ಇನ್ನು ಈ ಆಯವ್ಯಯದಲ್ಲಿ ಗ್ರಾಮೀಣ ಜನತೆಯ ಬಗ್ಗೆ ಒಂದು ಸಂಪೂರ್ಣ ನಿರ್ಲಕ್ಷ್ಯವನ್ನು ತಾವು ಮಾಡಿದ್ದೀರಿ. ಈ ರೈತನ ಸಂಕಷ್ಟ ಹೇಳುವುದಕ್ಕೆ ಆಗದೇ ಇರುವಂಥ ಪರಿಸ್ಥಿತಿ ಇದೆ. ಈ ಬಜೆಟ್ ಆ ಗಾಯದ ಮೇಲೆ ಬರೆ ಎಳೆದಂತೆ ಆಗಿದೆ. ಬೇರೆ ಏನೂ ಆಗಿಲ್ಲ. ಪವರ್ ಪ್ರಾಬ್ಲಮ್ ಇದೆ. ಬೋರವೆಲಗಳು ಕೆಟ್ಟಿವೆ. ನಾಡಿನ ಜನರ ಬಗ್ಗೆ ಬೆಳಗ್ಗೆ ಎದ್ದು ಮೊಸಳೆ ಕಣ್ಣೀರು ಸುರಿಸುವಂಥ ನೀವು ವಿದ್ಯುತ್ ಬರ ಇರುವಂಥ ಕಾಲದಲ್ಲಿ ಆತನು ಡಿಸೇಲ್ ಜನರೇಟರನ್ನು ಕೊಂಡುಕೊಳ್ಳುವುದಕ್ಕೆ ಒಂದು 50 ಪರ್ಸೆಂಟ್ ರಿಯಾಯಿತಿಯನ್ನು ಕೊಟ್ಟಿದ್ದರೆ, ಸಬ್ಸಿಡಿಯನ್ನು ಕೊಟ್ಟಿದ್ದರೆ ನಿಮ್ಮ ಸರ್ಕಾರ ದಿವಾಳಿಯಾಗುತ್ತಿತ್ತೇನು ? ಸ್ವಾಮಿ, ನನಗೆ ಅರ್ಥವಾಗದಿರುವ ಸಂಗತಿ ಎಂದರೆ ನೀವೇನು ಮಾಡುತ್ತಿದ್ದೀರಿ? ಕೃಷಿಯನ್ನು ಒಂದು ಕೈಗಾರಿಕಾ ನೀತಿಯೆಂದು ಹೇಳಿದ್ದೀರಿ. ಏನಿದೆ ವಿವರ?

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಏನು ಕಾರ್ಯಕ್ರಮ ನಿಮ್ಮಲ್ಲಿದೆ? 50-60 ಲಕ್ಷ ಟನ್ ಕಬ್ಬು ಹಾಳಾಗುತ್ತಿದೆ, ಒಣಗಿಹೋಗುತ್ತಿದೆ, ಅದಕ್ಕೆ ಬೆಂಕಿ ಇಡುವಂಥ ಪರಿಸ್ಥಿತಿ ಇದೆ. ಕೇಂದ್ರಸರ್ಕಾರ ಅನುಮತಿ ಕೊಟ್ಟಿರುವಂಥ, ಕೋಆಪರೇಟಿವ್ ಶುಗರ್ ಮಿಲ್ಲಿಗೆ ನಮ್ಮ ರಾಜ್ಯದ ಪಾಲನ್ನು ಇಷ್ಟು ಹಣ ತೆಗೆದಿಟ್ಟಿದ್ದಾರೆ, ಕೊಡುತ್ತಿದ್ದಾರೆ, ಕೊಟ್ಟಿದ್ದಾರೆ ಎಂದು ಹೇಳಬೇಕಾಗಿತ್ತು. ಇಲ್ಲ, ಆ ಇಚ್ಛಾಶಕ್ತಿ ನಿಮಗೆ ಇಲ್ಲ. ಲಕ್ಷಾಂತರ ಮಂದಿ ನೇಕಾರರು ತಿಂಗಳಿಗೆ 14-15 ದಿವಸ ಕೆಲಸ ಮಾಡುವುದಕ್ಕೆ ಆಗದಿರುವಂಥ ದಾರುಣ ಸ್ಥಿತಿ ಇದೆ. ಅವರಿಗೆ ಬೇಕಾದಂಥ ಕಚ್ಚಾಮಾಲನ್ನು ಕೊಟ್ಟು, ಅವರು ನೇಯುವ ಬಟ್ಟೆಗೆ ಸರಿಯಾದ ಬೆಲೆ ಕೊಟ್ಟು ಆ ನೇಕಾರರ ಸಮಸ್ಯೆಯನ್ನು ನಿವಾರಿಸುತ್ತೇವೆ ಎಂದರೆ, ಅದರ ಬಗ್ಗೆ ಒಂದೂ ಶಬ್ದ ಸಹ ಇಲ್ಲ. ಇನ್ನು ಸಾರ್ವಜನಿಕ ಉದ್ದಿಮೆಗಳು ರೋಗಗ್ರಸ್ತವಾಗಿವೆ. ಎನ್.ಜಿ.ಇ.ಎಫ್. ಮುಳುಗಿಹೋಗುತ್ತಿದೆ. ಇನ್ನೂ ಅನೇಕ ಕಾರ್ಖಾನೆಗಳು ಮುಗುಳುತ್ತಿವೆ. ನಿಮ್ಮ ನೀತಿ ಏನು? ಇದನ್ನು ಉಳಿಸಿಕೊಳ್ಳುವುದಕ್ಕೆ ಏನು ಪ್ರಯತ್ನ ಮಾಡಿದ್ದೀರಿ? ಇದರ ಬಗ್ಗೆ ಒಂದು ಶಬ್ದವೂ ಇಲ್ಲ. ಮಲೆನಾಡು ಅಭಿವೃದ್ಧಿ ಮಂಡಳಿ ಬಗ್ಗೆ, ಮಂಡಳಿ ಮೇಲೆ ಮಂಡಳಿ ಮಾಡಿದಿರಿ. ಇದಕ್ಕಾಗಿ 27 ಕೋಟಿ ರೂಪಾಯಿಗಳು ಇವೆ. ಇದುವರೆಗೆ ರಿಲೀಸ್ ಮಾಡಿರುವುದು 7 ಕೋಟಿ ರೂಪಾಯಿ. ಈಗ ಯಾರಿಗೋಸ್ಕರ ರಿಲೀಸ್ ಮಾಡುತ್ತೀರಿ? ಇನ್ನು 15

ವಿಶೇಷ ಟೈಮ್ ಕೂಡ ಇಲ್ಲ. ಏನಾಗುತ್ತದೆ ನಿಮ್ಮ ಮುಷ್ಟಿ? ಹೈದರಾಬಾದ್ ಬೋರ್ಡ್‌ನಲ್ಲೂ ಇದೇ ಗೋಳು. ಮಲೆನಾಡು ಅಭಿವೃದ್ಧಿಯಲ್ಲೂ ಇದೇ ಗೋಳು. ಬಯಲು ಸೀಮೆ ಅಭಿವೃದ್ಧಿ ಮಂಡಳಿಯಲ್ಲೂ ಇದೇ ಗೋಳು. ಸುಮ್ಮನೆ ಮಂಡಳಿಗಳನ್ನು ಮಾಡಿ ಈ ರಾಜ್ಯದಲ್ಲಿ ಏನೋ ಉದ್ಧಾರ ಮಾಡುತ್ತೇವೆ ಎಂದು ಹೇಳುತ್ತೀರಿ. ನಿರುದ್ಯೋಗಿ ಯುವಕರ ಬಗ್ಗೆ ನಿಮ್ಮ ಕಾರ್ಯಕ್ರಮ ಏನಿದೆ? ಉದ್ಯೋಗ ಕೊಡುವುದು ಇರಲಿ. ಕರ್ನಾಟಕ ರಾಜ್ಯದಲ್ಲಿ ಒಂದೂಕಾಲು ಕೋಟಿ ಕಾರ್ಮಿಕರು ಇದ್ದಾರೆ. ವಿದ್ಯುತ್ ಬರದಿಂದ ಕಾರ್ಖಾನೆಗಳು ಬಾಗಿಲು ಹಾಕುವಂಥ ಸ್ಥಿತಿ ಇದೆ. ಲಕ್ಷಾಂತರ ಜನರು ಬೀದಿಪಾಲಾಗುತ್ತಿದ್ದಾರೆ. ಅವರ ಬಗ್ಗೆ ನಿಮ್ಮ ಕಾರ್ಯಕ್ರಮ ಏನೂ ಇಲ್ಲ. ನಾನು ಮೊನ್ನೆ ಮಹಾರಾಷ್ಟ್ರಕ್ಕೆ ಹೋಗಿದ್ದೆ. ಡೆಪ್ಯುಟಿ ಚೀಫ್ ಮಿನಿಸ್ಟರ್ ಹತ್ತಿರ ಮಾತನಾಡುವಾಗ ಅವರು ಹೇಳಿದರು. ಒಂದು ಹೊಸತನವಾದಂಥ ಕಾರ್ಯಕ್ರಮ. ಅದೇನೆಂದರೆ, ಯಾವುದೇ ಒಬ್ಬ ಇಂಜಿನಿಯರಿಂಗ್ ಗ್ರಾಜ್ಯುಯೇಟ್ ಅಥವಾ ಡಿಪ್ಲೋಮಾ ಗ್ರಾಜ್ಯುಯೇಟ್ ಜಸ್ಟ್ ಈ ಇಲಾಖೆಯಲ್ಲಿ ಹೋಗಿ ನೋಂದಣಿ ಮಾಡಿಕೊಂಡರೆ ಸಾಕು. ರಾಜ್ಯಸರ್ಕಾರ ಇವತ್ತು ಘೋಷಣೆ ಮಾಡಿದೆ, ರಾಜ್ಯಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಆ ಇಂಜಿನಿಯರಿಂಗ್ ಪದವೀಧರ ಅಥವಾ ಡಿಪ್ಲೋಮಾ ಹೋಲ್ಡರಗೆ ಸುಮಾರು 50 ಲಕ್ಷ ರೂಪಾಯಿವರೆಗೆ ಕಾಮಗಾರಿ ಕೆಲಸ ಅದು ಪಿ.ಡಬ್ಲ್ಯು.ಡಿ. ಇರಲಿ, ಇರಿಗೇಶನ್ ಇರಲಿ. 40 ಸಾವಿರ ರೂಪಾಯಿಗಳನ್ನು ಅತ ನೋಂದಣಿ ಮಾಡಿಕೊಂಡ ತಕ್ಷಣ ಕೊಡುತ್ತಾರೆ, ಅವನು ಆ ಕೆಲಸ ಮಾಡುತ್ತಾನೆ. ಇದರ ಪರಿಣಾಮವಾಗಿ ಇದುವರೆಗೂ ಬೇನಾಮಿ ಕಂಟ್ರಾಕ್ಟರ್‌ನ್ನು ಕರೆದುಕೊಂಡುಬಂದು ಲೂಟಿ ಪರಿಣಾಮವಾಗಿ ಹಗರಣ ಏನು ನಡೆಯುತ್ತಿತ್ತು ಅದು ಕಡಿಮೆಯಲ್ಲಿ ನಮ್ಮ ಈ ಒಂದು ಕಾರ್ಯದಲ್ಲಿ ಅಪ್ರೋಚ್ ಪ್ರಗತಿಯಾಗುತ್ತಿದೆ ಯಡಿಯೂರಪ್ಪನವರೇ ಎಂದು ಅವರು ಹೇಳಿದರು. ಇಲ್ಲಿ ಒಬ್ಬರನ್ನೂ ಅಪ್ರೋಚ್ ಮಾಡುವುದಕ್ಕೆ ಸಾಧ್ಯವಿಲ್ಲ. ಬಯಲೇ ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ನಮಗೆ ಮಾಮೂಲಿ ಕೊಡುವುದಕ್ಕೆ ಆಗುವುದಿಲ್ಲ. ನಾನು ಹೇಳುವಂಥದ್ದು, ಯಾವ್ಯಾವ ರಾಜ್ಯದಲ್ಲಿ ಏನು ಆಗುತ್ತಿದೆ ಎಂದು ನೋಡಿಕೊಂಡು ಬನ್ನಿ. ಅದನ್ನು ಜಾರಿಗೆ ತರುವಂಥ ಪ್ರಾಮಾಣಿಕ ಪ್ರಯತ್ನ ಮಾಡಿ. ನಿಮಗೆ ಇಚ್ಛಾಶಕ್ತಿ ಇದ್ದರೆ, ಕಳಕಳಿ ಇದ್ದರೆ ಇದನ್ನು ಮಾಡಿ. ಈ ರೀತಿ ಯಾವುದೇ ಒಂದು ಪ್ರಯತ್ನ ಇವತ್ತು ನಿಮ್ಮ ಸರ್ಕಾರದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಗುತ್ತಿಲ್ಲ ಎನ್ನುವಂಥದ್ದು ತುಂಬಾ ನೋವು ತರತಕ್ಕಂಥ ಸಂಗತಿಯಾಗಿದೆ. ಇನ್ನು, ನೀರಾವರಿ ಯೋಜನೆಗಳ ಬಗ್ಗೆ ಏನು ಹೇಳಿದ್ದೀರಿ? 47ನೇ ಪ್ಯಾರಾದಲ್ಲಿ ಏನು ಹೇಳಿದ್ದಾರೆ ಮುಖ್ಯಮಂತ್ರಿಗಳು?

“.... ಈ ಯೋಜನೆಗೆ ಆಯವ್ಯಯದಲ್ಲಿ ಒದಗಿಸಲಾದ 200 ಕೋಟಿ ಮೊತ್ತಕ್ಕಿಂತ 50 ಕೋಟಿ ಹೆಚ್ಚು ಮೊತ್ತವನ್ನು ಒದಗಿಸಿದ್ದಲ್ಲದೆ ಕೃಷ್ಣಾ ಭಾಗ್ಯ ಜಲನಿಗಮದಿಂದಲೂ 180 ಕೋಟಿ ರೂಪಾಯಿಗಳನ್ನು ಒದಗಿಸಿ ಯೋಜನೆಯ ಅನುಷ್ಠಾನವನ್ನು ತ್ವರಿತಗತಿಯಲ್ಲಿ ಮುಂದುವರೆಸುವ ಎಲ್ಲ ಪ್ರಯತ್ನ ಮಾಡಲಾಗಿದೆ”.

ನೀವು ಹೇಳಿದ್ದು ಏನು? 800 ಕೋಟಿ ಪ್ರಾವಿಜನ್ ಇದೆ. ಇನ್ನೂರು ಕೋಟಿ ತರುತ್ತೇನೆ. ಒಂದು ಸಾವಿರ ಕೋಟಿ ಖರ್ಚುಮಾಡುತ್ತೇವೆ. ಇದನ್ನು ತಾವು ಬೊಬ್ಬೆಹೊಡೆದು ಹೇಳಿದಿರಿ. ರಾಜ್ಯದ

ಉದ್ದಗಲಕ್ಕೆ ಹೋಗುವ ಕಾಲದಲ್ಲಿ ಇದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿಕೊಂಡು ಬಂದರು ಎಂದರೆ ನಿಮ್ಮ ಮನಸ್ಸಿನಲ್ಲಿ ಇವತ್ತು 200-300 ಕೋಟಿ ಖರ್ಚು ಮಾಡಬೇಕೆಂದು ಇತ್ತು. ಆದರೆ ಜನರ ಮುಂದೆ ಹೇಳಿದ್ದು ಸಾವಿರ ಕೋಟಿ ಖರ್ಚುಮಾಡುತ್ತೇವೆ ಅಂತ ಹೇಳಿ. ಮುಖ್ಯಮಂತ್ರಿಗಳ ಭಾಷಣ ಇಲ್ಲಿದೆ. ಇದೇ ಸದನದಲ್ಲಿ ಮತ್ತೊಂದು ಭಾಷಣವನ್ನು, "ಕೃಷ್ಣಾ ಭಾಗ್ಯ" ಜಲನಿಗಮದ ಬಗ್ಗೆ ಇಲ್ಲಿ ಹೇಳಿದರು. ೮೦೦ ಕೋಟಿ ಹೇಗೆ ಸಂಗ್ರಹ ಮಾಡುತ್ತೇವೆ, ನನ್ನ ಅಧಿಕಾರಿಗಳು ಏನು ಸಲಹೆ ಕೊಟ್ಟಿದ್ದಾರೆ ಎಂದು ಅವರು 9.8.1995ರ ಭಾಷಣದಲ್ಲಿ ಹೇಳಿದ್ದಾರೆ. ಅವರು ಏನು ಹೇಳಿದರು?

“..... ಕೃಷ್ಣಾ ಜಲನಿಗಮದ ನಿರ್ಮಾಪಕರು ಶ್ರೀಮಾನ್ ವೀರಪ್ಪ ಮೊಯಿಲಿಯವರು ಅವರ ಬಗ್ಗೆ ತಕರಾರು ಇಲ್ಲ.

”..... ಈಗ ಒಂದು ನಿಗಮ ಮಾಡಿದಮೇಲೆ ಕಾನೂನು ಚೌಕಟ್ಟಿನಲ್ಲಿ ಕೆಲವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನಾವು ಈ ವರ್ಷಕ್ಕೆ 800 ಕೋಟಿ ರೂಪಾಯಿಗಳನ್ನು ಸಾರ್ವಜನಿಕವಾಗಿ ಎತ್ತಬೇಕೆಂದು ತೀರ್ಮಾನ ಮಾಡಿದ್ದೇವೆ. ಉಳಿದ 200 ಕೋಟಿ ರೂಪಾಯಿ ವಿಶ್ವಬ್ಯಾಂಕಿನ ಯೋಜನೆಯಿಂದ ಬರತಕ್ಕಂಥದ್ದು. ಸೆಕೆಂಡ್ ಫೇಸಗೆ ಹಣ ಪೂರೈಸಿಕೊಂಡು ಒಂದು ಸಾವಿರ ಕೋಟಿ ರೂಪಾಯಿ ಖರ್ಚು ಮಾಡಬೇಕು. ಇದರಲ್ಲಿ ಕೆಲವು ಕಾನೂನಿನ ತೊಡಕುಗಳು ಇವೆ. ಇದರಲ್ಲಿ ಯಾರೂ ಜನತೆಗೆ ಮೋಸ ಮಾಡಿ ಅಧಿಕಾರ ನಡೆಸುವ ಅಗತ್ಯವಿಲ್ಲ. ನಿಗಮದ ವ್ಯಾಪ್ತಿಯಲ್ಲಿ ಕೆಲವು ನಿರ್ಣಯಗಳನ್ನು ಮಾಡಿದ್ದೇವೆ. ಮತ್ತು ಅದಕ್ಕೆ ಬಡ್ಡಿ ಕೊಡಬೇಕಾಗುತ್ತದೆ. ಏಕಕಾಲದಲ್ಲಿ ಖರ್ಚು ಮಾಡಲಿಕ್ಕೆ ಎರಡು ಸಾರಿ ಹೋಗಿ ಕುಳಿತು ರಿವ್ಯೂ ಮಾಡಿದ್ದೇನೆ. ಒಂದೇ ಸಾರಿ ಹಣ ತೆಗೆದುಕೊಳ್ಳುವುದು ಸರಿಯೇ ಅಥವಾ 2-3 ಕಂತುಗಳಲ್ಲಿ ತೆಗೆದುಕೊಳ್ಳುವುದು ಸರಿಯೇ ಎಂದು, ವಿಚಾರ ಮಾಡಬೇಕು. ಅದೂ ಕೂಡ ಸಾಲ ತೆಗೆದುಕೊಳ್ಳುವುದು. ಅಧಿಕಾರಿಗಳು, ನಾವು ಎಲ್ಲ ಕುಳಿತು ಚರ್ಚೆ ಮಾಡಿ ಒಂದು ಒಂದು ನಿರ್ಣಯಕ್ಕೆ ಬಂದೆವು. ಒಂದೇ ಸಲಕ್ಕೆ ಹಣ ಖರ್ಚು ಮಾಡುವುದು ಸರಿಯಲ್ಲವೆಂದೂ, ಅದನ್ನು ಬ್ಯಾಂಕಿನಲ್ಲಿ ಹಾಕಿದರೆ 13 ಪರ್ಸೆಂಟ್ ಬಡ್ಡಿ ಬರಬಹುದು ಎಂದು. ಅದಕ್ಕಾಗಿ ನಾವು ಡಿಬೆಂಚರಗೆ ಆಕರ್ಷಣೆ ಮಾಡಿದರೆ ಬಡ್ಡಿ ಹೆಚ್ಚು ಕೊಡಬೇಕಾಗುತ್ತದೆ ಎಂದೂ, ಮೊದಲನೇ 400 ಕೋಟಿ ರೂಪಾಯಿಗಳನ್ನು ಶ್ರೀ ನಿಜಲಿಂಗಪ್ಪನವರ ಜೊತೆ ಭೇಟಿ ಮಾಡಿದಾಗ ರೈತರಿಂದ ಸ್ವಲ್ಪ ಡಿಬೆಂಚರ್ ಸಂಗ್ರಹ ಮಾಡಿ. ಹಣಕಾಸು ಸಂಸ್ಥೆಗಳಿಂದ ಇದನ್ನು ಸರಿಪಡಿಸುವುದಕ್ಕೆ ಹೋಗಬೇಡಿ. ನನ್ನಲ್ಲಿ 12 ಸಾವಿರ ರೂಪಾಯಿ ಇದೆ. ಅದನ್ನು ಕೂಡ ಹಣ ಕೊಡಿಸುತ್ತೇನೆ ಎಂದು ಅವರು ಹೇಳಿದರು. ಪುನಃ ಚರ್ಚೆಮಾಡಿ 150 ಕೋಟಿ ರೂಪಾಯಿಗಳನ್ನು ಖಾಸಗಿ ರೈತಬಾಂಧವರಿಂದ ಎತ್ತುವುದಕ್ಕೆ 28.8.95 ರಲ್ಲಿ ಕೊನೆ ದಿನ ಅಂತ ಗೊತ್ತು ಮಾಡಿದ್ದೇನೆ. 250 ಕೋಟಿಗೆ ಅಕ್ಟೋಬರ್ 1995ನೇ ಕೊನೆ ದಿನಾಂಕವೆಂದು ಮಾಡಿದ್ದೇವೆ. ಅಲ್ಲಿಗೆ 400 ಕೋಟಿ ರೂಪಾಯಿ ಅಕ್ಟೋಬರ್ 1995ರಲ್ಲಿ ನಾವು ಸಾರ್ವಜನಿಕ ಡಿಬೆಂಚರ್ ರೈಸ್ ಮಾಡಬೇಕು. ಫೆಬ್ರವರಿಯಲ್ಲಿ 400 ಕೋಟಿ ರೂಪಾಯಿ ಬೇಕು. ಏಕೆಂದರೆ ಮಾರ್ಚನಲ್ಲಿ ಪೇಮೆಂಟ್ಸು ಬರುತ್ತದೆ. ಆದ್ದರಿಂದ ಬಡ್ಡಿ ಕೊಡುವ ಬಗ್ಗೆ ಮುನ್ನೆಚ್ಚರಿಕೆ ವಹಿಸಿಕೊಳ್ಳಬೇಕು. ಇದು ನಮ್ಮ ಅಧಿಕಾರಿಗಳು ಕೊಟ್ಟ ಸಲಹೆ. ಅದರಂತೆ ನಾವು 800 ಕೋಟಿ

ರೂಪಾಯಿಗಳನ್ನು ಸಂಗ್ರಹ ಮಾಡಲು ನಿಶ್ಚಯ ಮಾಡಿದ್ದೇನೆ...."

ಹೀಗೆ ಯಾರು ಹೇಳುತ್ತಾರೆ? ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಹೇಳುತ್ತಾರೆ, ಅಂದರೆ ಯಾವುದನ್ನು ಈ ಸದನದಲ್ಲಿ ನಿಂತುಕೊಂಡು ಹೇಳುತ್ತಾರೆ, ಯಾವುದನ್ನು ರಾಜ್ಯದ ಉದ್ದಗಲಕ್ಕೂ ಹೇಳಿಕೊಂಡು ಬರುತ್ತಾರೆ. ಈ ಮಾತನ್ನು, ಕಾರ್ಯರೂಪಕ್ಕೆ ತರುವುದಕ್ಕೆ ಆಗದೇ ಇರುವ ನಿಮ್ಮ ಕಾರ್ಯಕ್ರಮಗಳನ್ನು ಮುಂಬರುವ ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಈ ವೇದಿಕೆಯನ್ನು ಉಪಯೋಗ ಮಾಡಿಕೊಂಡು ಬಹುಶಃ ನಿನ್ನೆ ಅವರು ಪ್ರಾಮಿಸ್ ಮಾಡಿ ಒಂದು ಲಕ್ಷ ಕೋಟಿ ರೂಪಾಯಿಗಳ ಆಶ್ವಾಸನೆ ಕೊಟ್ಟಿರಬಹುದು. ಅಂಕಿಅಂಶಗಳನ್ನು ನಾನು ಬರೆದುಕೊಳ್ಳುತ್ತಿದ್ದೆ. ಇದು ಸಾಧ್ಯನಾ? ಮುಂದೆ ಯಾರೇನು ಮಾಡುತ್ತಾರೆ, ಅದರ ಬಗ್ಗೆ ಮಾತನಾಡುವುದಕ್ಕೆ ಇಲ್ಲಿ ಯಾರಿಗೂ ಹಕ್ಕು ಇಲ್ಲ ನಿಮಗೆ ಅವಧಿ ಕೊಟ್ಟಾಗ ಯಡಿಯೂರಪ್ಪನವರೇ, ನಿಮಗೆ ಆ ಮಾತು ಹೇಳಿದ್ದೆ. ಡಿಸೆಂಬರನಲ್ಲಿ ಅಧಿಕಾರಕ್ಕೆ ಬಂದೆ. ಮಾರ್ಚನಲ್ಲಿ ಇನ್ನೊಂದು ಬಜೆಟನ್ನು ಮಂಡನೆ ಮಾಡುತ್ತಿದ್ದೇವೆ. ಇಷ್ಟಿಷ್ಟು ಪ್ರಗತಿಯಾಗಿದೆ. ರೈತನ ಮಗನಾಗಿ ಇಲ್ಲಿ ಕುಳಿತು, ಅವತ್ತು ಮಾನ್ಯ ರಾಮಕೃಷ್ಣ ಹೆಗಡೆಯವರು ನೀರಾವರಿಗೆ ದುಡ್ಡು ಕೊಡಲಿಲ್ಲ ಅಂತ ರಾಜೀನಾಮೆ ಕೊಟ್ಟು ಹೋಗಿದ್ದೆ. ಒಂದು ಸಾವಿರ ಕೋಟಿ ರೂಪಾಯಿ ಖರ್ಚುಮಾಡಿದ್ದೇನೆ ಎಂದು ಹೇಳಿದ್ದರೆ ನಾನು ಶಹಭಾಸಗಿರಿ ಕೊಡುತ್ತಿದ್ದೆ.

ಮತ್ತೆ ಅದೇ ಸಾಧ್ಯವಿಲ್ಲದಂಥ ಮಾತು. ಯಾವುದೋ 2 ಸಾವಿರ ಇಸವಿಯೊಳಗೆ, ಬಚಾವತ್ ಆಯೋಗದ ತೀರ್ಮಾನದ ಪ್ರಕಾರ ಮುಗಿಸುವುದಕ್ಕೆ ಇಷ್ಟು ಕೋಟಿ ಬೇಕು, ಇಷ್ಟು ಮಾಡುತ್ತೇನೆ, ಈ ರೀತಿ ಮಾತನಾಡುವುದರಿಂದ, ಕೃಷ್ಣಾ ಬೇಸಿನ್‌ನಲ್ಲಿ ನೀರು ತರುತ್ತೇನೆ ಸ್ವಾಮಿ? ಈ ದಿಕ್ಕಿನಲ್ಲಿ ನಿಮ್ಮಿಂದ ಯಾವುದೇ ಒಂದು ಕೆಲಸ ಆಗಲಿಲ್ಲ. 1995-96ನೇ ಸಾಲಿನಲ್ಲಿ ನೀರಾವರಿ ಯೋಜನೆಗಳಿಗೆ ಮೀಸಲಿಟ್ಟಿರುವುದು 880 ಕೋಟಿ ರೂಪಾಯಿಗಳು. ಅದರಲ್ಲಿ ಕೃಷ್ಣೆಗೆ ಎಂದು ಇಟ್ಟಿರುವುದು 200 ಕೋಟಿ. ಕೃಷ್ಣಾ ಭಾಗ್ಯ ಜಲನಿಗಮಕ್ಕೆ 180 ಕೋಟಿ ಮತ್ತು 50 ಕೋಟಿ ಹೆಚ್ಚುವರಿಯಾಗಿ ಇಡಲಾಗಿದೆ. ಒಟ್ಟು 430 ಕೋಟಿ ರೂಪಾಯಿಗಳು ಅಂದರೆ, ನಿಮ್ಮ ಮನಸ್ಸಿನಲ್ಲಿ, ಸರ್ಕಾರದ ಮನಸ್ಸಿನಲ್ಲಿ ಸಾವಿರ ಕೋಟಿ ಇರಲಿಲ್ಲ. ಅದಕ್ಕೆ ಬೇಕಾದಂಥ ಹಣವನ್ನು ತೊಡಗಿಸುವಂಥ ಯಾವುದೇ ಇಚ್ಛಾಶಕ್ತಿ ನಿಮಗಿರಲಿಲ್ಲ ಆದರೆ, ಗುಲ್ಬರ್ಗಾಕ್ಕೆ ಹೋದಾಗ, ಆ ಪತ್ರಿಕಾ ರಂಗದ ಜನರ ಮೇಲೆ ಜೊಬ್ಬ ಇಟ್ಟಿರು. ಅವರನ್ನು ಕೇಳಿ, ಹಿಂದಿನ ಮುಖ್ಯಮಂತ್ರಿಗಳನ್ನು ಕೇಳಿ, ನಾನೇನು ಮಾಡಲಿ. ನಾನು ಈಗ ಬಂದಿದ್ದೇನೆ. ಸಾವಿರ ಕೋಟಿ ರೂಪಾಯಿಗಳನ್ನು ಕಳ್ಳತನ ಮಾಡಿಯಾದರೂ ತಂದು ವಿನಿಯೋಗ ಮಾಡುತ್ತೇನೆ ಎಂದು ಸುಳ್ಳು, ಹಸಿ ಸುಳ್ಳುಗಳನ್ನು ಹೇಳಿಕೊಂಡು, ಜನರಿಗೆ ವಂಚನೆ ಮಾಡಿಕೊಂಡು, ಒಂದುರೀತಿ ಮನಬಂದಂತೆ ಸ್ವೇಚ್ಛಾಚಾರದ ಆಡಳಿತ ಇವತ್ತು ನಡೆಯುತ್ತಾ ಇದೆ. ಇದನ್ನು ಜನ ಮೆಚ್ಚುತ್ತಾರೆಯೇ ಗೌರವ ಬರುತ್ತದೆಯೇ? ಅವರು ಹೇಳುತ್ತಾರೆ, ಮುಂದಿನ 4 ವರ್ಷಗಳಲ್ಲಿ, 4,370 ಕೋಟಿ ರೂ.ಗಳನ್ನು ಒದಗಿಸಬೇಕಾಗುತ್ತದೆ. ಪ್ಯಾರಾ ೪೬ರಲ್ಲಿ ಹೇಳಿದ್ದೀರಿ. ನೀರಾವರಿ ಎಷ್ಟು ಕಡಿಮೆಯಾಗಬಹುದು. 4 ವರ್ಷದಲ್ಲಿ 4370 ಕೋಟಿ ನೀವು ಒದಗಿಸಬೇಕಾದರೆ, ಈ ವರ್ಷ ಖರ್ಚುಮಾಡುವ ಒಂದು ಅಂದಾಜಿನ ಪ್ರಕಾರ, 10 ವರ್ಷ ಬೇಕಾಗುತ್ತದೆ, ನೀವು ಮುಗಿಸುವುದಕ್ಕೆ

ತಾವೇನು ಹೇಳಿದ್ದೀರಿ. ಪಟ್ಟಿನ ತೆರಿಗೆಯನ್ನು ಸಾಮಾನ್ಯ ಜನರಿಂದ ವಸೂಲಿ ಮಾಡಿದಮೇಲೂ ಸಹ ಈ ಅಮೃತಾ ಕ್ಷೇತ್ರಕ್ಕೆ ಹಣವನ್ನು ಖರ್ಚುಮಾಡಬೇಕೆನ್ನುವ ಕಳಕಳಿ ಇಲ್ಲದಿರುವಂಥ ಸರ್ಕಾರ. ಇನ್ನು ತುಂಗಾ ಮೇಲ್ದಂಡೆ ಯೋಜನೆ. ಲೋಕಸಭಾ ಚುನಾವಣೆ ಬಂತು. ಅಡಿಗಲ್ಲು ಆಯಿತು. ವೋಟು ಕೊಟ್ಟರು. ನಿಮ್ಮವರಲ್ಲಿ ಎಂ.ಪಿ. ಯಾಗಿ ಯಾರೋ ಒಬ್ಬರು ಗೆದ್ದರು. 372 ಕೋಟಿ ರೂಪಾಯಿ ಬೇಕು, ಎಷ್ಟು ಖರ್ಚುಮಾಡಿದ್ದೀರಿ ಸ್ವಾಮಿ ಇದುವರೆಗ 7 ಕೋಟಿ 44 ಲಕ್ಷ ಅಂದರೆ, ಇದೇರೀತಿ ಪ್ರಗತಿಯಾದರ, 2 ಸಾವಿರ ವರ್ಷಕ್ಕೆ ಯೋಜನೆ ಮುಗಿಯುತ್ತದೆಯೋ?

ಇದು ಕೃಷ್ಣಾ ಬೇಸಿನ್‌ನಲ್ಲಿ ಬರುತ್ತದೆ ತಾನೆ. ಗಂಡೋರಿ ನಾಲಾ ಯೋಜನೆ. ಕರ್ನಾಟಕ ನಿರ್ಮಾಣ ನಿಗಮದ ಕಾಮಗಾರಿಗಳು ಕಳಪೆಯಾಗಿವೆ; ಈ ಕಾಮಗಾರಿಗಳನ್ನು ನಿಲ್ಲಿಸಲಾಗಿದೆ, ನಿಲ್ಲಿಸಿದ್ದೀರೋ? ಈ ಯೋಜನಾ ವೆಚ್ಚ 6,600 ಲಕ್ಷ. 1995ರವರೆಗೆ 881 ಲಕ್ಷ ಖರ್ಚುಮಾಡಿದ್ದೀರಿ. 1995-96ಕ್ಕೆ 200 ಲಕ್ಷ ರೂ.ಗಳ ಅನುದಾನವನ್ನು ನೀಡಿದ್ದೀರಿ. ಇದು ಯಾವಾಗ ಮುಗಿಯಬೇಕು? ಬೆಣ್ಣೆತೊರೆ ಯೋಜನೆ, ಗುಲ್ಬರ್ಗಾ ಜಿಲ್ಲೆಯದು 1985ರಲ್ಲಿ 45 ತಿಂಗಳು ಮೋದರೆ, ಮೂರು ವರ್ಷ, ಒಂಭತ್ತು ತಿಂಗಳಲ್ಲಿ ಪೂರ್ತಿಗೊಳಿಸುವುದಕ್ಕೆ 5 ಕೋಟಿ 8 ಲಕ್ಷಕ್ಕೆ ಕರಾರು ಮಾಡಿಕೊಳ್ಳಲಾಗಿದೆ. ಇಲ್ಲಿಯವರೆಗೆ 5,026 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೀರಿ. 1992ರ ಜುಲೈನಲ್ಲಿ ಉಳಿದಂಥ ಕೆಲಸವನ್ನು ಪೂರ್ಣ ಮಾಡುವಂಥ ಪ್ರಯತ್ನ ಮಾಡಿದ್ದೀರೋ? ಆದರೆ, ಇನ್ನು 10 ವರ್ಷವಾದರೂ ಸಹ ಈ ಯೋಜನೆ ಪೂರ್ಣವಾಗದೆ ನನೆಗುದಿಗೆ ಬಿದ್ದಿದೆ. ಈ ಬಗ್ಗೆ ತಾವೇನು ಮಾಡಿದ್ದೀರಿ ಎಂಬುದನ್ನು ಉತ್ತರ ಕೊಡುವಂಥ ಕಾಲದಲ್ಲಿ ಹೇಳಬೇಕಾಗುತ್ತದೆ. ನನಗೆ ಇಲ್ಲಿರುವಂಥ ಅಂಕಿಅಂಶದ ಪ್ರಕಾರ, ಬಜೆಟ್ ಪ್ರಾವಿಷನ್‌ನಲ್ಲಿ ತಾವು ಯು.ಕೆ.ಪಿ.ಗೆ 200 ಕೋಟಿ ರೂಪಾಯಿಗಳು ಸಂಬಳಗಳಿಗಾಗಿ ಖರ್ಚಾಗಿದೆ, ನನಗೆ ಕೊಟ್ಟಿರತಕ್ಕ ಅಧಿಕೃತ ಅಂಕಿಅಂಶದ ಪ್ರಕಾರ; ತಪ್ಪಿದ್ದರೆ ಸರಿಪಡಿಸಿ ಹೇಳಿ. ಹೇಮಾವತಿಗೆ 160 ಕೋಟಿ ಇಟ್ಟಿದ್ದಿರಿ, ಖರ್ಚಾಗಿರುವುದು 90 ಕೋಟಿ. ಘಟಪ್ರಭಾ 42 ಕೋಟಿ, ಖರ್ಚಾಗಿರುವುದು 20 ಕೋಟಿ, ಮಲಪ್ರಭಾಗೆ 42 ಕೋಟಿ ಇಟ್ಟಿದ್ದೀರಿ, 22 ಕೋಟಿ ಖರ್ಚಾಗಿದೆ. ಜಿಲ್ಲಾಪರಿಷತ್ ಸೆಕ್ಟಾರಿನಲ್ಲಿ 15 ಕೋಟಿ ಇಟ್ಟಿದ್ದು, 6 ಕೋಟಿ ಖರ್ಚಾಗಿದೆ ನೀವು ಯಾವುದಕ್ಕೆ ಖರ್ಚು ಮಾಡಿದ್ದೀರಿ, ಎಲ್ಲಿ ಖರ್ಚುಮಾಡಿದ್ದೀರಿ. ಇನ್ನೊಂದು ಪ್ರಮುಖವಾದಂಥ ವಲಯ, ವಿದ್ಯುಚ್ಛಕ್ತಿ ವಲಯ. ಕರ್ನಾಟಕ ರಾಜ್ಯ ವಿದ್ಯುತ್ತಿನ ಕೊರತೆಯಿಂದ ಕತ್ತಲೆಯ ಕೂಪವಾಗಿ ಇವತ್ತು ಪರಿಣಾಮವಾಗಿದೆ. ಇಡೀ ರಾಜ್ಯ ವಿದ್ಯುತ್ ಕಡಿತದಿಂದ ತೊಳಲಾಡುವ ವಿಚಿತ್ರ ಪರಿಸ್ಥಿತಿ ಬಂದಿದೆ. ವಿದ್ಯುತ್ ಬರದಿಂದ ಎಲ್ಲಾ ರಂಗದ ಮೇಲೆ ದುಷ್ಪರಿಣಾಮವಾಗಿದೆ. ಯೋಜನಾ ವೆಚ್ಚದಲ್ಲಿ ಕಳೆದ ಸಾಲಿಗಿಂತ, 99 ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿದ್ದೀರಿ. ಅಂದರೆ, ಎಲ್ಲಿ ಸಮಸ್ಯೆ ಜಾಸ್ತಿ ಇದೆಯೋ, ಎಲ್ಲಿ ಹಣವನ್ನು ಅಗತ್ಯವಾಗಿ ಇಡಬೇಕಾಗಿತ್ತೋ ಅಲ್ಲಿ ಈ ವರ್ಷ 99 ಕೋಟಿ ಕಡಿಮೆ ಇಟ್ಟಿದ್ದೀರಿ. ಆದರೆ, ಅವರು ಹೇಳುತ್ತಾರೆ, 7210 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ 22 ಸಂಸ್ಥೆಗಳಿಗೆ ಅನುಮೋದನೆ ನೀಡಿದ್ದೇವೆಂದು ಹೇಳುತ್ತಾರೆ. 20 ಸ್ಥಳಗಳಲ್ಲಿ 20 ಮೆಗಾವ್ಯಾಟ್ ಸಾಮರ್ಥ್ಯದಂತೆ ಒಟ್ಟು 400 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ ಟೆಂಡರ್ ಕರೆದಿದ್ದೇವೆ. ಸಾವಿರ ಮೆಗಾವ್ಯಾಟ್ ವಿದ್ಯುತ್ ಬಗ್ಗೆ ಕಾಂಟ್ರಾಕ್ಟ್‌ನಲ್ಲಿ ಪರಿಶೀಲಿಸಲಾಗುತ್ತಿದೆ. ಅಂದರೆ, ನಿಮ್ಮದೆಲ್ಲಾ ಏನು. ಉದ್ದೇಶಿಸಲಾಗಿದೆ, ಕರೆಯಲಾಗಿದೆ,

ಪರಿಶೀಲಿಸಲಾಗುತ್ತಿದೆ, ವಿಚಾರ ಮಾಡಲಾಗುತ್ತಿದೆ "ರೇ" ಸಾಮ್ರಾಜ್ಯದಲ್ಲಿ ತಾವಿದ್ದೀರಿ. ಅಂದರೆ, ಹೋದವರ್ಷ ತಮ್ಮ ಕೈಯಿಂದ ಕೆ.ಪಿ.ಸಿ.ಗೆ ಎಷ್ಟು ಇಟ್ಟಿದ್ದೀರಿ; ಎಷ್ಟು ಖರ್ಚುಮಾಡಿದ್ದೀರಿ. ನೀವು ಈ ಅಂಕಿಅಂಶ ಹೇಳುವುದಕ್ಕೆ ಸಿದ್ಧ ಇಲ್ಲ. ತಾವು ಉತ್ತರ ಕೊಡಬೇಕಾದರೆ ಹೇಳಿ. ಸ್ವಾಮಿ, ಒಂದು ವಿನಂತಿ ಮಾಡುತ್ತೇನೆ. ವಿದೇಶಿ ಸಂಸ್ಥೆಗಳ ಬಗ್ಗೆ ಅತಿಯಾದ ಭರವಸೆಗಳನ್ನು ಇಟ್ಟುಕೊಂಡು, ಆ ಮಮತೆಯನ್ನು ಇಟ್ಟುಕೊಂಡಿರುವುದನ್ನು ದಯಮಾಡಿ ಕೈಬಿಡಿ ಕೆ.ಪಿ.ಸಿ. ಬಹುಶಃ ಈ ಕರ್ನಾಟಕ ರಾಜ್ಯದಲ್ಲಿ ಆದರ್ಶವಾದಂಥ ಸಂಸ್ಥೆ. ಬಹಳ ಒಳ್ಳೆಯ ಕೆಲಸ ಮಾಡುತ್ತಿದೆ, ಅದರಲ್ಲಿ ತಜ್ಞರು ಇದ್ದಾರೆ, ಅವರಿಗೆ ಕಳಕಳಿ ಇದೆ. ಕಾಳಿ, ಕೊಡಸಳ್ಳಿ, ಗೇರುಸೊಪ್ಪ ಟೇಲರೇಸ್ ಯೋಜನೆ, ರಾಯಚೂರು ಥರ್ಮಲ್ ಘಟಕದ 5 ಮತ್ತು 6ನೇ ಘಟಕದ ಕಾಮಗಾರಿ ಬೇಗ ಮುಗಿಸುವುದಕ್ಕೆ ಹಣ ಕೊಡಿ. ನೀವೇನೂ ಕೊಡಬೇಡಿ, ಅವರು ಕೊಟ್ಟಂಥ ವಿದ್ಯುತಗೆ ಹಣ ವಾಪಸ್ ಕೊಡಿ. ಪ್ರತಿ ತಿಂಗಳೂ ಸುಮಾರು 80-90 ಕೋಟಿ ನೀವು ಕೊಡಬೇಕಾಗುತ್ತೆ. ಕಲ್ಲಿದ್ದಲಿಗೆ ನೂರು ಕೋಟಿ ಕೊಡಬೇಕಾಗುತ್ತದೆಂದು ಹೇಳುತ್ತೀರಿ. ವಿದ್ಯುತ್ ಉತ್ಪತ್ತಿಯಾಗುತ್ತದೆ, ಅದಕ್ಕೆ ಕಲ್ಲಿದ್ದಲು ಬೇಕು. ಒಳ್ಳೆಯ ಪ್ರಮಾಣದಲ್ಲಿ, ಒಳ್ಳೆಯ ಕ್ವಾಲಿಟಿ ಕಲ್ಲಿದ್ದಲನ್ನು ಕೊಡಬೇಕಾಗುತ್ತದೆ, ಇಲ್ಲದೇಹೋದರೆ ವಿದ್ಯುತ್ ಎಲ್ಲಿ ಉತ್ಪತ್ತಿಯಾಗುತ್ತದೆ? ಅವರಿವರ ಹತ್ತಿರ ಭಿಕ್ಷೆ ಬೇಡುವುದು ಬಿಟ್ಟು ಇರುವ ವ್ಯವಸ್ಥೆಯನ್ನು ಪೂರ್ಣ ಸದುಪಯೋಗ ಮಾಡಿಕೊಳ್ಳುವುದರ ಕಡೆ ನಿಗಾ ಕೊಡಬೇಕು. ಆ ಕೆ.ಪಿ.ಸಿ.ಯನ್ನು ಮುಚ್ಚುವುದು ಹೇಗೆ ಎಂಬುದು ಬಿಟ್ಟು, ವಿದೇಶಿ ಕಂಪನಿಯನ್ನು ತೆಗೆದುಕೊಂಡು ಬಂದು, ಚಕ್ಕಂದ ಆಡಿಕೊಂಡು, ಜಿ.ಪಿ.ಎ. ಮಾಡಿದ್ದೇವೆ, ಅಗ್ರಿಮೆಂಟ್ ಆಗಬೇಕು. ಎಂಬ ಕಥೆಯನ್ನು ಕೇಳಿ, ಕೇಳಿ 4-5 ವರ್ಷ ಸಾಕಾಗಿ ಹೋಯಿತು. ಕಳೆದ 4-5 ವರ್ಷಗಳಲ್ಲಿ, ಒಂದೂ ಕಾರ್ಯರೂಪಕ್ಕೆ ಬರಲಿಲ್ಲ. ಮುಖ್ಯಮಂತ್ರಿಗಳು ಏನು ಹೇಳಿದರು, ಯಾವುದನ್ನು ಅಗ್ರಿಮೆಂಟ್ ಮಾಡಿಕೊಂಡಿದ್ದೇವೆ, ಅದು ಒಂದು ತಿಂಗಳಲ್ಲಿ ಕಾರ್ಯರೂಪಕ್ಕೆ ಬರದಿದ್ದರೆ, ಅವುಗಳನ್ನು ಕ್ಯಾನ್ಸಲ್ ಮಾಡುತ್ತೇವೆಂದು ಇದೇ ಸದನದಲ್ಲಿ ನಿಂತು ಹೇಳಿದರು. ವಿದ್ಯುತ್ ಬಗ್ಗೆ ಯಾವುದೇ ಒಂದು ಕಲ್ಪನೆ ಇಲ್ಲದಿರುವಂಥ, ಯಾರನ್ನೋ ಕರೆದುಕೊಂಡು ಬಂದಿದ್ದೀರಿ. ಇವತ್ತು ಟ್ಯಾಪ್ಕೋ, ಯಾರು ಈ ಟ್ಯಾಪ್ಕೋ! ಯಾವನ್ನೋ ಹಿಡಿದುಕೊಂಡು ಬಂದರು. ಯಾವುದೋ ಒಂದು ದೇಶದ, ಅಥವಾ ಡೆಲ್ಲಿಯಲ್ಲಿ ಪಾಳು ಕಟ್ಟಡದ ಅಡ್ರೆಸ್ ಕೊಟ್ಟಿರುವಂಥ ಒಂದು ಸಂಸ್ಥೆ. ಇಲ್ಲಿರುವಂಥ ಯಾವುದೋ ಐಎಎಸ್ ಅಧಿಕಾರಿ ಅವನ ಸಂಬಂಧ ಇದೆ. ಒಂದು ಎಕ್ಸಪೀರಿಯನ್ಸ್ ಇಲ್ಲ. ಇದೊಂದು ಬೋಗಸ್ ಕಂಪನಿ. ವರ್ಜೀನಿಯಾ ಸರ್ಕಾರದವರು ಈ ಕಂಪನಿಯನ್ನು ವಜಾ ಮಾಡಿದ್ದಾರೆ. ಡೆಲ್ಲಿಯಲ್ಲಿ, ರಿಜಿಸ್ಟರ್ಡ್ ಆಗುವುದಕ್ಕೆ ಮುಂಚೆಯೇ ಇವರ ಅಗ್ರಿಮೆಂಟ್. ನೀವು ಸಹಿ ಮಾಡುತ್ತೀರಿ. ಟ್ಯಾಪ್ಕೋ ಬಗ್ಗೆ ನನಗೆ ಅನುಮಾನ ಏನಿದೆ ಎಂದರೆ, ಇದು ಯಾವುದೋ ಒಂದು ಬೇನಾಮಿ ಸಂಸ್ಥೆ ತೆಗೆದುಕೊಂಡು ಬಂದು, ಅವನು ಕಂಡೀಷನ್ ಫುಲ್‌ಫಿಲ್ ಮಾಡಲಿಲ್ಲವೆಂದು ವಜಾ ಮಾಡಿದಮೇಲೂ ಸಹಿತ, ಅದೇ ಸಂಸ್ಥೆಗೆ ಈ ಸರ್ಕಾರ ಕೊಡುವುದಕ್ಕೆ ಹೊರಟಿರುವುದು ನೋಡಿದರೆ, ಜನ ಮಾತನಾಡುತ್ತಾ ಇದ್ದಾರೆ. ಈ ಟ್ಯಾಪ್ಕೋ ಸಂಸ್ಥೆಯಲ್ಲಿರುವ ಅಧಿಕಾರಿಗಳೆಲ್ಲರೂ ಬೇನಾಮಿ ವ್ಯಕ್ತಿಗಳು. ಯಾರಿಗೋ ಅನುಕೂಲ ಮಾಡುವುದಕ್ಕೋಸ್ಕರ ಬೇನಾಮಿ ಹೆಸರನ್ನು ತಗದುಕೊಂಡು ಬಂದು, ಯಾರ್ಯಾರೋ ಸೇರಿ ಇನವೆಸ್ಟ ಮಾಡಿಕೊಂಡು, ಮುದ್ರಿತಕ್ಕಂಥ

ದೊಡ್ಡದೊಡ್ಡವರು ಇದ್ದಾರೆ. ಅದಕ್ಕೆ ಅವರೆಲ್ಲರ ಹೆಸರನ್ನು ಸೇರಿಸಿಕೊಂಡು, ಯಾವುದೋ ಐ.ಎ.ಎಸ್. ಅಧಿಕಾರಿಗಳು, ಅವರೆಲ್ಲರೂ ದುಡಿದಿರುವ ದುಡ್ಡು, ಮಂತ್ರಿಗಳ ಹತ್ತಿರ ಇರುವ ದುಡ್ಡು, ಇವೆಲ್ಲಾ ಸಂಗ್ರಹ ಮಾಡಿ, ನಿಮ್ಮದೋ ಅವರಂಥ ಸ್ವಂತ ದೇವರೇ ಗತಿ ಅಂಥ ಕಂಪನಿ ಎಂಬ ಸಂಸ್ಥೆ ಏನಾದರೂ ಇದ್ದರೆ, ನಮ್ಮದೇನೂ ಅಭ್ಯಂತರವಿಲ್ಲ. ನೀವು ಪ್ರಾಮಾಣಿಕವಾಗಿ ಹೇಳಬಹುದು. ಅವರ ಎಕ್ಸಪೀರಿಯನ್ಸ್ ಏನು, ಹೇಗ ಅಗ್ರಿಮೆಂಟ್ ಮಾಡಿಕೊಳ್ಳುತ್ತೀರಿ. ಒಂದು ಮೆಗಾವ್ಯಾಟ್ ವಿದ್ಯುತ್ ಉತ್ಪನ್ನ ಮಾಡಿಲ್ಲ. 700-800 ವಿದ್ಯುತ್ ಉತ್ಪನ್ನ ಮಾಡುವುದಕ್ಕೆ ಅವನಿಗೆ ಏಕೆ ಕೊಡುತ್ತೀರಿ? ನಮ್ಮದೆಲ್ಲಾ ಸಿದ್ಧತೆಯಾಗಿರುವಂಥ ಕಡೆ. ಅವನನ್ನು ಕರೆದುಕೊಂಡು ಕೊಡುತ್ತಿರುವಂಥದ್ದು. ಇಲ್ಲಿ ಅವ್ಯವಹಾರ ಇದೆ ಎನ್ನುವಂಥದ್ದು ಜನಜನಿತವಾಗಿರುವಂಥ ಮಾತು.

ಶ್ರೀ ಎಂ. ನಾರಾಯಣಸ್ವಾಮಿ : ತಾವು ಬೇರೆ ಬೇರೆ ಎಲ್ಲರನ್ನೂ ಸೇರಿಸಿಕೊಟ್ಟಿದ್ದಾರೆ ಎಂದು ಹೇಳುತ್ತಿದ್ದೀರಿ. ದಯಮಾಡಿ, ಆ ಮಾಹಿತಿ ಇದ್ದರೆ ಸರ್ಕಾರದ ಕಡೆ ಕೊಡಿ. ಮತ್ತು ಅದನ್ನು ಸಭೆಯ ಗಮನಕ್ಕೆ ತರಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮಗೆ ಕಳುಹಿಸಿಕೊಡುತ್ತೇನೆಂದಲ್ಲ, ಇವುಗಳಿಗೆ ಸಾಕ್ಷಿ ಇರುವುದಿಲ್ಲ, ಇವೆಲ್ಲಾ ಸಾಕ್ಷಿ ಕೊಡುವುದಕ್ಕೆ ಸಿಗುವುದಿಲ್ಲ. ಏಕೆ ಎನ್‌ಆರ್‌ಐಗಳಿಗೆ ಕೊಡಬೇಕೆಂದರೆ, ಕರ್ನಾಟಕದ ಎನ್‌ಆರ್‌ಐಗಳು ಅಲ್ಲಿ ಇರಲಿಲ್ಲವೇ? ಮುಟ್ಟಿಕೊಂಡು ಹತ್ತಿರ ನಡೆಯುತ್ತಾ ಇಲ್ಲ. ವರ್ಷಾನುಗಟ್ಟಲೆ ಬಂದಿರಿ; ಅವನು ಇಲ್ಲಿ ಕೇವಲ ನಾಮಕಾವಸ್ತೆಗೆ ಪಟೇಲ. ಅವನ ಹೆಸರಿನಲ್ಲಿ ಕಲವು ಇಲ್ಲದಿರತಕ್ಕಂಥ ಅಧಿಕಾರಿಗಲು, ಪೂಜಾರಿಗಳು ಸೇರಿಕೊಂಡು, ವ್ಯವಹಾರ ನಡೆಸುವುದಕ್ಕೆ ಹೊರಟಿರುವಂಥ ಒಂದು ವ್ಯವಹಾರದ ಇದು. ಇದನ್ನು ಪರಿಶೀಲನೆ ಮಾಡಿ. ದಾಖಲೆಗಳನ್ನು ನಾವು ಕೊಡುತ್ತೇವೆ. ವರ್ಜೀನಿಯಾದಲ್ಲಿ ರಿಜಿಸ್ಟರ್ ಆಗುವುದಕ್ಕೆ ಮುಂಚೆಯೇ ದೆಹಲಿಯಲ್ಲಿ ಹೋಗಿ ಅಗ್ರಿಮೆಂಟ್ ಮಾಡಿಕೊಳ್ಳುತ್ತೀರಿ. ಅಲ್ಲಿ ಕ್ಯಾನ್ಸಲ್ ಆದಮೇಲೆ, 2-3 ವರ್ಷವಾದ ಮೇಲೆ ಮತ್ತೆ ಈ ಹೊಸ ಸರ್ಕಾರಬಂದಮೇಲೆ ಒಪ್ಪಂದ ಮಾಡಿಕೊಳ್ಳುತ್ತೀರಿ. ಇದರಲ್ಲಿ ಒಂದು ದೊಡ್ಡ ಅವ್ಯವಹಾರ ನಡೆಯುತ್ತಾ ಇದೆ. ದಯಮಾಡಿ, ಆ ಕಡೆ ವಿಶೇಷವಾದ ಗಮನವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. "ನಮ್ಮ ಮಗಳು ನಮ್ಮ ಶಕ್ತಿ" ಇದು ಮಹಿಳೆಯರನ್ನು ಉದ್ಧಾರ ಮಾಡುವುದಕ್ಕೆ ಒಂದು ಕಾರ್ಯಕ್ರಮ. ಇದರಲ್ಲಿ ಸ್ಪಷ್ಟವಾದಂಥ ಯಾವುದೇ ಒಂದು ಮಾತಿಲ್ಲ. ನೀವೇನು ಹೇಳಿದ್ದೀರಿ. "ನಮ್ಮ ಸಮಾಜದಲ್ಲಿ ಹೆಣ್ಣುಮಕ್ಕಳಿಗೆ ಸಂಬಂಧಿಸಿದಂತೆ ಇರುವ ತಾರತಮ್ಯ ಮನೋಭಾವವನ್ನು ನಿವಾರಿಸುವಲ್ಲಿ ನೆರವಾಗಲು ಸರ್ಕಾರವು "ನಮ್ಮ ಮಗಳು ನಮ್ಮ ಶಕ್ತಿ" ಎಂಬ ಹೆಸರಿನಲ್ಲಿ ಒಂದು ಹೊಸ ಯೋಜನೆಯನ್ನು ಕಾರ್ಯಗತಗೊಳಿಸಿದೆ. ಈ ಯೋಜನೆಯ ಅಡಿಯಲ್ಲಿ, ಬಡತನ ರೇಖೆಗಿಂತ ಕಳ ಮಟ್ಟದಲ್ಲಿರುವ ಕುಟುಂಬಗಳಲ್ಲಿ ಹುಟ್ಟಿದ ಹೆಣ್ಣುಮಗುವಿನ ಹೆಸರಿನಲ್ಲಿ ಒಂದು ನಿರ್ದಿಷ್ಟ ಮೊತ್ತವನ್ನು ಇಡಲಾಗುವುದು. ಎಷ್ಟು ನಿರ್ದಿಷ್ಟ ಮೊತ್ತ, 5-10-20 ಸಾವಿರ ಇಡುತ್ತೀರೋ?

ನಿರ್ದಿಷ್ಟ ಮೊತ್ತ, ಅವರು ಒಂದು ಮಟ್ಟದಲ್ಲಿ ವಿದ್ಯಾಭ್ಯಾಸ ಮಾಡಿರಬೇಕು. ಏನು ಹಾಗೆ

ಅಂದರೆ? ಏಳನೇ ಕ್ಲಾಸ್, ಎಂಟನೇ ಕ್ಲಾಸೋ ಅಥವಾ ಎಸ್.ಎಸ್.ಎಲ್.ಸಿ. ನೋ ಏಕೆ ಇದರಲ್ಲಿ ಸ್ಪಷ್ಟ ಮಾಡುವುದಿಲ್ಲ. ಅದಕ್ಕೆ ಇಟ್ಟಿರುವ ದುಡ್ಡು ಎಷ್ಟು 3 ಕೋಟಿ 82 ಲಕ್ಷ. ಎಷ್ಟು ಜನಕ್ಕೆ ಆಗುತ್ತದೆ? ಒಂದು ಊರಿಗೆ ಒಬ್ಬರಿಗೆ ಕೊಡುವುದಕ್ಕೆ ಆಗುವುದಿಲ್ಲ. ಬಡ ಹೆಣ್ಣು ಮಕ್ಕಳ ಅಭಿವೃದ್ಧಿಗೋಸ್ಕರ ಏನೋ ಒಂದು ದೊಡ್ಡ ಕಾರ್ಯ ಮಾಡುತ್ತಿದ್ದೇವೆ, ಏನೋ ದೊಡ್ಡ ಸಾಧನೆ ಮಾಡುತ್ತಿದ್ದೇವೆ ಎಂದು ಹೇಳುವುದಕ್ಕೋಸ್ಕರ ಒಂದು ಕಾರ್ಯಕ್ರಮವನ್ನು ತಾವು ಇವತ್ತು ಘೋಷಣೆ ಮಾಡಿದ್ದೀರಿ ಇದರಲ್ಲಿ ಸ್ಪಷ್ಟತೆ ಇಲ್ಲ. ಇದರ ಪರಿಣಾಮ ಏನೆಂದರೆ ಬಡ ಹೆಣ್ಣುಮಕ್ಕಳೆಲ್ಲಾ ಆಸೆಯ ಕಣ್ಣಿನಿಂದ ನನಗೇನೋ ಒಂದು 5 ಸಾವಿರ 10 ಸಾವಿರ ಡಿಪಾಜಿಟ್ ಇಡುತ್ತಾರೆ ನನಗೇನೋ 21 ವರ್ಷ ಆದ ಮೇಲೆ ಲಾಭ ಆಗುತ್ತದೆ ಅಂತ ಹೇಳಿ ಆಸೆ ಕಣ್ಣುಗಳಿಂದ ನೋಡುವಂತಹ ಒಂದು ಆಸೆ ಚಿಗುರಿಸುವಂತಹ ಒಂದು ಪ್ರಯತ್ನ. ನಿರ್ದಿಷ್ಟವಾಗಿ ಈ ಜಿಲ್ಲೆಗೆ ಇಷ್ಟು ಕೊಡುತ್ತೇವೆ ಇಷ್ಟು ಕಾರ್ಯಕ್ರಮ ಮಾಡುತ್ತೇವೆ ನಮ್ಮ ಹತ್ತಿರ ಇಷ್ಟು ದುಡ್ಡು ಇದೆ, ಅಷ್ಟು ದುಡ್ಡು ಇಲ್ಲ ಎಂದು ಸ್ಪಷ್ಟವಾಗಿ ಯಾವುದೇ ಮಾತನ್ನು ಹೇಳಲಿಲ್ಲ. ಇನ್ನು ಈ ವಾಹನಗಳ ಮೇಲೆ ತೆರಿಗೆಯನ್ನು 20 ವರ್ಷಗಳದ್ದು ಒಂದೇಸಾರಿ ಕಲೆಕ್ಟ್ ಮಾಡುತ್ತಿದ್ದೀರಿ, ಇದು ಹೇಗಿದೆ ಎಂದರೆ ಒಂದು ಕೋಳಿ ಚಿನ್ನದ ಮೊಟ್ಟೆಯನ್ನು ಇಡುತ್ತದೆ ಎಂದು ಹೇಳಿ ಕೋಳಿಯನ್ನೇ ಕತ್ತರಿಸಿದಂತೆ ಯಾರೋ ಮಾಡಿದ ಹಾಗೆ ಆಗಿದೆ ನಿಮ್ಮದು. ಈ ವಾಹನಗಳ ಮೇಲೆ ಲೈಫ್ ಟ್ಯಾಕ್ಸ್ ಹಾಕಿರುವಂತಾದ್ದು ಏತಕ್ಕೆ ಮಾಡುತ್ತೀರಾ? ಏನು ಅಧಿಕಾರ ನಿಮಗೆ ಇದೆ? ಅದೇ ನೀವು ಯೋಚನೆ ಮಾಡಿದ್ದೀರೇನು ಒಬ್ಬ ಬಡವ ಒಂದು ಕಾರನ್ನು ತೆಗೆದುಕೊಂಡರೆ ಅವನು ಲೈಫ್ ಟೈಮ್ ಟ್ಯಾಕ್ಸ್‌ನ್ನು ಕಟ್ಟಬೇಕು ಅಂದರೆ 17-18 ಸಾವಿರ ರೂಪಾಯಿಗಳು ಒಂದೇಸಾರಿ ಕಟ್ಟಬೇಕು ಮತ್ತು ಒಂದು ಹಳೆ ಗಾಡಿ ಇದ್ದರೆ ಅದನ್ನು ಮಾರಾಟ ಮಾಡಬೇಕಾದರೆ ಟ್ಯಾಕ್ಸ್ ಕಟ್ಟಬೇಕು ಇದು ಒಂದು ತರಹ ತೊಘಲಕ್ ದರ್ಬಾರ್ ಆಗಿದೆ. ಹೋಗಲಿ ಅದರ ಬಗ್ಗೆ ಒಂದು ಮಾಸ್ಟರ್ ಪ್ಲಾನ್ ಅದರಲ್ಲಿ ತಯಾರು ಮಾಡಿದ್ದೀರಾ? ನೀವು ಹಣಕಾಸಿನ ಸಂಗ್ರಹ ಮಾಡುವುದಕ್ಕೆ ಸಿದ್ದರಾಮಯ್ಯನವರು ಮಾಸ್ಟರ್ ಪ್ಲಾನ್ ಮಾಡಿದಿರಿ. ತಾವು ಸುಮಾರು 90 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಿದ ಮೇಲೆ ನೀವು 45 ಕೋಟಿರೂಪಾಯಿಗಳನ್ನು ಅದಕ್ಕೆ ಹಾಕಿ ಒಂದು ಮಾಸ್ಟರ್ ಪ್ಲಾನ್ ಮಾಡಿ ನಿರ್ದಿಷ್ಟವಾದ ರಸ್ತೆಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಒಂದು ಸಾವಿರ ಕಿಲೋಮೀಟರ್ ರಸ್ತೆಗಳನ್ನು ತಾವು ಇವತ್ತು ಅಭಿವೃದ್ಧಿ ಮಾಡಬಹುದಾಗಿತ್ತು. ನಿರ್ದಿಷ್ಟವಾದ ಒಂದು ಉದ್ದೇಶಕ್ಕೆ ತಾವು ಅದನ್ನು ಪಡೆದಮೇಲೆ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ತಾವು ನಿರ್ದಿಷ್ಟವಾದ ಒಂದು ಯೋಜನೆ ಮಾಸ್ಟರ್ ಪ್ಲಾನ್ ಅನ್ನು ತಾವು ಮಾಡಲಿಲ್ಲ. ಸ್ವಾಮಿ ನಮ್ಮ ರಾಜ್ಯದಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿದೆ. ಅಂತಹ ಅವಕಾಶಗಳು ನಮ್ಮ ರಾಜ್ಯದಲ್ಲಿ ಇವೆ. ಕರ್ನಾಟಕ ರಾಜ್ಯದಲ್ಲಿ ಸುಮಾರು 315 ಕಿಲೋಮೀಟರ್ ಸುದೀರ್ಘ ಸುಂದರ ಪ್ರಕೃತಿಯ ರಮ್ಯ ಕರಾವಳಿಯನ್ನು ನಾವು ಹೊಂದಿದ್ದೇವೆ. ಹಚ್ಚಹಸಿರವುಳ್ಳಂತಹ ಪಶ್ಚಿಮ ಘಟ್ಟಗಳನ್ನು ನಾವು ಹೊಂದಿದ್ದೇವೆ. ಐತಿಹಾಸಿಕ ಕೋಟೆ ಕೊತ್ತಲಗಳು ಇವೆ ಬೇಲೂರು ಹಳೇಬೀಡಿನಂತಹ ಶಿಲ್ಪಕಲೆಗಳು ಇವೆ. ವಿಶ್ವದಲ್ಲಿಯೇ ಪ್ರಸಿದ್ಧಿ ಹೊಂದಿರುವಂತಹ ನಾಗರಹೊಳೆಯಂತಹ ಅಭಯಾರಣ್ಯ ಇದೆ. ಜೋಗದಜಲಪಾತ ಇದೆ ಗೋಲಗುಂಬಜ್ ಇದೆ. ಜಗತ್ತಿನ ಎಲ್ಲಾ ಅದ್ಭುತ ಹೊಂದಿರುವಂತಹ ಆಕರ್ಷಣೀಯವಾದ ಸ್ಥಳಗಳು ಇವೆ. ಸ್ವಾಮಿ ನಿಮ್ಮ

ಪ್ರವಾಸೋದ್ಯಮ ಇಲಾಖೆಯಿಂದ ಪ್ಲಾನ್ ಎಕ್ಸ್‌ಪೆಂಡಿಚರನ್ನು ಒಂದು ನೂರು ಕೋಟಿ ರೂಪಾಯಿಗಳನ್ನು ಅದಕ್ಕೆ ತೆಗೆದಿಟ್ಟು ವಿನಿಯೋಗ ಮಾಡಿದ್ದರೆ ಇಂಪ್ರೂವ್ ಮಾಡಿದರೆ ಎಲ್ಲಾ ಸೌಲತ್ತುಗಳನ್ನು ಕೊಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿದ್ದರೆ ಲಕ್ಷಾಂತರ ಜನ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕೊಡಬಹುದಾಗಿತ್ತು. ವಿದೇಶಿವಿನಿಯಮಕ್ಕೆ ಅನುಕೂಲವಾಗುತ್ತಿತ್ತು. ಅದರ ದ್ವಿಕವಾಗಿ ನಮಗೆ ಸಿಕ್ಕಿರತಕ್ಕಂಥ ಈ ಸಂಪತ್ತನ್ನು ಮಾನ್ಯ ಜೆ.ಹೆಚ್. ಪಟೇಲರು ಒಂದ ಬಹಳ ಹೇಳುತ್ತಿದ್ದರು. ಆದರೆ ಜೆ.ಹೆಚ್. ಪಟೇಲರಿಗೆ ಪುರಸೊತ್ತು ಇಲ್ಲ ಈಗ. ಈ ಇಲಾಖೆಯನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಶಿವಮೊಗ್ಗ ಜಿಲ್ಲಾ ಶಾಸಕರನ್ನು ಕರೆದು ನೀವೇನು ಸತ್ತಿದ್ದೀರೋ ಬದುಕಿದ್ದೀರೋ ನಿಮ್ಮ ಜಿಲ್ಲೆಯಲ್ಲಿ ಏನಾಗಿದೆ, ಕಾರ್ಯಕ್ರಮಗಳು ಏನಿರ ಅಂತ ನಮಗೆ ಹೇಳುವವರೇ ಇಲ್ಲ. ಇವತ್ತು ಜಿಲ್ಲಾ ಮಂತ್ರಿ ಯಾರು ಇರುತ್ತಾರೆ ಅವರು ಪಕ್ಷಭೇಧ ಮರೆತು ಜಿಲ್ಲೆಯಲ್ಲಿ ಏನಾಗಿದೆ ಏನಾಗಬೇಕಾಗಿದೆ ಹಾಗೂ ಅಭಿವೃದ್ಧಿ ಪಡಿಸುವ ಬಗ್ಗೆ ಒಂದು ಪ್ರಾಮಾಣಿಕ ಪ್ರಯತ್ನ ಇವತ್ತು ಯಾವುದೂ ಆಗಲಿಲ್ಲ. ಈಗಲಾದರೂ ಈ ಬಗ್ಗೆ ಯೋಚನೆ ಮಾಡಿ. 315 ಕಿಲೋಮೀಟರ್ ಇರತಕ್ಕಂಥ ಕರಾವಳಿ ಪ್ರದೇಶದಲ್ಲಿ ನೈಸರ್ಗಿಕವಾದ ಒಂದು ಬಂದರು ಇದೆ. ಸತತವಾಗಿ ಕರಾವಳಿ ಮೀನುಗಾರರ ಅಭಿವೃದ್ಧಿ ಬಗ್ಗೆ ಬಿಟ್ಟು ಮಂತ್ರಿ ಇದ್ದರು ಸಹ ಇದರ ಬಗ್ಗೆ ಯಾವುದೇ ಒಂದು ಉಲ್ಲೇಖ ಇಲ್ಲ. ಕರಾವಳಿ ಅಂದ್ರೆ ಸಮುದ್ರ ಸಮುದ್ರ ಅಂದ್ರೆ ಕೈಗಾರಿಕೆಗಳ ಕಚ್ಚಾ ವಿಷವನ್ನು ಬಿಡುವಂತಹ ಒಂದು ತೊಟ್ಟಿ. ಎಂದು ತಾವು ಏನಾದರೂ ಭಾವಿಸಿದ್ದೀರೋ? ದಯಮಾಡಿ ಈ ಕರಾವಳಿಯಲ್ಲಿ ವ್ಯಾಪಾರಕ್ಕೆ ವಾಣಿಜ್ಯೋದ್ಯಮಕ್ಕೆ ಅಭಿವೃದ್ಧಿ ಮಾಡುವುದಕ್ಕೆ ಒಂದು ದೊಡ್ಡ ಅವಕಾಶ ಇದೆ. ಅದರ ಬಗ್ಗೆ ತಾವು ಏನಾದರೂ ಒಂದು ಚಿಂತನೆಯನ್ನು ಮಾಡಬೇಕು ಎಂದು ಹೇಳಿ ನಾನು ತಮ್ಮ ಮುಖಾಂತರ ವಿನಂತಿ ಮಾಡುತ್ತಿದ್ದೇನೆ. ಪರಿಶಿಷ್ಟ ಜಾತಿ ವರ್ಗಗಳ ಅಭಿವೃದ್ಧಿ, ಹಿಂದುಳಿದವರ್ಗಗಳ ಕಲ್ಯಾಣ ಅದರ ಬಗ್ಗೆ ಯಾವುದೇ ಒಂದು ನಿರ್ದಿಷ್ಟವಾದ ಕಾರ್ಯಕ್ರಮ ಇವತ್ತು ಇದರಲ್ಲಿ ಕಾಣುತ್ತಿಲ್ಲ. ಒಂದು ಲಕ್ಷ ಜನರಿಗೆ ಉದ್ಯೋಗ ಕೊಡುವುದು ಅದೇನು ಗರ್ಭಪಾತವಾಯಿತೇನೋ ಗೊತ್ತಿಲ್ಲ ಆ ದಿಕ್ಕಿನಲ್ಲಿ ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನ ಆಗಲಿಲ್ಲ. ಈ ವಸತಿ ಯೋಜನೆ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳಾದ ದೇವೇಗೌಡರು ಭಾಷಣ ಮಾಡುವುದನ್ನು ಕೇಳಿದರೆ ಸೈಟ್‌ಲೆಸ್ ಪರ್ಸನ್ಸ್‌ಗೆ ಇನ್ನೇನು ಸೈಟ್ ಬೇಕು ಎನ್ನುವ ಪ್ರಶ್ನೆಯೇ ಇಲ್ಲ. ಎಲ್ಲ ಅವರ ಕಲ್ಯಾಣ ಆಗಿ ಹೋಯಿತು ಎನ್ನುವ ಹಾಗೆ ಭಾಷಣ ಮಾಡಿಬಿಟ್ಟರು. 1995ನೇ ಆಗಸ್ಟನಲ್ಲಿ ಸರ್ಕಾರ 2ಲಕ್ಷ 54 ಸಾವಿರ ಮನೆ ಕೊಡುವುದರ ಬಗ್ಗೆ 1ಲಕ್ಷ 26 ಸಾವಿರ ರೂಪಾಯಿಗಳಲ್ಲಿ ನಿವೇಶನಗಳನ್ನು ಹಂಚುವಂತಹ ಒಂದು ಕಾರ್ಯಕ್ರಮವನ್ನು ಘೋಷಣೆ ಮಾಡಿದರು. ಇದರ ಅನ್ವಯ ಆಶ್ರಯ ಯೋಜನೆಯಲ್ಲಿ 68 ಸಾವಿರ, ಅಂಬೇಡ್ಕರ್ ಯೋಜನೆಯಲ್ಲಿ 25 ಸಾವಿರ ಇಂದಿರಾ ಅವಾಸ್ ಯೋಜನೆಯಲ್ಲಿ 41 ಸಾವಿರ ಅಂತ ಹೇಳಿದಿರಿ. ಎಷ್ಟು ಕಟ್ಟಿದ್ದೀರಾ ಸ್ವಾಮಿ.

ಸ್ಪಷ್ಟವಾಗಿ ಹೇಳಬೇಕಲ್ಲ. 14 ತಿಂಗಳ ಅಧಿಕಾರದ ಕಾಲದಲ್ಲಿ ಹೋದ ವರ್ಷ ಮಾಡಿದ್ದುದು ಅರ್ಧಂಬರ್ಧ ಆಯಿತು. ಹೋದ ವರ್ಷ ಅರ್ಧಂಬರ್ಧ ಕಟ್ಟಿದ್ದ ಮನೆಗಳಿಗೆ ಪೂರ್ತಿ ಹಣ ಕೊಟ್ಟು ಕೆಲಸ ಮಾಡಿಸುವುದಕ್ಕೆ ಆಗಲಿಲ್ಲ. ಸಮೀಕ್ಷೆ ಮಾಡಿದರಂತೆ ಏಕೆ ಗೊತ್ತಿರಲಿಲ್ಲ ನೀವು ದೇವೇಗೌಡರು

ಬಂದ ಮೇಲೆ ಗೊತ್ತಾಯಿತೇನು, ಬಡವರಿಗೆ ಮನೆ ಇಲ್ಲದವರು ಸೈಟ್ ಇಲ್ಲದವರು ಯಾರು ಎಂದು ತಮಗೆ ಗೊತ್ತಿರಲಿಲ್ಲವೇನು? ನಿಮ್ಮ ಅಧಿಕಾರಿಗಳು ಇರಲಿಲ್ಲ. ಪಟ್ಟಿಮಾಡಿರಲಿಲ್ಲವೇನು ಶಾಸಕರನ್ನು ಕರೆದುಕೊಂಡು ಹೋದರು ಸಾಲಾಗಿ ಬಡವರು ನಿಂತು ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಬಿಸಿಲಿನಲ್ಲಿ ತಾವು ಸರ್ಕಾರಿ ಅರ್ಜಿಗಳನ್ನು ವಿತರಣೆ ಮಾಡಿದಿರಿ ಅನಂತರ ಒಂದು ಸಮೀಕ್ಷೆ ಮಾಡಿದಿರಿ 19 ಲಕ್ಷ 34 ಸಾವಿರ ಅರ್ಜಿಗಳು ಇವೆ ಅದರ ಫಲಾನುಭವಿಗಳನ್ನು ಗುರುತು ಮಾಡಿದ್ದೇವೆ ಎಂದು ಹೇಳಿಕೊಂಡಿದ್ದೀರಿ. ಅದರಲ್ಲಿ ಒಬ್ಬರಿಗೆ ಸೈಟ್ ಕೊಡಲಿಲ್ಲ ಮಾನ್ಯ ಯಡಿಯೂರಪ್ಪನವರೇ ಕಳೆದ 12-13 ತಿಂಗಳುಗಳ ಪರಿಶ್ರಮದಿಂದ ಜಾಗಗಳನ್ನು ಗುರುತು ಮಾಡಿದ್ದೇವೆ ಜಮೀನುಗಳನ್ನು ಅಕ್ವೈರಮಾಡಿಕೊಂಡಿದ್ದೇವೆ ಸರ್ಕಾರಿ ಜಮೀನು ಇಲ್ಲ ನಾವು ಜಮೀನು ಕೊಂಡುಕೊಂಡಿದ್ದೇವೆ ದುಡ್ಡು ಕೊಟ್ಟು ಆಗಿದೆ ಪರಿಹಾರ ಕೊಟ್ಟು ಆಗಿದೆ ಸೈಟ್ ಫಾರ್ಮೇಶನ್ ಮಾಡುತ್ತಿದ್ದೇವೆ, ಸೈಟ್ ಕೊಡುತ್ತೇವೆ ಇಲ್ಲ ಲೋಕಸಭಾ ಚುನಾವಣೆ ಬಂದಾಗ ಬೊಬ್ಬೆ ಹೊಡೆಯಬೇಕಲ್ಲ ಬಡವರಿಗೆ ಸೈಟ್ ಇಲ್ಲದವರಿಗೆ ಸೈಟ್ ಮನೆಇಲ್ಲದವರಿಗೆ ಮನೆ ಅಂತ ಹೇಳಿ ಓಟು ತೆಗೆದುಕೊಳ್ಳಬೇಕಲ್ಲ, ಕಳೆದ 15 ತಿಂಗಳುಗಳಿಂದ ಸೈಟ್ ಇಲ್ಲದವರನ್ನು ಗುರುತು ಮಾಡುವುದು ಒಂದು ಯಶಸ್ಸು ಸನ್ಮಾನ್ಯ ಸಿದ್ಧರಾಮಯ್ಯನವರಿಗೆ ಮತ್ತು ದೇವೇಗೌಡರಿಗೆ ಕೀರ್ತಿ ಇದೆ. ಇದು ನಿಮ್ಮ ಸಾಧನೆ. ಈ ನಿವೇಶನಗಳಿಗೆ ಬೇಕಾದ ಭೂಸ್ವಾಧೀನ ಮಾಡಲಿಲ್ಲ ಇದರ ಬಗ್ಗೆ ಅಧಿಕಾರಿಗಳ ಮಧ್ಯ ಸಾಮರಸ್ಯ ಇಲ್ಲ. ಆ ಸಾಮರಸ್ಯ ಇಲ್ಲ ಗೊಂದಲ ಇದೆ ಎನ್ನುವ ಮಾತನ್ನು ಅಧಿಕಾರಿಗಳು ಪತ್ರ ಬರೆದಿದ್ದಾರೆ, ಎಷ್ಟು ಹಣ ಬೇಕು ಇದಕ್ಕೆ ತೆಗೆದು ಇಟ್ಟಿದ್ದೀರೋ? ಹಳೆಯದೇ ಒಂದು ಲಕ್ಷದ 25 ಸಾವಿರ, ಈಗ ಒಂದು ಲಕ್ಷದ 25 ಸಾವಿರ ಮನೆಗಳನ್ನು ಕಟ್ಟುತ್ತೇವೆ ಅಂತ ಹೇಳುತ್ತೀರಿ ಎಲ್ಲಿದೆ ದುಡ್ಡು? ಎಷ್ಟು ಕೋಟಿ ರೂಪಾಯಿಗಳು ಬೇಕು? ಅದಕ್ಕೆ ನಿಮ್ಮ ಬಜೆಟಿನಲ್ಲಿ ಇದೆ ಎಂದು ಹೇಳಿದ್ದೀರಿ. ನೇರ ನೇಮಕಾತಿಯನ್ನು 8-11-93 ರಿಂದ ರದ್ದುಗೊಳಿಸಿದ್ದೀರೋ? ರಾಜ್ಯದಲ್ಲಿರುವಂತಹ ನಿರುದ್ಯೋಗಿಗಳ ಸಂಖ್ಯೆ 17 ಲಕ್ಷದ 42 ಸಾವಿರದ 657. ಇದುವರೆಗೂ ಉದ್ಯೋಗ ಕೊಟ್ಟಿರುವುದು 1991 ರಿಂದ 95 ರವರೆಗೂ 79 ಸಾವಿರದ 792 ಜನಗಳಿಗೆ. ಅಂದ ಮೇಲೆ ಈ ಒಂದು ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ. ಮತ್ತೇ ಮಾಡಿದ್ದು ಏನು ಸೀಮೆಎಣ್ಣೆಯ ಮೇಲೆ ತೆರಿಗೆಯನ್ನೇ ಜಾಸ್ತಿ ಮಾಡಿದಿರಿ. ರೈತ ಉಪಯೋಗಮಾಡುವಂತಹ ಪಿ.ವಿಸಿ ಪೈಪ್ ಮೇಲೆ ತೆರಿಗೆಯನ್ನು ಗ್ರೈಂಡರ್ ಅದು ಸಾಮಾನ್ಯಜನ ಉಪಯೋಗ ಮಾಡುವಂತಾದ್ದು ಅದರ ಮೇಲೆ ತೆರಿಗೆಯನ್ನು ಜಾಸ್ತಿಮಾಡಿದಿರಿ. ಅದರ ತೆರಿಗೆ ಸರಳೀಕರಣ ಎಂದು ನಾಲ್ಕನೇ ಷೆಡ್ಯೂಲ್ ಏನು ಮಾಡಿದ್ದೀರಿ ಅದರಲ್ಲಿ ಡೀಜಲ್ ಮತ್ತು ಪೆಟ್ರೋಲನ್ನು ಸೇರಿಸಿದ್ದೀರಿ. ಆ ಕಳಕಳಿಯನ್ನು ತಾವು ತೋರಿಸಲಿಲ್ಲ. ಸ್ವಾಮಿ ನಮ್ಮ ರಾಜ್ಯದಲ್ಲಿ ಕೃಷಿ ಉತ್ಪಾದನೆ ವರ್ಷದಿಂದ ವರ್ಷಕ್ಕೆ ಕಡಿಮೆ ಆಗುತ್ತಿದೆ. ಆಹಾರಧಾನ್ಯ ಎಣ್ಣೆಕಾಳು ಹತ್ತಿ ಎಲ್ಲಾ ಇಳುವರಿ ಇವತ್ತು ಕಡಿಮೆ ಆಗುತ್ತಿದೆ. ರಸಗೊಬ್ಬರಗಳ ಬೆಲೆವಿಪರೀತವಾಗಿದೆ. ಈ ಸಮಸ್ಯೆಯನ್ನು ಬಗೆಹರಿಸುವಂತಹ ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನ ಆಗಿಲ್ಲ. ಸ್ವಯಂ ಉದ್ಯೋಗ, ಗಂಗಾಕಲ್ಯಾಣ ತೋಟಗಾರಿಕೆ ಇದಲ್ಲಾ 1995-96ನೇ ಸಾಲಿನಲ್ಲಿ ಸುಮಾರು 750 ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದಿರಿ. ಅದರಲ್ಲಿ ಖರ್ಚಾಗಿರುವುದು 293.24 ಲಕ್ಷ ರೂಪಾಯಿಗಳು ಮಾತ್ರ. ತೋಟಗಾರಿಕೆಯಲ್ಲಿ 62 ಲಕ್ಷ

ಇಟ್ಟಿದ್ದರೆ ಅದರಲ್ಲಿ ಖರ್ಚಾಗಿರುವುದು 1 ಲಕ್ಷ 21 ಸಾವಿರ ಮಾತ್ರ. ಗಂಗಾಕಲ್ಯಾಣ ಯೋಜನೆಯಲ್ಲಿ 500 ಲಕ್ಷ ನಿಗದಿ ಆಗಿದ್ದರೆ ಖರ್ಚಾಗಿರುವುದು 31.86 ಲಕ್ಷ ಮಾತ್ರ. ಇನ್ನು ಗ್ರಾಮೀಣ ಅಭಿವೃದ್ಧಿ ಬಗ್ಗೆ ತಮ್ಮನ್ನು ದೇವರೇ ಕಾಪಾಡಬೇಕು. ಗ್ರಾಮೀಣ ಸ್ವಾಸ್ಥ್ಯಕ್ಕೆ 1995-96ರಲ್ಲಿ 154 ಕೋಟಿ 9 ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದಿರಿ. ಅದರಲ್ಲಿ ಖರ್ಚಾಗಿರುವುದು 92 ಕೋಟಿ ಮಾತ್ರ. ಅದು ಡಿಸೆಂಬರ್ ಅಂತ್ಯಕ್ಕೆ. ಕರ್ನಾಟಕ ರಾಜ್ಯದಲ್ಲಿ 175 ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಕೊಳವೆ ಬಾವಿಗಳನ್ನು ಕೊರೆಯುವುದಕ್ಕೋಸ್ಕರ ಪಿ.ಎಚ್.ಇ.ಗಳಲ್ಲಿ ಇರುವಂತಹ ನಿಮ್ಮ ರಿಗ್‌ಗಳನ್ನು ರಿಪೇರಿ ಮಾಡಿಸುವುದಕ್ಕೆ ನಿಮ್ಮಿಂದ ಆಗಲಿಲ್ಲ. ಪ್ರೈವೇಟಿನಲ್ಲಿ ತೆಗೆದುಕೊಳ್ಳುವುದಕ್ಕೆ ಅನುಮತಿ ಕೊಡಲಿಲ್ಲ ಈಗ ತೆಗೆದುಕೊಳ್ಳಿ ಅಂತ ಹೇಳುತ್ತಿರಿ. ಪ್ರೈವೇಟಿನಲ್ಲಿ ಯಾವುದೇ ರಿಗ್ ಸಿಗುತ್ತಿಲ್ಲ ಅಲ್ಲಿ ಕೊಳವೆ ಬಾವಿಗಳನ್ನು ತೆಗೆಯುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಜವಾಹರ್ ರೋಜಗಾರ್ ಯೋಜನೆ ಇಂದಿರಾ ಆವಾಸ್ ಯೋಜನೆ ಮಿಲಿಯನ್ ವೆಲ್ ಪ್ರೋಗ್ರಾಂ ಡಿ.ಆರ್.ಡಿ.ಪಿ. ಯೋಜನೆಗಳಲ್ಲಿ ಇವತ್ತಿನವರೆಗೂ ಆಗಿರುವಂತಹ 31-1-96ರವರೆಗೆ ಶೇಕಡ 58 ಮಾತ್ರ ನಿಮ್ಮ ಪ್ರಗತಿ ಆಗಿದೆ. ನಿರ್ಮಲ ಕರ್ನಾಟಕ ಬೃಹತ್ ಕಾರ್ಯಕ್ರಮ.

12.00 ಪಿ.ಎಂ.

ಈ ವ್ಯವಹಾರದಲ್ಲಿ ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ಅಮಾನತಗೊಳಿಸಿದಿರಿ, ಅದರ ಬಗ್ಗೆ ಲೋಕಾಯುಕ್ತಕ್ಕೆ ಹೋದ ಮೇಲೆ ಏನಾಯಿತೋ ಗೊತ್ತಿಲ್ಲ. ಆಮೇಲೆ, 5 ಲಕ್ಷ ಶೌಚಾಲಯಗಳನ್ನು ನಿರ್ಮಿಸುತ್ತೇವೆಂದು ಹೇಳಿದ್ದಿ, ಅದರ ಸಾಧನೆ ಏನೆಂದು ದಯಮಾಡಿ ಉತ್ತರ ಕೊಡುವಾಗ ಹೇಳಬೇಕು. ನಿಮ್ಮ ಸರ್ಕಾರದಲ್ಲಿ ಕಮಿಟಿ ಶಿಫಾರಸುಗಳಿಗೆ ಮೂರು ಕಾಸು ಬೆಲೆ ಇದೆಯಾ? ಪ್ರತಿ ವಿಧಾನ ಸಭೆ ಅಭಿವೃದ್ಧಿ ಕಾರ್ಯಗಳಿಗೆ 30 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಕಮಿಟಿಯಲ್ಲಿ ಶಿಫಾರಸ್ ಮಾಡಿ ಕಳುಹಿಸಿದ್ದರೂ, ಆದರೆ, ಈ ವರ್ಷ 10 ಲಕ್ಷ ರೂಪಾಯಿಗಿಂತ ಹೆಚ್ಚು ಖರ್ಚ್ ಮಾಡಬಾರದೆಂದು ಸರ್ಕಾರದಿಂದ ಡೈರಕ್ಷನ್ ಹೋಗಿದೆ. ಜನರಿಗೆ ಭರವಸೆ ಕೊಟ್ಟಂತ ಯಾವುದೇ ಕಾರ್ಯವನ್ನು ಕಾರ್ಯರೂಪಕ್ಕೆ ತರುವಂಥ ಪ್ರಾಮಾಣಿಕ ಪ್ರಯತ್ನ ಇದುವರೆಗೂ ಆಗಲಿಲ್ಲ. ನಂತರ ಬೆಂಗಳೂರು ನಗರದ ಸುತ್ತ ಬರುವ ವರ್ತುಲ ರಸ್ತೆಯನ್ನು ನಿರ್ಮಾಣ ಮಾಡುವುದಕ್ಕೆ ಖಾಸಗಿಯವರಿಗೆ ಕೆಲಸ ವಹಿಸಿಕೊಂಡು ಸರ್ಕಾರ ತೀರ್ಮಾನಿಸಿದೆ.

ANNOUNCEMENT

ಉಪಾಧ್ಯಕ್ಷರು : ಈಗ ಒಂದು ಪ್ರಕಟಣೆ ಇದೆ. I welcome the Hon'ble members of the Assurances Committee to Sikkim Legislative Assembly who are witnessing the proceedings of the House from the Speaker's Gallery.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಡತನ ನಿವಾರಣೆಗೆ ಬಡ ವಿದ್ಯಾವಂತ ನಿರುದ್ಯೋಗಿಗಳಿಗೆ ಸಾಲ ಕೊಡುವುದರಲ್ಲಿ 7,500 ರೂಪಾಯಿಗಳನ್ನು ಸರ್ಕಾರ ಸಬ್ಸಿಡಿ ಕೊಡುತ್ತೇವೆಂದು ಸರ್ಕಾರ

ಹೇಳಿದೆ. ಐ.ಆರ್.ಡಿ.ಪಿ. ಮತ್ತು ಅಂತ್ಯೋದಯ ಯೋಜನೆಯಲ್ಲಿ ಸಾಲ ಪಡೆಯಲು ನಮ್ಮ ರಾಜ್ಯದ ಬಡ ಜನರು ಭಿಕ್ಷುಕರಂತೆ ಅಲೆಯುತ್ತಿದ್ದಾರೆ. ಇದರ ಬಗ್ಗೆ ಪಿ.ಡಿ.ಒ. ಮುಂತಾದ ಅಧಿಕಾರಿಗಳು ಪ್ರಯತ್ನ ಮಾಡಿದರೂ ಬ್ಯಾಂಕ್ ಅಧಿಕಾರಿಗಳು ಒಬ್ಲೈಜ್ ಮಾಡುತ್ತಿಲ್ಲ. ಇಂಥಾ ವಿಚಿತ್ರವಾದ ಪರಿಸ್ಥಿತಿ ಇವತ್ತಿನ ದಿವಸದಲ್ಲಿ ಇದೆ. ನಾನು ಒಂದು ವಿಷಯವನ್ನು ದುಃಖದಿಂದ ಹೇಳುತ್ತೇನೆ. ಚಾಮರಾಜನಗರದಲ್ಲಿ ನಮ್ಮ ಪಕ್ಷದ ಇಬ್ಬರು ಪುರಸಭಾ ಸದಸ್ಯರುಗಳನ್ನು ಅರೆಸ್ಟ್ ಮಾಡಿ ಜೈಲಿಗೆ ಕಳುಹಿಸಿ, ಅದಕ್ಕೆ ಮೂರು ಜನ ಮುಸ್ಲಿಂ ಮುಖಂಡರ ಜಾಮೀನು ಕೊಡಬೇಕೆಂದು ಅಲ್ಲಿನ ಅಸಿಸ್ಟೆಂಟ್ ಕಮಿಷನರ್ ಆರ್ಡರ್ ಮಾಡಿರುವ ಬಗ್ಗೆ ನಾವು ಪ್ರಸ್ತಾಪ ಮಾಡಿದಾಗ, ಅಸಿಸ್ಟೆಂಟ್ ಕಮಿಷನರ್ ರವರು ಮ್ಯಾಜಿಸ್ಟ್ರೇಟ್ ಪವರ್ ಪ್ರಕಾರ ಕೆಲಸ ಮಾಡಬೇಕಾದರೆ ಸರ್ಕಾರ ಇಂಟರಫಿಯರ್ ಮಾಡುವುದು ಸರಿಯಲ್ಲವೆಂದು ಸನ್ಮಾನ್ಯ ಜಾಲಪ್ಪನವರು ಮತ್ತು ನಾಣಯ್ಯನವರು ಹೇಳಿದರು. ವಿರೋಧ ಪಕ್ಷದವರನ್ನು ಮತ್ತು ರೈತ ಸಂಘದವರನ್ನು ಹತ್ತಿಕ್ಕಲು ಎಂಥಾ ಪಾಪದ ಕೆಲಸ ಮಾಡಿದ್ದೀರಿ ಎನ್ನುವ ಬಗ್ಗೆ ನಾನು ಒಂದು ಪತ್ರವನ್ನು ಓದುತ್ತೇನೆ. 9-2-96 ರಂದು ಈ ಟೆಲೆಕ್ಸ್ ಮೆಸೇಜನ್ನು ಎಲ್ಲಾ ತಹಶೀಲ್ದಾರಗಳು, ಅಸಿಸ್ಟೆಂಟ್ ಕಮಿಷನರ್ ಗಳು ಮತ್ತು ಡೆಪ್ಯುಟಿ ಕಮಿಷನರಗಳಿಗೆ ತಾವು ಕಳುಹಿಸಿಕೊಟ್ಟಿದ್ದೀರಿ.

`` The Karnataka Rajya Raitha Sangha has been indulging in acts of vandalism and assault on Government servants. The Government has taken serious note of this and issued instructions to all the subordinate officers to deal with strongly. It is reported that the persons arrested and produced before the executive magistrates are being released on bail. It is necessary that these people are remanded to judicial custody so that they do not indulge in these activities".

ಈ ರೀತಿ ಸರ್ಕ್ಯುಲರ್ ಕಳುಹಿಸಿದ್ದೀರಿ. ಆ ಟೆಲೆಕ್ಸ್ ಮೆಸೇಜಿನ ಒರಿಜಿನಲ್ ನನ್ನ ಹತ್ತಿರ ಇದೆ, ಅದನ್ನು ತೋರಿಸುವುದಿಲ್ಲ. ತೋರಿಸಿದರೆ ಆ ಅಧಿಕಾರಿ ಮನೆಗೆ ಹೋಗುತ್ತಾನೆ. ಸ್ವಾಮಿ, ಇದು ಗೌರವ ತರುವಂಥ ಸಂಗತಿಯೇ? ಒಬ್ಬ ತಹಶೀಲ್ದಾರ್, ಅಸಿಸ್ಟೆಂಟ್ ಕಮಿಷನರ್ ಮತ್ತು ಡೆಪ್ಯುಟಿ ಕಮಿಷನರಗೆ ಕಾನೂನು ಚೌಕಟ್ಟಿನಲ್ಲಿ ಹೇಗೆ ಕೆಲಸ ಮಾಡಬೇಕು? ಯಾವಾಗ ರಿಲೀಸ್ ಮಾಡಬೇಕು. ಯಾವಾಗ ರಿಲೀಸ್ ಮಾಡಬೇಕೆಂದು ಅವರಿಗೆ ಗೊತ್ತಿದೆ. ಅಫಿಷಿಯಲ್ ಆಗಿ ಜ್ಯುಡಿಷಿಯರಿಗೆ ಇಂಟರಫಿಯರ್ ಆಗುವಂಥ ಕೆಲಸವನ್ನು ಸರ್ಕಾರ ಮಾಡಿದೆ. ತಹಶೀಲ್ದಾರ್, ಅಸಿಸ್ಟೆಂಟ್ ಕಮಿಷನರ್ ಮತ್ತು ಡಿ.ಸಿ.ಗಳನ್ನು ತಮ್ಮ ಕೈ ಮುಷ್ಟಿಯಲ್ಲಿ ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರೆಂದು ನಾವು ಹೇಳಿದಾಗ ಇದು ಇಂಪಾಸಿಬಲ್ ಎಂದು ಸರ್ಕಾರ ಹೇಳಿದೆ. ಇದಕ್ಕೆ ತಮಗೆ ನಾಚಿಕೆಯಾಗುವುದಿಲ್ಲವೇ? ಇಂಥಾ ಡೈರೆಕ್ಷನಗಳನ್ನು ಇತಿಹಾಸದಲ್ಲಿ ಎಂದಾದರು ಕೊಡಲಾಗಿದೆಯೇ? ರೈತ ಸಂಘದವರ ಆಕ್ಟಿವಿಟೀಸನ್ನು ಹತ್ತಿಕ್ಕುವುದಕ್ಕೋಸ್ಕರ, ಇತರ ರಾಜಕೀಯ ಪಕ್ಷಗಳ ಕೆಲಸಗಳನ್ನು ಸ್ಥಗಿತ ಮಾಡುವುದಕ್ಕೋಸ್ಕರ ಸುಳ್ಳು ಮೊಕದ್ದಮೆಗಳನ್ನು ಹಾಕುವುದಕ್ಕೆ ಡೈರೆಕ್ಷನ್ ಕೊಡಲು ಸರ್ಕಾರಕ್ಕೆ ಎಷ್ಟು ಧೈರ್ಯ? ಇದನ್ನು ಪ್ರಜಾತಂತ್ರ

ವ್ಯವಸ್ಥೆಯೊಂದು ಹೇಳುವುದಕ್ಕಾಗಿಯೋ? ಇದು ಒಂದು ಸರ್ವಾಧಿಕಾರಿ ಸರ್ಕಾರ ಅಲ್ಲವೇ? ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರತಿ ತಿಂಗಳು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಅನ್ಯಾಯದ ವಿರುದ್ಧ ಹೋರಾಟ ಮಾಡಿದಂಥ ರೈತ ಸಂಘದವರನ್ನು ಬಂಧನ ಮಾಡುತ್ತೀರೋ? ಅಲ್ಲಿಗೆ ಬಂದಿರದೇ ಇರತಕ್ಕಂಥ ಮಾನ್ಯ ನಂಜುಂಡಸ್ವಾಮಿಯವರನ್ನು ಅರೆಸ್ಟ್ ಮಾಡುತ್ತೀರೋ? ರೇಪ್ ಕೇಸ್ ಬುಕ್ ಮಾಡುತ್ತೀರೋ? ನಾನು ಮತ್ತು ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಒಂದು ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಮನೆ ಮುಂದೆ ಧರಣಿ ಮಾಡಿದಾಗ ನಿಮ್ಮ ನಾಯಕರುಗಳು ಅಧಿಕಾರಿ ನಮ್ಮ ಮೇಲೆ Attempt to murder ಕೇಸ್ ಹಾಕಿದ್ದಾರೆ. ಇದು, ವಿರೋಧ ಪಕ್ಷಗಳ ಜೊತೆ ಮತ್ತು ರಾಜಕೀಯ ಪಕ್ಷಗಳೊಡನೆ ನಡೆದುಕೊಳ್ಳತಕ್ಕಂಥ ರೀತಿ. ಮಾನ್ಯ ದೇವೇಗೌಡರು, ನಿನ್ನೆ ದಿವಸ, ಲೋಕಸಭಾ ಚುನಾವಣೆ ಬರುತ್ತದೆ ಅದರಲ್ಲಿ ಯಾರು ಗೆಲ್ಲುತ್ತಾರೋ ನೋಡೋಣವೆಂದು ಅಟ್ಟಹಾಸದ ಮಾತನಾಡಿದ್ದಾರೆ. ಸೋಲು ಗೆಲುವು ಮುಖ್ಯವಲ್ಲ. ಇದುವರೆಗೆ ಬಹಳ ಜನ ಅಧಿಕಾರದಲ್ಲಿ ಇದ್ದು ಹೋಗಿದ್ದಾರೆ. ಅಧಿಕಾರದ ಮದದಿಂದ, ಸೊಕ್ಕಿನಿಂದ ನಡೆದರೆ ಜನರು ಪಾಠ ಕಲಿಸುತ್ತಾರೆ. 'ಗಾಳಿ ಪಟ ಹಾರುತ್ತಿರುವಾಗ ಒಂದು ಹಕ್ಕಿಗೆ ಸಿಟ್ಟು ಬಂದು ನನ್ನ ಮೇಲೆ ಈ ಗಾಳಿ ಪಟ ಹಾರುತ್ತಿದೆಯಲ್ಲಾ ಎಂದು. ಗಾಳಿ ಪಟ ಹಾರಿಸುತ್ತಿದ್ದ ಮಗು ನೂಲನ್ನು ಬಿಟ್ಟು, ಗಾಳಿ ಪಟವು ರಭಸದಿಂದ ಹಕ್ಕಿಯನ್ನು ಅಪ್ಪಳಿಸಿತು. ಹೀಗೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜನರು ಬುದ್ಧಿ ಕಲಿಸುತ್ತಾರೆ. ಅಧಿಕಾರ ಮದದಿಂದ ನಾವು ಶಾಶ್ವತವಾಗಿ ಅಧಿಕಾರದಲ್ಲಿ ಇರುತ್ತೇವೆಂದು ಪ್ರತಿ ಪಕ್ಷಗಳನ್ನು ಹತ್ತಿಕ್ಕುವಂಥ ಕೆಲಸ ಸರಿಯಾದುದಲ್ಲ. ಆಡಳಿತದಲ್ಲಿ ಅನ್ಯಾಯವಾದಾಗ ಅದರ ವಿರುದ್ಧ ಸಿಡಿದೆದ್ದರೆ ಅದನ್ನು ಬಹಿರಂಗ ಮಾಡಿದರೆ ಅದರ ಬಗ್ಗೆ ನಾನಾ ರೀತಿ ಮಾತನಾಡುತ್ತಾರೆ. ಇನ್ನು ಕೋರಮಂಗಲದಲ್ಲಿ ಮನೆಗಳನ್ನು ಕಟ್ಟುವ ಹಗರಣದ ಬಗ್ಗೆ ಮಾನ್ಯ ಬಸವಣ್ಣಪ್ಪನವರು ಕೊಟ್ಟಂಥ ವರದಿ ಇಲ್ಲಿದೆ. ಮಾನ್ಯ ಸುರೇಶ್ ಕುಮಾರರವರು ಸಮಿತಿ ಸದಸ್ಯರಾಗಿ ಅಬ್ಜೆಕ್ಷನ್ ರೈಸ್ ಮಾಡಿದ್ದು. ಅದು ವಿನಾಯಿತಿಯ ವಿವರಕ್ಕೆ ಈಗ ನಾನು ಹೋಗುವುದಿಲ್ಲ. ಅಂದಾಜು ಸಮಿತಿಯ ಅಧ್ಯಕ್ಷರಾಗಿ ಮಾನ್ಯ ಬಸವಣ್ಣಪ್ಪನವರು ದಿನಾಂಕ: 28 ಜುಲೈ, 1995 ರಂದು ವಿಧಾನ ಸಭೆಗೆ ವರದಿಯನ್ನು ಒಪ್ಪಿಸಿದ್ದಾರೆ. ಇದರಲ್ಲಿ ಏನು ಹೇಳಿದೆ ಸ್ವಾಮಿ? ಗುತ್ತಿಗೆದಾರರಿಂದ ಮಾಡಿಕೊಂಡಿರುವ ಅಗ್ರಿಮೆಂಟ್ ಪ್ರಕಾರ ಪ್ರತಿಯೊಂದು ಚಟುವಟಿಕೆಗಳು ವಿಳಂಬವಾದಲ್ಲಿ ಒಂದು ದಿನಕ್ಕೆ 50 ಸಾವಿರ ರೂಪಾಯಿಗಳನ್ನು ದಂಡವಾಗಿ ವಿಧಿಸಲಾಗುತ್ತದೆ. ಈ ಕಾರಣದಿಂದ ವಿಳಂಬಕ್ಕೆ ಎಡೆಕೊಡದೆ ಗುತ್ತಿಗೆದಾರರು ಕೆಲಸ ನಿರ್ವಹಿಸಬೇಕಾಗುತ್ತದೆ. ಮೆಸರ್ಸ್ ಶಿರ್ಕೆ ಕಂಪನಿ, ಮೆಸರ್ಸ್ ಇ.ಪಿ.ಸಿ.ಎಲ್. ಕಂಪನಿ, ನಾಗಾರ್ಜುನ ಕಂಪನಿಗಳು 43 ವಾರದಲ್ಲಿ ಈ ಕೆಲಸಗಳನ್ನು ಮುಗಿಸಲು ಕೈಗೊಂಡಿರುವ ಕ್ರಮ. ಈ ಯೋಜನೆಯಲ್ಲಿ 2,821 ಫ್ಲಾಟುಗಳನ್ನು ನಿರ್ಮಾಣ ಮಾಡುವ ಯೋಜನೆ ಇದ್ದು ಈ ಪೈಕಿ 1200 ಫ್ಲಾಟುಗಳನ್ನು ಡಿಸೆಂಬರ್ 15ರ ಒಳಗೆ ಅಂದರೆ 43 ವಾರಗಳಲ್ಲಿ ಮುಗಿಸಲು ಯೋಜಿಸಿದೆ. ಉಳಿದವುಗಳನ್ನು 60 ವಾರಗಳಲ್ಲಿ ಮುಗಿಸಲಾಗುವುದು. ಈ ರೀತಿ ಅಗತ್ಯವಾಗಿ ಮುಗಿಸಲು ಎಲ್ಲಾ ವಿವರಗಳನ್ನು ವರದಿಯಲ್ಲಿ ತಿಳಿಸಲಾಗಿದೆ. ಅಗ್ರಿಮೆಂಟ್ ಪ್ರಕಾರ ಕೆಲಸವು ಅಕ್ಟೋಬರ್ ಕೊನೆಗೆ ಮುಕ್ತಾಯವಾಗಬೇಕಾಗಿತ್ತು. ಕೆಲಸ ವಿಳಂಬವಾದ ಬಗ್ಗೆ ಪ್ರತಿದಿನ 50 ಸಾವಿರ ರೂಪಾಯಿಗಳಂತೆ ದಂಡ ವಿಧಿಸಿದ್ದಿದ್ದರೆ ನವೆಂಬರ್, ಡಿಸೆಂಬರ್, ಜನವರಿ, ಫೆಬ್ರವರಿ ತಿಂಗಳವರೆಗೆ ಸುಮಾರು

ಮೂವತ್ತೇಳು ಲಕ್ಷ ರೂಪಾಯಿಗಳನ್ನು ಗುತ್ತಿಗೆದಾರರಿಂದ ವಸೂಲಿ ಮಾಡಬೇಕಾಗಿತ್ತು.

ಇಂಟ್ರೆಸ್ಟ್ ಇಲ್ಲದೇ 20 ಕೋಟಿಗಳಷ್ಟು ದುಡ್ಡು ಕೊಟ್ಟು ನೀವು ಕೆಲಸವನ್ನು ಶುರು ಮಾಡಿಸುತ್ತೀರೋ? ಇಷ್ಟು ಅವಧಿಯೊಳಗೆ ಕೆಲಸವನ್ನು ಮುಗಿಸಬೇಕೆಂದು ಹೊರಟಿದ್ದೀರೋ? ನಾನು ಅವತ್ತು 100 ಕೋಟಿ ರೂ.ಗಳಷ್ಟು ಅವ್ಯವಹಾರ ನಡೆದಿದೆ ಎಂದು ಹೇಳಿದ್ದೆ. ಅಲ್ಲಿ ಒಳ ವ್ಯವಹಾರ ನಡೆದಿದೆ ಎಂದು ಈಗಲೂ ಹೇಳುತ್ತಾ ಇದ್ದೇನೆ. ಹ್ಯಾಂಡಬಿಲ್ ಹಂಚಿದ್ದೇನೆ. ಮಾನ್ಯ ಜಾಲಪ್ಪನವರು ಬಾಯಿಯ ಮೇಲೆ ಬೆಟ್ಟು ಅದಿಸುತ್ತಾರೆ? ಸ್ಟಾಂಪು ಟಿಕೆ ಮತ್ತು ಹೇಗೆ ಕೊಟ್ಟಿದ್ದೀರಿ? ಇವನ್ನು? ಅದು ಬಡವರಿಗಾಗಿ ಮನೆಕಟ್ಟಲೆಂದೆ? ಅಲ್ಲ. ನಿಮ್ಮ ಆದ್ಯತೆಯೇನು? ಕೋರಮಂಗಲದಲ್ಲಿ ಕ್ರೀಡಾಪಟುಗಳ ಹೆಸರಿನಲ್ಲಿ ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ನಗರವನ್ನು ಕಟ್ಟುವುದು. ನಾನು ಅದನ್ನೇ ಕೇಳಿದ್ದೆ. ನಾನೇನು ತಪ್ಪು ಮಾಡಿದ್ದೆ? ನನ್ನ ಪತ್ರಿಕಾ ಸ್ನೇಹಿತರೂ ಕೂಡ ಇಲ್ಲೇ ಇದ್ದರು. ಮುಖ್ಯಮಂತ್ರಿಯವರನ್ನು ಕೇಳಿದೆ, ವಿದ್ಯುತ್ ಉತ್ಪಾದನೆ ಬಗ್ಗೆ ಶರತ್ತು ಹಾಕಿದ್ದೇವೆ, ಅವಧಿಯೊಳಗೆ ಮುಗಿಯದಿದ್ದರೆ ಒಂದು ದಿವಸಕ್ಕೆ ಒಂದು ಲಕ್ಷ ದಂಡ ಆಗುತ್ತದೆ ಎಂಬ ಶರತ್ತಿನೊಂದಿಗೆ ಮಾಡಿದ್ದೇವೆ, 400 ಮೆಗಾವೋಲ್ಟ ವಿದ್ಯುತನ್ನು ನಾವು 6 ತಿಂಗಳಲ್ಲಿ ಉತ್ಪಾದನೆ ಮಾಡುತ್ತೇವೆ ಎಂಬ ಮಾತನ್ನು ಹೇಳಿದಾಗ ನಾನು ಎದ್ದು ನಿಂತು ಕೊಂಡು ಕೇಳಿದೆ, ಈ 43 ವಾರಗಳಲ್ಲಿ ಕೋರಮಂಗಲದಲ್ಲಿ ಕ್ರೀಡಾನಗರವನ್ನು ಕಟ್ಟುತ್ತೇವೆಂದು ಹೇಳಿದ್ದೀರಲ್ಲ? ನಿಮ್ಮ ಅಗ್ರಿಮೆಂಟ್ ಪ್ರಕಾರ ಡಿಸೆಂಬರ್ 15 ರೊಳಗಾಗಿ ಕೆಲವು ಮನೆಗಳು ಏನು ಪೂರ್ಣವಾಗ ಬೇಕಾಗಿತ್ತು ಅದು ಆಗಲಿಲ್ಲ. ಅದು ಆಗಲಿಲ್ಲವೆಂದ ಮೇಲೆ ಅವಧಿ ಮುಗಿದ ಮೇಲೆ ದಿನಕ್ಕೆ 50 ಸಾವಿರ ರೂ.ಗಳ ದಂಡವನ್ನು ಹಾಕುತ್ತೇವೆಂದು ಅಗ್ರಿಮೆಂಟ್ ಮಾಡಿಕೊಂಡ ಮೇಲೆ, ಅವಕ್ಕೆ ಅವರಿಂದ ಸಹಿ ಮಾಡಿಕೊಂಡ ಮೇಲೆ ಅದರ ಪ್ರಕಾರ ನೀವು ವಸೂಲು ಮಾಡದೇ ಇದ್ದರೆ ಈ 42.5 ಪರ್ಸೆಂಟನಷ್ಟು ಏನು ಜಾಸ್ತಿ ಮಾಡಿದ್ದೀರಾ ಅದು ಸುಮಾರು 100 ಕೋಟಿಗಳಷ್ಟು ಆಗುತ್ತದೆ ಇದು ಅವರಿಗೆ ಸೇರಿಲ್ಲ, ಇದರಲ್ಲಿ ಒಳ ವ್ಯವಹಾರಗಳು ಆಗಿವೆ. ಲೂಟಿಯಾಗಿದೆ... ಇದು ಯಾವ ಹತ್ತಿರ ಇದೆ ಎಂದು ಹೇಳಬೇಕಾಗುತ್ತದೆ. ಅಡ್ವಾನ್ಸನ್ನು ಯಾಕೆ ಕೊಟ್ಟಿದ್ದೀರಿ? ಅಡ್ವಾನ್ಸ ಕೊಡುವ ದಿಶೆಯಲ್ಲಿ ಯಾರ್‍ಯಾರ ಇಚ್ಛೆಯನ್ನು ಪೂರೈಸಬೇಕಾಗಿತ್ತೋ? ಯಾರ ಜೇಬನ್ನು ಭರ್ತಿ ಮಾಡಬೇಕಾಗಿತ್ತೋ? ಬಡ್ಡಿಲ್ಲದ ಕಾಲದಲ್ಲಿ ಅಡ್ವಾನ್ಸನ್ನು ಕೊಟ್ಟು ಹಾಗೆ ಮಾಡಿ ಇವರು ದುಡ್ಡು ಮಾಡಿಕೊಂಡಿದ್ದಾರೆಂದು ಜನರು ಆರೋಪವನ್ನು ಮಾಡುತ್ತಿದ್ದಾರೆ ಮತ್ತು ನಾನೂ ಕೂಡ ಸದನದಲ್ಲಿ ಆರೋಪ ಮಾಡುತ್ತಿದ್ದೇನೆ. ಇವತ್ತು ನೀವು ಆ ದಂಡವನ್ನು ವಸೂಲಿ ಮಾಡದಿದ್ದರೆ ನಮಗೆ ಅನುಮಾನ ಬರುತ್ತದೆ. ದಂಡ ವಸೂಲೂ ಮಾಡುವುದು ಇರಲಿ, ಇನ್ನೇನು ಮಾಡಲು ಹೊರಟಿದ್ದೀರೋ ಎಂಬುದು ಗೊತ್ತಿಲ್ಲ. ವಿವರಗಳನ್ನು ಒದಗಿಸಿಕೊಡಿ. ನಾವು ಇದಕ್ಕೆ ಸದನದ ಸಮಿತಿಯನ್ನು ಮಾಡಿದ್ದು, ಎಗ್ರಿಮೆಂಟ್ ಮಾಡುವಂಥ ಕಾಲದಲ್ಲಿಯೇ? ಅವ್ಯವಹಾರ ನಡೆದಿದೆ ಅದ್ಯಕ ತನಿಖೆ ಮಾಡಿ ಎಂದು ಹೇಳಿದ್ದೇವೆ. ಕಂಟ್ರಾಕ್ಟರ್‌ಗೆ ಗುತ್ತಿಗೆಯನ್ನು ಕೊಡುವಂಥ ಕಾಲದಲ್ಲಿ ಎಲ್ಲರಿಗೆ ಇದರ ಅವಕಾಶ ಸಿಗಲಿಲ್ಲ. ತಮಗೆ ಬೇಕಾದವರನ್ನು ಕರೆದುಕೊಂಡು ಬಂದು, ಅಡ್ವಾನ್ಸ ಮುಂತಾದ ವಿವರಗಳನ್ನು ಹೇಳಲಿಲ್ಲ, ಆದರೂ ಕೊಟ್ಟಿದ್ದೀರಿ. ಆದರೆ ಯಾವುದೇ ಪ್ರಗತಿಯಾಗಲಿಲ್ಲ. ಕೃಷ್ಣಾಜಲಾನಯನ ಪ್ರದೇಶಕ್ಕೆ 250 ಕೋಟಿಗಳನ್ನು ಖರ್ಚು ಮಾಡಲು ಆಗದ ನೀವು ಯಾರೋ ಕೋಟ್ಯಾಧೀಶ ಕಂಟ್ರಾಕ್ಟರನ್ನು

ತರದುಕೊಂಡು ಬಂದು ಲಾಭ ಆಗುತ್ತದೆ ಎಂಬ ಒಂದೇ ಒಂದು ಕಾರಣಕ್ಕೋಸ್ಕರ..... 225 ಕೋಟಿಗಳಷ್ಟು ಈಗಾಗಲೇ ಪೇಮೆಂಟ್ ಆಗಿದೆ. ಇದು ಬಡ್ಡಿಯಿಂದ ತಂದ ಸಾಲ. ಏತಕ್ಕಾಗಿ ನಿಮ್ಮ ಈ ಕಳಕಳಿ? ಹಾಗಾದರೆ ಇದನ್ನು ಯಾವಾಗ ಮುಗಿಸುತ್ತೀರಿ ಅದನ್ನಾದರೂ ಹೇಳುತ್ತೀರೋ? ಮುಗಿಸಿದ ಮೇಲೆ ಅದನ್ನು ಏನು ಮಾಡುತ್ತೀರಿ? ಮಾರಾಟ ಮಾಡಬೇಕಲ್ಲವೆ? ಸಾಲ ತಂದು ಅದಕ್ಕೆ ಇನ್ನೆರಡು ಮೂರು ವರ್ಷಗಳಲ್ಲಿ ಕೊಡಬೇಕಾದ ಬಡ್ಡಿ ಕೋಟಿಗಟ್ಟಲೆಯಾಗಬಹುದು. ಹೀಗೆ ನೀವು ಮಾರುವುದೇ ಆದರೆ ಕ್ರೀಡಾಪಟುಗಳ ಹೆಸರಿನಲ್ಲಿ ನಗರ ಕಟ್ಟುವ ಅಗತ್ಯವೇನಿತ್ತು? ಅದರ ಬದಲಾಗಿ ಫೈವ್‌ಸ್ಟಾರ್ ಹೋಟೆಲ್ ಇಟ್ಟಿದ್ದರೂ ಅದು ಐದಾರು ಕೋಟಿಗಳಲ್ಲಿ ಮುಗಿಯುತ್ತಾ ಇತ್ತು ಎಂದು ನಾನು ಹೇಳಿದ್ದೆ. ಅವೊತ್ತು ಬಹಳ ಹಗುರವಾಗಿ ಮಾತನಾಡಿದ್ದೀರಿ. ಛೇಡಿಸಿದ್ದೀರಿ, ಅಪಮಾನ ಮಾಡಿದ್ದೀರಿ, ನಾನು ಇವೊತ್ತು ಸದನದಲ್ಲಿ ಕೇಳುವುದಕ್ಕೆ ಇಚ್ಛಿಸುತ್ತೇನೆ, ನಿಮ್ಮ ಉದ್ದೇಶವು ಕ್ರೀಡಾಪಟುಗಳಿಗೆ ಆಟ ಆಡಲು ಮಾಡುವುದಾಗಿದ್ದರೆ ಕೆರೆ ಅಂಗಳದಲ್ಲಿ ನಗರವನ್ನು ಕಟ್ಟುವ ಅವಶ್ಯಕತೆಯು ಇತ್ತೆ? ಏಕೆ ನಿಮ್ಮ ಎಸ್ಟಿಮೇಟ್ ಜಾಸ್ತಿಯಾಯಿತು? ಅದು ಕೆರೆ ಅಂಗಳವಂತೆ... 50 ಅಡಿಗಳವರೆಗೆ ಪಾಯವನ್ನು ತೆಗೆಯಬೇಕಂತೆ. ಹಾಗಿದ್ದಲ್ಲಿ ಅಲ್ಲೇ ಏಕೆ ಜಾಗವನ್ನು ಆರಿಸಿಕೊಂಡಿದ್ದೀರಿ? ಬೆಂಗಳೂರಿನಲ್ಲಿ ಬೇರೆ ಎಲ್ಲಿಯೂ ಜಾಗವಿರಲಿಲ್ಲವೆ? ನಿಮ್ಮ ಸ್ವಾರ್ಥ ಮತ್ತು ಲಾಭಕ್ಕೋಸ್ಕರ ಕ್ರೀಡಾಪಟುಗಳ ಹೆಸರಿನಲ್ಲಿ 100 ಕೋಟಿಗಳಿಗಿಂತಲೂ ಹೆಚ್ಚು ಅವ್ಯವಹಾರ ನಡೆದಿದೆ ಎಂದು ಕೇವಲ ಯಡಿಯೂರಪ್ಪ ಹೇಳುತ್ತಾ ಇಲ್ಲ ಜನರು ಕೂಡ ಮಾತನಾಡುತ್ತಾ ಇದ್ದಾರೆ ಅದಕ್ಕೆ ನೀವು ಉತ್ತರ ಕೊಡಬೇಕಾಗುತ್ತದೆ. ನಾನೂ ಕೂಡ ಮಾನ್ಯ ದೇವೇಗೌಡರಿಗೆ ಹೇಳುತ್ತೇನೆ, ಹೋಗೋಣ ಅದಾದಕ್ಕೆ.. ಇದು ಕೇವಲ ಕೋರಮಂಗಲದ್ದು ಮಾತ್ರವಲ್ಲ, ನಿಮ್ಮ 15 ತಿಂಗಳುಗಳ ಕರ್ಮಕತೆ ಗ್ರಾನೈಟ್ ಹಗರಣ. ಏನು ಹೇಳಿದರು ಮಾನ್ಯ ದೇವೇಗೌಡರು? ಒಂದು ಸಾವಿರ ಕೋಟಿ ರೂ.ಗಳ ಅವ್ಯವಹಾರ ನಡೆದಿದೆ ಎಂದು ಸದನದಲ್ಲಿ ನಿಂತುಕೊಂಡು ಹೇಳಿದರು. 25 ಕೋಟಿಗಳನ್ನು ನನ್ನನ್ನು ಕುರ್ಚಿಯಿಂದ ಇಳಿಸುವುದಕ್ಕೋಸ್ಕರ ಒಬ್ಬರು ಗ್ರಾನೈಟ್‌ಲಾಬಿಯಲ್ಲಿ ಖರ್ಚು ಮಾಡಲು ಹೊರಟಿದ್ದಾರೆ ಎಂದು ಹೇಳಿದರು. ಏಕೆ ದೇವೇಗೌಡರ ಮೇಲೆ ಆತನಿಗೆ ಸಿಟ್ಟು? ಆತನು 25 ಕೋಟಿಗಳನ್ನು ಏಕೆ ಖರ್ಚು ಮಾಡಲು ಹೊರಟಿದ್ದಾನೆ? ಈಗ ಏನಾಯಿತು? ಒಬ್ಬ ಮಂತ್ರಿಯು ಪಾರ್ಟನರಶಿಫ್ ಕೇಳುತ್ತಾನೆ ಎಂದು ಹೇಳುತ್ತಾರೆ, ಅದು ಪತ್ರಿಕೆಗಳಲ್ಲಿ ಬರುತ್ತದೆ. ಯಾರು ಆ ಮಂತ್ರಿ ಎಂದು ಬಹಿರಂಗಪಡಿಸಿ, ತನಿಖೆಮಾಡಿಸಿ? ಇವೊತ್ತು ಅಧಿಕಾರಿ ಮದನಗೋಪಾಲರನ್ನು ವರ್ಗಾವಣೆ ಮಾಡುವುದಕ್ಕೋಸ್ಕರವಾಗಿ, ಸದನದಲ್ಲಿ ಮುಖ್ಯಮಂತ್ರಿಯವರು ಸಾವಿರಾರು ಕೋಟಿ ಲೂಟಿಯಾಯಿತು ಎಂದು ಸದನದಲ್ಲಿ ಹೇಳಿದ್ದಾರೋ, ಅವರ ವರ್ಗಾವಣೆಗೋಸ್ಕರ ಗ್ರಾನೈಟ್ ಕಲ್ಲಿನ ಮಾಲೀಕರು 50 ಕೋಟಿಗಿಂತಲೂ ಹೆಚ್ಚು ಹಣವನ್ನು ಕೊಟ್ಟಿದ್ದೇವೆಂದು ಕುಂತಲ್ಲಿ, ನಿಂತಲ್ಲಿ ಸರಕಾರದ ಬಗ್ಗೆ ಮಾತನಾಡುವುದನ್ನು ಕೇಳಿ ನಮಗೂ ನೋವು ಆಗುತ್ತಾ ಇದೆ. ಹಣಕೊಟ್ಟಿದ್ದರೆ ಯಾರು? ಯಾರಿಗೆ ಕೊಟ್ಟರು? ಎಷ್ಟು ಕೊಟ್ಟರು? ಏಕೆ ಕೊಟ್ಟರು? ಏಕೆ ಸರಕಾರಕ್ಕೆ ಕೆಟ್ಟ ಹೆಸರು ಬರುತ್ತಾ ಇದೆ? ಮದನಗೋಪಾಲರನ್ನು ತನಿಖೆಯಾಗುವ ಸಮಯದಲ್ಲಿಯೇ ಏತಕ್ಕೆ ಎತ್ತಂಗಡಿ ಮಾಡಿದ್ದೀರಿ? ಕೇಂದ್ರ ಸರಕಾರದ ಸೇವೆಗೆ ಅವರು ಹೋಗಿದ್ದರೆ ತನಿಖೆಯಾಗುವ ತನಕವೂ ಇಲ್ಲಿಯೇ ಇರಲಿ ಎಂಬ ಬಗ್ಗೆ ಕೇಂದ್ರ ಸರಕಾರವನ್ನು ವಿನಂತಿಮಾಡಿಕೊಳ್ಳಬಹುದಾಗಿತ್ತಲ್ಲ?

ಏಕೆ ಕಳುಹಿಸಿಕೊಟ್ಟಿರಿ? ಅನೇಕ ಜನರ ಬಗ್ಗೆ ಬಯಲಾಗುತ್ತದೆ ಎಂದು ಹೇಳಿ ಹೀಗೆ ಮಾಡಿದ್ದೀರೋ? ಸರಕಾರದ ಖಜಾನೆಯು ಹಗಲಲ್ಲಿಯೇ ಲೂಟಿಯಾಗುತ್ತಾ ಇದೆ. ಭಗವಂತನು ಕೊಟ್ಟ ಎಲ್ಲಾ ಸಂಪನ್ಮೂಲಗಳು ಇದ್ದರೂ ಕೂಡ ಅದನ್ನು ಉಪಯೋಗ ಮಾಡಿಕೊಂಡು ಈ ರಾಜ್ಯದ ಹಿತವನ್ನು ಕಾಪಾಡಲು ಆಗದೇ ಇರುವಂಥ ಕಳಕಳಿ ಇಲ್ಲದಿರುವಂತಹ ಬೇಜವಾಬ್ದಾರಿ ನಿರಸಕ್ತ ಸರಕಾರ ಹಾಗೂ ಬದುಕಿದ್ದೂ ಸತ್ತಿರುವಂಥ ಸರಕಾರ ಇವತ್ತು ನಮ್ಮಲ್ಲಿ ಅಸ್ತಿತ್ವದಲ್ಲಿದೆ. ಯಾವುದೇ ಅಂಕಿಅಂಶಗಳನ್ನು ಕೊಟ್ಟು ಕಾರ್ಯರೂಪಕ್ಕೆ ತರಲು ಆಗದೇ ಇರತಕ್ಕಂಥ ಒಂದು ಬಜೆಟ್ ಇದಾಗಿದೆ. ಈ ಬಗ್ಗೆ ಜನರು ತೀರ್ಮಾನ ಮಾಡುತ್ತಾರೆ. ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಅವರು ಇರುವಂಥ ಕೊರತೆಗಳನ್ನು ಸರಿಪಡಿಸಿಕೊಳ್ಳಬೇಕು. ಸೀಮೆ ಎಣ್ಣೆ ಮುಂತಾದವುಗಳಿಗೆ ಟ್ಯಾಕ್ಸನ್ನು ಜಾಸ್ತಿ ಮಾಡಿ ನಂತರ ನಾವು ಕೇಳುತ್ತೇವೆ, ಅದಕ್ಕೆ ಕಡಿಮೆ ಮಾಡಿದ್ದೇವೆಂದು ಪತ್ರಿಕೆಗಳಲ್ಲಿ ಹೇಳಿಕೆ ಕೊಡುವುದು. ಅಂದರೆ ಉದ್ದೇಶ ಪೂರ್ವಕವಾಗಿ ಹಾಕಿದ ಟ್ಯಾಕ್ಸ್‌ನಲ್ಲಿ 3-4 ಐಟಂಗಳಿಗೆ ಕಡಿಮೆ ಮಾಡಿ ನಾವು ಕಡಿಮೆ ಮಾಡಿದ್ದೇವೆಂದು ಹೇಳುವುದು ಪತ್ರಿಕೆಗಳಲ್ಲಿ ಅವರು ಕೊಡುವುದು ಬೇಡ. ನಾವು ಕಡಿಮೆ ಮಾಡಿ ಎಂದು ಕೇಳುವುದರ ಬದಲಾಗಿ ಇವರನ್ನು ಮನೆಗೆ ಕಳುಹಿಸಿ ಎಂದು ಕೇಳುತ್ತೇನೆ. ಜನಹಿತ ಇದರಲ್ಲಿ ಏನೂ ಇಲ್ಲ ಎಂಬ ಮಾತನ್ನು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಗುರುಮಿಟಕಲ್) : ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ವರ್ಷದ ಆಯವ್ಯಯ ಪತ್ರದ ಮೇಲೆ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ ಮತ್ತು ಕೆಲವೊಂದು ವಿಷಯಗಳನ್ನು ಅವರದ್ದೇ ಆದಂಥ ಧಾಟಿಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಶ್ರೀಮಾನ್ ಸಿದ್ದರಾಮಯ್ಯನವರು ಮಂಡಿಸಿದಂಥ ಆಯವ್ಯಯಪತ್ರವನ್ನು ನಾನು ವಿರೋಧಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪಿಸ ಬಯಸುತ್ತೇನೆ. ಇದಕ್ಕೆ ಮುಖ್ಯ ಕಾರಣ ಅಂದರೆ ಈ ಬಜೆಟ್ ಬಹಳ ಉತ್ತಮವಾದಂಥ ಬಜೆಟ್ ಎಂಬ ಮಾತು ಅವರ ಬಾಯಿ ಇಂದ ಬಂತು. ಅದರಂತೆ ಮಾನ್ಯ ಮುಖ್ಯಮಂತ್ರಿಯವರೂ ಕೂಡ ಬಹಳಷ್ಟು ಹೊಗಳಿಕೊಂಡು ನಾನು ಒಂದು ವರ್ಷ ಮೂರು ತಿಂಗಳುಗಳಲ್ಲಿ ಸಾಕಷ್ಟು ಸಾಧನೆಗಳನ್ನು ಮಾಡಿದ್ದೇನೆಂದು ಹೇಳಿದ್ದಾರೆ. ಆ ಮೂಲಕ ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಂಡರು. ಬಹುಶಃ ಅವರ ಅಂಕಿಅಂಶಗಳನ್ನು ನೋಡಿದರೆ ಅಥವಾ ಅವರು ಕೊಟ್ಟಂಥ ಪುಸ್ತಕಗಳನ್ನಾಗಲೀ, ಪಿಕ್ಚರ್ ಆಫ್ ಕರ್ನಾಟಕ ಬಜೆಟ್ ಆಗಲೀ, ಅಥವಾ ಕೊಟ್ಟಂಥ ಏಕಾನಾಮಿಕ್ ಸರ್ವೇ 1995-96 ಆಗಲೀ, ಮತ್ತು ಅವರದ್ದೇ ಆದಂಥ ಮಂತ್ಲಿರಿವ್ಯೂವ್ ಮೀಟಿಂಗ್ಸ್ ಏನು ಮಾಡುತ್ತಾರೆ ಆ ಮೀಟಿಂಗ್ಸ್‌ನ ರಿವ್ಯೂವ್ ನೋಡಿದಾಗ, ಮತ್ತು ಮುಖ್ಯ ಕಾರ್ಯದರ್ಶಿಯವರು ಮಾಡಿಕೊಟ್ಟಂಥ ರಿವ್ಯೂವ್ ನೋಡಿದಾಗ ಅವರಿಗೆ ಆಕ್ಚುವಲ್ ಪಿಕ್ಚರ್ ಗೊತ್ತಾಗುತ್ತದೆ. ಅಂದರೆ ಎಷ್ಟರಮಟ್ಟಿಗೆ ಅವರು ಹಣವನ್ನು ಒದಗಿಸಿದ್ದಾರೆ, ಎಷ್ಟರಮಟ್ಟಿಗೆ ಅವರು ಖರ್ಚು ಮಾಡಿದ್ದಾರೆ, ಎಷ್ಟರಮಟ್ಟಿಗೆ ಅವರ ಆರ್ಥಿಕ ಗುರಿ ಮತ್ತು ನಮ್ಮ ಫಿಸಿಕಲ್ ಟಾರ್ಗೆಟ್ ಎಂದು ನಾವೇನು ಹೇಳುತ್ತೇವೆ, ಅದನ್ನು ಅಚೀವ್ ಮಾಡಿದ್ದಾರೆಯೇ? ಎಂಬುದು ಅವರಿಗೆ ಗೊತ್ತಾಗುತ್ತದೆ. ಏಕಾನಾಮಿಕಲ್ ಟಾರ್ಗೆಟ್, ಫೈನಾನ್ಶಿಯಲ್ ಟಾರ್ಗೆಟ್ ಮತ್ತು ಫಿಸಿಕಲ್ ಟಾರ್ಗೆಟ್- ಇವುಗಳ ಆಧಾರದ ಮೇಲೆ

ನಮ್ಮ ರಾಜ್ಯವು ಹಿಂದೆ ಹೋಗುತ್ತಾ ಇದೆಯೋ? ಮುಂದೆ ಹೋಗುತ್ತಾ ಇದೆಯೋ ಎಂಬುದನ್ನು ತಿಳಿದುಕೊಳ್ಳಬಹುದೇ ಹೊರತು ಭಾಷಣದಿಂದ ಅಲ್ಲ. ಭಾಷಣ ಮಾಡುವಾಗ ನಾಲ್ಕು ಮಾತುಗಳನ್ನು ಜಾಸ್ತಿ ಆಡಿದರೆ ಅದರಿಂದ ಈ ರಾಜ್ಯದ ರೈತರಿಗೆ, ಬಡವರಿಗೆ, ಕೂಲಿಕಾರರಿಗೆ, ಒಳಿತಾಗುತ್ತದೆ ಎಂದು ಹೇಳಿದರೆ ಅವರ ಪ್ರಗತಿಯಾಗುವುದಿಲ್ಲ. ಅದು ಸಾಧ್ಯವೂ ಇಲ್ಲ. ಇಷ್ಟೊತ್ತು ಬಜೆಟನಲ್ಲಿ ನಾವು ಯಾವುದೇ ಹೊಸ ಟ್ಯಾಕ್ಸನ್ನು ಹಾಕಿಲ್ಲ. ಇದು ಒಂದು ಸಂತೋಷದ ಸಂಗತಿ. ಆದರೆ ಕೆಲವೊಂದು ಟ್ಯಾಕ್ಸನ್ನು ಈ ರ್ಯಾಶನಲೈಸೇಶನ್ ಹೆಸರಿನಲ್ಲಿ ಅಥವಾ ಬೇರೆ ರಾಜ್ಯಗಳಲ್ಲಿ ಏನು ಟ್ಯಾಕ್ಸ ಇದೆ ಅದಕ್ಕೆ ಹೊಂದಾಣಿಕೆ ಮಾಡಿಕೊಂಡಾಗ ನಮ್ಮ ರಾಜ್ಯದಲ್ಲಿ ಅದಕ್ಕೆ ಟ್ಯಾಕ್ಸ ಹೆಚ್ಚಿಗೆ ಇದ್ದ ಕಾರಣ ಅದು ರ್ಯಾಶನಲೈಸೇಶನ್ ಮಾಡಿಕೊಳ್ಳುತ್ತದೆ ಎಂಬ ಒಂದು ನೆಪದಲ್ಲಿ ನೀವು ಎಂಥೆಂಥವುಗಳಿಗೆ ಟ್ಯಾಕ್ಸನ್ನು ಕಡಿಮೆ ಮಾಡಿದ್ದೀರಿ ಅಂದರೆ, ಬಂಗಾರ, ಬೆಳ್ಳಿ, ಗಾಂಜಾ, ಅಫೀಮು ಮುಂತಾದವುಗಳ ಮೇಲೆ ಕಡಿಮೆ ಮಾಡಿದ್ದೀರಿ. ಇನ್ನೊಂದು ಕಡೆ ಕರೋಸಿನನಂಥ ಜನಸಾಮಾನ್ಯರು ಉಪಯೋಗ ಮಾಡಿಕೊಳ್ಳತಕ್ಕಂಥ ಪದಾರ್ಥಗಳ ಬೆಲೆಯನ್ನು ಏರಿಸಿದ್ದೀರಿ.

ಶ್ರೀ ಸಿದ್ದರಾಮಯ್ಯ (ಅರ್ಥಿಕ ಸಚಿವರು) : ಗಾಂಜಾ, ಅಫೀಮು ಮುಂತಾದವುಗಳು ನಿಷಿದ್ಧ ವಸ್ತುಗಳು...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಾಗಾದರೆ ಅದನ್ನು ಬಿಟ್ಟೆ ಬಿಡಬಹುದಿತ್ತು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಅಂದರೆ ಪ್ರಿಯಾರಿಟೀಸನ್ನು ಯಾವುದಕ್ಕೆ ಕೊಡಬೇಕು? ಯಾವುದಕ್ಕೆ ಹೆಚ್ಚು ಮಾಡಬೇಕು? ಯಾವುದಕ್ಕೆ ಕಡಿಮೆ ಮಾಡಬೇಕು? ಯಾವುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು? ಎಂಬಿತ್ಯಾದಿ ಅರಿವನ್ನು ನಾವು ಇಟ್ಟುಕೊಂಡಿದ್ದರೆ ಖಂಡಿತವಾಗಿ ಈ ಕೆಲಸವನ್ನು ಮಾನ್ಯ ಸಿದ್ಧರಾಮಯ್ಯನವರು ಮಾಡುತ್ತಾ ಇರಲಿಲ್ಲ. ಇದಕ್ಕೆ ಯಾರ ಪ್ರಭಾವ ಎಂದು ಹೇಳಬೇಕೆಂಬುದು ನನಗೆ ಗೊತ್ತಿಲ್ಲ. ಆದರೆ ನೀವು ಮಾಡಿದ್ದೇನು? ರಿಯಾಯಿತಿ ಕೊಟ್ಟಿದ್ದರೂ ಎಂಥೆಂಥದಕ್ಕೆ ಕೊಟ್ಟಿದ್ದಾರೆಂದು ಈಗಾಗಲೇ ನಾನು ಹೇಳಿದ್ದೇನೆ. ಅಗರಬತ್ತಿಗೆ ರಿಯಾಯಿತಿ ಬೇಕಾಗಿರಲಿಲ್ಲ. ಅಂದರೆ ಯಾರೂ ಕೇಳಿರಲಿಲ್ಲ ಇಂಥದಕ್ಕೆ ಕೊಡಿ ಅಂತ, ಅಂಥದಕ್ಕೆ ನೀವು ಕೊಟ್ಟಿದ್ದೀರಿ. ಅಡಿಕೆಗೆ ಕೊಟ್ಟಿದ್ದೀರಿ, ಬಿಸ್ಕತಗೆ ಕೊಟ್ಟಿರಿ, ಆಮೇಲೆ ಬೆಣ್ಣೆ ತುಪ್ಪ- ಇವೆಲ್ಲ ಬಡವರಿಗೆ ಅನುಕೂಲವಾಗುವಂಥದ್ದೆ? ಆಮೇಲೆ ಟೇಪರೇಕಾರ್ಡರ್, ಇನಸ್ಟಂಟ್ ಕಾಫಿ. ಯಾವುದನ್ನು ಸಾಮಾನ್ಯವಾಗಿ ಎಲ್ಲಾ ಕಡೆ ಉಪಯೋಗ ಮಾಡುತ್ತಾರೋ ಅದಕ್ಕೇನಾದರೂ ಮಾಡಬೇಕಾಗಿತ್ತು, ಇನಸ್ಟಂಟ್ ಕಾಫಿ ಬೆಣ್ಣೆ ತುಪ್ಪ ಗಾಂಜಾ ಅಫೀಮು ಇವುಗಳ ಮೇಲೆ ಕಡಿಮೆ ಮಾಡಿದರೆ ಇದು ಎಂಥಾ ಪ್ರಗತಿಪರವಾದ ಬಜೆಟ್ ಮತ್ತು ಬಡವರಿಗೆ ಸಹಾಯ ಮಾಡುವ ಅಥವಾ ರೈತಪರವಾದ ಬಜೆಟ್? ಇದಲ್ಲ ರಿಯಾಯಿತಿ ಕೊಟ್ಟಮೇಲ ಏನಾಗುತ್ತದೆಂದರೆ "ದಮ್ಮಾರೋ ದಂ ಮಿಟ್‌ಗಯಾ ಹಂ" ಎಂದು ರೈತರು ಗಾಂಜಾ ತಗೊಂಡು ಕೂರುತ್ತಾರೆ. ಟ್ಯಾಕ್ಸ ಕಮ್ಮಿಮಾಡಿದ್ದೀರಲ್ಲ ಅದಕ್ಕಾಗಿ. ಈ ಗಾಂಜಾ ಎಲ್ಲಾ ಕಡ ಕಳ್ಳವ್ಯಪಾರ ಇರುವುದು ನಿಮಗೆ ಗೊತ್ತಿದೆ. ಅದನ್ನು ಬ್ಲಾಕಮಾರ್ಕೆಟಿನಲ್ಲೇ ಮಾರುವುದು. ಈಗ ಅರ್ಬಾನ್ ಮಾರುವವರೂ ಮನೆಗೆ ಮಾರುತ್ತಾರೆ. ಕಾನೂನಿನ ಎಂದು ಗಾಂಜಾಗೆ ಕಮ್ಮಿ

ಮಾಡಬೇಕಾಗಿರಲಿಲ್ಲ, ಬೆಣ್ಣೆಗೆ, ತುಪ್ಪಕ್ಕೆ, ಇನ್‌ಸ್ಟಂಟ್ ಕಾಫಿಗೆ. ಇದೆಲ್ಲ ನೋಡಿದಾಗ ಇದು ರೈತರ ಪರ ಇದೆ ಎಂದು ಹೇಳೋಣವಾ? ಬಡವರ ಪರ ಇದೆಯೆಂದು ಹೇಳೋಣವೆ? ಸಾಮಾನ್ಯ ಮನುಷ್ಯ ಉಪಯೋಗಿಸುವ ಕೆರೋಸಿನ್‌ಮೇಲೆ ನೀವು ರಿಯಾಯಿತಿ ಕೊಡುವುದಿಲ್ಲ; ಆದರೆ ಲಗ್ಜುರಿ ಅಥವಾ ಬಡವರು ಉಪಯೋಗ ಮಾಡದಿರುವ ಅಂಥವಕ್ಕೆ ನೀವು ರಿಯಾಯಿತಿ ಕೊಡುತ್ತಿದ್ದೀರಿ. ನೀವು ಅನೌನ್ಸ್ ಮಾಡಬೇಕು ಇಲ್ಲಾಂದರೆ ಆಗುತ್ತದೆ ಒಂದು ಕಡ ರ್‍ಯಾಶನಲೈಜೇಶನ್ ಹೆಸರಿನ ಮೇಲೆ ಕೊಡಬಾರದ ವಸ್ತುವಿಗೆ ಕನ್‌ಸೆಷನ್ ಕೊಟ್ಟು ಬಡವ ಬಳಕೆ ಮಾಡುವ ವಸ್ತುಗಳಿಗೆ ರಿಯಾಯಿತಿ ಕೊಡದಿದ್ದರೆ ಖಂಡಿತವಾಗಿ ಇದರಿಂದ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ಮತ್ತು ಇದು ಒಳ್ಳೆಯ ಬಜೆಟ್ ಕೂಡ ಆಗಿರುವುದಿಲ್ಲವೆಂದು ತಮಗೆ ನಾನು ಹೇಳಬಯಸುತ್ತೇನೆ. ಅಲ್ಲದೆ ಇನ್ನೂ ಕೆಲವು ವಸ್ತು, ಕೋಲ್ಡ್ ಡ್ರಿಂಕ್ಸ 15 ಇದ್ದುದು 12, ಒಣದ್ರಾಕ್ಷಿ ಶ್ರೀಗಂಧದೆಣ್ಣೆ ಆಮೇಲೆ ಟಾರ್, ಪೌಡರ್ ಸ್ನೋ ಶಾಂಪೂ- ಇವೆಲ್ಲ ಬಡವರು ಉಪಯೋಗಿಸುತ್ತಾರಾ? ಇವಕ್ಕೂ ಟ್ಯಾಕ್ಸ ಕಮ್ಮಿ. ಇದೆಲ್ಲ ಏನು ತೋರಿಸುತ್ತಿದೆ ಎಂದರೆ ಏಕೋ ಸ್ವಲ್ಪ ನೀವು ಬಡವರ ಕಡೆಗಿದ್ದ ಒಲವನ್ನು ಶ್ರೀಮಂತರ ಕಡೆಗೆ ಪೌಡರ್ ಲಿಪಸ್ಟಿಕ್ ಗಾಂಜಾ ಕಡೆಗಳಿಗೆ ಹೋಗುತ್ತಿದೆ. ಬಡವನಿಗೆ ಸಾಬೂನು ಸಿಗುವುದಿಲ್ಲ. ಅದರ ಮೇಲಿನದನ್ನು ಕಡಿಮೆ ಮಾಡಿ. ಈಗ ಕೆರೋಸಿನ್ ಮೇಲೆ ಬೇಕೋ ಗಾಂಜಾ ಮೇಲೆ ಬೇಕೋ ನೀವೇ ಹೇಳಿ. ಏಕೆಂದರೆ ಇವತ್ತು 46 ಕೋಟಿ ರೂ ಕಡಿಮೆ ಮಾಡಿದ್ದೀರಿ, ಅದಕ್ಕೆ ನಾನು ಏನು ಹೇಳುತ್ತೇನೆ, ಎಲ್ಲಿ ಜನರ ಬೇಡಿಕೆ ಇದೆ, ಎಲ್ಲಿ ಜನ ಎಜಿಟೇಟ್ ಮಾಡುವುದಿಲ್ಲ ಎಲ್ಲಿ ಜನ ಒಪ್ಪಿಕೊಂಡಿದ್ದಾರೆ ಟ್ಯಾಕ್ಸ್‌ನ್ನು ಅಂಥದನ್ನು ಪುನಃ ಕಡಿಮೆ ಮಾಡುವಂತಹ ಅವಶ್ಯಕತೆ ಏನು ಬಂತು? ಸಾಮಾನ್ಯ ಜನ ಮೈಗೆ ಹಚ್ಚುವ ಸಾಬೂನಿಗಿಂತ ಬಟ್ಟೆಗೆ ಹಚ್ಚುವ ಸಾಬೂನ ಕೆರೋಸಿನ್ ಇಂಥವನ್ನು ಬಿಟ್ಟು ಯಾರು ಮಧ್ಯಮವರ್ಗದವರು, ಕೆಳ ಮಧ್ಯಮವರ್ಗದವರು ಮೇಲೆ ಮಧ್ಯಮವರ್ಗ ಅಥವಾ ಮೇಲವರ್ಗದವರು ಉಪಯೋಗಿಸುವ ವಸ್ತುಗಳ ಮೇಲೆ ನೀವು ಟ್ಯಾಕ್ಸನ್ನು ಹಾಕಿದ್ದರೆ ಅಷ್ಟು ನೋವು ಸಾಮಾನ್ಯ ಜನರಿಗಾಗುತ್ತಿರಲಿಲ್ಲ. ನಿಮಗೆ ಗೊತ್ತಿದೆ, ಬಡತನದ ರೇಖೆಗಿಂತ ಕೆಳಗಿರುವವರು ಕರ್ನಾಟಕದಲ್ಲಿ ಇನ್ನೂ 40 ಪರ್ಸೆಂಟ್ ಇದ್ದಾರೆ. ಅಂದಾಗ 40 ಪರ್ಸೆಂಟ್ ಜನ ಪೌಡರ್ ಹಚ್ಚಿಕೊಳ್ಳುತ್ತಾರ? ಉಳಿದ 60 ಪರ್ಸೆಂಟ್ ನಲ್ಲೂ ಸುಮಾರು 27 ಪರ್ಸೆಂಟ್ ಜನ ಪೌಡರ್ ಸ್ನೋ ಅನ್ನುವುದು ಗೊತ್ತಿಲ್ಲ, ಸರ್ವೆ ಸಾಮಾನ್ಯವಾಗಿ ಬಟ್ಟೆಗೆ ಸಾಬೂನು ಉಪಯೋಗ ಮಾಡುವವರು. ಹೀಗೆ ನಮ್ಮ ಪರಿಸ್ಥಿತಿ ಇದ್ದಾಗ 75 ಪರ್ಸೆಂಟ್ ಇಂಥವರಿದ್ದಾಗ ನಾವು ಯಾವ ವಸ್ತುಗಳಿಗೆ ಬಿಡಬೇಕು ಯಾವುದಕ್ಕೆ ಬಿಡಬಾರದು ಎನ್ನುವುದನ್ನು ನೋಡದೆ ಸಾರಾಸಗಟಾಗಿ, ರ್‍ಯಾಶನಲೈಜೇಶನ್ ಹೆಸರಿನಲ್ಲಿ ಟ್ಯಾಕ್ಸ್ ಹಾಕಿದರೆ ಯಾವರೀತಿ ನೀವು ಬಡವರ ಪರವಿದ್ದೀರಿ ಎಂದು ಹೇಳೋಣ? ಇನ್ನೊಂದು ಕಡೆ, ಈ ರಿಯಾಯಿತಿ ಅಲ್ಲದೆ ಆದಾಯ ಹೆಚ್ಚಿಗೆ ಬರುತ್ತದೆಂದು ಹೆಚ್ಚಿಗೆ ಟ್ಯಾಕ್ಸ ಕೆಲವಕ್ಕೆ ಹಾಕಿದ್ದೀರಿ. ಈಗಾಗಲೇ ಅವುಗಳ ಬಗ್ಗೆ ಅವರು ಪ್ರಸ್ತಾಪ ಮಾಡಿದರು. ಯಾವಾಗ ವಿದ್ಯುತ್ ಕೊರತೆ ಇದೆಯೋ ಮತ್ತೆ ತತಕ್ಷಣದಲ್ಲಿ ಅದನ್ನು ಉತ್ಪಾದಿಸುವ ಸಾಧ್ಯತೆಯೂ ಇಲ್ಲವೋ ಆಗ ಸಬ್ಸಿಡಿಯರಿಯಾಗಿ ಕೆರೋಸಿನ್ ಇರಬಹುದು ಡೀಸಲ್ ಇರಬಹುದು ಇಂಥ ವಸ್ತುಗಳಿಗೆ ಯಾವರೀತಿ ಸಹಾಯ ಮಾಡಬೇಕೆಂದು ಯೋಚಿಸಬೇಕಾಗಿತ್ತು. ಈಗಲೂ ತಾವು ಅನೌನ್ಸ್ ಮಾಡುವಾಗ ಈ ರಿಯಾಯಿತಿಗಳನ್ನು ಅನೌನ್ಸ್ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ ವಿದ್ಯುತ್ ಇಲ್ಲಾಂದರೆ ಡೀಸಲ್ ಇಂಜಿನ್ ಉಪಯೋಗ ಮಾಡಿಕೊಳ್ಳುತ್ತಾರೆ. ವಿದ್ಯುತ್ ಕೊಡುತ್ತಿದ್ದರೂ ಟೈಮಿಗೆ

ಸರಿಯಾಗಿ ಕೊಡುತ್ತಿಲ್ಲ. ಇವಲ್ಲ ಇವತ್ತಿದೆ. ಇದನ್ನು ಯೋಚಿಸಿ ಚಿಂತಿಸಿ ನಾವು ಯಾವ್ಯಾವ ವಸ್ತುಗಳ ಮೇಲೆ ಟ್ಯಾಕ್ಸ ಹಾಕಬೇಕೆಂಬ ರ್‍ಯಾಶನಲೈಜೇಶನ್ ಮಾಡಲು ಮಾಡಬೇಕು. ಆದರೆ ಇದು ಉಲ್ಟಾ ಆಗಿದೆ. ಸಾರಾಸಗಟಾಗಿ ಹೇಳಿದರು ಇವರು ಕೇಳಿಕೊಂಡು ಹಾಕಿದ್ದಾರೆ. ಆಮೇಲೆ ಪೇಪರ್ಸ್, ಸ್ಟಾಂಪ್ ಪೇಪರ್ಸ್ ಯಾರು ತೆಗೆದುಕೊಳ್ಳುತ್ತಾರೆ? ಲಕ್ಷಕ್ಕೆ ಒಬ್ಬರೋ ಇಬ್ಬರೋ ಇರಬಹುದು. ಅದಕ್ಕೂ ಕನ್ಸಿಶನ್ ಅಂತ. ಆಮೇಲೆ ತಂಬಾಕು. ನಿಮಗೆ ಗೊತ್ತಿದೆ ಹಳ್ಳಿಗಳಲ್ಲಿ ತಂಬಾಕು ಸೇದುತ್ತಾರೆ, ಇವರು ಸಿಗರೇಟಿಗೆ ಕಮ್ಮಿ ಮಾಡಿ ತಂಬಾಕಿಗೆ ಹೆಚ್ಚು ಮಾಡಿದ್ದಾರೆ. ಹಳ್ಳಿಗಳಲ್ಲಿ ತಂಬಾಕು ಜಾಸ್ತಿ ಸೇದುವವರಿದ್ದಾರೆ, ಆದರೆ ನೀವು ಏನು ಮಾಡಿದಿರಿ ಅಂದರೆ ಪೇಟೆಗಳಲ್ಲಿ ಸ್ವಲ್ಪ ಅನುಕೂಲವಾಗಿರುವವರು ಸಿಗರೇಟ್ ಸೇದುತ್ತಾರೆ. ಅವರಿಗೆ ಟ್ಯಾಕ್ಸ ಕಡಿಮೆ ಮಾಡಿ ತಂಬಾಕಿಗೆ ಟ್ಯಾಕ್ಸ ಜಾಸ್ತಿ ಮಾಡಿದ್ದೀರಿ. ಆರೋಗ್ಯ ದೃಷ್ಟಿ ಇದ್ದರೆ ಪೂರ ತೆಗೆದುಹಾಕಿ ನನ್ನದೇನೂ ಅಭ್ಯಂತರವಿಲ್ಲ. ನೀವು ತೆಗೆದುಹಾಕಿದರೆ ನಿಜವಾಗಿಯೂ ನಿಮ್ಮನ್ನು ಅಭಿನಂದಿಸುತ್ತೇನೆ. ಯಾವುದಕ್ಕೆ ಕೊಡಬೇಕು ಯಾವುದಕ್ಕೆ ಕೊಡಬಾರದು ಎಂದು ನೋಡಬೇಕು. ನೀವು ಕನಸಿಶನ್ ಕೊಟ್ಟರೆ ಇನ್ನೂ ಹೆಚ್ಚಿಗೆ ಮಾಡುತ್ತಾರೆ ಅಂತಲ್ಲ. ಆದರೆ ನೀವು ಎಷ್ಟೇ ಪ್ರಯತ್ನ ಪಟ್ಟು ಅವನ್ನು ನಿಲ್ಲಿಸುವ ಪ್ರಯತ್ನ ಮಾಡಿದರೂ ಕೂಡ ಅದು ಹಳ್ಳಿಗಳಲ್ಲಿಲ್ಲ. ಕೆಲವು ಜನರಂತೂ ಅವರಿಗೆ ಸೇದುವ ಚಟವಿಲ್ಲದಿದ್ದರೂ ಹಲ್ಲು ತಿಕ್ಕುವುದಕ್ಕಾಗದರೂ ತಂಬಾಕು ಬಳಸುತ್ತಾರೆ.

12.30 ಪಿ.ಎಂ.

ಹೀಗೆ ಒಂದು ಕಡೆ ನೀವು ಸಿಗರೇಟಿಗೆ ಕನಸೆಷನ್ ಕೊಡುತ್ತೀರಿ ಇನ್ನೊಂದು ಕಡೆ ತಂಬಾಕು ಮೇಲೆ ಹೆಚ್ಚಿನ ತೆರಿಗೆ ಹಾಕಿದ್ದೀರಿ. ಈ ಒಂದು ಪರಿಸ್ಥಿತಿಗೆ ತಂದಿದ್ದೀರಿ. ಇದು ಟ್ಯಾಕ್ಸೇಷನ್ ಬಗ್ಗೆ ಆದರೆ, ಇನ್ನೂ ಅನೇಕ ವಸ್ತುಗಳ ಮೇಲೆ ತೆರಿಗೆ ಹಾಕಿದ್ದೀರಿ ಪ್ರತಿಯೊಂದನ್ನೂ ಓದಿ ಹೇಳುವುದಿಲ್ಲ. ಯಾವುದಕ್ಕೆ ಹೆಚ್ಚು ತೆರಿಗೆ ಹಾಕಿದ್ದೇವೆ ಯಾವುದಕ್ಕೆ ಕಡಿಮೆ ಮಾಡಿದ್ದೇವೆಂಬ ಲಿಸ್ಟ್ ಅನ್ನೇ ಕೊಟ್ಟಿದ್ದಾರೆ. ಸ್ಯಾಂಪಲ್ ಆಗಿ ಈ ಮಾತನ್ನು ಅವರ ಮುಂದಿಟ್ಟಿದ್ದೇನೆ. ಅದಕ್ಕಾಗಿ ಕೊನೆಗೆ ಉತ್ತರ ಕೊಡುವಾಗ ಕನಿಷ್ಟ ಪಕ್ಷ ಎಲ್ಲಿ ಇಂತಹ ತಾರತಮ್ಯ ಆಗಿದೆ ವ್ಯತ್ಯಾಸಗಳಾಗಿದೆ ಅವನ್ನು ಸರಿಪಡಿಸಿ ಬಡವರಿಗೆ ಅನುಕೂಲವಾಗತಕ್ಕಂತಹ ವಸ್ತುಗಳ ಮೇಲೆ ತೆರಿಗೆ ಕಡಿಮೆ ಮಾಡತಕ್ಕಂಥಾದ್ದನ್ನು ಮಾಡಿ. ಇಲ್ಲಿಯವರೆಗೆ ಯಾರಿಂದಲೂ ಬೇಡಿಕೆ ಬಂದಿಲ್ಲ ಅಥವಾ ಯಾರಿಂದ ಅದರ ಬಗ್ಗೆ ಒತ್ತಾಯ ಬಂದಿಲ್ಲ ಅಂತಹ ವಸ್ತುಗಳ ಮೇಲೆ ಹಾಕಿದಂತಹ ತೆರಿಗೆಯನ್ನು ನೀವು ಕಡಿಮೆ ಮಾಡತಕ್ಕಂಥಾದ್ದು ಸರಿಯಲ್ಲ. ಯಾವ ಕಾರಣಕ್ಕಾಗಿ ಇದನ್ನು ಕಡಿಮೆ ಮಾಡಿದ್ದೀರೋ ಎಂಬ ಸಂಶಯ ಬರುತ್ತಿದೆ. ಜನ ಕೇಳದಿರುವಾಗ ಅವರಿಂದ ಪ್ರತಿಭಟನೆ ಇಲ್ಲದಿರುವಾಗ ರೆಪ್ರಸೆಂಟೇಷನ್ ಇಲ್ಲದೇ ಇದ್ದಾಗ ನೀವು ಮಾಡಿರುವುದು ಸರಿಯಲ್ಲ. ಜನರಿಂದ ಒತ್ತಡ, ಬೇಡಿಕೆ ಇದ್ದಿದ್ದರೆ ನಾವು ಒಪ್ಪಿಕೊಳ್ಳುತ್ತಿದ್ದೆವು. ಹತ್ತಾರು ಅಂತಹ ಐಟಂಗಳು ಇವೆ. ಅದರ ಮೇಲೆ ಕಡಿಮೆ ಮಾಡತಕ್ಕಂಥ ಕೆಲಸ ಮಾಡಿದ್ದೀರಿ. ಬಡವರು ಉಪಯೋಗ ಮಾಡತಕ್ಕಂಥಾದ್ದನ್ನು ಹೆಚ್ಚು ಮಾಡಿದ್ದೀರಿ ಆದ್ದರಿಂದ ಇದನ್ನು ಸರಿಪಡಿಸಬೇಕೆಂದು ವಿನಂತಿಸುತ್ತೇನೆ.

ಶ್ರೀ ಹೆಚ್. ಶಿವಪ್ಪ : ಇಲ್ಲಿ ಯಾರು ಕೇಳುತ್ತಾರೋ ಅವರಿಗೆ ಮಾತ್ರ ಕೊಡಬೇಕು ಉಳಿದವರಿಗೆ ಕಾಮನ್ ಪಲ್ಸಸ್ ಅರ್ಥ ಮಾಡಿಕೊಂಡು ಸರಕಾರ ರಿಯಾಯಿತಿ ಕೊಡುವುದು ತಪ್ಪ. ನೀವು ಹೇಳುತ್ತಿರತಕ್ಕಂಥಾದ್ದು ಎಲ್ಲಿ ಯಾರು ರೆಪ್ರಸಂಟೇಷನ್ ಮೂಲಕ ಕೇಳಲಿಲ್ಲ ಪ್ರತಿಭಟನೆ ಮಾಡಲಿಲ್ಲ ಅಲ್ಲಿ ಕೊಟ್ಟಿದ್ದೀರಿ ಅಂದಾಗ ಅದು ತಪ್ಪು, ಇಲ್ಲಿ ಬೇಡಿಕೆ ಇದೆ ಅಲ್ಲಿ ಕೊಟ್ಟಿಲ್ಲವೆನ್ನುವ ವಾದ

ಪರಿಣಾಮದಲ್ಲವೆಂಬುದನ್ನು ಅಧ್ಯಕ್ಷರ ಮೂಲಕ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಸಿದ್ಧರಾಮಯ್ಯ : VAT ಸಿಸ್ಟಂ ದೇಶದಲ್ಲಿ ಬರಬೇಕು ಎನ್ನುವುದಕ್ಕೆ ಡಾ: ಚೆಲ್ಲಯ್ಯ, ಎಕನಾಮಿಕ್ ಅಡ್ವೈಸರ್ ಸೆಂಟ್ರಲ್ ಗವರ್ನಮೆಂಟ್ ಅವರು ಮತ್ತೆ ಹತ್ತು ಜನ ರಾಜ್ಯಗಳ ಅರ್ಥ ಸಚಿವರ ಒಂದು ಸಮಿತಿಯಾಗಿದೆ ಅವರು ಒಂದು ವರದಿ ಕೊಟ್ಟಿದ್ದಾರೆ. ಯಾವ್ಯಾವ ಹಂತಗಳಲ್ಲಿ ತೆರಿಗೆಗಳು ಇರಬೇಕು ಎಷ್ಟು ಮಾಡಬೇಕು ಫ್ಲೋರ್ ರೇಟ್ಸ್ ಎಷ್ಟು ಇರಬೇಕೆಂದು ಹೇಳಿ ತಿಳಿಸಿದ್ದಾರೆ. ಯಾವ ಕಾರಣಕ್ಕೆ ಅಂದರೆ ಒಂದೊಂದು ರಾಜ್ಯದಲ್ಲಿ ಒಂದೊಂದು ಪದಾರ್ಥಗಳ ಮೇಲೆ ತೆರಿಗೆಗಳು ಇರುತ್ತವೆ ಅಲ್ಲಿ ಡೈವರ್ಷನ್ ಆಫ್ ಟ್ರೇಡ್ ಆಗುತ್ತವೆ. ಒಂದು ರಾಜ್ಯಕ್ಕೆ ಅನುಕೂಲವಾಗುತ್ತದೆ ಇನ್ನೊಂದು ರಾಜ್ಯಕ್ಕೆ ಅನಾನುಕೂಲವಾಗುತ್ತದೆ ಅದರಿಂದ ಸರಕಾರಕ್ಕೆ ಬರತಕ್ಕಂತಹ ಸಂಪನ್ಮೂಲಗಳಲ್ಲಿ ವೈಪರೀತ್ಯಗಳನ್ನು ಕಾಣುತ್ತೇವೆ ಅದಕ್ಕೆ ಇದರ ಬಗ್ಗೆ ಒಂದು ತೀರ್ಮಾನವಾಗಬೇಕೆಂದು ಕೇಂದ್ರದ ಅರ್ಥ ಮಂತ್ರಿಗಳಾದ ಮನಮೋಹನ್ ಸಿಂಗರವರ ಅಧ್ಯಕ್ಷತೆಯಲ್ಲಿ ಅವರೇ ಕರೆದಿರತಕ್ಕಂತಹ ಸಭೆಯಲ್ಲಿ ಅಲ್ಲಿ ಇದು ಆಗಿದೆ. ಅಲ್ಲಿ ಒಂದು ಶಿಫಾರಸ್ಸು ಇದೆ. ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಅಲ್ಲಿ ಬಂದಿರತಕ್ಕಂತಹ ಶಿಫಾರಸ್ಸುಗಳು ಬೇರೆ ಬೇರೆ ರಾಜ್ಯಗಳಲ್ಲಿರತಕ್ಕಂತಹ ಪದಾರ್ಥಗಳ ತೆರಿಗೆಗಳು ಇದನ್ನು ನೋಡಿ ಒಂದು ವ್ಯಾಟ್ ಸಿಸ್ಟಂ, ವ್ಯಾಲ್ಯೂ ಆಡೆಡ್ Tax ಸಿಸ್ಟಂನ್ನು ತರಬೇಕು ಎನ್ನುವುದು ಇಡೀ ದೇಶದಲ್ಲಿ ಚರ್ಚೆಯಾಗುತ್ತಿರುವುದರಿಂದ ಅದಕ್ಕನುಗುಣವಾಗಿ ಕರ್ನಾಟಕ ರಾಜ್ಯದಲ್ಲಿ ಪ್ರಥಮ ಬಾರಿಗೆ ಇಂತಹ ಒಂದು ಸುಧಾರಣೆಯನ್ನು ತಂದಿದ್ದೇವೆ ಎಂಬುದನ್ನು ತಮ್ಮ ಗಮನಕ್ಕೋಸ್ಕರ ತರಲಿಕ್ಕೆ ಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಶಿವಪ್ಪನವರು ಕೇಳಿದರು. ಎಜಿಟೇಷನ್ ಇದ್ದರೆ ಮಾಡಬೇಕು ಎನ್ನತಕ್ಕಂಥಾದ್ದು ಇಲ್ಲ. ಎಜಿಟೇಷನ್ ಇಲ್ಲದಿದ್ದರೂ ಮಾಡಿ ಅದು ನ್ಯಾಯ ಸಮ್ಮತವಾಗಿ ರಾಜ್ಯದ ರೈತರ ಹಿತದೃಷ್ಟಿಯಿಂದ ಇದ್ದರೆ ಇರಲಿ. ಪೇಜರ್ ಯಾರಿಗೆ ಬೇಕು? ಪಂಚತಾರಾ ಹೋಟೆಲುಗಳಿಂದ 15 ಪರ್ಸೆಂಟ್ ಇದ್ದುದು 12 ಮಾಡಿದ್ದೀರಿ. ಸಿಗರೇಟಿಗೆ 2.5 ಇದ್ದುದ್ದನ್ನು 2 ಮಾಡಿದ್ದಾರೆ. ಹೋಟೆಲಿನಲ್ಲಿ ಆಹಾರ ಮತ್ತು ತಿಂಡಿಗೆ ಕಡಿಮೆ ಮಾಡಿದ್ರೆ ಪರವಾಗಿಲ್ಲ. ಆದರೆ ಫೈವ್ ಸ್ಟಾರ್ ಹೋಟೆಲಿನಲ್ಲಿರತಕ್ಕಂಥಾದ್ದಕ್ಕೆ 15 ರಿಂದ 12 ಮಾಡತಕ್ಕಂಥಾದ್ದು ಸರಿಯಲ್ಲ.

ಶ್ರೀ ಹೆಚ್. ಶಿವಪ್ಪ : ಇಂಥಾದ್ದಕ್ಕೆ ಮಾಡಿಲ್ಲ ಇದಕ್ಕೆ ಮಾಡಿ ಎಂದು ಕೇಳಬೇಕೇ ವಿನಃ ಅದಕ್ಯಾಕೆ ಮಾಡಿದ್ದೀರಿ ಎಂದು ಹೇಳುವುದು ಪ್ರಚೋದನೆ ಮಾಡಿದ ಹಾಗಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಾರಾಸಗಟಾಗಿ ಎಲ್ಲವೂ ಚೆನ್ನಾಗಿಲ್ಲವೆಂದು ನಿಮ್ಮ ಹಾಗೆ ಹೇಳಲಾಗುವುದಿಲ್ಲ. ಆದರೆ ಎಲ್ಲಿ ಹಣ ಬರುತ್ತದೆ, ಎಲ್ಲಿ ಅನಾವಶ್ಯಕವಾಗಿ ಅವರಿಂದ ಕಿತ್ತುಕೊಳ್ಳಬೇಕೆಂದು ಪ್ರಯತ್ನ ಮಾಡುತ್ತೇವೆ ಅದು ಸರಿಯಲ್ಲ. ಆ ದೃಷ್ಟಿಯಿಂದ ಎಲ್ಲಿ ಹೇರಬಹುದು ಎಲ್ಲಿ ಎಕ್ಸೆಂಪ್ಷನ್ ಮಾಡಬಹುದು ಅಥವಾ ಎಲ್ಲಿ ತೆರಿಗೆ ಹೆಚ್ಚಿಯಾಗಿ ಹಾಕಬಹುದು ಎಲ್ಲಿ ಸಾಧ್ಯತೆ ಇದೆ ಅಲ್ಲಿ ಹಾಕಿ. ಆ ದೃಷ್ಟಿಯಿಂದ ಹೇಳಿದನೇ ಹೊರತಾಗಿ ಬೇರೇನೂ ಇಲ್ಲ. ನೀವು ಇನ್ನೊಂದು ಅರ್ಥದಲ್ಲಿ ತಿಳಿದುಕೊಂಡರೆ ಅದು ಸರಿಯಲ್ಲ. ತೆರಿಗೆ ಇಲ್ಲದೇ ಯಾವುದೇ ಸರಕಾರ ನಡೆಯುತ್ತದೆಯೇ? ಇಂತಹ

ತಾರತಮ್ಯಗಳನ್ನು ಸರಿಪಡಿಸಬೇಕು ಇದರಲ್ಲಿ ಸಾಕಷ್ಟು ವ್ಯತ್ಯಾಸಗಳಾಗಿವೆ, ಬಡವರಿಗೆ ಅನುಕೂಲವಾಗತಕ್ಕಂಥ ಮತ್ತು ಮಿಡ್ಲ ಕ್ಲಾಸನವರು ಉಪಯೋಗ ಮಾಡತಕ್ಕಂಥ ಕೆಲವು ವಸ್ತುಗಳ ಮೇಲೆ ಹೆಚ್ಚಿನ ಭಾರವನ್ನು ಹಾಕಿದ್ದಾರೆ ಅದನ್ನು ಕಡಿಮೆ ಮಾಡಬೇಕು. ಹೌಸಿಂಗ್ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಕೂಡ ಬೆನ್ನು ಚಪ್ಪರಿಸಿಕೊಂಡು ನಾನು 30 ಸಾವಿರ ಮನೆಗಳನ್ನು ಮಾಡಿದ್ದೇವೆ ಹಿಂದೆಂದೂ ಮಾಡಲಿಲ್ಲವೆಂದು ಹೇಳಿದರು. ಅವರ ಗಮನಕ್ಕೆ ಅವರದ್ದೇ ಆದಂತಹ ವರದಿಯನ್ನು ನಾನು ತರುತ್ತಿದ್ದೇನೆ. ಯಾವ್ಯಾವ ವರ್ಷಗಳಲ್ಲಿ ಎಷ್ಟೆಷ್ಟು ಇವರು ಹೌಸ್ ಸೈಟ್ಸ್ ಕೊಟ್ಟಿದ್ದಾರೆ ಮನೆಗಳನ್ನು ಎಷ್ಟು ಕಟ್ಟಿದ್ದಾರೆ, ಹಣ ಎಷ್ಟು ಕೊಟ್ಟಿದ್ದಾರೆ ಎನ್ನುವುದು ಅವರ ಪುಸ್ತಕದಲ್ಲಿ ಇದೆ. ಆದರೆ ನನಗೆ ತಪ್ಪು ದಾರಿಗೆ ಎಳೆಯತಕ್ಕಂತಹ ಪ್ರಯತ್ನ ನಡೆಯಿತು. ನಾನು ಕೇಳಿದಾಗ ಉತ್ತರ ಹೇಳಿದರು ಅವನ್ನು ಅಲ್ಲಿಗೇ ಮುಗಿಸಿದರು. ಬಡವರಿಗೆ ನಾವು ನಿವೇಶನ ಕೊಡುತ್ತೇವೆಂದು ಹೇಳಿ ಇವರು 1995-96ಕ್ಕೆ ಟಾರ್ಗೆಟ್ ಹಾಕಿಕೊಂಡಿದ್ದು ಒಂದು ಲಕ್ಷ. 1992-93ರಲ್ಲಿ 1,57,213 ನಿವೇಶನ ಕೊಟ್ಟರೆ, 93-94ರಲ್ಲಿ 81 ಸಾವಿರ ನಿವೇಶನ ಕೊಟ್ಟರೆ, 94-95ರಲ್ಲಿ1,11,940 ನಿವೇಶನ ಕೊಟ್ಟರೆ, 95-96ರಲ್ಲಿ ಡಿಸೆಂಬರ್ ಕೊನೆವರೆಗೆ 9,897 ನಿವೇಶನ ಕೊಟ್ಟಿದ್ದಾರೆ. ನೀವು ಕೊಟ್ಟಂತಹ ಪುಸ್ತಕದಲ್ಲಿ ಇರುವುದನ್ನೇ ನಾನು ಹೇಳುತ್ತಿದ್ದೇನೆ. ಇದನ್ನು ನಾವು ಪ್ರಿಂಟ್ ಮಾಡಿ ಕೊಟ್ಟರು. ಇವರ ಪ್ರಚಾರ ಏನೆಂದರೆ ಊರು ತುಂಬಾ ತಿಂಗಳಿಗೊಂದು ಪ್ರತಿ ಸಲ ನೋಡುತ್ತೇನೆ, ತಿಂಗಳಿಗೊಂದು ವಸತಿ ಮಂತ್ರಿಗಳ ಹೇಳಿಕೆ ಇರುತ್ತದೆ. ಲಕ್ಷಾಂತರ ನಿವೇಶನ ಕೊಡುತ್ತೇವೆ, ಬಡವರಿಗೆ ಅನುಕೂಲ ಮಾಡಿಕೊಡುತ್ತೇವೆಂದು ಇದನ್ನು ಮಾಡಿದ್ದು ತಪ್ಪಾ, ಹಮಾಲರಿಗೆ ಇಷ್ಟು ಕೊಡುತ್ತೇವೆ, ಹರಿಜನಗಿರಿಜನರಿಗೆ ಇಷ್ಟು ಕೊಡುತ್ತೇವೆ ಎಂದು ಹೇಳಿದ್ದೇ ಹೇಳಿದ್ದು. ಇದು ಯಾರ ಪುಸ್ತಕ ನಮ್ಮದಾ? ನೀವೇ ಪ್ರಿಂಟ್ ಮಾಡಿ ಸಪ್ಲೈ ಮಾಡಿದ್ದೀರಿ. ಹೌಸ್ ಸೈಟ್ಸ್ ಸ್ಕೀಮ್ ಬಹಳ ಕಷ್ಟ ಪಟ್ಟು ಒಂದು ವರ್ಷದಲ್ಲಿ ನವೆಂಬರಗೆ ಒಂದು ವರ್ಷವಾಯಿತು. ಇವರು ಮನೆ ಕಟ್ಟಿದ್ದು ಇವರು ಭಾಷಣ ಮಾಡಿದ್ದೇ ಮಾಡಿದ್ದು. 95-96ನೇ ಡಿಸೆಂಬರಿಗೆ ಇವರ ಟಾರ್ಗೆಟ್ ಇರತಕ್ಕಂಥಾದ್ದು 1,25,000 ನೀವು ಕಟ್ಟಿಸಿದ್ದು 30,883 ಆಶ್ರಯ, ಇಂದಿರಾ ಆವಾಸ್ ಇವೆಲ್ಲಾ ಸೇರಿ ಇಷ್ಟು ಆಗಿದೆ. ಜನವರಿಯ ಫಿಗರ್ಸ್ ಕೊಡಲೇ ಅರ್ಬನ್ ಏರಿಯಾದಲ್ಲಿ 95-96 ರಲ್ಲಿ 2073, ಇವರ ಟಾರ್ಗೆಟ್ ಇರುವುದು ಸುಮಾರು 50 ಸಾವಿರ ಆದರೆ ಇವರು ಕಟ್ಟಿಸಿದ್ದು 2073. ಇದು ಇವರ ಸಾಧನೆ. ಇಲ್ಲಿಯವರೆಗೆ ಏನು ಮಾಡಿದ್ದೇವೆ ಅದನ್ನು ಹೇಳಿ ಹಿಂದಿನದ್ದು ಏಕೆ ಹೇಳುತ್ತೀರಿ ಎಂದು ಮಾನ್ಯ ನಾಗೇಗೌಡರು ಹೇಳಿದರು. ಮಾನ್ಯ ನಾಗೇಗೌಡರ ಗಮನಕ್ಕೆ ತರುತ್ತಿದ್ದೇನೆ. ಲೇಟೆಸ್ಟ ಹೇಳುತ್ತೇನೆ, ಏಕೆಂದರೆ ಇದು ಬಹಳಷ್ಟು ಪ್ರಚಾರ ಕೂಡ ಕೊಟ್ಟಿದ್ದೀರಿ. ಮತ್ತು ನಿನ್ನೆಯೂ ಬಹಳಷ್ಟು ಹೇಳಿದರು. ನಿಮ್ಮ ಟಾರ್ಗೆಟ್ 94-95ರಲ್ಲಿ ಡಾ॥ ಅಂಬೇಡ್ಕರ್ ಜಯಂತಿಯ 10,830 ಮನೆಗಳನ್ನು ಮುಗಿಸಬೇಕು ಎಂದು ಇತ್ತು. ಜನವರಿ ಎಂಡ್‌ವರೆಗೆ ಮುಗಿಸಿದ್ದು ಎಷ್ಟು ಎಂದರೆ ಮೂರು ಸಾವಿರ. ಆಮೇಲೆ 1993-94ರಲ್ಲಿ ಮನೆಗಳು ಟಾರ್ಗೆಟ್ ಇದ್ದದ್ದು 900. ಮುಗಿಸಿದ್ದು 200. ಆಮೇಲೆ 1995-96ರಲ್ಲಿ ನೀವು ಹಾಕಿಕೊಂಡಿರುವ ಟಾರ್ಗೆಟ್ 25 ಸಾವಿರ ಮನೆ. ಅದರಲ್ಲಿ ನೀವು ಕಟ್ಟಿಸಿದ್ದು ಎಷ್ಟು ಎಂದರೆ 41 ಮನೆಗಳು. ಇದು ಜನವರಿ ಎಂಡ್. ಬೇಕಾದರೆ ಇದನ್ನು ತೆಗೆದುಕೊಂಡು ನೋಡಿ. ವಾಪಸ್ ಕೊಡುತ್ತೇನೆ ಎಂದರೆ ಕೊಡಿ. ಇದು ನಿಮ್ಮದೇ. ರಿವ್ಯೂ ಮಾಡಿದ್ದು

29ನೇ ಫೆಬ್ರವರಿಯಲ್ಲಿ. ಲೇಟೆಸ್ಟ್ ಕೇಳಿದರಲ್ಲಾ ನಾಗೇಗೌಡರೇ, 25 ಸಾವಿರದಲ್ಲಿ 41 ಮನೆ ಮಾಡಿದ್ದುದು. ಅದಕ್ಕೆ ಇಂಥ ಬೋಗಸ್ ಪ್ರೊಪಗ್ಯಾಂಡಾ ಕೊಟ್ಟು ಜನರನ್ನು ಮೋಸ ಮಾಡುವಂಥದ್ದು, ನಿಮ್ಮ ಅಂಕಿಸಂಖ್ಯೆಗಳನ್ನು ನೀವು ನೋಡುವುದಿಲ್ಲ. ನೀವು ಮಾಡಿದಂಥ ಕೆಲಸದ ಬಗ್ಗೆ ನಿಮಗೇ ಆಸಕ್ತಿ ಇಲ್ಲ. ಏನು ರೆವ್ಯೂ ಮಾಡುತ್ತೀರಿ ನೀವು. ಪ್ರಗತಿ ಮಾಡಿದ್ದೇವೆ ಎಂದು ಭಾಷಣಗಳನ್ನು ಕೊಡುವುದು. ಅದರ ಬಗ್ಗೆ ಚಿಂತನೆ ಇಲ್ಲ. ಮತ್ತೇನು ಕೊಟ್ಟಿದ್ದಾರ ಎಂದರೆ ಮೊನ್ನೆ ರೆವ್ಯೂ ಮೀಟಿಂಗನಲ್ಲಿ ಈ ಪ್ರಗತಿಯು ಏಕೆ ಆಗಿಲ್ಲ ಎಂದರೆ ಸಂಬಂಧಪಟ್ಟ ಸಚಿವರು ಎಲ್ಲಾ ಜಿಲ್ಲೆಗಳಿಗೆ ಹೋಗಿ ರೆವ್ಯೂ ಮಾಡಿ ಯಾವ ರೀತಿಯಾಗಿ ಪ್ರಗತಿ ಕುಂಠಿತವಾಗಿದೆ, ಅದನ್ನು ಚುರುಕುಗೊಳಿಸಬೇಕು ಎನ್ನುವುದರ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಲಾಯಿತು ಎಂದು ಹೇಳಿ ಹೇಳುವುದು. ಅಂದರೆ ಈಗ ಮಾರ್ಚಿಯಲ್ಲಿ ಹೋಗಿ ನಿರ್ಣಯ ತೆಗೆದುಕೊಂಡು ಹಣ ಖರ್ಚುಮಾಡುತ್ತೀರಿ 1995-96ರದು. ಅಂದರೆ ಎಷ್ಟರ ಮಟ್ಟಿಗೆ ತಮಗೆ ಬಡವರ ಬಗ್ಗೆ ಆಸಕ್ತಿ ಇದೆ? ಯಾವುದೇ ಅವಧಿಯನ್ನು ತೆಗೆದುಕೊಳ್ಳಿ. ಅದು ಇಂದಿರಾ ಆವಾಸ್ ಇರಲಿ, ಸೈಟ್ಸ್ ಇರಲಿ, ಈ ಒಂದು ಗತಿಯಲ್ಲಿ ತಾವು ಹೋಗುವಾಗ ನಾವು ಬಹಳ ಪ್ರಗತಿ ಮಾಡಿದ್ದೇವೆ, ಸಾಕಷ್ಟು ಮುಂದೆ ಹೋಗಿದ್ದೇವೆ ಎಂದು ಹೇಳುವಂಥದ್ದು ಎಷ್ಟರ ಮಟ್ಟಿಗೆ ಇದು ಸಮಂಜಸ ಇದೆ. ಮತ್ತೆ ಮೊನ್ನೆ ಬಹಳ ಚಪ್ಪಾಳೆ ಬಡಿದಿರಿ ಮುಖ್ಯಮಂತ್ರಿಗಳು ಹೇಳುವಾಗ. ಅದಕ್ಕಾಗಿ ನಿಮ್ಮ ಸರ್ಕಾರನೋಡಿಕೊಳ್ಳುತ್ತಾ ಕುಳಿತಿತ್ತು. ಮತ್ತೆ ಏಕೆ ಇಷ್ಟು ಹೇಳುತ್ತೀರಿ. ನಾವು ಅದು ಮಾಡಿದ್ದೇವೆ, ಇದು ಮಾಡಿದ್ದೇವೆ ಎಂದು. 50 ಕೋಟಿ ರೂಪಾಯಿಯಲ್ಲಿ 25 ಕೋಟಿ ರಿಲೀಸ್ ಮಾಡಿ ಎಷ್ಟು ಖರ್ಚಾಗಿದೆ ಎನ್ನುವುದು ಕೂಡ ಅಂಕಿಸಂಖ್ಯೆ ಲೇಟೆಸ್ಟ್ ತರಲಿಲ್ಲ. ಆದರೆ ಎಂಎಲ್‌ಎಗೆ ಹಂಚಬೇಕೋ, ತಾಲ್ಲೂಕು ಪಂಚಾಯಿತಿಗೆ ಹಂಚಬೇಕೋ ಅಥವಾ ನಮ್ಮ ಗ್ರಾಮಪಂಚಾಯಿತಿಗೆ ಹಂಚಬೇಕೋ ಎನ್ನುವುದಕ್ಕೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ನಿಮಗೆ ಒಂದು ವರ್ಷ ಎರಡು ತಿಂಗಳಾಗಬೇಕಾದರೆ ಎಂಥ ಆಡಳಿತ ಕೊಡುತ್ತಿದ್ದೀರಿ ನೀವು ನೋಡಿ. ಎಷ್ಟು ಒಳ್ಳೆಯ ಆಡಳಿತ ನಿಮ್ಮದು ಇದೆ? ಎಷ್ಟರಮಟ್ಟಿಗೆ ನೀವು ಕೆಲಸ ಮಾಡುತ್ತಿದ್ದೀರಿ. ಅದಕ್ಕಾಗಿ ನಿಮಗೆ ನೈತಿಕ ಹಕ್ಕೇ ಇಲ್ಲ. ನಾವು ಕೆಲಸ ಮಾಡಿದ್ದೇವೆ, ಬಡವರ ಪರ ಇದ್ದೇವೆ, ನಿಮಗೆ ಬಡವರ ಬಗ್ಗೆ ಅನುಕಂಪ ಇದ್ದಿದ್ದರೆ ಒಂದು ಮಹತ್ತರವಾದ ಪಾಲಿಸಿಯನ್ನು ಘೋಷಣೆ ಮಾಡಿದ್ದನ್ನು ಅದನ್ನು ಅನುಷ್ಠಾನಕ್ಕೆ ತರುವ ಶಕ್ತಿ ನಿಮ್ಮಲ್ಲಿ ಇಲ್ಲ ಎಂದರೆ ನೀವು ಏಕೆ ಅಧಿಕಾರದಲ್ಲಿ ಇರಬೇಕು?

ಶ್ರೀ ಸಿದ್ಧರಾಮಯ್ಯ : ನೀವು ಐದು ವರ್ಷ ಇದ್ದಿರಲ್ಲಾ, ನೀವು ಏನೇನು ಮಾಡಿದಿರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲಿದೆ ತೆಗೆದುಕೊಳ್ಳಿ. ಓದಿ. ಈಗ ಅವರು ಉತ್ತರ ಕೊಡುವಾಗ ಕೊಡಲಿ. ನಾನು ಇಲ್ಲಿ ಎಕನಾಮಿಕ್ ಸರ್ವೆ ತೆಗೆದುಕೊಂಡು ಹೇಳುತ್ತಿದ್ದೇನೆ. ಅದನ್ನು ಓದಿ ಹೇಳುತ್ತಿದ್ದೇನೆ.

ಶ್ರೀ ಸಿದ್ಧರಾಮಯ್ಯ : ಐದು ವರ್ಷದಲ್ಲಿ ಇವರು ಕಂಪ್ಲೀಟ್ ಮಾಡಿದ್ದುದು 79 ಸಾವಿರ ಮನೆಗಳು. ಹತ್ತು ಲಕ್ಷ ಮನೆಗಳನ್ನು ಕಂಪ್ಲೀಟ್ ಮಾಡುತ್ತೇವೆ ಎಂದು ಹೇಳಿದ್ದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಎಷ್ಟೋ ಹೇಳಿದ್ದೇವೆ, ಆದರೆ ನಿಮಗಿಂತ ನಾವು

ಹೆಚ್ಚಿನ ಗುರಿ ಸಾಧನೆ ಮಾಡಿದ್ದೇವೆಯೋ ಅಥವಾ ಇಲ್ಲವೋ ಎಂದು ನೋಡಿ ಪುಸ್ತಕವನ್ನು ನೀವೇ ಪ್ರಿಂಟ್ ಮಾಡಿದ್ದೀರಿ. ನೀವೇನು ಹೇಳಿದರಲ್ಲ, ಅದನ್ನು ಎಲ್ಲಿ ಮಾಡಿದ್ದೀರಿ ಹೇಳಿ. ಇನ್ನು ನಾಲ್ಕು ವರ್ಷ ಇರುತ್ತದಲ್ಲಾ ಮಾಡಿಕೊಳ್ಳಿ. ಜನ ಇಟ್ಟರೆ? ಇವರು ಹೇಳುವುದು ಒಂದು, ಮಾಡುವುದು ಒಂದು ಎನ್ನುವುದಕ್ಕೆ ಇದೊಂದು ಉದಾಹರಣೆ. ಇನ್ನೊಂದು ಹೌಸಿಂಗ್ ಪ್ರೋಗ್ರಾಮ್ ಈ ರೀತಿಯಾಗಿ ಅವರು ಮಾಡಿದರು. ಟ್ಯಾಕ್ಸೇಷನ್ ಆ ರೀತಿಯಾಗಿ ಸಿದ್ಧರಾಮಯ್ಯನವರು ಮಾಡಿದರು. ಈಗ ನೀರಾವರಿ ನೀರಾವರಿ ಬಗ್ಗೆಯಂತೂ ಹೇಳಿದ್ದೇ ಹೇಳಿದ್ದು. ಅದರಲ್ಲಿ ವಿಶೇಷವಾಗಿ ನಮ್ಮ ಅಪ್ಪರ್ ಕೃಷ್ಣಾ ಪ್ರಾಜೆಕ್ಟ ಅಂತೂ ಮಾನ್ಯ ಮುಖ್ಯಮಂತ್ರಿಯವರ ಮೆಚ್ಚುಗೆಗೆ ಪಾತ್ರವಾದಂಥ ಒಂದು ವಿಷಯ. ಅವರಿಗೆ ಬೇಕಾದಂಥ ವಿಷಯ. ಏಕೆಂದರೆ ಇದೇ ಒಂದು ಸಬ್ಜೆಕ್ಟ ಮೇಲೆ ಅವರು ನನಗೆ ಮೂರು ಕೋಟಿ ರೂಪಾಯಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಕೊಡಲಿಲ್ಲ ಎಂದು ಹೇಳಿ ರಾಜೀನಾಮೆ ಕೊಟ್ಟು ಆ ಸರ್ಕಾರವು ಮುಂದೆ ಹೋಗುತ್ತದೆ ಎಂದು ಅವರಿಗೆ ಗೊತ್ತಿತ್ತು. ಮೂರು ತಿಂಗಳು, ಆರು ತಿಂಗಳು ಮುಂಚೆಕೊಟ್ಟು ನಾನು ನೀರಾವರಿಗೆ ಹೆಚ್ಚಿನ ಹಣ ಕೊಟ್ಟಿಲ್ಲ ಎಂದು ಹೇಳಿ ರಾಜೀನಾಮೆಯನ್ನು ಕೊಟ್ಟರು. ಆದರೆ ಇದೇ ಸದನದಲ್ಲಿ ಏನು ಹೇಳಿದರು, ಎರಡು ಸಾವಿರ ಇಸವಿಯೊಳಗೆ ಅಪ್ಪರ ಕೃಷ್ಣಾ ಪ್ರಾಜೆಕ್ಟನ್ನು ಕಂಪ್ಲೀಟ್ ಮಾಡುತ್ತೇನೆ, ಒಂದು ವೇಳೆ ಮಾಡದಿದ್ದರೆ ನಾನು ಈ ಸ್ಥಾನದಲ್ಲಿ ಇರುವುದಿಲ್ಲ. ಇದು ಒಂದು. ಎರಡನೆಯದು ಏನು ಹೇಳಿದರು, ಪ್ರತಿ ವರ್ಷ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇನೆ ಎಂದು. ಸಾವಿರಕೋಟಿ ರೂಪಾಯಿ ಎಲ್ಲಿಂದ ತರುತ್ತೀರಿ ಹೇಗೆ ತರುತ್ತೀರಿ. ``I will beg, borrow or steal" ಎಂದು ಹೇಳಿದ ಎಲ್ಲಾ ವಾರ್ಡಗಳಿವೆ. ಈ ಎಲ್ಲಾ ಪದಗಳನ್ನು ಉಪಯೋಗ ಮಾಡಿಕೊಂಡು ಟಾರ್ಗೆಟ್ ಫಿಕ್ಸ್ ಮಾಡಿ ಒಂದು ಸಾವಿರ ಕೋಟಿ ರೂಪಾಯಿ ಎಂದು ನಿಗದಿ ಮಾಡಿದರು. ಏನಾಯಿತು? ಈಗ ಫೆಬ್ರವರಿ ಎಂಡ್‌ವರೆಗೆ ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ನಲ್ಲಿ ನೀವು ಖರ್ಚು ಮಾಡಿದ್ದು ಕೇವಲ 378 ಕೋಟಿ ರೂಪಾಯಿ ಮಾತ್ರ. ಸಾವಿರ ಕೋಟಿ ರೂಪಾಯಿ ಎಲ್ಲಿ? ಮೂರ ನೂರ ಎಪ್ಪತ್ತೆಂಟು ಕೋಟಿ ಎಲ್ಲಿ? ಮತ್ತೆ ನೀವು ಈಗ ಏನು ಹೇಳುತ್ತಿದ್ದೀರಿ ಎಂದರೆ ಈ ವರ್ಷವೂ ಕೂಡ ಸುಮಾರು ಸಾವಿರ ಕೋಟಿ ರೂಪಾಯಿಗಳೂ ಮೇಲೆ ಖರ್ಚು ಮಾಡುತ್ತೇವೆ ಎಂದು ಹೇಳುತ್ತಿದ್ದೀರಿ. ಆದರೆ ಬಜೆಟ್ ಪ್ರಾವಿಷನ್ ಎಲ್ಲಿದೆ? ನಮಗೆ ಯಾವ ರೀತಿಯಾಗಿ ಕಾವೇರಿ ಪ್ರಾಜೆಕ್ಟ್‌ಗಳಿಗೆ 300 ಕೋಟಿ ರೂಪಾಯಿಗಳನ್ನು ತಾವು ತೋರಿಸಿದ್ದೀರಿ. ಇದರಲ್ಲಿ ತೋರಿಸಿದ್ದು ಎಷ್ಟು? ಕೃಷ್ಣಾ ಜಲಭಾಗ್ಯ ನಿಗಮ ಎಂದು ಅದು ಹೇಗೆಂದರೆ ಎಂಟು ನೂರು ಕೋಟಿ ಕಲೆಕ್ಟ ಮಾಡುತ್ತೇನೆ ಎಂದು ಹೇಳಿದರಲ್ಲ, ಕಲೆಕ್ಟ್ ಮಾಡಿದ್ದು ಎಷ್ಟೆಂದರೆ 182 ಕೋಟಿ. 182 ಕೋಟಿ ಇವರ ಬಜೆಟ್ ಪ್ರಾವಿಜನ್ ಇರುವುದು 200 ಕೋಟಿ. ಅದು ಎರಡೂ ಸೇರಿಸಿದರೆ 382 ಕೋಟಿ ರೂಪಾಯಿಗಳಲ್ಲಿ ಈಗ 378 ಕೋಟಿ ಇಲ್ಲಿಯವರೆಗೆ ಖರ್ಚಾಗಿದೆ. ಅಂದರೆ ಸಾವಿರ ಕೋಟಿ ರೂ.ಗಳು ಏನಾಯಿತು? ಏಳು ನೂರು ಕೋಟಿಗೆ ಕೈಕೊಟ್ಟಾಯಿತೇ? ಆಮೇಲೆ ಏನು ಹೇಳಿದರು ಮೊನ್ನೆ, ಜೂನ್ ಎಂಡವರೆಗೆ ನಾನು ಒಂದು ಸಾವಿರ ಕೋಟಿ ಖರ್ಚು ಮಾಡುತ್ತೇನೆ, ಮಾರ್ಚ ಎಂಡಗೆ ಆರು ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇನೆ ಎಂದು ಹೇಳುದಿರಿ. ನಾವು ಎಷ್ಟು ಹೇಳಿದ್ದೇವೊ ಅದರಲ್ಲಿ 75 ಪರಸೆಂಟಾದರೂ ಖರ್ಚು ಮಾಡುವ ಪ್ರಾಮಾಣಿಕ ಪ್ರಯತ್ನ

ಮಾಡಿದ್ದೇವು ಆದರೆ ನೀವು ಹೇಳುವುದು ಒಂದು ರೂಪಾಯಿ, ಖರ್ಚು ಮಾಡುವುದು ಒಂದು ಪೈಸೆಯಷ್ಟು. ನಾವು ಒಂದು ರೂಪಾಯಿ ಎಂದು ಹೇಳಿದರೂ 75 ಪೈಸೆಯಷ್ಟು ಕೆಲಸ ಮಾಡಿದ್ದೇವೆ. ನೀವು ನಮ್ಮ ಟಾರ್ಗೆಟ್ ನೋಡಿ. ಅದಕ್ಕೆ ಇವತ್ತಿನ ದಿವಸ ಏನಾಗಿದೆ ಆರು ನೂರು ಕೋಟಿ ಮಾರ್ಚಿಗೆ ಎಂದಿರಿ. ಆದರೆ ಇಲ್ಲಿಯವರೆಗೆ ನಾನು ಹೇಳಿದಂತೆ ಫೆಬ್ರವರಿಯವರೆಗೆ 378 ಆಗಿದೆ. ಅಂದರೆ ಇನ್ನೂ ಒಂದು ತಿಂಗಳಲ್ಲಿ 200 ಕೋಟಿಯ ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ. ಪ್ರತಿದಿವಸ ಹತ್ತು-ಹತ್ತು ಕೋಟಿಯಂತೂ ಖರ್ಚಾಗುವುದಿಲ್ಲ. ತಾವು ತಗೆದುನೋಡಿ. ಎರಡು ಮೂರು ಸ್ಟೇಟಮೆಂಟ್ ಇವೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ಬಜೆಟನಲ್ಲಿ ಹೇಳಿರುವುದು 200 ಕೋಟಿ ರೂಪಾಯಿ, 300 ಕೋಟಿ ಕೃಷ್ಣಾ ಭಾಗ್ಯ ಜಲ ನಿಗಮದಿಂದ ಮಾಡುತ್ತೇವೆ ಎಂದು ಹೇಳಿದ್ದರು. ಅದು ಇನ್ನೂ ಹೆಚ್ಚು ಮಾಡಬೇಕು ಕೃಷ್ಣಾ ಜಲ ಭಾಗ್ಯ ನಿಗಮದಿಂದ ಎಂದು ಸರ್ಕಾರದ ಉದ್ದೇಶ ಇತ್ತು. ಆದರೆ ಪಬ್ಲಿಕ್ ಪ್ಲೇಸಮೆಂಟ್ ಮಾಡಬೇಕಾದರೆ ಸೆಬಿಯಿಂದ ಕ್ಲಿಯರೆನ್ಸ್ ಬೇಕಾಯಿತು. ಅದು ಸ್ವಲ್ಪ ತೊಡಕಾಡುವುದರಿಂದ ನಾವು ಎರಡನೇ ಕಂತನ್ನು ಪಬ್ಲಿಕ್ ಪ್ಲೇಸಮೆಂಟಿನ ಮಾಡಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದರಿಂದ ನಾವು ಕೊಟ್ಟಿದ್ದ ಬಜೆಟೆಡ್ 200 ಕೋಟಿ, ಅದರ ಮೇಲೆ 50 ಕೋಟಿ, ಒಟ್ಟು 250 ಕೋಟಿ, 50 ಕೋಟಿ ಹೆಚ್ಚಿಗೆ ಖರ್ಚು ಮಾಡುತ್ತಿದ್ದೇವೆ. ಮತ್ತೆ 182 ಕೋಟಿ ಈಗಾಗಲೇ ಮೊದಲನೇ ಕಂತಿನಲ್ಲಿ ಬಂದಿರುವುದು. ಒಟ್ಟು ಸೇರಿ 450 ಕೋಟಿ ರೂಪಾಯಿಗಳನ್ನು ಮಾರ್ಚವರೆಗೆ ಖರ್ಚು ಮಾಡುತ್ತೇವೆ. ಬಜೆಟನಲ್ಲಿ 200+300 ಎಂದು ಹೇಳಿದ್ದುದು. ಮುಖ್ಯಮಂತ್ರಿಗಳು ಕೃಷ್ಣಾ ಜಲಭಾಗ್ಯ ಮತ್ತು ಅಪ್ಪರ್ ಕೃಷ್ಣಾ ಬಗ್ಗೆ ಬಂದಾಗ 800 ಕೋಟಿ ರೂಪಾಯಿಗಳಷ್ಟು ಹಣವನ್ನು ಸಾರ್ವಜನಿಕರಿಂದ ಮತ್ತೆ ಖಾಸಗಿಯವರಿಂದ ವಸೂಲಿ ಮಾಡಿ ಅದನ್ನು ಖರ್ಚು ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದು ನಿಜ. ಆದರೆ ಮಾರ್ಚಿಯವರೆ ನಮಗೆ ಸೆಬಿಯಿಂದ ಆದಂಥ ತೊಂದರೆಯಿಂದಾಗಿ ನಾವು ಅಷ್ಟು ಖರ್ಚು ಮಾಡುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಷ್ಟಾದರೂ ಪ್ರಾಮಾಣಿಕವಾಗಿ ಒಪ್ಪಿಕೊಂಡಿರಿ. ಖರ್ಚು ಮಾಡುವುದಕ್ಕೆ ಆಗಲ್ಲ ಎಂದು. ಆದರೆ ಸ್ಟೇಟಮೆಂಟ್ ಕೊಡುವುದಕ್ಕೆ ಬಿಡುವುದಿಲ್ಲ. ಭೀಮನರಾಯನಗುಡಿಗೆ ಶ್ರೀಮಾನ್ ಮಲಕರೆಡ್ಡಿಯವರ ಕ್ಷೇತ್ರಕ್ಕೆ ಮೊನ್ನೆ ತುಮಕೂರಿನಲ್ಲಿ ಒಂದು ದೇವಸ್ಥಾನಕ್ಕೆ ಹೋದಾಗ ಅಲ್ಲಿ ಹೋದಾಗಲೂ ಕೂಡ ಜನರು ಕೇಳುತ್ತಾರೆ, ಮಾರ್ಚಿಯವರೆಗೆ ನಾವು 600 ಕೋಟಿ ರೂಪಾಯಿ ಖರ್ಚು ಮಾಡುತ್ತೇವೆ ಅಪ್ಪರ್ ಕೃಷ್ಣಾ ಪ್ರಾಜೆಕ್ಟಗೆ, ಎಂದು ಆದರೆ ಇವರ ಅಂಕಿಸಂಖ್ಯೆಗಳನ್ನು ನೋಡಿದರೆ ಅಲ್ಲಿಗೆ ಇಷ್ಟು ಬರುವುದಕ್ಕೆ ಸಾಧ್ಯವಾಗುವುದಿಲ್ಲ. 375 ಕೋಟಿ ಇದು ನಿಂತುಹೋಗುತ್ತದೆ. ಅಂದರೆ ಬಜೆಟ್ ಇಡುವಾಗ ಸಾವಿರ ಕೋಟಿ. ಆರು ತಿಂಗಳಾದಮೇಲೆ ಆರು ನೂರು ಕೋಟಿ, 11ನೇ ತಿಂಗಳಿಗೆ ಬಂದು 400 ಕೋಟಿ. ಅಂದರೆ ಇವರ ಮೇಲೆ ಯಾವ ರೀತಿಯಾಗಿ ನಂಬಿಕೆ ಇಡಬೇಕು. ಯಾವುದಾದರೂ ಒಂದು ನಿಗದಿ ಮಾಡಿ. ಸಾವಿರ ಕೋಟಿ ಹೇಳುವುದು, 400 ಕೋಟಿ ಖರ್ಚು ಮಾಡುವುದು. ಈ ರೀತಿಯಾಗಿ ಅಂಕಿಸಂಖ್ಯೆಯನ್ನು ಕೊಟ್ಟು ಜನರಿಗೆ ಮೋಸ ಮಾಡತಕ್ಕಂಥದ್ದು ಮಾಡಿದರೆ ಖಂಡಿತವಾಗಿಯೂ ಜನರು ಕ್ಷಮೆ ಮಾಡುವುದಿಲ್ಲ. ನೀವು ಜನರನ್ನು ತಪ್ಪುದಾರಿಗೆ ಎಳೆಯುವ ಪ್ರಯತ್ನ ಮಾಡುತ್ತಿದ್ದೀರಿ. ಜನರಿಗೆ ತಪ್ಪು ಸ್ಟಾಟಿಸ್ಟಿಕ್ಸ ಕೊಟ್ಟು ಹಣ ಇಷ್ಟು ಕೊಡುತ್ತೇವೆ,

ಬಜೆಟರಿ ಪ್ರಾವಿಷನ್ ಮಾಡಿದ್ದೇವೆ ಎಂದು ಹೇಳಿ ನೀವು ಜನರಿಗೆ, ರೈತರಿಗೆ, ಆ ಭಾಗದ ಜನರಿಗೆ ಮೋಸ ಮಾಡುತ್ತಿದ್ದೀರಿ ಎನ್ನುವ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ.

ಈ ನಿಮ್ಮ ಅಂಕಿ ಸಂಖ್ಯೆಯಿಂದ ಇದು ಪ್ರೂವ್ ಆಗುತ್ತಿದೆ. ಈ ವರ್ಷ ಕೂಡ ನೀವು ಮತ್ತೆ ಕೃಷ್ಣಾ ಜಲ ಭಾಗ್ಯ ನಿಗಮದ ಆಧಾರಿತದ ಬಗ್ಗೆ "ಕನ್ನಡಿಯೊಳಗಿನ ಗಂಟು" ಇದನ್ನೇ ನಮಗೆ ಈ ಸಲ ಕೂಡ ತೋರಿಸಿದ್ದು. ಆದರಿಂದ ಏನು ಆಗುತ್ತದೆ ಎಂದರೆ ನೀವು ಎಷ್ಟೇ ಪ್ರಯತ್ನ ಮಾಡಿ ತಮಗೆ ಗೊತ್ತಿದೆ. ಈಗ ಲಿಬರಲೈಸೇಷನ್ ಪಾಲಿಸಿ ಬಂದಮೇಲೆ ಎಲ್ಲಾ ಕಂಪನಿಗಳು ಮತ್ತು ಅನೇಕ ಬ್ಯಾಂಕುಗಳು ನಿಮಗಿಂತ ಫೈಯರ್ ರೇಟ್ ಆಫ್ ಇಂಟರೆಸ್ಟ ಕೊಡುತ್ತಿದ್ದಾರೆ. ನೀವು ಹದಿನೇಳೂವರೆ ಪರ್ಸೆಂಟ್ ಕೊಟ್ಟರೆ ನಮಗೆ ಗೊತ್ತಿದೆ. C.D. ಸರ್ಟಿಫಿಕೇಟನಲ್ಲಿ ಅಥವಾ ಬೇರೆ ಯಾವುದೇ ಒಂದು ಯೋಜನೆಯಲ್ಲಿಟ್ಟರೆ 18ರಿಂದ 19ರವರೆಗೆ ಕೆಲವು ಬ್ಯಾಂಕಗಳು, ಫಾರಿನ್ ಬ್ಯಾಂಕ್ಸ ಅಂದರೆ ಸಿಟಿ ಬ್ಯಾಂಕ್ಸ ಆ ಬ್ಯಾಂಕ್ ಇಂತಹ ಎಲ್ಲಾ ಹೊಸ ಬ್ಯಾಂಕಗಳು ಬಂದು, ಅವರೆಲ್ಲರೂ ಕೂಡ ಸರ್ಟಿಫಿಕೇಟ್ ಆಫ್ ಡಿಪಾಸಿಟ್ ಸ್ಕೀಮ್ನ ಕೆಳಗೆ ಎರಡು ಮೂರು ಪರ್ಸೆಂಟ್ ವಿತ್ ಬ್ರೋಕರೇಜ್ ಒಂದು ಪರ್ಸೆಂಟ್ ಹೆಚ್ಚಿಗೆ ಕೊಡುತ್ತಿದ್ದಾರೆ. ಆಗ ನಿಮ್ಮಲ್ಲಿ ಯಾರು ಬರಬೇಕು? ಯಾರೂ ಕೂಡ ಬರಲಾಗದಿದ್ದುದಕ್ಕೆ ನಿಮ್ಮದು ಟಾರ್ಗೆಟ್ 182 ಕೋಟಿ ರೂಪಾಯಿ. ಯಾವ ಟಾರ್ಗೆಟ್ ನೀವು 500 ಕೋಟಿ ರೂಪಾಯಿ ಇಟ್ಟುಕೊಂಡಿದ್ದೀರೋ ಅಥವಾ 600 ಕೋಟಿ ರೂಪಾಯಿ ಇಟ್ಟುಕೊಂಡಿದ್ದಿರೋ ಆಟಾರ್ಗೆಟ್ ಇವತ್ತು ನೀವು ಮುಟ್ಟಲಿಕ್ಕೆ ಆಗಲಿಲ್ಲ. ಇದು ಗೊತ್ತಿದ್ದರೂ ಕೂಡ ಬಜೆಟರಿ ಪ್ರಾವಿಜನ್ ಮಾಡುವುದನ್ನು ಬಿಟ್ಟು ಪುನಃ ನೀವು ಕೃಷ್ಣಾ ಜಲ ಭಾಗ್ಯ ನಿಗಮದಿಂದ ನಾವು ಹಣ ಸಂಗ್ರಹಣೆ ಮಾಡುತ್ತೇವೆಂದರೆ ಖಂಡಿತವಾಗಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟಗೆ ನೀವು ದ್ರೋಹ ಮಾಡಿದ ಹಾಗೆ ಆಗುತ್ತದೆ. ನೀವಾಗಿ ಅದನ್ನು ನಿಲ್ಲಿಸಿದ ಹಾಗೆ ಆಗುತ್ತದೆ. ನೀವಾಗಿ ಆ ಪ್ರಾಜೆಕ್ಟಗೆ ತೊಂದರೆ ಕೊಟ್ಟಹಾಗೆ ಆಗುತ್ತದೆ. 1964ನೆಯ ಇಸವಿಯವರೆಗೆ. ನೀವು ಏಳು ವರ್ಷ ಇರಲಿಲ್ಲವೇ? ಆಗ ಏನು ನಿದ್ದೆ ಮಾಡಿದ್ದೀರಾ?

ಶ್ರೀ ಸಿದ್ಧರಾಮಯ್ಯ : 1964ರವರಗೆ ಖರ್ಚು ಮಾಡಿರತಕ್ಕದ್ದು ಎಷ್ಟು? ಖರ್ಚು ಆಗತಕ್ಕ 9,10 ಸಾವಿರ ಕೋಟಿಯಲ್ಲಿ ಖರ್ಚಮಾಡಿರುವುದು ಇವತ್ತಿನವರೆಗೆ 1300 ಕೋಟಿ ರೂಪಾಯಿ 1964ನೆಯ ಇಸವಿಯಿಂದ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವಾಗ ಒಂದು ರೂಪಾಯಿ ಬೆಲೆ ಈಗಿನ ನೂರು ರೂಪಾಯಿ ಬೆಲೆಗೆ ಸಮಾನ.

ಶ್ರೀ ಸಿದ್ದರಾಮಯ್ಯ : ನಾವು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿದ್ದೇವೆ. 4 ವರ್ಷಕ್ಕೆ ಮುಗಿಸುತ್ತೇವೆ ಎಂದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾಲ್ಕು ವರ್ಷದಲ್ಲಿ ಆಗುವುದಿಲ್ಲ. ಬರಿ ಎಲ್ಲಾ ಹೇಳಿಕೊಂಡು ಬಂದಿದ್ದೀರಿ. ಈ ಬಜೆಟರಿ ಪ್ರಾವಿಷನ್ ಇಟ್ಟರೆ ನಾಲ್ಕು ವರ್ಷದಲ್ಲಿ ಆಗುವುದಿಲ್ಲ ಇನ್ನು ಹತ್ತು ವರ್ಷ

ಬೇಕಾಗುತ್ತದೆ.

ಶ್ರೀ ಆರ್. ಕೃಷ್ಣಪ್ಪ : ಈ ಸರ್ಕಾರದ ಮುಂದಾಲೋಚನೆ ಎರಡು ಸಾವಿರ ಇಸವಿಯೊಳಗೆ ನಾವು ಕೃಷ್ಣಾ ಮೇಲ್ದಂಡೆ ಕಂಪ್ಲೀಟ್ ಮಾಡಬೇಕೆಂಬ ಗುರಿ ನಮ್ಮ ಸರ್ಕಾರಕ್ಕೆ ಇದೆ. ಬಹುಶಃ ತಾವು ಈಗ ಹೇಳಿದಂತೆ ಪ್ರತಿ ವರ್ಷ ಸಾವಿರ ಕೋಟಿ ರೂಪಾಯಿ ಖರ್ಚು ಮಾಡಬೇಕು ಎಂದು ಸರ್ಕಾರದ ಉದ್ದೇಶ. ತಾವು ಹಿಂದೆ ಇದ್ದಂತಹ ಕಾಲದಲ್ಲಿ ಹೀಗೆ ಐದು ವರ್ಷಗಳಲ್ಲಿ ತಾವು ಈ ರೀತಿಯಾದ ಪ್ಲಾನ್ ಹಾಕಿಕೊಂಡು ಪ್ರತಿ ವರ್ಷ 500 ಕೋಟಿ ರೂಪಾಯಿಗಳ ಹಾಗೆ ಖರ್ಚುಮಾಡಿಕೊಂಡು ಬಂದಿದ್ದರೆ ನಮಗೆ ಸುಲಭ ಆಗುತ್ತಿತ್ತು. ನಿಮಗೂ ಕಾಳಜಿ ಇದೆ ಎಂದು ಜನತೆಗೆ ಅರ್ಥ ಆಗುತ್ತಿತ್ತು. ನಿಮ್ಮ ಹತ್ತಿರ ಪ್ಲಾನ್ ಇಲ್ಲದೇ ಬರೇ 150-160 200 ಕೋಟಿ ರೂಪಾಯಿ ಖರ್ಚು ಮಾಡಿ ಬಿಟ್ಟು, ನಾವು ಕೇವಲ 5 ವರ್ಷಗಳಲ್ಲಿ 5 ಸಾವಿರ ಕೋಟಿ ರೂಪಾಯಿ ಖರ್ಚು ಮಾಡಬೇಕಾದರೆ ಪ್ಲಾನಗೆ ಎಷ್ಟು ಸಂಗ್ರಹಣೆ ಆಗುತ್ತಿದೆ ಎಂದು ತಾವು ಯೋಚನೆ ಮಾಡಿ. ತಾವು ಪ್ಲಾನ್ ಬಿಟ್ಟು ಬಿಟ್ಟಿರಿ, ಅದರ ಬಗ್ಗೆ ಗಮನ ಹರಿಸಿದ್ದರೆ ಅನುಕೂಲ ಆಗುತ್ತಿತ್ತು ಎಂದು ತಮಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಬಜೆಟ ಇಟ್ಟಾಗ 11 ರೂಪಾಯಿ, 12 ರೂಪಾಯಿ 30 ರೂಪಾಯಿ ಒಂದು ಬ್ಯಾಗ್ ಸಿಮೆಂಟ್ ಬೆಲೆ ಇತ್ತು. ನೀವು ಬಜೆಟ್ ಇಟ್ಟಾಗ 160 ರೂಪಾಯಿ ಒಂದು ಬ್ಯಾಗ್ ಸಿಮೆಂಟ್ ಬೆಲೆ ಇದೆ. ಗೊತ್ತಾ? ರಿಯಾಲಿಟಿ ಬಗ್ಗೆ ಮಾತನಾಡಿ. What is the money value of that time and what is the money value of this time also you should take into consideration. ಬರೇ ನೋಟಗಳನ್ನು ಎಣಿಸಿಕೊಂಡು ಹೋದರೆ ಕೆಲಸ ಮಾಡುವುದಕ್ಕೆ ಆಗುತ್ತದಯೇ? ಕಬ್ಬಿಣದ ಬೆಲೆ ಆಗ ಏನು ಇತ್ತು? ಸಿಮೆಂಟ್ ಬೆಲೆ ಏನು ಇತ್ತು? ಬೇರೆ ಕಟ್ಟಡ ವಸ್ತುಗಳ ಬೆಲೆ ಏನು ಇತ್ತು? ಅದನ್ನು ಲೆಕ್ಕ ಹಾಕಿಕೊಳ್ಳಿ. ಸುಮ್ಮನೇ ಮಾತನಾಡಬೇಕು ಎಂದು ಚಟದಿಂದ ಮಾತನಾಡುವುದಕ್ಕೆ ಹೋಗಬೇಡಿ. ಅವರು ಹೇಳಿದ ಹಾಗೆ ನೀವು ಸಾವಿರ ಕೋಟಿ ರೂಪಾಯಿ ಆಗ ಖರ್ಚು ಮಾಡಿದ್ದರೆ, ನಾವು ಒಂದೇ ಸಲ ಸಾವಿರ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ ಎಂದು ಹೇಳಿದ್ದಾರೆ. ನಮ್ಮ ಸಾವಿರ ಕೋಟಿ ರೂಪಾಯಿ ನಿಮ್ಮ ಹತ್ತು ಸಾವಿರ ಕೋಟಿಯೆಷ್ಟು ಸಮಯವಿದೆ ಅದಕ್ಕಾಗಿ ಈಗ ಹೇಳುತ್ತಿದ್ದೇನೆ. ತಾವು ಒಂದು ಮಾತನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು. ಅದೇನೆಂದರೆ ಯಾವಾಗಲೂ ನೀವು ನಾಲ್ಕು ನೂರು ಕೋಟಿ ರೂಪಾಯಿ ಖರ್ಚು ಮಾಡುತ್ತೀರಲ್ಲ, ಅಷ್ಟೇ ಇಟ್ಟು ಬಿಡಿ. ಇಲ್ಲ 500 ಕೋಟಿ ರೂಪಾಯಿ ಇಟ್ಟುಬಿಡಿ. ನಾಲ್ಕುನೂರು ಖರ್ಚು ಮಾಡಿದರೂ ಅಡ್ಡಿ ಇಲ್ಲ. ಅದಕ್ಕೆ ಒಂದು ಏನಾದರೂ ಕಾರ್ಯಕ್ರಮ ಇದೆ, ಲೆಕ್ಕಾಚಾರ ಇದ ಎಂದು ಹೇಳಬಹುದು. ಆದರೆ ಸಾವಿರ ಕೋಟಿ ರೂಪಾಯಿ ಇಡುವುದು, ನಾಲ್ಕು ನೂರು ಕೋಟಿ ರೂಪಾಯಿ ಖರ್ಚು ಮಾಡುವುದು ಎಂದರೆ 40 ಪರ್ಸೆಂಟ್ ಆಯಿತು. It should not happen. ನಾವು ಒಪ್ಪಿಕೊಳ್ಳೋಣ. ನೀವು 500 ಕೋಟಿ ಇಟ್ಟು ನಾಲ್ಕು ನೂರು ಖರ್ಚು ಮಾಡಿದ್ದರೆ ಇದಕ್ಕೆ ವ್ಯತ್ಯಾಸ ಆಗಿದೆ. ನಮ್ಮ ಪ್ಲಾನ್ ಔಟಲೇನಲ್ಲಿ ಕಡಿಮೆ ಆಗಿದೆ, ಏಕೆದರೆ ನೀವು ಇಷ್ಟೆಲ್ಲಾ ಹೇಳಿದರೂ ಕೂಡ ಆನ್ಯುಯಲ್ ಪ್ಲಾನ್ ಔಟಲೇನಲ್ಲಿ ಸುಮಾರು 750 ಕೋಟಿ ರೂಪಾಯಿ ಕಡಿಮೆ ಖರ್ಚು

ಮಾಡಿದ್ದೀರಿ. 650 ಕೋಟಿ ರೂಪಾಯಿ ಕಡಿಮೆ ಖರ್ಚು ಮಾಡುವಾಗ ನ್ಯಾಚುರಲಿ ಇವಕ್ಕೂ ಒಂದು ನೂರು ಕೋಟಿ ಅಥವಾ 50 ಕೋಟಿ ರೂಪಾಯಿ ಕಡಿಮೆ ಆಯಿತು ಎಂದರೆ ನಾವು ಒಪ್ಪಿಕೊಳ್ಳೋಣ. ಆದರ ಸಾವಿರ ಕೋಟಿ ರೂಪಾಯಿ ಎಲ್ಲಿ? ಸಾವಿರ ಕೋಟಿ ರೂಪಾಯಿ ಎಲ್ಲಿ? ನಮ್ಮ ಮನಸ್ಸಿಗಾದರೂ ನಾವು ಪ್ರಶ್ನೆ ಹಾಕಿಕೊಂಡರೆ ಬಹುಶಃ ಆ ಪ್ರಶ್ನೆಯನ್ನು ತಾವು ಬಿಡಿಸಿಕೊಳ್ಳಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನೊಂದು ವಿಚಾರ ಎಂದರೆ ನಿಮ್ಮ ಫಿಸಿಕಲ್ ಟಾರ್ಗೆಟನಲ್ಲಿಯೂ ಕೂಡ ಅಲ್ಲಿ ಎಲ್ಲಾ ಇರಿಗೇಷನ್ ಪೊಟೆನಷಿಯಾಲಿಟೀಸ್ ಇನಕ್ರೀಸ್ ಆಗಿತ್ತು. ಕೇವಲ ಈ ವರ್ಷದ ನಮ್ಮ ಎಕನಾಮಿಕ ಸರ್ವೆ ರಿಪೋರ್ಟು ಪ್ರಕಾರ ಕೇವಲ 70 ಸಾವಿರ ಹೆಕ್ಟೇರ್ಸ್ ಮಾತ್ರ. ಮೈನರ್ ಇರಿಗೇಷನ್, ಮೀಡಿಯಮ್ ಇರಿಗೇಷನ್ ದೊಡ್ಡ ಪ್ರಾಜೆಕ್ಟ ಎಲ್ಲಾ ಸೇರಿ. ಅಂದಾಗ ರೈತರ ಬಗ್ಗ ತಾವೇನು ನೀರಾವರಿ ಸೌಲಭ್ಯವನ್ನು ಹೆಚ್ಚಿಗೆ ಒದಗಿಸಿಕೊಡುತ್ತೇರೆ ಎನ್ನತಕ್ಕ ಮಾತನ್ನು ಹೇಳುತ್ತೀದ್ದೀರಿ. ಎಷ್ಟರಮಟ್ಟಿಗೆ ತಾವು ಆ ಗುರಿ ಸಾಧನೆಯನ್ನು ಮುಟ್ಟಿದ್ದೀರಿ? ತಾವು ಹೇಳಿ? ನೀವು ಕೊಟ್ಟ ಅಂಕೀ ಅಂಶದ ಪ್ರಕಾರ ಇವತ್ತು 75 ಸಾವಿರ ಮಾತ್ರ. ಅಂದರೆ ಹಿಂದೆ ಯಾವುದೇ ಒಂದು ಸರ್ಕಾರ ನಮ್ಮ ಎಲ್ಲಾ ಇರಿಗೇಷನ್ ಪ್ರಾಜೆಕ್ಟಗೆ ಆದ್ಯತೆ ಕೊಟ್ಟಿತ್ತು. ಅದಕ್ಕಿಂತ ಕಡಿಮೆ ಕೊಟ್ಟಿದ್ದೀರಿ ಎಂದು ಇದರಿಂದ ಗೊತ್ತಾಗುತ್ತದೆ. ಏಕೆಂದರ physical achievement is more important than your financial target. You might have kept 5000 crores, but what is your achievement? ಇದು ಒಂದು ಕಡೆ. ಇನ್ನೊಂದು ಕಡೆ ಬಜೆಟರಿ ಪ್ರಾವಿಜನ್ ಬಹಳ ಇಂಟರೆಸ್ಟಿಂಗ್ ಆಗಿ ಮಾಡಿದ್ದಾರೆ. ಹಿಂದೆ ಈಗ ಇವರು ಮಾಡಿರುವಂತಹ ಬಜೆಟರಿ ಪ್ರಾವಿಜನ್ ಹಾಗೂ ಇಂದಿನ ಬಜೆಟರಿ ಪ್ರಾವಿಜನಗೆ ಹೋಲಿಸಿದರ ಎಷ್ಟರಮಟ್ಟಿಗ ಯಶಸ್ವಿಯಾಗಿ ನಮ್ಮ ನೀರಾವರಿಗೆ ಮತ್ತು ಬೇರೆ ಬಾಬತ್ತಿನಲ್ಲಿ ಹೆಚ್ಚಿನ ಹಣ ಇಟ್ಟಿದ್ದಾರೆ ಎನ್ನುವುದಕ್ಕೆ ಒಂದೇ ಒಂದು ಉದಾಹರಣೆಯನ್ನು ನಾನು ಕೊಡುತ್ತೇನೆ. ಸ್ಟೇಟ್ ಪ್ಲಾನ್ ಅಲೋಕೇಶನ್ ತಾವು 1995-96ರಲ್ಲಿ ಮಾಡಿದ್ದು. ವಾಟರ್ ಸಪ್ಲೈಗ 13 ಪರ್ಸೆಂಟ್, ಆಮೇಲೆ ಇಂಡಸ್ಟ್ರಿಗೆ 6 ಪರ್ಸೆಂಟ್, ನೀರಾವರಿ 18 ಪರ್ಸೆಂಟ್. ಇದು 1995-96ನೇ ಸಾಲಿಗ ತಾವು ಹೇಳಿದ್ದೇ ಅಲೊಕೇಶನ್. ಈ ವರ್ಷದ ಅಲೋಕೇಶನ್ ಏಕೆಂದರೆ ಇವರು ಹೇಳಿದರು. ನಾವು ರೈತ ಪರವಾಗಿ ಇದ್ದೇವೆ ಎಂದು. ಈ ವರ್ಷದ ಅಲೋಕೇಶನ್ ಎಷ್ಟು ಇದೆ ಎಂದರೆ ನೀರಾವರಿಗ ತಾವು ಖರ್ಚು ಮಾಡಿರತಕ್ಕದ್ದು 11 ಪೈಸೆ. ಈಗ ಕಾವೇರಿ ಪ್ರಾಜೆಕ್ಟ ಎಲ್ಲಾ ನಾನ್ ಪ್ಲಾನ್ ನಿಮ್ಮದು, ಹೌದಾ? ಪ್ಲಾನ್‌ನಲ್ಲಿ ಬರುವುದಿಲ್ಲ. ಒಂದು ರೂಪಾಯಿನಲ್ಲಿ ಎಷ್ಟು ಹಣ ಖರ್ಚು ಮಾಡುತ್ತಿದ್ದೀರಿ ಎನ್ನತಕ್ಕದ್ದು. ನೀವು ಹೇಳಿ. ಕಾವೇರಿ ನಾನ್ ಪ್ಲಾನ್ ಅಲ್ಲವೇ? ಇದಕ್ಕೆ ಪ್ಲಾನ್ ಸೆಕ್ಟಾರನಲ್ಲಿ ಅಲೋಕೇಶನ್ ಬಂದಿಲ್ಲ ತಾನೇ?

ಶ್ರೀ ಕೆ.ಎನ್. ನಾಗೇಗೌಡ : ನೀವು ಹೇಳಿರುವ ಫಿಗರ್ಸನಲ್ಲಿ ಕಾವೇರಿಗೆ ಒಂದೂವರೆ ಪರ್ಸೆಂಟ್ ಜಾಸ್ತಿ ಬರುತ್ತದೆ. ಅದನ್ನೇ ನಾನು ಕ್ಯಾಲಕ್ಯುಲೇಟ್ ಮಾಡುತ್ತಿದ್ದ. ಎಲ್ಲಿ ಕಡಿಮೆ ಆಗುತ್ತದೆ ಎಂದರೆ ಕೈಗಾರಿಕೆಗೆ 08 ಕಡಿಮೆ ಬರುತ್ತದೆ. ನಿಮ್ಮ ಕಂಪೇರಿಟೀವ್ ಫಿಗರ್ಸ್‌ನಲ್ಲಿ the next one is drinking water. We have increased by 4%. In stead of 10.11 we have increased to 15.11. ನೀವು ಹೇಳಿದ ಪ್ರಕಾರ ಗ್ರಾಮೀಣಾಭಿವೃದ್ಧಿಗ ೦೫ ಕಡಿಮೆ ಬರುತ್ತದೆ. ನೀರಾವರಿಗೆ ಒಂದು

ಪರ್ಸೆಂಟ್ ಜಾಸ್ತಿ ಆಗುತ್ತದೆ ಮತ್ತು ಕೈಗಾರಿಕೆಗೆ ಲೆಸ್ ಆಗುತ್ತದೆ. ನಾನು ಪ್ಲಾನ್ ಔಟಲೇ ಬಗ್ಗೆ ಹೇಳುತ್ತಾ ಇರುವುದು.

1.00 ಪಿ.ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಮೇಲೆ ಪ್ಲಾನ್ ನಾನ್-ಪ್ಲಾನನಲ್ಲಿ ಇವೊತ್ತು ಒಂದು ರೂಪಾಯಿಯಲ್ಲಿ ಹನ್ನೊಂದು ಪೈಸೆಯಷ್ಟು ಮಾತ್ರ ನಾವು ನೀರಾವರಿ ಕ್ಷೇತ್ರಕ್ಕೆ ಖರ್ಚು ಮಾಡುತ್ತೀದ್ದೇವೆಂದು, ಆದರೆ, ಮೇಜರ್ ಪೋರ್ಷನ್ ಎಲ್ಲವನ್ನೂ ನಾವು ನೀರಾವರಿಗಾಗಿ ಕೊಟ್ಟಿದ್ದೇವೆಂದು ಇಲ್ಲಿಯವರೆಗೆ ಹೇಳಿಕೊಂಡು ಬಂದಿದ್ದಾರೆ. ಇದು ಸತ್ಯಕ್ಕೆ ದೂರವಾದ ಮಾತೆಂಬುದಕ್ಕೆ ಇದನ್ನು ಪ್ರಸ್ತಾಪಿಸುತ್ತಿದ್ದೇವೆ. ಅದಕ್ಕೆ ಮಾನ್ಯ ಮಂತ್ರಿಗಳು ಹೇಳುವುದೇನೆಂದರೆ, ನಾವು ಎರಡನ್ನೂ ಸೇರಿಸಿದರೆ, ಹೋದ ಸಲ ಶೇಕಡ 23 ಏನಿತ್ತು, ಅದಕ್ಕಿಂತಲೂ ಜಾಸ್ತಿ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಅದೇ ಸಂದರ್ಭದಲ್ಲಿ ವಿದ್ಯುತಗೆ ಹೊರಗಿನಿಂದ ಬರುವ ಬಂಡವಾಳವನ್ನು ತೋರಿಸಿ ಅದಕ್ಕೂ ಕೂಡ ಕಡಿಮೆಗೊಳಿಸಿದ್ದಾರೆ. ಏಕೆಂದರೆ, ಬೇರೆ ಏಜೆನ್ಸಿಗಳವರು ಪ್ರಾಜೆಕ್ಟಗಳಲ್ಲಿ ಇನವೆಸ್ಟ ಮಾಡುತ್ತಿದ್ದಾರೆಂದು ತಿಳಿದುಕೊಂಡು ಅದರಲ್ಲೂ ಇವೊತ್ತಿನ ದಿವಸ ಅವರು ಕಡಿಮೆ ಹಣವನ್ನು ಕೊಟ್ಟಿದ್ದಾರೆ. ಇದಲ್ಲದೆ, ನಮ್ಮ ರಾಜ್.ದ ಸಂಪನ್ಮೂಲವನ್ನು ಕ್ರೋಢೀಕರಿಸುವಾಗ ಹೋದ ಸಲ ತಮ್ಮದೇ ಆದಂಥ ಒಂದು ಬಂಡವಾಳದಲ್ಲಿ ನಾವು ನಮ್ಮದೇ ಆದಂಥ ಸಂಪನ್ಮೂಲ ಕ್ರೋಢಿಕರಣದಲ್ಲಿ ರಾಜ್ಯದ ಕಂದಾಯ ತೆರಿಗೆ ಎಷ್ಟಿತ್ತೆಂದರೆ ಶೇಕಡ 57 ರಷ್ಟು, ಇವೊತ್ತು ಅದು ಶೇಕಡ 51 ಕ್ಕೆ ಇಳಿದಿದೆ. ಅಂದರೆ, ಶೇಕಡ 49ಕ್ಕೆ ಹತ್ತಿರವಿದೆ. ಹಣವನ್ನು ನಾವು ಹೊರಗಿನಿಂದ ತೆಗೆದುಕೊಳ್ಳುತ್ತೇವೆಂದು ಅದು ಕೇಂದ್ರ ಸರ್ಕಾರದಿಂದ ಸಾಲವಿರಬಹುದು, ನಬಾರ್ಡ್ ಸಾಲವಿರಬಹುದು, ವಿಶ್ವಬ್ಯಾಂಕನ ಸಾಲವಿರಬಹುದು ಅಥವಾ ಬೇರೆ ಬೇರೆ ಹಣಕಾಸು ಸಂಸ್ಥೆಗಳಿಂದ ನಾವು ಸಾಲ ಪಡೆದುಕೊಂಡು ಈ ಯೋಜನೆಯನ್ನು ರೂಪಿಸಿದ್ದೇವೆಂದು ಹೇಳಿದ್ದಾರೆ. ನಮ್ಮದೇ ಆದಂಥ ಹಣವನ್ನು ನಾವು ಖರ್ಚು ಮಾಡತಕ್ಕಂಥಾದ್ದು ಶೇಕಡ 51 ರಷ್ಟು. ಅಂದರ ಶೇಕಡ 50 ರಷ್ಟು we are dependent on others. ಅದು ನಬಾರ್ಡನಿಂದ ಇರಬಹುದು, ಏಷ್ಯಾ ಡೆವಲಪಮೆಂಟ್ ಬ್ಯಾಂಕನಿಂದ ಇರಬಹುದು, ವಿಶ್ವಬ್ಯಾಂಕನಿಂದ ಇರಬಹುದು ಇಲ್ಲವೇ ಡ್ಯಾನಿಡಾದಿಂದರಬಹುದು. ನಾಳೆ ಅಗ್ರಿಮೆಂಟಿನಲ್ಲಿ ವ್ಯತ್ಯಾಸವಾದಾಗ, ತೊಂದರೆಯಾದಾಗ ನಮ್ಮ ಎಲ್ಲಾ ಯೋಜನೆಗಳ ಹಣಕಾಸಿನ ಸಹಾಯಕ್ಕೆ ಹಾಗೂ ಎಲ್ಲಾ ಯೋಜನೆಗಳನ್ನು ನಿಗದಿತವಾದ ಸಮಯದಲ್ಲಿ ಮುಗಿಸುತ್ತೇವೆನ್ನುವುದಕ್ಕೆ ಸಾಧ್ಯವಿಲ್ಲ. ಅದರಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯೂ ಬರುತ್ತದೆ. ಏಕೆಂದರೆ, ಕೃಷ್ಣಾ ಜಲಭಾಗ್ಯ ನಿಗಮದಿಂದ ಬಾಂಡುಗಳ ಮೂಲಕ ಹಣವನ್ನು ಸಂಗ್ರಹಿಸಿ ಖರ್ಚು ಮಾಡುತ್ತೇವೆಂದು ಹೊರಗಿನಿಂದ ಬರುವ ಹಣವನ್ನು ತೋರಿಸಿದ್ದೀರೇ ವಿನಾಃ ಅದಕ್ಕೆ ಬಜೆಟರಿ ಪ್ರಾವಿಜನ್ ಅನ್ನು ಮಾಡಿಲ್ಲ. ಅದಕ್ಕಾಗಿ ಇವೊತ್ತು ನೀವು ಹನ್ನೆರಡು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದರಲ್ಲಿ ಅಥವಾ ನಮ್ಮ ಬಂಡವಾಳದ ಹಣವನ್ನು ಬಿಟ್ಟರೂ ಕೂಡ ಹತ್ತು ಸಾವಿರ ರೂಪಾಯಿಗಳ ಮೇಲ್ಪಟ್ಟು ಖರ್ಚು ಮಾಡತಕ್ಕಂಥ ಹಣವನ್ನು ಸೇರಿಸಿದರೂ ಕೂಡ ನಿಮಗೆ ಸಾಮಾನ್ಯವಾಗಿ ಹೊರಗಿನಿಂದ ಬರತಕ್ಕಂಥಾದ್ದು 5-6 ಸಾವಿರ ಕೋಟಿ ರೂಪಾಯಿಗಳು. ಈ 5-6

ಸಾವಿರ ಕೋಟಿ ರೂಪಾಯಿಗಳಷ್ಟು ಹಣ ಸರಿಯಾದ ರೀತಿಯಲ್ಲಿ ಬಂದರೆ ನೀವು ಹಮ್ಮಿಕೊಂಡ ಕಾರ್ಯಕ್ರಮಗಳು ಸರಿಯಾಗಿ ಅನುಷ್ಠಾನಗೊಳ್ಳುತ್ತವೆ, ಇಲ್ಲವೆಂದರೆ ಇದರಲ್ಲಿ ಏನಾದರೂ ತಾರತಮ್ಯವುಂಟಾದರೆ, ವ್ಯತ್ಯಾಸಗಳಾದರೆ ಯಾವ ಕಾರ್ಯಕ್ರಮಗಳೂ ಕೂಡ ವ್ಯವಸ್ಥಿತವಾಗಿ ನಡೆಯುವುದಿಲ್ಲ ಮತ್ತು ಈಗಾಗಲೇ ನಾನು ಹೇಳಿದಂತೆ ವರ್ಷಾಂತ್ಯಕ್ಕೆ ಗುರಿಯನ್ನು ತಾವು ಕೊಟ್ಟರು ಕೂಡ ಸಾಧಿಸತಕ್ಕಂಥ ಶಕ್ತಿ ಇಲಾಖೆಯವರಿಗೆ ಬರುವುದಿಲ್ಲ. ಏಕೆಂದರೆ, ಹಣದ ವ್ಯವಸ್ಥೆ ಆ ರೀತಿಯಾಗಿ ಇರುವುದಿಲ್ಲ. ಅದಕ್ಕೋಸ್ಕರ, ನಾನು ಪುನಃ ತಮ್ಮನ್ನು ಕೇಳಿಕೊಳ್ಳುವುದೇನೆಂದರೆ, ಕೃಷ್ಣಾ ಜಲಭಾಗ್ಯ ನಿಗಮದವರು ಎಷ್ಟು ಹಣವನ್ನು ಸಂಗ್ರಹಿಸುತ್ತಾರೋ ಸಂಗ್ರಹಿಸಲಿ, ಆದರೆ ಸರ್ಕಾರದಿಂದ ಇದಕ್ಕೆ ನೇರವಾಗಿ ಬಜೆಟರಿ ಪ್ರಾವಿಜನ್ ಇರಬೇಕಾಗುತ್ತದೆ. ನೀವು 300-400 ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿ, ಇದರ ಮೇಲೆ ಕೃಷ್ಣಾ ಜಲಭಾಗ್ಯ ನಿಗಮದವರು ಎಷ್ಟು ಹಣ ಬೇಕಾದರೂ ಸಂಗ್ರಹಿಸಲಿ. ಇಲ್ಲವೆಂದರೆ ಹೋದ ವರ್ಷ 200 ಕೋಟಿ ರೂಪಾಯಿಗಳಷ್ಟಿದ್ದು, ಈ ವರ್ಷ ಅದಕ್ಕಿಂತ 50 ಕೋಟಿ ರೂಪಾಯಿಗಳಷ್ಟು ಜಾಸ್ತಿಯಾಗಿದೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಅದರಿಂದ ಬರುವ ಹಣ ನಿರ್ದಿಷ್ಟವಾಗಿಲ್ಲ. ನೀವು ಕ್ರಿ.ಶ. 2000 ಇಸವಿಯೊಳಗೆ ಕೃಷ್ಣಾ ಮೇಲ್ದಂಡೆ ಯೋಜನೆ ಕಾಮಗಾರಿಯನ್ನು ಮಾಡಿ ಮುಗಿಸಬೇಕೆಂದರೆ, ಹಣವನ್ನು ಮೊಬಲೈಜ್ ಮಾಡಿಡಬೇಕು. ಆ ಹಣ ಬಂದರೆ ಒಳ್ಳೆಯದು. You can spend for some other thing. ಇಲ್ಲವೆಂದರೆ, ಇದರಿಂದ ಹಣ ತಗೆದುಕೊಂಡು ಬೇರೆ ಕಡೆ ಪರಿವರ್ತಿಸಲು ಅಧಿಕಾರವಿರುತ್ತದಾದ್ದರಿಂದ ರಿ-ಅಪ್ರೋಪ್ರಿಯೇಟ್ ಮಾಡಿಕೊಳ್ಳಿ. ಆದರೆ, ನಿಶ್ಚಿತವಾದ ಬಜೆಟರಿ ಪ್ರಾವಿಜನ್ ಅನ್ನು ಇದಕ್ಕೆ ಮಾಡಲೇಬೇಕು. ಬಜೆಟರಿ ಪ್ರಾವಿಜನ್ ಅನ್ನು ತಾವು ಮಾಡದೆ ಹೋದರೆ ಅನ್ಯಾಯವಾಗುತ್ತದೆಂಬ ಮಾತನ್ನು ತಮಗೆ ಮತ್ತೊಮ್ಮೆ ಹೇಳುತ್ತೇನೆ. ಆದುದರಿಂದ, ಇದರ ಬಗ್ಗೆ ಪುನರ್ ಪರಿಶೀಲಿಸಿ, ನೀವು ಮುಖ್ಯಮಂತ್ರಿಗಳ ಜೊತೆ ಮತ್ತೊಮ್ಮೆ ಮಾತನಾಡಬೇಕು. ಇದಕ್ಕೆ ಬಜೆಟರಿ ಸಪೋರ್ಟ್ ಇಲ್ಲದೇ ಹೋದರೆ ಅಪ್ಪರ್ ಕೃಷ್ಣಾ ಪ್ರಾಜೆಕ್ಟ ಬರೀ ಅಪ್ಪರ್ ಆಗಿಯೇ ಉಳಿಯುತ್ತದೆಯೇ ಹೊರತು ಇದು ಯೋಜನೆಯಾಗಿ ಅನುಷ್ಠಾನಕ್ಕೆ ಬರುವುದಿಲ್ಲವೆನ್ನುವ ಮಾತನ್ನು ಕಳಕಳಿಯಿಂದ ಹೇಳುತ್ತೇನೆ. ಈ ಕುರಿತು ತಾವು ರಿ-ಅಪ್ರೋಪ್ರಿಯೇಟ್ ಮಾಡಿ, ಬೇಕಾದರೆ ಇನ್ನೊಮ್ಮೆ ರಿ-ಅಲೋಕೇಶನ್ ಮಾಡುವ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ತಮಗೆ ಹೇಳುತ್ತೇನೆ. ಇನ್ನೊಂದು ವಿಚಾರವೆಂದರೆ, ಸಣ್ಣ-ಪುಟ್ಟ ಅಭಿವೃದ್ಧಿ ಯೋಜನೆಗಳನ್ನು ಹಾಕಿಕೊಂಡಿದ್ದೀರಿ. ಹೈದರಾಬಾದ್-ಕರ್ನಾಟಕ ಏರಿಯಾ ಡೆವಲಪಮೆಂಟ್ ಪ್ರಾಜೆಕ್ಟ, ಮಲೆನಾಡು ಏರಿಯಾ ಡೆವಲಪಮೆಂಟ್ ಪ್ರಾಜೆಕ್ಟ ಮತ್ತು ಬಾರ್ಡರ್ ಏರಿಯಾ ಡೆವಲಪಮೆಂಟ್ ಪ್ರಾಜೆಕ್ಟ ಇವೆಲ್ಲವೂ ಕೂಡ ನಮ್ಮ ರಾಜ್ಯದ ಜನರ ಹಿತದೃಷ್ಟಿಯಿಂದ ತಾವು ಹಾಕಿಕೊಂಡಂಥ ಯೋಜನೆಗಳಾಗಿವೆ. ಆದರೆ, ಅವುಗಳ ಪರಿಸ್ಥಿತಿ ಏನಾಗಿದೆ? ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ರಚಿಸಿದ ನಂತರ ಅದರ ಮೇಲೆ ಎಷ್ಟು ಜನರ ಕಣ್ಣು ಬಿತ್ತೋ ಗೊತ್ತಿಲ್ಲ. ನಮ್ಮ ಕಡೆ ಅದರ ಬಗ್ಗೆ 'ದೃಷ್ಟಿಯಾಯ್ತು' ಎಂದು ಹೇಳುತ್ತಾರೆ. ಸದರಿ ಮಂಡಳಿಯನ್ನು ರಚಿಸಿದ್ದು ತಪ್ಪೇನೋ ಎನ್ನುವಂತೆ ಇವೊತ್ತು ಸರ್ಕಾರದಲ್ಲಿ ಯಾವುದೇ ಒಂದು ಯೋಜನೆ ಬಗ್ಗೆ ಕೇಳಿದರೆ ಅಥವಾ ಸರ್ಕಾರದಲ್ಲಿ ಯಾವುದೋ ಒಂದು ಮಂಜೂರಾತಿಗಾತಿ ಹೋದರೆ ಅದನ್ನು ಹೆಚ್‌ಕೆಡಿಬಿಯಲ್ಲಿ

ತೆಗೆದುಕೊಳ್ಳಿ ಹೆಚಕೆಡಿಬಿ ಯೋಜನೆಯಲ್ಲಿ ಹಾಕಿ ಎಂದು ಹೇಳುತ್ತಾರೆ. ಸ್ಟೇಡಿಯಂಗೂ ಸಂಬಂಧಿಸಿದಂತೆ ಹೆಚಕೆಡಿಬಿ ನಿಧಿ ಕೇಳುತ್ತಾರೆ, ಕೃಷಿ ಇಲಾಖೆಗೆ ಸಂಬಂಧಿಸಿದ ಕೆಲಸಕ್ಕೂ ಅದನ್ನೇ ಕೇಳುತ್ತಾರೆ. ಪಿಡಬ್ಲ್ಯೂಡಿಗೆ ಸಂಬಂಧಿಸಿವಂತೆಯೂ ಅದನ್ನೇ ಕೇಳುತ್ತಾರೆ. ಅಂದರೆ, ಹೆಚಕೆಡಿಬಿ ಹಣ ಒಂದು ವಿಶಿಷ್ಟವಾದ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಇದೆಯೆಂದು ಅಥವಾ ಯಾವುದೋ ಕೆಲವು ಹಿಂದುಳಿದ ಭಾಗಗಳೆಂದು ಗುರ್ತಿಸಿ ಅದ ಅಭಿವೃದ್ಧಿಗಾಗಿ ಶ್ರೀಮಾನ್ ಧರ್ಮಸಿಂಗರವರ ಅಧ್ಯಕ್ಷತೆಯಲ್ಲಿ ಹಿಂದೆ ರಚಿಸಲಾಗಿದ್ದ ಸಮಿತಿಯ ಆ ಕುರಿತ ಕೆಲವು ಭಾಗಗಳಿಗೆ ಹೋಲಿಸಿದಾಗ ಹೈದರಾಬಾದ್-ಕರ್ನಾಟಕ ಪ್ರದೇಶ ಬಹಳ ಹಿಂದುಳಿದ ರಾಜ್ಯದ ಬೇರೆ ಭಾಗವಿದ್ದು, ಅದನ್ನು ಬೇರೆ ಭಾಗಗಳಂತೆ ಸರಿಸಮಾನವಾಗಿ ಯಾವ ರೀತಿ ತರಬೇಕೆಂಬ ದೃಷ್ಟಿಯಿಂದ ಸರ್ಕಾರಕ್ಕೆ ವರದಿ ಕೊಟ್ಟಿದ್ದರು. ಸದರಿ ವರದಿಯಲ್ಲಿ ಕೆಲವು ಆದ್ಯತೆಗಳಿದ್ದವು. ಅವು ಶಾಲೆಗಳಿರಬಹುದು, ಅಥವಾ ಆಸ್ಪತ್ರೆಗಳಿರಬಹುದು, ಬಸ್ಸುಗಳ ಸೌಕರ್ಯವಿರಬಹುದು, ಪಶುವೈದ್ಯ ಆಸ್ಪತ್ರೆಗಳಿರಬಹುದು, ಅಥವಾ ಕೃಷಿ ಕ್ಷೇತ್ರದಲ್ಲಿ ಸಂಶೋಧನಾ ಸಂಸ್ಥೆಯಿರಬಹುದು. ಇವೆಲ್ಲಕ್ಕೂ ಕೂಡ ಕೆಲವು ಪ್ಯಾರಾಮೀಟರ್ಸ್ ಹಾಕಿಕೊಂಡು ಆ ಒಂದು ಮಂಡಳಿ ರಚಿಸಿ ಕಾನೂನನ್ನು ಸಹ ಮಾಡಿ ಅದಕ್ಕೆ ಹಣ ನಿಗದಿಪಡಿಸಿ ಒದಗಿಸಿಕೊಟ್ಟಿದ್ದು ಆಯಿತು. ನಂತರ ಏನಾಯಿತು? 2-3 ವರ್ಷಗಳಲ್ಲಿ ಸ್ವಲ್ಪ ಹೆಚ್ಚು-ಕಡಿಮೆ ಹಣವನ್ನು ಖರ್ಚು ಮಾಡುತ್ತಾ ಬರಲಾಯಿತು. ಆದರೆ, ಒದಗಿಸಿರುವ ಹಣ ಸಮಾಧಾನದಿಂದ ಅಥವಾ ಒಳ್ಳೆಯ ರೀತಿಯಲ್ಲಿ ಖರ್ಚು ಮಾಡಬೇಕೆಂದು ನಮಗೆ ಎಷ್ಟು ಮನಸ್ಸಿತ್ತೋ ಅಷ್ಟರಮಟ್ಟಿಗೆ ಖರ್ಚಾಗದಿರಬಹುದು ಆದರೆ, ಕೆಲವು ಕೆಲಸಗಳಂತೂ ಹೆಚಕೆಡಿಬಿಯಲ್ಲಿ ಆಯಿತು. ಆದರೆ, ಇವೊತ್ತು ಏನಾಗಿದೆ? ಇವೊತ್ತು ಸರ್ಕಾರ ವರದಿ ಮಂಡಳಿಗೆ ಒದಗಿಸಿರುವ ಹಣವನ್ನು ನಾವು ಹೋಲಿಸಿ ನೋಡಿದಾಗ ಮತ್ತು ಮಾಡಿದಂಥ ವೆಚ್ಚ ನೋಡಿದಾಗ ಈ ಬಗ್ಗೆ ಸರ್ಕಾರಕ್ಕೆ ಆಸಕ್ತಿ ಇಲ್ಲವೆಂದು ಕಾಣಿಸುತ್ತದೆ. ಮಂತ್ರಿಗಳಿಗೆ ಆಸಕ್ತಿ ಇಲ್ಲವೇ? ಅಥವಾ ನೀವು ಹಣವನ್ನು ಬಿಡುಗಡೆ ಮಾಡುವುದಿಲ್ಲವೇ? ಎನ್ನುವುದು ನನಗೆ ಗೊತ್ತಾಗುತ್ತಿದೆ. ದುಡ್ಡು ಬಿಡುಗಡೆ ಮಾಡಿದ್ದರೆ ಇದರ ಬಗ್ಗೆ ಹೇಳುತ್ತೇನೆ. 1994-95ನೇ ಸಾಲಿನಲ್ಲಿ ಹೈದರಾಬಾದ್ -ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಹಂಚಿಕೆಯಾದಂಥ ಹಣ 66 ಕೋಟಿ ರೂಪಾಯಿಗಳು, ಖರ್ಚಾದದ್ದು 46 ಕೋಟಿ ರೂಪಾಯಿಗಳು. ನಂತರ, 1995-96ರಲ್ಲಿ ಹಂಚಿಕೆಯಾದ ಹಣ 60 ಕೋಟಿ ರೂಪಾಯಿಗಳಾಗಿದ್ದರೆ ಪ್ರಸಕ್ತ ವರ್ಷವೂ ಅಷ್ಟೆ ಹಣವನ್ನು ಹಂಚಿಕೆ ಮಾಡಿದ್ದೀರೇ ವಿನಃ ಹೆಚ್ಚೇನೂ ಆಗಿಲ್ಲ. ಹಿಂದೆ ಏನು ಅಭಿಪ್ರಾಯವಿತ್ತೆಂದರೆ, ಹಿಂದುಳಿದ ಭಾಗಗಳ ಅಭಿವೃದ್ಧಿಗಾಗಿ ಒದಗಿಸುವ ಹಣದಲ್ಲಿ ಪ್ರತಿ ವರ್ಷವೂ ಶೇಕಡ 10-15ರಷ್ಟು ಹೆಚ್ಚು ಮಾಡಬೇಕೆಂಬುದು. ಕಾರಣ, ತಮಗೆ ಗೊತ್ತಿರುವಂತೆ ಪ್ರತಿ ವರ್ಷವೂ ಎಸ್ಕಲೇಶನ್ ಆಗುತ್ತದೆ. ಯಾವಾಗಲೂ ಪಿಡಬ್ಲ್ಯೂಡಿಯಲ್ಲಾಗಲಿ ಬೇರೆ ಕೆಲಸಗಳಿಗೆ ಏನು ಮಾಡುತ್ತಾರೋ ಅದೇ ರೀತಿ ಬಜೆಟರಿ ಪ್ರಾವಿಜನ್ ಮಾಡುತ್ತಾರೆ, ಶೇಕಡ 5-10ರಷ್ಟು ಜಾಸ್ತಿ ಇಟ್ಟಿದ್ದಾರೆ. ಇವರು ಶೇಕಡ 5-10 ರಷ್ಟು ಜಾಸ್ತಿ ಇಡುವುದನ್ನು ಬಿಟ್ಟರೆ ಹಿಂದೆ 66 ಕೋಟಿ ರೂಪಾಯಿಗಳಷ್ಟು ಹಣ ಏನು ಒದಗಿಸಿದ್ದರು, ಅದನ್ನು ಪ್ರಸಕ್ತ ವರ್ಷ 60 ಕೋಟಿ ರೂಪಾಯಿಗಳಿಗೆ ತಂದರು. ಅಂದರೆ, ಪ್ರಾಕ್ಟಿಕಲ್ ಆಗಿ ಇವೊತ್ತು ಎಸ್ಕಲೇಶನ್ ಚಾರ್ಜಸ್ ಅನ್ನೂ ಸಹ ನಾವು ಲೆಕ್ಕಕ್ಕೆ ತಗೆದುಕೊಂಡ್ 50-55 ಕೋಟಿ ರೂಪಾಯಿಗಳು ಮಾತ್ರ ಆಗುತ್ತದೆ.

ಅಂದರ ಈ ರೀತಿಯಾಗಿ ತಾವು ಧೋರಣೆಯನ್ನು ತಾಳಿದರೆ ಎಷ್ಟರಮಟ್ಟಿಗೆ ಆ ಭಾಗದ ಅಭಿವೃದ್ಧಿಯಾಗುತ್ತದೆ ಎಂದು ನಾನು ಕೇಳುತ್ತೇನೆ. ನೀವು ಅದಕ್ಕೆ ಈ ವರ್ಷ 70-80 ಕೋಟಿ ರೂಪಾಯಿಗಳನ್ನಾದರೂ ಕೊಡುವುದನ್ನು ಬಿಟ್ಟು, ಈ ವರ್ಷ ಪುನಃ ಅದಕ್ಕೆ ಕೇವಲ 60 ಕೋಟಿ ರೂ.ಗಳನ್ನು ಕೊಟ್ಟಿದ್ದೀರಿ. ಇದು ಯಾವ ನ್ಯಾಯ? ಇದರಿಂದ ನೀವು ತಾರತಮ್ಯವನ್ನು ಹೋಗಲಾಡಿಸತಕ್ಕ ಪ್ರಯತ್ನ ಮಾಡಿದ್ದೀರಾ ಅಥವಾ ಇಲ್ಲವೇ ಎಂಬ ಬಗ್ಗ ಗೊತ್ತಾಗುತ್ತದ. 1995-96ನೇ ಸಾಲಿನಲ್ಲಿ 60 ಕೋಟಿ ರೂ.ಗಳನ್ನು ಕೊಟ್ಟಿರುತ್ತೀರಿ. ಆದರೆ ಡಿಸೆಂಬರ್ ಅಂತ್ಯದವರೆಗೆ ಕೇವಲ 5 ಕೋಟಿ ರೂ.ಗಳನ್ನು ಮಾತ್ರ ಖರ್ಚು ಮಾಡಿದ್ದೀರಿ. ಡಿಸೆಂಬರ್‌ನಿಂದ ಇತ್ತೀಚಿನವರೆಗಿನ ಅಂಕಿ-ಅಂಶಗಳನ್ನು ಮಾನ್ಯ ಹಣಕಾಸು ಸಚಿವರೇ ಕೊಡಬೇಕು. ಮೀಟಿಂಗ್ ಒಂದರಲ್ಲಿ ಸರ್ಕಾರ ಕೊಟ್ಟಂತಹ ಅಂಕಿಅಂಶಗಳನ್ನೇ ನಾನಿಲ್ಲಿ ಹೇಳುತ್ತಿದ್ದೇನೆ. ಇನ್ನು ಮಲೆನಾಡು ಅಭಿವೃದ್ಧಿ ಮಂಡಳಿಯನ್ನು ಕೂಡ ವಿಶೇಷವಾಗಿ ಮಲನಾಡಿನ ಅಭಿವೃದ್ಧಿಗಾಗಿ ರಚಿಸಲಾಗಿದೆ. ಇದಕ್ಕೆ ತಾವು 30 ಕೋಟಿ ರೂ.ಗಳನ್ನು ಅಲಾಟ್ ಮಾಡಿದ್ದೀರಿ. ಡಿಸೆಂಬರ್ ಅಂತ್ಯದವರೆ ಕೇವಲ 8 ಕೋಟಿ 4 ಲಕ್ಷ ರೂ.ಗಳನ್ನು ಮಾತ್ರ ಖರ್ಚು ಮಾಡಿದ್ದೀರಿ. ಗಡಿ ಪ್ರದೇಶಾಭಿವೃದ್ಧಿ ಮಂಡಳಿಗೆ 10 ಕೋಟಿ ರೂ.ಗಳನ್ನು ನಿಗದಿ ಮಾಡಿದ್ದಿರಿ. ಆದರೆ ಬಿಡುಗಡೆ ಮಾಡಿದ್ದು ಡಿಸೆಂಬರ್ ಅಂತ್ಯದವರೆ 2½ ಕೋಟಿ ರೂ.ಗಳನ್ನು ಮಾತ್ರ. ಡಿಸೆಂಬರ್ ನಂತರ ಮಿಕ್ಕ ಹಣ ಬಿಡುಗಡ ಮಾಡಿರಬಹುದು, ಆ ಬಗ್ಗ ನನಗ ಗೊತ್ತಿಲ್ಲ. ಆದರ ಡಿಸೆಂಬರ್ ಅಂತ್ಯದವರಗ ನೀವು ಒಂದು ಪೈಸೆ ಹಣವನ್ನೂ ಖರ್ಚು ಮಾಡಿರುವುದಿಲ್ಲ. ಇದು ನೀವು ಮಾಡಿರುವ ಪ್ರಗತಿ. ಮಾರ್ಚನಿಂದ ಡಿಸೆಂಬರವರಗೆ 10 ಕೋಟಿ ರೂ.ಗಳನ್ನು ಪ್ರಾವಿಜನ್ ಇರತಕ್ಕಂತಹ ಒಂದು ಯೋಜನೆಗೆ, ನೀವು ಒಂದು ಪೈಸೆಯನ್ನೂ ಖರ್ಚು ಮಾಡಿಲ್ಲ. ಏಪ್ರಿಲ್, ಮೇ, ಜೂನ್ ಇವೆಲ್ಲಾ ಕೂಡ ವರ್ಕಿಂಗ್ ಸೀಜನ್. ಹಾಗೆಯೇ ಡಿಸೆಂಬರ್, ಜನವರಿ ಮತ್ತು ಫೆಬ್ರವರಿ ಕೂಡ ವರ್ಕಿಂಗ್ ಸೀಜನ್ ಅಲ್ಲವೇ? ಈ ಅಂಕಿ ಅಂಶಗಳನ್ನೆಲ್ಲಾ ಗಣನೆಗ ತೆಗೆದುಕೊಂಡರೆ, ನೀವು ಎಷ್ಟರಮಟ್ಟಿಗೆ ಒರೀಜನರಲ್ ಇಮಬ್ಯಾಲೆನ್ಸ್ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಿ, ಬಾರ್ಡರ್ ಏರಿಯಾ ಡೆವಲಮೆಂಟ್ ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದೀರಿ ಅಥವಾ ಮಲೆನಾಡು ಅಭಿವೃದ್ಧಿ ಮಾಡುವುದಕ್ಕೆ ಹತ ಹಿಡಿಮ ಏನೊಂದು ಹಣವನ್ನು ನೀವು ತೆಗೆದುಕೊಂಡಿರಿ ಅದನ್ನು ಎಷ್ಟರಮಟ್ಟಿಗೆ ಖರ್ಚು ಮಾಡಿದ್ದೀರಿ ಎಂಬುದು ಗೊತ್ತಾಗುತ್ತದೆ. ಇದನ್ನು ಯಾರು ಕೇಳುವವರೇ ಇಲ್ಲ. ನಾವು ಕೂಡ ಅದನ್ನು ಕೇಳುವುದಕ್ಕಾಗುವುದಿಲ್ಲ. ಏಕೆಂದರೆ ಸದನ ಸೇರುವುದು ಬಹಳ ಕಡಿಮೆ ಅವಧಿ. ಕನಿಷ್ಠ ಪಕ್ಷ ನಿಮ್ಮ ಪಾರ್ಟಿಯಲ್ಲಾದರೂ ಈ ಬಗ್ಗೆ ನೀವು ಕೇಳಬೇಕಾಗಿತ್ತು. ನಿಮ್ಮ ಕ್ಯಾಟಿನೆಟನಲ್ಲಾದರೂ ಇದರ ಬಗ್ಗೆ ರಿವ್ಯೂ ಆಗಿರಬೇಕಾಗಿತ್ತು. ಕೊನೆಯ ಪಕ್ಷ ಸಂಬಂಧಪಟ್ಟ ಮಂತ್ರಿಗಳಾಗಲೀ ಇದರ ಬಗ್ಗೆ ಮಂತ್ರಿ ಮೀಟಿಂಗ್ ಮಾಡುವಾಗ, ಮೂರು ತಿಂಗಳಿಗೊಮ್ಮೆ ಮೀಟಿಂಗ್ ಮಾಡುವಾಗ ರಿವ್ಯೂ ಮಾಡಬೇಕಾಗಿತ್ತಿತ್ತು. 'ಏಕೆ ರಿವ್ಯೂ ಮಾಡಲಿಲ್ಲ. ಏಕೆ ನೀವು ರಿವ್ಯೂ ಮಾಡಬಾರದಿತ್ತು? ಹೆಚ್.ಕೆ.ಡಿ.ಬಿ. ಗೆ ಈ ವರ್ಷ 60 ಕೋಟಿ ರೂ.ಗಳನ್ನು ಇಟ್ಟಿದ್ದೀರಿ, ಆದರೆ ಬಿಡುಗಡೆ ಮಾಡಿದ್ದು ಕೇವಲ 25 ಕೋಟಿ ರೂ.ಗಳನ್ನು ಮಾತ್ರ. ಇತ್ತೀಚೆಗೆ ಹಣ ಬಿಡುಗಡೆ ಮಾಡಿದ್ದರೆ, ಯಾವಾಗ ಹಣ ಬಿಡುಗಡೆ ಮಾಡಿದಿರಿ, ಅದರಲ್ಲಿ ಎಷ್ಟು ಖರ್ಚಾಗಿದೆ ಎಂಬ ವಿವರಗಳನ್ನು ನೀವು ಹೇಳಿ. ಬರೀ ಪುಸ್ತಕದಲ್ಲಿ ಈ ಬಗ್ಗ ಪ್ರಿಂಟ್ ಮಾಡಿ

ನಮಗೆಲ್ಲಾ ಹಂಚಿದರೆ ಸಾಲದು. ಮಾತೆತ್ತಿದರೆ ನಿಮ್ಮ ಸರ್ಕಾರ ಏನು ಮಾಡಿತ್ತು ಎಂಬ ಮಾತನ್ನು ಕಲಿತಿಲ್ಲ. ಖರ್ಚು ಆಗಿದೆಯೇ? ಹೇಗೆ? ಎಂಬ ಬಗ್ಗೆ ರಿವ್ಯೂ ಕೂಡ ಮಾಡುವಂತಿಲ್ಲ. ಕೆಲಸ ಏನು ನಡೆದಿದೆ ಎಂದು ನೋಡತಕ್ಕ ಆಸಕ್ತಿ ನಿಮಗೆ ಇಲ್ಲ. ನಾವು ಏನು ತಿಳಿದುಕೊಳ್ಳೋಣ? ನಾವು ಟೀಕೆಗಾಗಿ ಟೀಕೆ ಮಾಡುತ್ತಿಲ್ಲ ಅಲ್ಲವೇ? ನೀವು ಕೊಟ್ಟಂತಹ ಅಂಕಿ ಅಂಶಗಳನ್ನು ಇಟ್ಟುಕೊಂಡೇ ನಾವು ಇಲ್ಲಿ ಮಾತನಾಡುತ್ತಿದ್ದೇವೆ. ಈ ಮೂರು ಬೋರ್ಡ್‌ಗಳು ಸಾಲಿಲಲ್ಲ ಎಂದು ಮೊನ್ನೆ ನಮ್ಮ ಮಾನ್ಯ ಬೈರೇಗೌಡರು ಬಯಲು ಸೀಮೆ ಅಭಿವೃದ್ಧಿ ಮಂಡಳಿ ಎಂದು ಹೊಸ ಮಂಡಳಿಯೊಂದನ್ನು ರಚಿಸಿ, ಅದಕ್ಕೆ ದುಡ್ಡು ಕೊಡಿಸಲಿಕ್ಕೆ ಈಗ ಪ್ರಯತ್ನ ಮಾಡುತ್ತಿದ್ದಾರೆ. ಹಿಂದೆ ಎಷ್ಟು ಅಲೋಕೇಷನ್ ಮಾಡಿದ್ದಿರಿ, ಎಷ್ಟು ಹಣ ರಿಲೀಸ್ ಮಾಡಿದ್ದಿರಿ, ಎಷ್ಟು ಹಣ ಖರ್ಚು ಮಾಡಿದ್ದಿರಿ ಎಂದು ನಾವು ಮಾನ್ಯ ಜಾಲಪ್ಪನವರನ್ನು ಕೇಳಲಿಲ್ಲ. ಡಿಸೆಂಬರ್ ಅಂತ್ಯದವರೆಗೆ ನೀವು ಕೊಟ್ಟಂತಹ ಅಂಕಿಅಂಶಗಳನ್ನೇ ನಾನಿಲ್ಲಿ ಕೊಟ್ಟೆ. ಅದು ಬಿಟ್ಟು ಬೇರೆ ಯಾವ ಅಂಕಿ ಅಂಶಗಳನ್ನು ನಾನಿಲ್ಲಿ ಹೇಳಲಿಲ್ಲ. 1994-95ರಲ್ಲಿ 45 ಕೋಟಿ ಮಾತ್ರ ಖರ್ಚಾಗಿದೆ. You take right from 1989-90. ಚುನಾವಣಾ ವರ್ಷವೊಂದನ್ನು ಬಿಟ್ಟು ಬಿಡಿ. ಡಿಸೆಂಬರರವರೆಗೆ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಡಿ. You can count all the 4 years. There was more or less-the expenditure is 80%. ಸುಮ್ಮನೆ ಯಾವುದೋ ಒಂದು ಆಡ್ ಫಿಗರ್ ತೆಗೆದುಕೊಂಡು, ಅದನ್ನೇ ಮಾತನಾಡಲಿಕ್ಕೆ, ಸಮರ್ಥನೆ ಮಾಡಲಿಕ್ಕೆ ಹೋಗಬೇಡಿ. ನಿಮ್ಮ ಮಂತ್ರಿಗಳು ಹಣವನ್ನು ಬಿಡುಗಡೆ ಮಾಡಿದರೂ ಏಕೆ ಖರ್ಚು ಮಾಡಲಿಲ್ಲ ಎಂದು ಕೇಳಿ. ಮಾನ್ಯ ಅರ್ಥ ಸಚಿವರು ಹಣವನ್ನೇ ಬಿಡುಗಡೆ ಮಾಡಿರಲಿಲ್ಲ ಎಂದರೆ ಅದು ಅವರ ತಪ್ಪಾಗುತ್ತದೆ. ಪ್ರಗತಿ ಆಗಬೇಕಾದಂತಹದ್ದನ್ನು ಕುಂಠಿತಗೊಳಿಸುವುದಕ್ಕೆ ತಾವೇ ಕಾರಣಕರ್ತರು ಎನ್ನತಕ್ಕ ಮಾತನ್ನು ನಾವು ಹೇಳಬೇಕಾಗುತ್ತದೆ. ಮಾನ್ಯ ಹೆಚ್.ಕೆ.ಡಿ.ಬಿ. ಸಚಿವರು ಅಥವಾ ಮಾನ್ಯ ಹಣಕಾಸಿನ ಮಂತ್ರಿಗಳು, ಯಾರಾದರೂ ಒಬ್ಬರು ಇದರ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಲ್ಲ.

ಶ್ರೀ ಸಿದ್ಧರಾಮಯ್ಯ : 1994-95ರಲ್ಲಿ ದುಡ್ಡು ಪೂರ್ಣ ಖರ್ಚು ಮಾಡದಿದ್ದುದಕ್ಕೆ ನೀವು ಕಾರಣರಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಲೆಕ್ಷನ್ ಇಯರ್ ಮಟ್ಟಿಗೆ ನೀವು ಬಿಡಿ, ಅಕ್ಟೋಬರ್ ತಿಂಗಳಿಗೆ ಆ ವರ್ಷ ಮುಗಿಯಿತು. ನೀವು ಅದರ ಹಿಂದಿನ ವರ್ಷಗಳ ಅಂಕಿ ಅಂಶಗಳನ್ನು ತೆಗೆದುಕೊಳ್ಳಿ. ಏಕೋ ನೀವು ಬಿಡುವಂತೆ ಕಾಣುತ್ತಿಲ್ಲ. ನಾವೂ ಕೂಡ ಹಿಂದಿ ಅಂಕಿ ಅಂಶಗಳನ್ನು ಹೇಳದಿದ್ದರೆ ಸರಿಯಾಗುವುದಿಲ್ಲ. ನೀವು ಅವುಗಳನ್ನು ಕೇಳಿದ ಮೇಲೆ ನಾವು ಹೇಳಲೇಬೇಕಾಗುತ್ತದೆ. ತಪ್ಪಿಸಿಕೊಂಡು ಹೋಗುವುದು ಬೇಡ. 1990-91ರಲ್ಲಿ 50 ಕೋಟಿ 9 ಲಕ್ಷ ರೂ.ಗಳ ಅನುದಾನ ನೀಡಲಾಗಿತ್ತು, ಖರ್ಚಾಗಿದ್ದು 50 ಕೋಟಿ 9 ಲಕ್ಷ. ಈಗ ನಾವು ಕೊಟ್ಟ ಅಂಕಿ ಅಂಶ ಹೇಳುತ್ತೇನೆ. 1991-92ರಲ್ಲಿ 61 ಕೋಟಿ 30 ಲಕ್ಷ ಅನುದಾನ ಕೊಟ್ಟಿದ್ದರಲ್ಲಿ 48 ಕೋಟಿ 99 ಲಕ್ಷ ಖರ್ಚಾಗಿದೆ. 1992-93 ರಲ್ಲಿ 64 ಕೋಟಿ ರೂ.ಗಳನ್ನು ಇದಕ್ಕಾಗಿ ಇಟ್ಟಿದ್ದು, 60 ಕೋಟಿ ರೂ.ಗಳು ಖರ್ಚಾಗಿವೆ. 1993-94 ರಲ್ಲಿ 60 ಕೋಟಿ ರೂ.ಗಳನ್ನು ಕೊಟ್ಟಿದ್ದು 63 ಕೋಟಿ ರೂ.ಗಳು ಖರ್ಚಾಗಿದೆ. 1994-95ರಲ್ಲಿ ಅಂದರೆ

ಎಲೆಕ್ಷನ್ ನಡೆದಂತಹ ವರ್ಷದಲ್ಲಿ 66 ಕೋಟಿ ರೂ.ಗಳಲ್ಲಿ 45 ಕೋಟಿ ಖರ್ಚಾಗಿದೆ. ಹಿಂದಿನ ವರ್ಷಗಳ ಯಾವುದೇ ಅಂಕಿ ಅಂಶಗಳನ್ನು ತೆಗೆದುಕೊಂಡರೂ ಕೂಡ ಶೇಕಡ 80ಕ್ಕಿಂತ ಕಡಿಮೆ ಹಣ ಖರ್ಚಾಗಿಲ್ಲ. ಸುಮ್ಮನೆ ನೀವು ಅಂಕಿ ಅಂಶ ಕಂಪೇರ್ ಮಾಡಿಕೊಂಡು ನಿಮ್ಮ ಮಂತ್ರಿಗಳನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ನೀವು ಮೀಟಿಂಗವೊಂದರಲ್ಲಿ ಕೊಟ್ಟಂತಹ ಅಂಕಿ ಅಂಶಗಳು ಇವು. ಬೇಕಾದರೆ ನಾನು ನಿಮಗೆ ಈ ಕಾಗದ ಪತ್ರಗಳನ್ನು ಕೊಡುತ್ತೇನೆ. ಕಳೆದ ವರ್ಷ ಇಟ್ಟಿರತಕ್ಕ 60 ಕೋಟಿ ರೂ.ಗಳಲ್ಲಿ ಡಿಸೆಂಬರ್ ವರೆಗೆ 4½ ಕೋಟಿ ರೂ.ಗಳನ್ನು ಮಾತ್ರ ಖರ್ಚು ಮಾಡಿದ್ದೀರಲ್ಲ, ಇದು ಸರಿಯೇ? ಇದನ್ನು ನೀವು ಹೇಗೆ ಸಮರ್ಥನೆ ಮಾಡಿಕೊಳ್ಳುತ್ತೀರಾ? 10 ಕೋಟಿ ರೂ.ಗಳನ್ನು ಬಾರ್ಡರ್ ಏರಿಯಾ ಡೆವಲಪಮೆಂಟಗೆ ಕೊಟ್ಟು ಒಂದೂ ಪೈಸೆ ಖರ್ಚು ಮಾಡಿದಿರುವುದು ನಿಮಗೆ ಗೌರವ ತರುತ್ತದೆಯೇ? ಹೀಗಿದೆ, ತಮಗೆ ಅಭಿವೃದ್ಧಿ ಬಗ್ಗೆ ಇರತಕ್ಕ ಆಸಕ್ತಿ; ರೀಜನಲ್ ಇಮಬ್ಯಾಲೆನ್ಸ ರಿವ್ಯೂ ಮಾಡತಕ್ಕ ಕೆಲಸದ ಬಗ್ಗೆ. ಹೀಗೆ ಒಂದು ಕಡೆ ಹೆಚ್.ಕೆ.ಡಿ.ಬಿ. ಬಗ್ಗೆ ನೆಗ್ಲೆಕ್ಟ ಮಾಡಿದ್ದೀರಿ, ಮಲೆನಾಡು ಅಭಿವೃದ್ಧಿ ಮಂಡಳಿಗೆ ಹಣ ಖರ್ಚು ಮಾಡತಕ್ಕ ಶಕ್ತಿ ಬರಲಿಲ್ಲ. ಬಾರ್ಡರ್ ಏರಿಯಾ ಡೆವಲಪಮೆಂಟ್ ನಲ್ಲಿ ಹಣ ಇದ್ದರೂ ಕೂಡ ನೀವು ಖರ್ಚು ಮಾಡಲ್ಲ ಎಂಬ ಮಾತನ್ನು ನಾನು ಹೇಳುತ್ತೇನೆ. ಈಗ 7½ ಕೋಟಿ ರೂ.ಗಳನ್ನು ಅದಕ್ಕೆ ಬಿಡುಗಡೆ ಮಾಡಿದ್ದೇವೆ ಎಂಬ ಮಾತನ್ನು ಹೇಳುತ್ತಿದ್ದೀರಿ. ಅದೆಷ್ಟು ಹಣ ಬಿಡುಗಡೆ ಮಾಡಿದ್ದೀರಿ ಎಂಬ ಅಂಕಿಅಂಶಗಳನ್ನು ತಾವೇ ಕೊಡಬೇಕು. ನೀರಾವರಿ ಬಗ್ಗೆ ತಮಗೆ ಆಸಕ್ತಿ ಇಲ್ಲ. ಹೌಸಿಂಗ್ ಪ್ರಾಜೆಕ್ಟ ವೆಲಫೇರ್ ಸ್ಕೀಮಿನಲ್ಲಿ ಬಡವರಿಗೆಲ್ಲಾ ಅನುಕೂಲ ಮಾಡುತ್ತೇವೆ ಎಂಬ ಮಾತನ್ನು ನೀವು ಹೇಳಿದ್ದೀರಿ ಆದರೆ ಅದರ ಬಗ್ಗೆ ನೀವೇ ನೀಡಿರತಕ್ಕ ಅಂಕಿ ಅಂಶಗಳನ್ನು ನಾನು ಸದನದ ಮುಂದಿಟ್ಟಿದ್ದೇನೆ. ಅದನ್ನು ಮಾನ್ಯ ಸಚಿವರೂ ಒಪ್ಪುತ್ತಾರೆ. ಏಕೆ ನಾವು ಅಂದುಕೊಡಂತೆ ಆಗಲಿಲ್ಲ ಎಂದು ಮಾನ್ಯ ಸಚಿವರಿಗೆ ಈಗ ಮನವರಿಕೆಯಾಗಿದೆ. ನಾನು ಈ ಅಂಕಿಅಂಶಗಳನ್ನು ಕೊಟ್ಟ ಮೇಲೆ ಮಾನ್ಯ ಮುಖ್ಯಮಂತ್ರಿಯವರು ಸತ್ಯಕ್ಕೆ ದೂರವಾದ ಅಂಕಿ ಅಂಶಗಳನ್ನು ಹೇಳಿದರಲ್ಲ ಎಂದು. ಮಾನ್ಯ ಸಚಿವರಿಗೆ ಸ್ವಲ್ಪ ಮಟ್ಟಿಗೆ ಮನವರಿಕೆಯಾಗಿದೆ. ಬಹುಶಃ ಅವರು ಮಾಡಿದಂತಹ ತಪ್ಪನ್ನು ಅವರು ಒಪ್ಪಿಕೊಳ್ಳುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಬಡ್ಜೆಟರಿ ಪ್ರಾವಿಜನನಲ್ಲಿ ಇವರು ಯಾವಾಗಲೂ ಹೈ ಅಲೋಕೇಷನ್ ತೋರಿಸುತ್ತಾರೆ. 100 ಕೋಟಿ ರೂ.ಗಳು ಕೊಡುವ ಕಡೆ 150 ಕೋಟಿ ರೂ.ಗಳನ್ನು ಕೊಡುತ್ತಾರೆ.ಕೊನೆಗೆ ಅದರಲ್ಲಿ ಖರ್ಚು ಮಾಡುವುದು ಕೇವಲ 50-60 ಕೋಟಿ ರೂ.ಗಳನ್ನಷ್ಟೇ. ಅವರ ಅಂಕಿ ಅಂಶಗಳು, ಯಾವಾಗಲೂ ಹೆಚ್ಚು ಕಡಿಮೆ ಆಗುತ್ತಾ ಇರುತ್ತದೆ. ಹೀಗೆ ಮಾಡುವುದನ್ನು ಅವರು ಕಲಿತುಕೊಂಡು ಬಿಟ್ಟಿದ್ದಾರೆ. ಅಲೋಕೇಷನ್ ಇದ್ದರೂ ಸಹಿತ ನೀವು ಸಣ್ಣ ಪುಟ್ಟ ಕೆಲಸಗಳನ್ನೂ ಸಹ ಮಾಡಲಿಲ್ಲ ಎಂದು ನಾನು ನೇರವಾಗಿ ಹೇಳಬಯಸುತ್ತೇನೆ. ನಿಮ್ಮ ಸರ್ಕಾರ ಎಲ್ಲಾ ಹಂತಗಳಲ್ಲೂ ವಿಫಲವಾಗಿದೆ. ಇದಕ್ಕೆ ಬಹುಶಃ ಮಾನ್ಯ ಅರ್ಥ ಸಚಿವರು ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತೀರಿ ಮತ್ತು, ತಪ್ಪನ್ನು ಒಪ್ಪಿಕೊಳ್ಳುತ್ತೀರಿ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಸಮಾಜ ಕಲ್ಯಾಣ, ಶಿಕ್ಷಣ ಹೀಗೆ ಇನ್ನೂ ಅನೇಕ ವಿಷಯಗಳ ಬಗ್ಗೆ ಮಾತನಾಡಬೇಕಾಗಿತ್ತು. ಇನ್ನೂ ನಮ್ಮ ಅನೇಕ ಸ್ನೇಹಿತರರು ಆಯವ್ಯಯದ ಮೇಲೆ ಮಾತನಾಡುವವರಿದ್ದಾರೆ. ಅದಕ್ಕಾಗಿ ಮಾನ್ಯ ಸಭಾಧ್ಯಕ್ಷರೇ ನಾನು ಇಷ್ಟು ಮಾತ್ರ ಹೇಳುತ್ತೇನೆ,

ಈ ಸರ್ಕಾರ ಎಲ್ಲಾ ಫ್ರಂಟಗಳಲ್ಲೂ ವಿಫಲವಾಗಿದೆ. ಮತ್ತು ಅವರು ಕೊಟ್ಟಂತಹ ಮಾತಿನ ಪ್ರಕಾರ ನಡೆದುಕೊಳ್ಳುವುದಕ್ಕಾಗಲಿಲ್ಲ. ಒಂದು ಮಾತು ನಮ್ಮ ಮಾನ್ಯ ಯಡಿಯೂರಪ್ಪನವರು ಶಾಭಾಷ್ ಗಿರಿ ಕೊಟ್ಟರು. ಏಕೆಂದರೆ ಬಾಕಿ ಅನೇಕ ಸಾರಿ ಅವರು ಕ್ರಿಟಿಸೈಜ್ ಮಾಡಿದ್ದಾರೆ, ಅದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಯಾವ ಆಧಾರದ ಮೇಲೆ ನಮ್ಮ ವಿರೋಧ ಪಕ್ಷದ ನಾಯಕರು ಶಾಭಾಷ್ ಗಿರಿ ಕೊಟ್ಟರೋ ನನಗೆ ಗೊತ್ತಿಲ್ಲ. ತಮ್ಮ Annual Financial ಸ್ಟೇಟ್‌ಮೆಂಟಿನ ಪುಟ 5 ರಲ್ಲಿ ತಾವು ಪ್ರಿಂಟ್ ಮಾಡಿದಂತಹವರಲ್ಲಿ ಏನು ಇದೆ ಎಂದರೆ, ಅಬ್ಕಾರಿಯಲ್ಲಿ ತಮ್ಮ ಟಾರ್ಗೆಟ್ ಇದ್ದಿದ್ದು 1995-96ರಲ್ಲಿ 830 ಕೋಟಿ ರೂಪಾಯಿಗಳು. ಅಂದರೆ, ಸಂಗ್ರಹವಾಗಿದ್ದು 780 ಕೋಟಿ ರೂಪಾಯಿಗಳು. ಈಗ 800 ಕಟೋ ರೂಪಾಯಿಗಳೆಂದು ಹೇಳುತ್ತಾರೆ, ಅದು ಲೇಟೆಸ್ಟ ಇರಬಹುದು. ಆದರೆ, ನಮಗೆ ಅಂಕಿ-ಸಂಖ್ಯೆಗಳನ್ನು ಕೊಟ್ಟಿರುವ ಪ್ರಕಾರ ಆ ರೀತಿ ಇದೆ. ಈ ವರ್ಷ ಅವರು ಹಾಕಿಕೊಂಡಿದ್ದ ಟಾರ್ಗೆಟ್ 860 ಕೋಟಿ ರೂಪಾಯಿಗಳು. ಅನಂತರ, ಮಾರಾಟ ತೆರಿಗೆಯಲ್ಲೂ ಕೂಡ ಸುಮಾರು 3,149 ಕೋಟಿ ರೂಪಾಯಿಗಳು ಮತ್ತು ರಿವೈಸ್ಡ್‌ನಲ್ಲೂ ಕೂಡ ಅಷ್ಟೇ ಇದೆ. ಇದರಲ್ಲಿ ನಾವು ಟಾರ್ಗೆಟ್ ಅನ್ನು ಮುಟ್ಟಿದ್ದೇವೆಂದು ಅವರು ಹೇಳುತ್ತಾರೆ. ಆದರೆ, ಅಬ್ಕಾರಿ ಬಾಬಿನಲ್ಲಿ ಮಾತ್ರ ಅಷ್ಟು ಮುಟ್ಟಿಲ್ಲ. ಕಡಿಮೆಯಾಗಿದೆಯೆಂದರೆ ಸೆಕೆಂಡ್ಸ ಜಾಸ್ತಿ ಓಡುತ್ತಿದೆ ಎಂದಾಗುತ್ತದೆ. ಏಕೆಂದರೆ ಸೇಲ್ಸ ಟ್ಯಾಕ್ಸನಲ್ಲಿ ಅವರು ಟಾರ್ಗೆಟ್ ರೀಚ್ ಆಗುವುದಕ್ಕೆ ಆಗದೇ ಮತ್ತು ಅಬಕಾರಿಯಲ್ಲಿ ಅವರಿಗೆ ಇರುವ ಟಾರ್ಗೆಟ್ ರೀಚ್ ಆಗದಿರುವ ಕಾರಣ ಇರಬೇಕಾದರೆ ನ್ಯಾಚುರಲಿ ಈ ರಾಜ್ಯದಲ್ಲಿ ಸೆಕೆಂಡ್ಸನ ಹಾವಳಿ ಜಾಸ್ತಿಯಾಗಿದೆ. ಅದಕ್ಕೆ ನಿಮ್ಮ ಹಿಡಿತ ಇಲ್ಲ. ಆ ಲಾಬಿಗೂ ಕೂಡ ಸರ್ಕಾರ ಒಳಗಾಗಿದೆ... ನೀವು ಕೊಟ್ಟಿರುವ ಅಂಕಿಅಂಶವೇ ಹೇಳುತ್ತಿದೆ.

ಶ್ರೀ ಸಿದ್ಧರಾಮಯ್ಯ : ನಾವು ರಿವೈಸ್ಡ ಟಾರ್ಗೆಟ್ ಹೇಗೆ ಕೊಟ್ಟಿದ್ದೇವೆ ಎಂದರೆ ನಾವು 830 ಕೋಟಿ ಟಾರ್ಗೆಟ್ ಕೊಟ್ಟಿರುವುದು ನಿಜ. ಆದರೆ ಸಾರಾಯಿ ಹರಾಜಿನಲ್ಲಿ ನಮಗೆ ನಿರೀಕ್ಷಿಸಿದ ಮಟ್ಟದಲ್ಲಿ ಸ್ವಲ್ಪ ಕಡಿಮೆಯಾಯಿತು. ಹಾಗಾಗಿ ಅಲ್ಲಿ ಟಾರ್ಗೆಟ್ ಕಡಿಮೆಯಾಯಿತೇ ಹೊರತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದರ ಬಗ್ಗೆ ನೋಡೋಣ. ಟಾರ್ಗೆಟ್ 800 ಕೋಟಿ ರೂಪಾಯಿಗಳವರೆಗಾದರೂ ಬರುತ್ತೇವೆ ಎಂದು ಹೇಳಿದ್ದಾರೆ, ಆದರೆ ಮುಂದೆ ಇನ್ನೊಂದು ಅವರು ಘೋಷಣೆ ಏನು ಮಾಡಿದರು ಎಂದರೆ ನಾವು ಪ್ರೊಹಿಬಿಷನನ್ನು ತರುತ್ತೇವೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿದರು. ಮತ್ತು ತಾವು ನುಡಿದಂತೆ ನಡೆಯತಕ್ಕವರು . ಮಣ್ಣಿನ ಮಕ್ಕಳು, ಬಹುಶಃ ಯಾವಾಗಲಾದರೂ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆಂದರೆ ಖಂಡಿತವಾಗಿಯೂ ಇದನ್ನು ಜಾರಿಗೆ ತರುತ್ತಾರೆ ಎಂದು ತಿಳಿದುಕೊಂಡಿದ್ದೆ. ಅದಕ್ಕೇನು ಕಾರ್ಯಕ್ರಮವನ್ನೇ ಹಾಕಿಕೊಂಡಿಲ್ಲ.

ಶ್ರೀ ಸಿದ್ದರಾಮಯ್ಯ : ನಾವು ಅದರ ಬಗ್ಗೆ ಗಂಭೀರ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಗಂಭೀರ ಪ್ರಯತ್ನ ಮಾಡಬೇಕೆಂದು ತಿಳಿಸಿದರೆ ಅದರ ಬಗ್ಗೆ ಬಜೆಟನಲ್ಲಿ ಪ್ರಸ್ತಾಪವಾಗಬೇಕು ತಾನೆ ? ನಮ್ಮ 800 ಕೋಟಿ ರೂಪಾಯಿಯಲ್ಲಿ ನೀವು ಟಾರ್ಗೆಟ್ 860 ಕೋಟಿ ರೂಪಾಯಿ ಕೊಟ್ಟಿರಿ. ಅಂದರೆ ಹೋದವರ್ಷಕ್ಕಿಂತಲೂ ಟಾರ್ಗೆಟ್ ಹೆಚ್ಚಿಗೆ ಇದೆ ಯಾವಾಗ

ಟಾರ್ಗೆಟ್ ಹೆಚ್ಚಿಗೆ ಇದೆ ಎಂದರೆ ಪ್ರೊಹಿಬಿಷನ್ ಎಲ್ಲಿ ಬರುತ್ತದೆ? ಅಂದಹಾಗೆ ನಿಮಗೆ ಕನಿಷ್ಠಪಕ್ಷ ಆ ಒಂದು ಚಿಂತನೆ ಇದ್ದಿದ್ದರೆ ಇಲ್ಲಿ ಟಾರ್ಗೆಟ್ ಆದರೂ ಕಡಿಮೆ ಇದ್ದು ನಿಮ್ಮ ಬಜೆಟ್ ಭಾಷಣವಲ್ಲಾದರೂ ಅದನ್ನು ಹೇಳಿಕೊಂಡು ನಾವು ಬೇರೆ ರೀತಿಯಾಗಿ ಮಾಡುತ್ತಿದ್ದೇವೆ ಮತ್ತು ಹಂತ ಹಂತವಾಗಿ ಅದನ್ನು ತರುತ್ತಿದ್ದೇವೆ ಅಥವಾ ಒಟ್ಟಾರೆ ಪ್ರೊಹಿಬಿಷನ್ ಮಾಡುತ್ತಿದ್ದೇವೆ ಎನ್ನತಕ್ಕಂಥ ಯಾವುದಾದರೂ ವಿಷಯ ಪ್ರಸ್ತಾಪವಾಗಬೇಕಿತ್ತು. ಒಂದು ವಿಷಯವೇನೆಂದರೆ, ಗಂಭೀರವಾದ ಆಲೋಚನೆಯನ್ನು ಒಂದು ವರ್ಷದವರೆಗೆ ಹೌಸಿಂಗ್ ಪ್ರಾಜೆಕ್ಟ್ ಮಾಡಿದಂತೆ ನೀವು ಮಾಡಬಹುದು. ಅದಕ್ಕೋಸ್ಕರ ಈ ಸರ್ಕಾರಕ್ಕೆ ರಾಜ್ಯಪಾಲರ ಭಾಷಣದಲ್ಲಿ ಇದಕ್ಕೆ ಮತ್ತು ಬಜೆಟ್ ಭಾಷಣಕ್ಕೆ ಹೊಂದಾಣಿಕೆಯಿರಬೇಕಾಗುತ್ತದೆ. ಮುಂದಿನ ವರ್ಷವಲ್ಲ ಅದು. ಈ ವರ್ಷದ ರಾಜ್ಯಪಾಲರ ಭಾಷಣ ಮಾಡಿದ್ದು, ಅದರ ಆಧಾರದ ಮೇಲೆ ತಾವು ಬಜೆಟ್ ಅನ್ನು ಮಂಡಿಸುವಂತಾದ್ದು. ಅದನ್ನು ಬಿಟ್ಟು ನಾವು ಮುಂದೆ ಅದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡುತ್ತೇವೆಂದರೆ, ಸುಮ್ಮನೆ ಒಂದು ಅದು ಸ್ಟಂಟ್. ಜನರಿಗೆ ಚುನಾವಣೆ ಬರುತ್ತಿದೆ ಎಂದು ಅದರ ಬಗ್ಗೆ ಹೇಳಿಕೆ ಕೊಟ್ಟು ಮೋಸ ಮಾಡತಕ್ಕಂಥ ಭಾಷಣವಾಗುತ್ತದೆಂದು ನಾನು ಸ್ಪಷ್ಟಪಡಿಸಬೇಕಾಗುತ್ತದೆ. ಇಲ್ಲವೆಂದರೆ, ತಮಗೆ ಆಸಕ್ತಿ ಇದ್ದಿದ್ದರೆ ಖಂಡಿತವಾಗಿಯೂ ಇದರಲ್ಲಿ ಏನಾದರೂ ಒಂದು ಕಾರ್ಯಕ್ರಮ ಹಾಕಿಕೊಳ್ಳುತ್ತಿದ್ದೀರಿ. ಮತ್ತು ನಿಮ್ಮ ಟಾರ್ಗೆಟ್ ಸಹ ಕಡಿಮೆ ಮಾಡುತ್ತಿದ್ದೀರಿ. ಇದನ್ನು ತಾವು ಯಾವುದೇ ರೀತಿಯಾಗಿ ಪ್ರಯತ್ನ ಪಟ್ಟಿಲ್ಲ, ನಿಮಗೆ ಇದರ ಬಗ್ಗೆ ಆಸಕ್ತಿ ಇಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಈ ಸರ್ಕಾರ ನೀರಾವರಿಯಾಗಲಿ, ಅಭಿವೃದ್ಧಿಯಾಗಲಿ ಅಥವಾ ಹೌಸಿಂಗ್ ಪ್ರೋಗ್ರಾಂ ಆಗಲಿ ಯಾವುದೇ ಪ್ರೋಗ್ರಾಂನಲ್ಲಿ ಸರ್ಕಾರಕ್ಕೆ ಆಸಕ್ತಿಯಿಲ್ಲ. "ಬರೀ ಬಾಯಿ ಚಪಲ" ಮತ್ತು "ಹೇಳಿದ್ದೇ ಹೇಳೋ ಕಿಸಬಾಯಿ ದಾಸ" ಎನ್ನುವಂತೆ ಪ್ರತಿ ಸಲ ಅದನ್ನೇ ಹೇಳುವುದು ಅದನ್ನೇ ಪುನರಾವರ್ತಿಸುವುದು. ಅದಕ್ಕಾಗಿ ಎಲ್ಲಾ ಕ್ಷೇತ್ರಗಳಲ್ಲಿ ಅವರು ವಿಫಲರಾಗಿದ್ದಾರೆಂಬ ಮಾತನ್ನು ಹೇಳುತ್ತಾ ಕೆಲವು ಸಲಹೆಗಳನ್ನು ಏನು ಕೊಡಲಾಗಿದೆ, ಅದಾದರೂ ಕನಿಷ್ಟ ಪಕ್ಷ ಈ ಸೀಮೆಎಣ್ಣೆ, ಮುಂತಾದವುಗಳ ಮೇಲೆ ತೆರಿಗೆ ಕಡಿಮೆಗೊಳಿಸುವ ಬಗ್ಗೆ ಅವರು ಪ್ರಯತ್ನ ಮಾಡುತ್ತಾರೆಂದು ನಂಬಿದ್ದೇನೆ.

ಶ್ರೀ ಸಿದ್ದರಾಮಯ್ಯ : ಹಿಂದೆ ಮಾರಾಟ ಮಾಡುತ್ತಿದ್ದಂಥ ಸೀಮೆಎಣ್ಣೆಗೆ ಹೆಚ್ಚುಗೊಳಿಸಿಲ್ಲ, ಅಷ್ಟೇ ಇದೆ. ಹೊರಗಡೆ ಮಾರಾಟವಾಗುತ್ತಿರುವುದು ಶೇಕಡ 6ರಷ್ಟು. ಆ ದರವನ್ನು ಈಗ ತೆಗೆದುಹಾಕಿದ್ದೇವೆ. ಅದು ಈಗ ಇಲ್ಲ. ಈಗಿರುವುದು 2,4,8,12 ಈ ನಾಲ್ಕು ಹಂತಗಳಲ್ಲೇ ಇರುವುದು. ಆದುದರಿಂದ, 6 ಪರ್ಸೆಂಟ್ ಪ್ಲಸ್ ಸರಚಾರ್ಜ ಇತ್ತು. ಈಗ ಸರಚಾರ್ಜ ತೆಗೆದುಹಾಕಿ ಅದನ್ನು ಶೇಕಡ 6 ರಿಂದ 8 ಮಾಡಿದ್ದೇವೆ. ಇದರಲ್ಲಿ ವ್ಯತ್ಯಾಸವೇನಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಅಷ್ಟನ್ನೂ ತೆಗೆದುಬಿಡಿ. ಏಕೆಂದರೆ, ವಿದ್ಯುತ್ ಇಲ್ಲ, ಸೀಮೆಎಣ್ಣೆ ಇಲ್ಲ. ಏಕೆ ಬೆನ್ನತಟ್ಟುತ್ತೀರಿ. ಆದುದರಿಂದ, ಮಾನ್ಯ ಅಧ್ಯಕ್ಷರಿಗೆ, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಸದನ ಮುಂದೂಡಲ್ಪಟ್ಟು ಪುನಃ 2.30 ಗಂಟೆಗೆ ಸೇರುವುದು.

(ಸದನವು 1 ಗಂಟೆ 25 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 2 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು.)

(ಸಭೆಯು ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಂಡಿತು)

(ಅಧ್ಯಕ್ಷ ಸ್ಥಾನವನ್ನು ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

"1996-97ನೇ ಸಾಲಿನ ಅಯವ್ಯಯದ ಮೇಲೆ ಸಾಮಾನ್ಯ ಚರ್ಚೆ"

ಅಧ್ಯಕ್ಷರು : ಶ್ರೀ ಎಂ. ನಾರಾಯಣಸ್ವಾಮಿಯವರು, ತಾವು ಆಯವ್ಯಯದ ಮೇಲೆ ಮಾತನಾಡಿ.

ಶ್ರೀ ಬಿ. ಶಿವರಾಮು : ಸಭೆಯು ಪ್ರಾರಂಭವಾಗಿದೆ, ಆದರೆ ಯಾವುದೇ ಮಂತ್ರಿಗಳು ಸದನದಲ್ಲಿ ಹಾಜರಿಲ್ಲ.

ಅಧ್ಯಕ್ಷರು : ಎಲ್ಲಾ ಮಂತ್ರಿಗಳು ಬರುತ್ತಾರೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಒಬ್ಬರೂ ಮಂತ್ರಿಗಳು ಈ ಸದನದಲ್ಲಿ ಇಲ್ಲ. ಸರ್ಕಾರದ ಪರವಾಗಿ ಇಲ್ಲಿ ನಡೆಯತಕ್ಕಂತಹ ಚರ್ಚೆಯನ್ನು ಯಾರು ಕೇಳುತ್ತಾರೆ?

ಅಧ್ಯಕ್ಷರು : ಮಾನ್ಯ ಹಣಕಾಸಿನ ಮಂತ್ರಿಗಳು ನನ್ನ ಕೋಣೆಯಲ್ಲಿಯೇ ಕುಳಿತ್ತಿದ್ದರು ಇನ್ನು ಏನು ಬರುತ್ತಾರೆ. ತಾವು ಚರ್ಚೆಯನ್ನು ಪ್ರಾರಂಭಿಸಿ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಕನಿಷ್ಟ ಒಬ್ಬ ಮಿನಿಸ್ಟರ್‌ನ್ನು ಆದರೂ ಸಹಿತ ಈ ಸದನಕ್ಕೆ ಕರೆಸಿ.

+ ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, 1996-97ನೇ ಸಾಲಿಗೆ ಅಯವ್ಯಯವನ್ನು ಮಂಡಿಸಿರುವುದನ್ನು ನಾನು ಸ್ವಾಗತ ಮಾಡಿ. ಕೆಲವು ವಿಷಯಗಳನ್ನು ತಮ್ಮ ಮುಖೇನ ಸರ್ಕಾರದ ಗಮನಕ್ಕೆ ತರಲಿಕ್ಕೆ ನಾನು ಬಯಸುತ್ತೇನೆ. ತಮಗೆ ಗೊತ್ತಿರತಕ್ಕಂತಹ ರೀತಿಯಲ್ಲಿ ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂತಹ ವ್ಯವಸ್ಥೆಯ ಬಗ್ಗೆ ಉದಾಹರಣೆಯನ್ನು ಹೇಳುವುದಾದರೆ, ಆರೋಗ್ಯ ಇಲಾಖೆಯಾಗಬಹುದು, ಶಿಕ್ಷಣ ಇಲಾಖೆ ಆಗಬಹುದು ಅಥವಾ ಬಿ.ಎ.ಡಿ.ಪಿ. ಯಾಗಬಹುದು, ಸಣ್ಣ ನೀರಾವರಿಯಾಗಬಹುದು ಎಲ್ಲಾವು ಕೂಡ ಬಹಳ ಕಷ್ಟದ ಪರಿಸ್ಥಿತಿಯಲ್ಲಿ ಇರತಕ್ಕಂಥದ್ದು ತಮಗೆಲ್ಲ ಮನದಟ್ಟು ಆಗಿರತಕ್ಕಂಥದ್ದು ಎಂಬುದು ನನ್ನ ಭಾವನೆ. ಇವತ್ತು ಆರೋಗ್ಯ ಇಲಾಖೆಯನ್ನು ಕುರಿತು ಮಾತನಾಡುವುದಾದರೆ, ಅನೇಕ ಆಸ್ಪತ್ರೆಗಳಲ್ಲಿ ಸರಿಯಾದ ಡಾಕ್ಟರಗಳ ಸೌಲಭ್ಯವಿಲ್ಲದೇ ಅಥವಾ ಅಲ್ಲಿಯ ಸಿಬ್ಬಂದಿಯ ಕೊರತೆಯಿಂದ ಆಗಿ ಎಲ್ಲೆಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂತಹ ಪ್ರಾಥಮಿಕ ಆರೋಗ್ಯ ಕೇಂದ್ರವಾಗಬಹುದು ಅಥವಾ ತಾಲ್ಲೂಕು ಮುಖ್ಯ ಕೇಂದ್ರದಲ್ಲಿ ಆಸ್ಪತ್ರೆಯ ಶುಚಿತ್ವದಿಂದ ಹಿಡಿದುಕೊಂಡು ರೋಗಿಯನ್ನು ನೋಡತಕ್ಕಂತಹ ವ್ಯವಸ್ಥೆಯಲ್ಲಿಯ ಕೂಡ ಬಹಳ ಏರುಪೇರು ಇದೆ ಎಂಬುದು ತಮಗೆ ಗೊತ್ತಿರತಕ್ಕಂಥದ್ದು ಅದಕ್ಕಾಗಿ ಇವತ್ತು ಕುಟುಂಬ ಕಲ್ಯಾಣ ಯೋಜನೆಯನ್ನು ಏನು ಜಾರಿಗೆ ಮಾಡುತ್ತಿದ್ದೇವೆ ಅದನ್ನು ಜಾರಿಗೆ ತರತಕ್ಕ ಅವರು ಓಡಾಡಲಿಕ್ಕೆ

ವ್ಯವಸ್ಥೆಯಾಗಲಿ, ಸಾರಿಗೆಯ ವ್ಯವಸ್ಥೆಯಾಗಲಿ, ಅಥವಾ ಒಬ್ಬ ರೋಗಿಯನ್ನು ಆಸ್ಪತ್ರೆಗೆ ಕರೆದುಕೊಂಡು ಬರಲಿಕ್ಕೆ ಒಂದು ಸರಿಯಾದ ವ್ಯವಸ್ಥೆ ಕೂಡ ಇಲ್ಲದೇ ಇರತಕ್ಕಂಥಹ ಪರಿಸ್ಥಿತಿಗಳು ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ಇರುತ್ತವೆ. ಆದುದರಿಂದ ಅದನ್ನು ಸರಿಪಡಿಸತಕ್ಕಂತಹ ಕೆಲಸವನ್ನು ಮಾಡಬೇಕು ಎನ್ನತಕ್ಕದ್ದು ಮತ್ತು ಇವತ್ತಿನ ಜನಸಂಖ್ಯೆ ವಿಷಯವನ್ನು ಗಮನಿಸಿದಾಗ ಇಡೀ ಪ್ರಪಂಚದ ಅಥವಾ ನಮ್ಮ ದೇಶದ ಅಥವಾ ನಮ್ಮ ರಾಜ್ಯದ ಜನಸಂಖ್ಯೆಯನ್ನು ಹೋಲಿಕೆ ಮಾಡಿದಾಗ ದಿನೇ ದಿನೇ ಸಾವಿರಾರು, ಲಕ್ಷಾಂತರ ಜನರು ಹುಟ್ಟುತ್ತಿರತಕ್ಕಂಥದ್ದು, ಜನಸಂಖ್ಯೆಯು ಏರುತ್ತಿರತಕ್ಕಂಥದ್ದು ತಮಗೆ ಸಹ ಗೊತ್ತಿರತಕ್ಕಂಥದ್ದು. ಇದನ್ನು ನಿಯಂತ್ರಿಸಲು ವ್ಯವಸ್ಥೆಯಾಗಿರತಕ್ಕಂಥದ್ದು ಎಂದರೆ ಕುಟುಂಬ ಕಲ್ಯಾಣ ಯೋಜನೆ ಆದರೆ ಅದು ಅಷ್ಟು ಶಕ್ತಿಶಾಲಿಯಾಗಿಲ್ಲ, ನನ್ನ ಅಭಿಪ್ರಾಯದಲ್ಲಿ ಹೇಳಬೇಕು ಎಂದರೆ ಮೊದಲು ಇದಕ್ಕೆ ಎಷ್ಟು ಶಕ್ತಿ ಇತ್ತೋ, ಅಷ್ಟು ಶಕ್ತಿ ಇವತ್ತು ಇಲ್ಲ. ಪ್ರತಿಯೊಬ್ಬ ಮನುಷ್ಯನಲ್ಲಿಯೂ ಕೂಡ ಇವತ್ತು ಇದರ ಬಗ್ಗೆ ಆಸಕ್ತಿ ಬಹಳ ಕಡಿಮೆಯಾಗಿದೆ. ಅದಕ್ಕೆ ಒತ್ತು ಕೊಡತಕ್ಕಂತಹ ಕೆಲಸ ಇವತ್ತು ಆಗಬೇಕಾಗಿದೆ. ಎರಡನೆಯದಾಗಿ ಇವತ್ತು ಜನಸಂಖ್ಯೆಗೆ ಅನುಗುಣವಾಗಿ ಈ ಪಠ್ಯಪುಸ್ತಕದಲ್ಲಿ ಇದರ ಬಗ್ಗೆ ಒಂದು ವಿಷಯವನ್ನು ತಂದರೆ, ಜನಸಂಖ್ಯೆಯ ಏರುಪೇರಿನಿಂದ ಆಗತಕ್ಕಂತಹ ಅನಾಹುತ, ಮುಂದಿನ ಪೀಳಿಗೆಗೆ ಬರತಕ್ಕಂತಹ ವ್ಯವಸ್ಥೆಯನ್ನು ಕನಿಷ್ಟ ನಮ್ಮ ಪಠ್ಯಪುಸ್ತಕದಲ್ಲಿ ಅದು ಪ್ರಾಥಮಿಕ ಶಿಕ್ಷಣದಲ್ಲಿ ಆಗಬಹುದು, ಮಧ್ಯಮಿಕ ಶಿಕ್ಷಣದಲ್ಲಿ ಆಗಬಹುದು, ಅಥವಾ ಪ್ರೌಢ ಶಿಕ್ಷಣದಲ್ಲಿ ಆಗಬಹುದು ಅದನ್ನು ಜಾರಿಗೆ ಮಾಡಿದರೆ ಉತ್ತಮವಾದುದು ಎಂದು ನಾನು ಸರ್ಕಾರಕ್ಕೆ ಸಲಹೆಯನ್ನು ಕೊಡುತ್ತೇನೆ. ಜೊತೆಗೆ ಡಾಕ್ಟರಗಳ ವ್ಯವಸ್ಥೆಯನ್ನು ನಾವು ಎಷ್ಟು ಹೇಳಿದರೂ ಕೂಡ ಅದನ್ನು ಸರಿಪಡಿಸಲಾಗದ ಮಟ್ಟದಲ್ಲಿ ಇದೆ. ಇವತ್ತು ಸರಿಯಾದಂತಹ ಚಿಕಿತ್ಸೆಯಾಗಲಿ, ಅಥವಾ ಜೀವ ರಕ್ಷಕ ಔಷಧಿಗಳು ಎರಡು ನಾವು ಏನು ಹೇಳುತ್ತೇವೆ ಅಥವಾ ಹಾವು ಕಡಿತ ಔಷಧ ಏನಿದೆ ಅದನ್ನು ಪ್ರತಿಯೊಂದು ಆಸ್ಪತ್ರೆಗಳಲ್ಲಿ ಲಭ್ಯವಿಲ್ಲ. ಅನೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸರಿಯಾಗಿ ಸಿಗದೇ ಇರತಕ್ಕಂತಹ ಸಂದರ್ಭದಲ್ಲಿ ನಾನು ನೋಡಿದ್ದೇನೆ. ಅನೇಕ ಕಾಡು ಪ್ರದೇಶದಲ್ಲಿ ವಾಸ ಮಾಡತಕ್ಕಂತಹ ಜನರಿಗೆ ಏನು ಹಾವಿನ ಒಂದು ಔಷಧಿಯು ಕೂಡ ಸಿಗದೇ ಇರತಕ್ಕಂತಹ ಪರಿಸ್ಥಿತಿಯಲ್ಲಿ ನಾವುಗಳು ಇದ್ದೇವೆ. ಅದನ್ನು ಸರಿಪಡಿಸತಕ್ಕಂತಹ ಕೆಲಸವನ್ನು ಮಾಡಬೇಕು ಎನ್ನುವುದು ನನ್ನ ಅಭಿಪ್ರಾಯ ಮತ್ತು ಸರ್ಕಾರ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನತಕ್ಕಂಥದ್ದು ಮತ್ತೆ ಜಿಲ್ಲಾ ಮಟ್ಟದಲ್ಲಿ ವೈದ್ಯಾಧಿಕಾರಿಗಳು ಇದ್ದಾರೆ ನಮ್ಮ ಡಿಸ್ಟ್ರಿಕ್ಟ ಹೆಲ್ತ ಆಫೀಸರ್ಸ್ ಇದ್ದಾರೆ ಅವರುಗಳು ಕೂಡ ಸರಿಯಾದಂತಹ ಸುಧಾರಿತ ರೀತಿಯಲ್ಲಿ ಮಾಡಬೇಕು ಮತ್ತು ಆಸ್ಪತ್ರೆಗಳಿಗೆ ಭೇಟಿ ಕೊಡಬೇಕೆಂದು ನನ್ನ ಸಲಹೆ. ಮತ್ತು ಕೆ.ಎಸ್.ಆರ್.ಟಿ.ಸಿಯ ವಿಚಾರವಾಗಿ ಹೇಳುವುದಾದರೆ ಮಾನ್ಯ ಅಧ್ಯಕ್ಷರೆ, ತಮಗೂ ಗೊತ್ತಿದೆ. ನಾನು ಹೋದ ವಿಧಾನಸಭಾ ಸದಸ್ಯನಾಗಿದ್ದೆ. ಅವತ್ತಿನಿಂದ ಕೂಡ ಮತ್ತು ಈಗ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗಿಂದಲೂ ಕೂಡ ಅನೇಕ ರೀತಿಯಲ್ಲಿ ಕೆ.ಎಸ್.ಆರ್.ಟಿ.ಸಿ.ಯಲ್ಲಿ ನ್ಯೂನ್ಯತೆಗಳನ್ನು ಸರಿಪಡಿಸಬೇಕೆಂದು ಹೇಳಿದರೂ ಕೂಡ ಅವರು ಸರ್ವೆಯನ್ನು ಮಾಡುತ್ತಾರೆ, ಬಂದು ಪರಿಶೀಲಿಸುತ್ತಾರೆ, ನಾವು ಕಳುಹಿಸಿಕೊಡುತ್ತೇವೆಂದು ಹೇಳುತ್ತಾರೆ. ಆದರೆ ಯಾವುದೇ ನ್ಯೂನ್ಯತೆಗಳನ್ನು ಇಲ್ಲಿಯವರೆಗೆ ನಿಮ್ಮ ಸರ್ಕಾರ ಬಗೆಹರಿಸಿಲ್ಲ. ಇದಕ್ಕೆ

ಸರ್ಕಾರದವರು ಏನು ಮಾಡುತ್ತೀರಿ? ಅದರ ಬಗ್ಗೆ ಸರ್ಕಾರ ಗಮನವನ್ನು ಕೊಡಬೇಕು. ಒಂದು ವೇಳೆ ಇದು ಆಗದಿದ್ದರೆ ಪ್ರೈವೇಟನವರು ಈಗ ಏನು ಟೆಂಪೋಗಳು ಮತ್ತು ಮಿನಿ ಬಸಗಳು ಮತ್ತು ಬೇರೆ ಬೇರೆ ವ್ಯವಸ್ಥೆಯನ್ನು ಪ್ರೈವೇಟನವರು ಏನು ವ್ಯವಸ್ಥೆಯನ್ನು ಮಾಡಿದ್ದಾರೆ ಅದನ್ನು ಆದರೂ ಮಾಡಲಿಕ್ಕೆ ಸರ್ಕಾರದವರು ಅನುವು ಮಾಡಿಕೊಟ್ಟರೆ ಇವತ್ತು ವಿದ್ಯಾರ್ಥಿಗಳ ಸಂಕಷ್ಟವಾಗಿರಬಹುದು, ಅಥವಾ ವಯೋವೃದ್ಧಿರಾಗಿರಬಹುದು ಅಥವಾ ಆಸ್ಪತ್ರೆಗೆ ಬರತಕ್ಕಂತಹ ರೋಗಿಗಳಾಗಿರಬಹುದು ಅಂಥವರುಗಳಿಗೆ ಅನುಕೂಲವಾಗುತ್ತದೆ. ಅನೇಕ ತಾಲ್ಲೂಕು ಕೇಂದ್ರಗಳಲ್ಲಿಯೂ ಕೂಡ ಬಸ್ ಸ್ಟ್ಯಾಂಡಗಳ ಸೌಲಭ್ಯಗಳು ಇಲ್ಲವೇ ಅನೇಕ ನಾಗರೀಕರು ಪರದಾಡತಕ್ಕಂತಹ ಪರಿಸ್ಥಿತಿ ಕೂಡ ಇದೆ. ಸಾರಿಗೆ ಮಟ್ಟವನ್ನು ಸುಧಾರಿಸಬೇಕು. ಇದರ ಬಗ್ಗೆ ನನ್ನ ಸಲಹೆ ಏನು ಎಂದರೆ ಹಿಂದೆ ನಮ್ಮ ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಸಾರಿಗೆ ಮಂತ್ರಿಗಳಾಗಿದ್ದಾಗ ಏನು ಸಾರಿಗೆ ಸಂಸ್ಥೆಯನ್ನು 4 ವಿಭಾಗಗಳಾಗಿ ಮಾಡಿ, ಕಾರ್ಪೊರೇಷನಗಳಾಗಿ ಮಾಡಬೇಕೆಂದು, ಮದ್ರಾಸನ ವ್ಯವಸ್ಥೆಯನ್ನು ಜಾರಿಗೆ ಮಾಡತಕ್ಕಂತಹ ಸಲಹೆ ಏನು ಇತ್ತು ಅದನ್ನು ಜಾರಿಗೆ ಮಾಡಬೇಕೆಂದು ನನ್ನ ವ್ಯಯಕ್ತಿಕವಾಗಿರತಕ್ಕಂತಹ ಸಲಹೆಯಾಗಿದೆ.

ಅಧ್ಯಕ್ಷರು : ವಿಭಾಗವನ್ನು ಜಾಸ್ತಿ ಮಾಡಿದರೆ ಬಸ್ಸುಗಳ ಸಂಖ್ಯೆಗಳು ಏನಾದರೂ ಜಾಸ್ತಿಯಾಗುತ್ತದೆಯೇ?

ಶ್ರೀ ಎಂ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ ವಿಭಾಗಗಳನ್ನು ಮಾಡಿ ಜವಾಬ್ದಾರಿಯನ್ನು ಹೆಚ್ಚಿಗೆ ಮಾಡಿ, ಹೆಚ್ಚು ಹೆಚ್ಚು ಬಸಗಳನ್ನು ಓಡಿಸತಕ್ಕಂತಹ ವ್ಯವಸ್ಥೆಯನ್ನು ಮಾಡಬೇಕು.

ಅಧ್ಯಕ್ಷರು : ವಿಭಾಗ ಜಾಸ್ತಿ ಮಾಡಿದರೆ, ಅವರ ಆಡಳಿತ ಸುಧಾರಿಸುತ್ತದೆ. ನಿಮ್ಮಊರಿಗೆ, ನಮ್ಮ ಊರಿಗೆ ಬಸ್ ಬರುತ್ತದೆಯೇ?

ಶ್ರೀ ಎಂ. ನಾರಾಯಣಸ್ವಾಮಿ : ಬಸಗಳ ವಿಷಯದಲ್ಲಿ ಒಂದು ಜಿಲ್ಲೆಗೆ ಕನಿಷ್ಟ 100 ಬಸಗಳನ್ನು ಆದರೂ ಕೊಡಲಿಕ್ಕೆ ಇವರ ಕೈಯಲ್ಲಿ ಆಗದಿದ್ದರೂ ಕೂಡ ಕನಿಷ್ಟ 50 ಬಸಗಳನ್ನಾದರೂ ಕೊಟ್ಟು ಓಡಿಸಿ, ಪ್ರತಿ ತಾಲ್ಲೂಕಿಗೆ 5 ಬಸ್‌ಗಳನ್ನು ಕೊಟ್ಟರೂ ಕೂಡ ಇದನ್ನು ಸುಧಾರಿಸಿದಂತಹ ಕೆಲಸವಾಗುತ್ತದೆ ಎನ್ನತಕ್ಕಂಥದ್ದು ನನ್ನ ಸಲಹೆ. ಜೊತೆಗೆ ಇವತ್ತು ಆರ್.ಟಿ.ಓ.ಗಳು ಬರೀ ಪ್ರೈವೇಟ್‌ನವರಿಗೆ ಕೆಲವು ರೂಟಗಳನ್ನು ಮಂಜೂರು ಮಾಡಿದ್ದಾರೆ. ಆದರೆ ಅವರು ಸರ್ಕಾರದಿಂದ ಕೊಟ್ಟಿರತಕ್ಕಂತಹ ಆದೇಶವನ್ನು ಪಾಲನೆ ನಾಡದೇ ಬರೀ ಮೈನ ರೋಡನಲ್ಲಿ ಓಡಾಡಿಸುವಂತಹ ಕೆಲಸವಾಗಿದೆ. ಉದಾಹರಣೆಗೆ ಶ್ರೀನಿವಾಸಪುರದಿಂದ ಅಡ್ಡಗಲ್ಲಿನಿಂದ ಅಥವಾ ನಮ್ಮ ಕಡೆ, ಒಂದು ರೂಟ್ ಮಾಡಿಕೊಂಡು ಅವರು ಬಸಗಳನ್ನು ಓಡಿಸುವಂಥದ್ದು ಮೈನ್ ರೋಡಿನಲ್ಲಿ ಮಾತ್ರ. ಮೈನ್ ರೋಡಿನಲ್ಲಿ ಬಿಟ್ಟು ಸರ್ಕಾರಿ ಆಜ್ಞೆಯಂತೆ ನಡೆಯುತ್ತಿಲ್ಲ. ಅದರ ಬಗ್ಗ ಜಿಲ್ಲಾ ಮಟ್ಟದಲ್ಲಿ ಸಭೆಯನ್ನು ಸೇರಿ ಆರ್.ಟಿ.ಒ. ಮತ್ತು ಪೋಲೀಸ್ ಸೂಪರಿಂಟೆಂಡೆಂಟ್‌ರವರ ಸಮಕ್ಷಮದಲ್ಲಿ ಸೂಚನೆಯನ್ನು ಕೊಟ್ಟರು ಕೂಡ ಅದನ್ನು ಪಾಲನೆಯನ್ನು ಮಾಡದೇ ಇರುವುದರಿಂದ ಸರ್ಕಾರ ಇದರ ಕಡೆಗೆ ಹೆಚ್ಚು ಗಮನ ಕೊಡಬೇಕೆಂದು ನನ್ನ ಸಲಹೆಯಾಗಿದೆ.

ಇನ್ನು ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ಇವತ್ತು ಒಂದೊಂದು ತಾಲ್ಲೂಕಿನಲ್ಲಿ ಸುಮಾರು 300 ರಿಂದ 400 ರವರೆಗೂ ಪ್ರಾಥಮಿಕ ಶಾಲೆಗಳಿರುವುದು ತಮಗೆ ಗೊತ್ತಿದೆ. ಅಲ್ಲಿ ಎ.ಇ.ಒ. ಮತ್ತು ಇನಸ್ಪೆಕ್ಟರಗಳಿದ್ದಾರೆ. ಇವರ ಮೇಲೆ ಡಿ.ಇ.ಒ. ಎಂದು ಮಾಡಿದ್ದಾರೆ. ಎ.ಇ.ಒ. ಅಥವಾ ಡಿ.ಇ.ಒ.ಗಳು ಈ 300-400 ಶಾಲೆಗಳಿಗೆ ಭೇಟಿ ನೀಡುವುದಕ್ಕೆ ಕನಿಷ್ಟ ಒಂದು ಜೀಪಿನ ಸೌಲಭ್ಯ ಕೂಡ ಇಲ್ಲ. ಈ ಕಾರಣದಿಂದಾಗಿ ಪ್ರಾಥಮಿಕ ಶಾಲೆಗಳ ತನಿಖಾ ಕಾರ್ಯ ಕೂಡ ಸಮರ್ಪಕವಾಗಿ ನಡೆಯುತ್ತಿಲ್ಲ. ಇದಕ್ಕೆ ತಾವು ಹೆಚ್ಚು ಒತ್ತನ್ನು ಕೊಡಬೇಕು. ಗ್ರಾಮಾಂತರ ಪ್ರದೇಶದಲ್ಲಿ 200 ಪ್ರೌಢ ಶಾಲೆಗಳನ್ನು ಹೊಸದಾಗಿ ತೆರೆಯುತ್ತೇವೆಂದು ಹೇಳಿದ್ದಾರೆ. ಇದು ಸ್ವಾಗತಾರ್ಹ ವಿಚಾರ. ಇದಕ್ಕೂ ಕೂಡ ಸರ್ಕಾರ ಹೆಚ್ಚು ಒತ್ತನ್ನು ಕೊಡಬೇಕು. ಮತ್ತು ಮೂರನೆಯದಾಗಿ ಹೇಳುವುದಾದರೆ, ಇವತ್ತು ಪಟ್ಟಣದ ಶಿಕ್ಷಣದ ವ್ಯವಸ್ಥೆಯೇ ಬೇರೆ, ಹಳ್ಳಿಯ ಶಿಕ್ಷಣ ವ್ಯವಸ್ಥೆಯೇ ಬೇರೆ ರೀತಿ ಇದೆ. ಕಾನ್ವೆಂಟ್ ಶಾಲೆಗಳ ಹಾವಳಿಯನ್ನು ತಪ್ಪಿಸಬೇಕಾದರೆ ಇವತ್ತು ಹಳ್ಳಿಗಳಿಗೆ, ಸರ್ಕಾರದ ಪ್ರಾಥಮಿಕ ಶಾಲೆಯನ್ನಾಗಲಿ, ಮಾಧ್ಯಮಿಕ ಶಾಲೆಗಳನ್ನಾಗಲಿ, ಅಥವಾ ಪ್ರೌಢಶಾಲೆಯನ್ನಾಗಲಿ ಕೊಟ್ಟು ಅಲ್ಲಿ ಒಳ್ಳೆಯ ಕೋಚಿಂಗ್ ಕೊಡಿಸಿ ಆ ಹಳ್ಳಿಯ ಮಕ್ಕಳನ್ನು ಹೆಚ್ಚುಬಲಯುತವಾಗಿ ಮಾಡಬೇಕಾದರೆ ಈಗಿರತಕ್ಕ ಶಿಕ್ಷಣ ನೀತಿಯನ್ನು ಬದಲಾವಣೆ ಮಾಡಬೇಕೆಂಬುದು ನನ್ನ ವೈಯಕ್ತಿಕ ಸಲಹೆ. ತಮಗೆ ಗೊತ್ತಿರುವಂತೆ ಶಿಕ್ಷಣ ವ್ಯವಸ್ಥೆಯಲ್ಲಿ ಬಹಳಷ್ಟು ಏರುಪೇರಿದೆ. ಪಟ್ಟಣದ ಮಕ್ಕಳಲ್ಲಿ ಬಹಳ ಒಳ್ಳೆಯ ಪರ್ಸೆಂಟೇಜ್ ಇದೆ. ಕಾನ್ವೆಂಟಿನಲ್ಲೋ, ಅಪಾಯಿಂಟಮೆಂಟನಲ್ಲೋ ಆಯ್ಕೆ ಆಗಬೇಕಾದರೆ ಹಳ್ಳಿಯ ಮಕ್ಕಳನ್ನು ಪಟ್ಟಣದ ಮಕ್ಕಳಿಗೆ ಹೋಲಿಸಿದಾಗ ಪಟ್ಟಣದ ಮಕ್ಕಳಲ್ಲಿ ಶೇಕಡ 60.70 ಅಥವಾ 80 ಪರ್ಸೆಂಟು ತೆಗೆಯುವುದಕ್ಕೆ ಅವಕಾಶ ಇದೆ. ಆದರೆ ಅದೇ ಹಳ್ಳಿಯಲ್ಲಿ ವ್ಯಾಸಂಗ ಮಾಡಿದ ಮಕ್ಕಳು ಕೇವಲ 35 ಪರ್ಸೆಂಟ್, ಜಸ್ಟ ಪಾಸ್ ಅಥವಾ 45 ಪರ್ಸೆಂಟನಷ್ಟು ತೆಗೆಯುವಂಥ ಸನ್ನಿವೇಶ ಇದೆ. ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಗ್ರಾಮಾಂತರ ಪ್ರದೇಶದ ಮಕ್ಕಳಿಗೇ ಪ್ರತ್ಯೇಕವಾದ ಸೀಟು ಹಂಚಿಕೆ, ಉದ್ಯೋಗದಲ್ಲಿ ನೇಮಕಾತಿ ವ್ಯವಸ್ಥೆ, ಮಾಡಬೇಕು ಅದೇರೀತಿ ಪಟ್ಟಣ ಪ್ರದೇಶದ ಮಕ್ಕಳಿಗೇ ಪ್ರತ್ಯೇಕವಾದ ವ್ಯವಸ್ಥೆಯನ್ನು ಮಾಡಬೇಕು ಎಂದು ಸಲಹೆ ಕೊಡಬಯಸುತ್ತೇನೆ ತಮಗೆ ಗೊತ್ತಿರುವಂತೆ ಇವತ್ತು ಹಳ್ಳಿಗಳಲ್ಲಿರತಕ್ಕ ಬಡವರ ಮಕ್ಕಳು, ಹರಿಜನಗಿರಿಜನರ ಮಕ್ಕಳು ಪಟ್ಟಣ ಪ್ರದೇಶದಲ್ಲಿರತಕ್ಕ ಮಕ್ಕಳ ಜೊತೆ ಪೈಪೋಟಿ ಮಾಡಬೇಕಾದರೆ ಬಹಳ ಕಷ್ಟ ಇದೆ. ಯಾವುದೇ ಸಂದರ್ಭದಲ್ಲಾಗಲಿ, ಇವರು ಏನು ಪರ್ಸೆಂಟೇಜ್ ಮೇನಟೇನ್ ಮಾಡುತ್ತಾರೋ ಮಾಡಲಿ, ಆದರೆ ಗ್ರಾಮಾಂತರ ಪ್ರದೇಶದ ಮಕ್ಕಳಿಗೇ ಒಂದು ಪರ್ಸೆಂಟೇಜ್, ಮತ್ತು ಪಟ್ಟಣ ಪ್ರದೇಶದ ಮಕ್ಕಳಿಗೇ ಒಂದು ಪರ್ಸೆಂಟೇಜ್ ಮಾಡಬೇಕೆಂಬುದು ನನ್ನ ಮುಖ್ಯ ಉದ್ದೇಶ ಮತ್ತು ಸಲಹೆ.

ಇನ್ನು ನೀರಾವರಿಯ ಬಗ್ಗೆ ಹೇಳುವುದಾದರೆ, ಅದು ನಮ್ಮ ಕೋಲಾರ ಜಿಲ್ಲೆ ಇರಬಹುದು, ತುಮಕೂರು ಜಿಲ್ಲೆ ಇರಬಹುದು ಅಥವಾ ಬಳ್ಳಾರಿ ಜಿಲ್ಲೆ ಇರಬಹುದು ಈ ಬಯಲುಸೀಮೆ ಪ್ರದೇಶಾಭಿವೃದ್ಧಿ ಕೆಲಸ ಚೆನ್ನಾಗಿ ನಡೆಯಬೇಕು. ಕಳೆದಸಾರಿ ನಮ್ಮ ಸರ್ಕಾರ 71 ಕೋಟಿ ರೂ.ಗಳನ್ನು ಸಣ್ಣ ನೀರಾವರಿಗೆ ಇಟ್ಟಿತ್ತು. ಈಸಾರಿ 83.57 ಕೋಟಿ ರೂ.ಗಳನ್ನು ಸಣ್ಣ ನೀರಾವರಿಗೆ ಇಟ್ಟಿದೆ. ಅಂದರೆ ಸಣ್ಣ ನೀರಾವರಿ ಇಲಾಖೆಯಲ್ಲಿರತಕ್ಕ ಮೇನಟೆನೆನ್ಸಗೆ ಬಹುಪಾಲು ಸೇರುತ್ತಿದೆ. ಆದರೂ ಅಲ್ಲಿ

ಯಾವುದೇ ಪ್ರಗತಿಯೂ ಆಗದೇ ಇರುವುದರಿಂದ ಸಣ್ಣ ನೀರಾವರಿಗೆ ಹೆಚ್ಚು ಒತ್ತನ್ನು ಕೊಡುವ ಪ್ರಯತ್ನ ಸರ್ಕಾರದಿಂದ ಆಗಬೇಕು. ಈ ಆಯವ್ಯಯದಲ್ಲಿ ಕನಿಷ್ಟ 150 ರಿಂದ 200 ಕೋಟಿ ರೂ.ಗಳನ್ನು ಸಣ್ಣ ನೀರಾವರಿಗೆ ಇಡಬೇಕು. ಏಕೆಂದರೆ ನಮ್ಮ ಕೋಲಾರ ಜಿಲ್ಲೆಯಲ್ಲಿ ಬಹಳಷ್ಟು ಕೆರೆಗಳಲ್ಲಿ ಹೂಳು ತುಂಬಿದೆ. ಹೂಳನ್ನು ತೆಗೆಯುವ ಕೆಲಸ ಮೊದಲು ಆಗಬೇಕು. ಹೂಳು ತುಂಬಿರುವುದರಿಂದ ಸರಿಯಾದ ಪ್ರಮಾಣದಲ್ಲಿ ನೀರು ಸ್ಟಾಕ್ ಆಗುತ್ತಿಲ್ಲ. ಬಯಲುಸೀಮೆ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ ಬಯಲುಸೀಮೆಗಳಲ್ಲಿರುವ ಕೆರೆಗಳಲ್ಲಿ ತುಂಬಿರುವ ಹೂಳನ್ನು ತೆಗೆಸಬೇಕು. ನನ್ನ ತಾಲ್ಲೂಕಿನಲ್ಲಿ ಇರಬಹುದು, ಕೋಲಾರ ಜಿಲ್ಲೆ ಇರಬಹುದು, 400 ರಿಂದ 500 ಅಡಿ ಆಳದವರೆಗೆ ಕೊಳವೆ ಬಾವಿಯನ್ನು ತೋಡಿದರ ನೀರು ಸಿಕ್ಕುತ್ತದೆ. ನೀರಾವರಿ ಇಲಾಖೆಯವರು ಬಯಲುಸೀಮೆ ಪ್ರದೇಶ ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿದೆ ಅಲ್ಲೆಲ್ಲಾ ಆದ್ಯತೆಯ ಮೇರಗೆ ಹೆಚ್ಚು ಪ್ರಾಶಸ್ತ್ಯವನ್ನು ಸಣ್ಣ ನೀರಾವರಿಗೆ ಕೊಡಬೇಕು. ಇವತ್ತು ಸರ್ಕಾರದವರು ಕಾವೇರಿ ಯೋಜನೆಗೆ 1000, 1500, 2000, 4000 ಕೋಟಿ ರೂ.ಗಳನ್ನು ಖರ್ಚು ಮಾಡುತ್ತಿದೆ. ಇದಕ್ಕೆ ನಮ್ಮ ಅಭ್ಯಂತರವಿಲ್ಲ. ನೀವು ಎಷ್ಟಾದರು ಮಾಡಿ. ಇದೇರೀತಿ ಕಾವೇರಿ, ತುಂಗಾ, ಭದ್ರಾ ಇತ್ಯಾದಿ ಯಾವುದಕ್ಕೆ ಆಗಲಿ ನೀವು ಎಷ್ಟು ಹಣವನ್ನು ಖರ್ಚುಮಾಡುತ್ತೀರೋ ಅಷ್ಟೇ ನಮ್ಮ ಬಯಲು ಸೀಮೆ ಅಭಿವೃದ್ಧಿಗೂ ಖರ್ಚು ಮಾಡಿ. ಒಂದುವೇಳೆ ಅಷ್ಟೊಂದು ಹಣವನ್ನು ಕೊಡುವುದಕ್ಕಾಗದಿದ್ದರೂ ಕೊನೇಪಕ್ಷ ಕಾಲುಭಾಗ ಹಣವನ್ನಾದರೂ ಈ ಬಯಲು ಸೀಮೆಯಲ್ಲಿ ಬರುವಂಥ ಹಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವಂಥ ಸಣ್ಣ ಕೆರೆಗಳಿಗೆ ಆದ್ಯತೆ ಕೊಟ್ಟು ಹೂಳನ್ನು ತೆಗೆಸುವ ಕೆಲಸವನ್ನು ಮಾಡಲೇಬೇಕೆಂಬುದು ನನ್ನ ಒತ್ತಾಯ.

(ಶ್ರೀ ಚಂದ್ರಕಾಂತ ಬೆಲ್ಲದರವರ ಅಧ್ಯಕ್ಷ ಪೀಠಕ್ಕೆ ಬಂದರು)

ಶ್ರೀ ಎಂ. ನಾರಾಯಣಸ್ವಾಮಿ : ಸ್ವಾಮಿ, ತಮಗೂ ಗೊತ್ತಿದೆ, ನಾವೆಲ್ಲರೂ ಹಳ್ಳಿಗಾಡಿನಿಂದ ಬರುತ್ತಿರುವಂಥ ಜನ. ಹಳ್ಳಿಗಳಲ್ಲಿ ಯಾವುದೇ ಕೆರೆ, ಕುಂಟೆಗಳಲ್ಲೂ ಒಂದೇ ಒಂದು ತೊಟ್ಟು ನೀರೂ ಕೂಡ ಇಲ್ಲ. ಮಳೆ ಬಂದಾಗ ಬಿದ್ದ ನೀರು ಒಂದು ಕಡೆ ಆಂಧ್ರದ ಕಡೆಗೆ, ಇನ್ನೊಂದು ಕಡೆ ತಮಿಳ್ನಾಡಿನ ಕಡೆ ಹರಿದು ಹೋಗುತ್ತದೆ ನಮ್ಮ ಕೃಷ್ಣಾ ಮತ್ತು ಕಾವೇರಿ ನೀರನ್ನು ಆಂಧ್ರಕ್ಕೆ ಅಥವಾ ತಮಿಳ್ನಾಡಿಗೆ ಬಿಡಬಾರದು ಎಂದು ಎಲ್ಲರೂ ಮದ್ರಾಸಗೂ ಹೋಗುತ್ತದೆ. ನನ್ನ ತಾಲ್ಲೂಕಿನಲ್ಲಿ 4 ಮೇಜರ್ ಟ್ಯಾಂಕ್‌ಗಳಿವೆ. ಅವು ಅಂದರೆ ಮಾರ್ಕಂಡೇ ಟ್ಯಾಂಕ್, ರಾಮಸಮುದ್ರ ಟ್ಯಾಂಕ್, ಮುಸ್ಟಲೇ ಟ್ಯಾಂಕ್, ಮತ್ತು ಇನ್ನೊಂದು ರಾಮಸಾಗರ ಟ್ಯಾಂಕ್ ಎಂದು. ಇವುಗಳಿಗೆ ಸಂಬಂಧಪಟ್ಟಂತೆ ನಾನು ಕಳೆದಸಾರಿ ಒಂದು ಪ್ರಶ್ನೆಯನ್ನೂ ಕೇಳಿದ್ದೆ. ಆದರೆ ಅದಕ್ಕೆ ಉತ್ತರವೆ ಸಿಕ್ಕಲಿಲ್ಲ. ನಮ್ಮ ತಾಲ್ಲೂಕಿನಿಂದ ಆಂಧ್ರಕ್ಕೆ ಮತ್ತು ತಮಿಳ್ನಾಡಿಗೆ ಎಷ್ಟೆಷ್ಟು ನೀರು ಹರಿದುಹೋಗುತ್ತಿದೆ, ಇದನ್ನು ತಡೆಗಟ್ಟಲು ಚೆಕ್ ಡ್ಯಾಂ ಮಾಡುತ್ತಿರೋ, ಅಥವಾ ಹೊಸ ಡ್ಯಾಂಗಳನ್ನು ಮಾಡಿ ನಮ್ಮ ನೀರನ್ನು ಅಂದರ ಅರ್ಧ ಟಿ.ಎಂ.ಸಿ. ಹೋಗುತ್ತದೋ, ಮುಕ್ಕಾಲು ಟಿ.ಎಂ. ಸಿ. ನೀರು ಹೋಗುತ್ತದೋ ಅದನ್ನು ನಮ್ಮ ಕರ್ನಾಟಕದಲ್ಲಿ ಉಪಯೋಗಿಸಿಕೊಳ್ಳಲು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ನಾನು ಮೂರು ಸಾರಿ ಪ್ರಶ್ನೆ ಕೇಳಿದರೂ ಇದುವರೆಗೂ ಸರ್ಕಾರದಿಂದ ಉತ್ತರವೇ ಬರಲಿಲ್ಲ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇವತ್ತು

ರಾಮಸಾಗರ ಟ್ಯಾಂಕ್ 999ನೇ ಟ್ಯಾಂಕ್. ಇದು ಕೊನೆಯಲ್ಲಿರತಕ್ಕ ಟ್ಯಾಂಕ್. ಸುಮಾರು 1500 ಎಕರ ಅಚ್ಚುಕಟ್ಟನ್ನು ಹೊಂದಿರತಕ್ಕ ಕೆರೆ. ಮಾರ್ಕಂಡೇ ಟ್ಯಾಂಕ್ ಹಿಂದೆ ಇಂಗ್ಲೀಷನವರ ಕಾಲದಲ್ಲಿ ಕಟ್ಟಿದಂಥಾದ್ದು. ಅಂದರೆ ದಿವಾನರ ಕಾಲದಲ್ಲಿ ಕಟ್ಟಿಸಿದಂಥ ಕೆರೆ. ಅದೇರೀತಿ ರಾಮಸಾಗರ ಕೆರೆ ಕೂಡ ದಿವಾನರ ಕಾಲದಲ್ಲಿ ನಿರ್ಮಾಣವಾದ ಕೆರೆ. ಮುಸಲೇಕೆರೆ ಕೂಡ ಮಾನ್ಯ ದೇವರಾಜ ಅರಸರವರ ಕಾಲದಲ್ಲಿ ಕಟ್ಟಿದಂಥ ಕೆರೆ. ಕಾಮಸಮುದ್ರ ಟ್ಯಾಂಕ್ ಕೂಡ ದೇವರಾಜ ಅರಸರವರ ಕಾಲದಲ್ಲೇ ಕಟ್ಟಿರತಕ್ಕದ್ದು. ಇವತ್ತು ಈ ಒಂದೊಂದು ಕೆರೆಯ ಹಿಂಭಾಗದಲ್ಲೂ ಸುಮಾರು 1400 ರಿಂದ 1600 ಎಕರೆ ಪ್ರದೇಶ ಅಚ್ಚುಕಟ್ಟು ಆಗುತ್ತಿದೆ. ನನ್ನ ತಾಲ್ಲೂಕಿಗೆ ಒಂದುಕಡೆ ತಮಿಳ್ನಾಡು ಬಾರ್ಡರ್, ಇನ್ನೊಂದು ಕಡೆ ಆಂಧ್ರ ಬಾರ್ಡರ್ ಬರುತ್ತದೆ. ನನ್ನ ತಾಲ್ಲೂಕಿನಿಂದ ಬಹಳಷ್ಟು ನೀರು ಈ ನೆರೆ ರಾಜ್ಯಗಳಿಗೆ ಹರಿದುಹೋಗುತ್ತದೆ. ಇದನ್ನು ತಡೆಗಟ್ಟಲು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಅನೇಕ ಸಲಹೆಗಳನ್ನು ಕೊಟ್ಟೆ. ಒಂದೊಂದು ಚೆಕ್ ಡ್ಯಾಂನ್ನು ನಿರ್ಮಾಣ ಮಾಡುವುದಕ್ಕೆ 4-5 ಲಕ್ಷ ರೂ. ಖರ್ಚಾಗಬಹುದು, ಇಷ್ಟು ಖರ್ಚುಮಾಡಿದರೆ ಕನಿಷ್ಠ 100-200 ಎಕರೆ ಜಮೀನನ್ನು ಸಾಗುವಳಿ ಮಾಡಿಕೊಳ್ಳಬಹುದು. ಮದ್ರಾಸನಲ್ಲಿ ಮಾಡುವಂತೆ ಸಾವಿರಾರು ಎಕರೆ ಜಮೀನನ್ನು ನೀರಾವರಿ ಮಾಡುವುದಕ್ಕಾಗದಿದ್ದರೂ ಕೂಡ, ಕಾವೇರಿ ಅಥವಾ ಕೃಷ್ಣಾ ನದಿ ನೀರನ್ನು ನಮ್ಮ ಬಂಗಾರಪೇಟೆ ತಾಲ್ಲೂಕಿಗೆ ತರುವುದಕ್ಕೆ ಶಕ್ತಿ ಇಲ್ಲದಿದ್ದರೂ ಕೂಡ ನಮ್ಮಲ್ಲಿ ಬೀಳತಕ್ಕ ಮಳೆಯ ನೀರು ಅನಾವಶ್ಯಕವಾಗಿ ನೆರೆ ರಾಜ್ಯಗಳಿಗೆ ಹೋಗುವುದನ್ನು ತಡೆಗಟ್ಟಿದರೆ ಒಂದೊಂದು ತಾಲ್ಲೂಕಿನಲ್ಲಿ ಕನಿಷ್ಟ 3 ಸಾವಿರದಿಂದ 5 ಸಾವಿರ ಎಕರೆ ಜಮೀನನ್ನು ಅಚ್ಚುಕಟ್ಟು ಮಾಡಬಹುದು. ಈ ದಿಸೆಯಲ್ಲಿ ಹೆಚ್ಚು ಒತ್ತು ಕೊಡಬೇಕೆಂಬುದು ನನ್ನ ಸಲಹೆ. ಹಿಂದಿನ ಸರ್ಕಾರ ಇದ್ದಾಗ ನಮ್ಮ ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ಕೆರೆಗಳ ಹೂಳನ್ನು ತೆಗೆಯುವ ಕಾರ್ಯಕ್ರಮವನ್ನು ಹಾಕಿಕೊಂಡು ತಾಲ್ಲೂಕಿಗೆ 2-3 ಕೆರೆಗಳಂತೆ ಆಯ್ಕೆ ಮಾಡಿಕೊಂಡು ಕೆಲಸ ಮಾಡಲಾಗಿತ್ತು. ಅದು ಬಹಳ ಪ್ರಗತಿದಾಯಕ ಕೆಲಸವಾಗಿತ್ತು. ಮಾನ್ಯ ವೀರಪ್ಪ ಮೊಯ್ಲಿಯವರೂ ಕೂಡ ಮುಖ್ಯ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ನಮ್ಮ ಭಾಗಕ್ಕೆ ಭೇಟಿ ನೀಡಿದ್ದರು. ಅವರು ನಮಗೆ ಸಹಕಾರವನ್ನು ಆಗ ಕೊಟ್ಟಿದ್ದರು. ಸುಮಾರು 1.5 ಕೋಟಿ. ರೂ. ಕೊಟ್ಟಿದ್ದರು. ಆದರೆ ಇವತ್ತು ಆ ಕೆಲಸ ಸ್ಥಗಿತವಾಗಿದೆ. ಕೇವಲ ಕೋಲಾರ ಜಿಲ್ಲೆ ಒಂದರಲ್ಲೇ ಅಲ್ಲ, ಎಲ್ಲೆಲ್ಲಿ ಬರಡು ಪ್ರದೇಶ ಇದೆ, ಎಲ್ಲೆಲ್ಲಿ ಬಯಲುಸೀಮೆ ಪ್ರದೇಶ ಇದೆ, ಎಲ್ಲೆಲ್ಲಿ ಸಣ್ಣ ನೀರಾವರಿ ಇಲಾಖೆಗೆ ಸೇರಿದಂಥ ಕೆರೆಗಳಿವೆ ಅಲ್ಲೆಲ್ಲಾ ಈ ಕಾರ್ಯಕ್ರಮವನ್ನು ಮುಂದುವರೆಸಬೇಕು. ಇವತ್ತು ಅಂತರ್ಜಲ ಬಹಳ ಆಳಕ್ಕೆ ಹೋಗಿದೆ. ಸಣ್ಣ ಪುಟ್ಟ ಕೆರೆಗಳಿಂದ ಹೂಳನ್ನು ತೆಗೆದರೆ ಅದರಿಂದ ಒಳ್ಳೆಯ ಫಲವತ್ತಾದ ಮಣ್ಣು ಸಿಕ್ಕುತ್ತದೆ. ಗೊಬ್ಬರದ ಬದಲು ಉಪಯೋಗ ಮಾಡುವಂಥ ಮಣ್ಣು ಸಿಕ್ಕುತ್ತದೆ. ಇದರಿಂದ ಒಳ್ಳೆಯ ಬೆಳೆಯನ್ನು ಬೆಳೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಮಳೆ ಬಂದು ನೀರು ನಿಂತಾಗ ಅಂತರ್ಜಲದ ಮಟ್ಟ ಕೂಡ ಹೆಚ್ಚಾಗುತ್ತದೆ. ಇದಕ್ಕೆ ಒತ್ತು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನನ್ನ ತಾಲ್ಲೂಕಿನಲ್ಲಿ ಬಂಗಾರಪೇಟೆ ತಾಲ್ಲೂಕು ಸೇರಿದ್ದರೂ ಕೂಡ ಕೆ.ಜಿ.ಎಫ್. ನಲ್ಲಿ ಮೈನಿಂಗ್ ಇದೆ. ಬ್ರಿಟಿಷರ ಕಾಲದಲ್ಲಿ ಆ ಮೈನಿಂಗನಿಂದ ತೆಗೆದಂಥ ಮಣ್ಣನ್ನು ಬೆಟ್ಟದ ರೀತಿಯಲ್ಲಿ ರಾಶಿ ಹಾಕಿದ್ದಾರೆ. ಆ ಮಣ್ಣು ಸ್ವಲ್ಪ ಮಟ್ಟಿಗೆ ವಿಷದಿಂದ ಕೂಡಿದೆ. ಈ ಮಣ್ಣು ಅಲ್ಲಿಂದ ಬೇರೆ ಬೇರೆ ಪ್ರದೇಶಕ್ಕೆ

ಏನು ಹೋಗುತ್ತದೆ ಅಲ್ಲೆಲ್ಲಾ ಬೆಳೆದಂಥ ಬೆಳೆ ಹಾಳಾಗುತ್ತಿದೆ. ಹಿಂದಿನ ಸರ್ಕಾರ ಇದ್ದಾಗ ಮಾನ್ಯ ಬಸವಲಿಂಗಪ್ಪನವರು ಸ್ಥಳಕ್ಕೆ ಭೇಟಿ ನೀಡಿದ್ದರು. ಅಲ್ಲಿ ಸುಮಾರು 5-6 ಸಾವಿರ ಎಕರೆ ಭೂಮಿಯ ಬೆಳೆ ಹಾಳಾಗತಕ್ಕ ಪರಿಸ್ಥಿತಿ ಇದೆ. ಇದನ್ನು ನಾವು ಸರ್ವೆ ಮಾಡಿರುವುದರಿಂದ ಇವರ ಬಗ್ಗೆ ಕೂಡ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂಬುದು ನನ್ನ ಒತ್ತಾಯ ಕೂಡ ಇದೆ.

3.30 ಪಿ.ಎಂ.

ಇವತ್ತು ಏನಾಗಿದೆ ಎಂದರೆ, ನಮಗೆ ಕುಡಿಯುವ ನೀರೂ ಕೂಡ ಕಶ್ಮಲಗೊಂಡು ವಿಷವಾಗತಕ್ಕ ಪರಿಸ್ಥಿತಿ ಇದೆ. ಸುಮಾರು 5-10 ಕೆರೆಗೆ ಬರೀ ಸೈರಾಶ್ ಮಣ್ಣಿನಿಂದ ನನ್ನ ಕ್ಷೇತ್ರವಾದ ಬಂಗಾರಪೇಟೆ ತಾಲ್ಲೂಕಿನಲ್ಲಿ ಎಲ್ಲ ನಾಶವಾಗಿದೆ, ಐದಾರು ಸಾವಿರ ಎಕರೆ ಸಾಗುವಳಿ ಮಾಡತಕ್ಕ ಜಮೀನು ನಾಶವಾಗಿದೆ. ಅದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನನ್ನ ಒತ್ತಾಯ. ಈ ಸೈರಾಕ್ ಮಣ್ಣಿನಿಂದ ವಿಷ ಒಂದೇ ಅಲ್ಲ ಆಸ್ತಮಾ ಕಾಯಿಲೆ ಕೂಡ ಬರುತ್ತದೆಂದು ಪ್ರಯೋಗದಿಂದ ಸಾಬೀತಾಗಿದೆ. ಆದುದರಿಂದ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇವೆ. ನಮ್ಮ ತಾಲ್ಲೂಕು ಬಾರ್ಡರ್ ತಾಲ್ಲೂಕು, ಬಿಎಡಿಪಿ.ಗೆ ಹೋದ ಬಜೆಟ್‌ನಲ್ಲಿ ಅಮೌಂಟ್ ಇಟ್ಟಿದ್ದರು. ಆದರೆ ಬಿ.ಎ.ಡಿ.ಪಿ.ಯಲ್ಲಿ ಒಂದು ರೂಪಾಯಿ ಕೂಡ ಖರ್ಚು ಮಾಡಿಲ್ಲ. ನಾವು ಕೇಳಿದರೆ ಅನೇಕ ಸಬೂಬೂ ಹೇಳಿಕೊಂಡು ಹೋಗುತ್ತಿದ್ದಾರೆ. ಏನು ಸಬೂಬು ಅಂದರೆ ಏನೂ ಬಂದಿಲ್ಲ, ಸರಿಯಾಗಿ ಎಸ್ಟಿಮೇಟ್ ಬಂದಿಲ್ಲ ಎಂದು ಒಂದು ಸಾರಿ ಬಜೆಟ್ಟಿನಲ್ಲಿ ಹಣ ಇಟ್ಟಮೇಲೆ ಹಂತ ಹಂತವಾಗಿ 3 ತಿಂಗಳಿಗೆ ಒಂದು ಸಾರಿ, 6 ತಿಂಗಳಿಗೆ ಒಂದು ಸಾರಿ, 9 ತಿಂಗಳಿಗೆ ಒಂದು ಸಾರಿ ನೋಡಿ ಆ ಹಣ ಖರ್ಚು ಮಾಡುವ ದಿಸೆಯಲ್ಲಿ ಕೆಲಸ ಮಾಡದಿದ್ದರೆ ಬಜೆಟ್‌ನಲ್ಲಿ ಹಣ ಇಟ್ಟು ಏನು ಪ್ರಯೋಜನ? ಬಿ.ಎ.ಡಿ.ಪಿ.ಯಲ್ಲಿ 10-15 ಕೋಟಿ ರೂಪಾಯಿ ಹಣ ಇಟ್ಟಿದ್ದರೂ ಅದು ಖರ್ಚಾಗದೆ ಇದ್ದರೆ, ಪುಸ್ತಕದಲ್ಲಿ ಹಾಗೆ ಇದ್ದರೆ ಏನು ಪ್ರಯೋಜನ? ಇವತ್ತು ಮಾರ್ಚ್ 6ನೇ ತಾರೀಖು ಆಗಿದೆ. ಇವತ್ತಿಗೂ ಕೂಡ ಒಂದು ರೂಪಾಯಿ ಕೂಡ ಬಿಎಡಿಪಿ.ಯಲ್ಲಿ ಖರ್ಚಾಗದೆ ಇರದ್ದರೆ ಇನ್ನು 20-25 ದಿನಗಳಲ್ಲಿ ಎಷ್ಟು ಕಾಮಗಾರಿಗಳನ್ನು ತೆಗೆದುಕೊಳ್ಳಬಹುದು? ಇವತ್ತು ನಾವೆಲ್ಲ ಸರ್ಕಾರವನ್ನು ನಂಬಿಕೊಂಡಿರತಕ್ಕ ಜನ. ಸರ್ಕಾರ ಏನಾದರೂ ಕಾಮಗಾರಿಗಳು ಆಗಬಹುದು. ಅದು ಕುಡಿಯುವ ನೀರಿನ ವ್ಯವಸ್ಥೆ ಆಗಬಹುದು ಅಥವಾ ಬೇರೆ ಬೇರೆ ವಿಷಯಗಳಲ್ಲಿ ಸರ್ಕಾರ ಮಾಡುತ್ತದೆಂದು ಇರುವಾಗ ಹಣ ಇಟ್ಟು ಖರ್ಚಾಗದೆ ಇದ್ದರೆ ಪರಿಸ್ಥಿತಿ ಏನಾಗುತ್ತದೆ? ನಮ್ಮ ಕೋಲಾರ ಜಿಲ್ಲೆಯ ಪರಿಸ್ಥಿತಿಯ ಯಾವ ರೀತಿ ಆಗಿದೆ ಎಂದರೆ ಇವತ್ತು ಸೀಮೆ ಎಣ್ಣೆ ಕೂಡ ಸಿಗದೆ ಇರತಕ್ಕ ಪರಿಸ್ಥಿತಿ ಇದೆ. ಸೀಮೆ ಎಣ್ಣೆಯನ್ನು ಇವತ್ತು ಒಂದು ಹಸಿರು ಕಾರ್ಡಿಗೆ 3 ಲೀಟರ್‌ನಂತೆ ಕೊಡತಕ್ಕ ವ್ಯವಸ್ಥೆ ಇದೆ, ಪಟ್ಟಣದವರಿಗೆ 6 ರಿಂದ 8 ಲೀಟರ್ ಕೊಡತಕ್ಕ ವ್ಯವಸ್ಥೆ ಇದೆ. ಆದರೆ ಹಳ್ಳಿಯಲ್ಲಿ ಸೀಮೆ ಎಣ್ಣೆ ಅನೇಕ ರೀತಿಯಲ್ಲಿ ಹಾಳಾಗುತ್ತಿದೆ ಅದು ತಮಗೆಲ್ಲ ಗೊತ್ತಿರತಕ್ಕದ್ದು. ಏಕೆಂದರೆ ಹಳ್ಳಿಯಲ್ಲಿ ಫುಲ ಡಿಪೋ ಏನಿದೆ ಅದನ್ನು ವಾರಕ್ಕೆ ಒಂದೆರಡು ದಿನ ಮಾತ್ರ ತೆರೆಯುತ್ತಾರೆ. ಮೂರನೇ ದಿವಸ ಬಾಗಿಲು ಹಾಕುತ್ತಾರೆ. ನಾವು ಎಷ್ಟು ಸಾರಿ ಒತ್ತಾಯ ಮಾಡಿದರೂ ಕೂಡ ಅದನ್ನು ಸರಿ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದುದರಿಂದ ಅಂಥ ಒಂದು ಪ್ರದೇಶದಲ್ಲಿ

ನಮಗೆ ಕೆಇಬಿ. ಕರೆಂಟ್ ತೆಗೆದುಕೊಂಡಾಗ ಅವ್ಯವಸ್ಥೆ ಆಗಿದೆ, ಕರೆಂಟ್ ಇಲ್ಲ, ಸೀಮೆಎಣ್ಣೆ ಇಲ್ಲ. ಸೀಮೆಎಣ್ಣೆ ಹಂಚಿಕೆ ಆಗುತ್ತಿಲ್ಲ. ಯಾವುದೂ ಸುಗಮವಾಗಿ ನಡೆಸತಕ್ಕ ವ್ಯವಸ್ಥೆ ಆಗುತ್ತಿಲ್ಲ. ಆದುದರಿಂದ ಅದಕ್ಕೆ ಒತ್ತು ಕೊಡಬೇಕೆಂದು ನನ್ನ ಒತ್ತಾಯ ಈಗ ನಮ್ಮ ಹಳ್ಳಿಯಲ್ಲಿ ಆಶ್ರಯ ಮನೆ ಕಟ್ಟುತ್ತಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ವ್ಯವಸಾಯ ಇಲಾಖೆಯಲ್ಲಿ ಅನೇಕ ರೀತಿಯಲ್ಲಿ ನಮಗೆ ಸವಲತ್ತು ಕೊಡುವ ಬಗ್ಗೆ ಸರ್ಕಾರ ಘೋಷಣೆ ಮಾಡುತ್ತಿದೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೂ ಕೂಡ ಸರಿಯಾದ ವಾತಾವರಣ ಸೃಷ್ಟಿ ಮಾಡದೆ ಹಳ್ಳಿಗಳ ವ್ಯವಸ್ಥೆಯನ್ನು ಕಾಪಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತು ಕುಡಿಯುವ ನೀರಿನ ವ್ಯವಸ್ಥೆ ಆಗಬೇಕಾಗಿದೆ, ಬೇಸಿಗೆ ಬರುತ್ತಿದೆ. ಕುಡಿಯುವ ನೀರಿನ ವ್ಯವಸ್ಥೆಗೆ ಒಂದೊಂದು ತಾಲ್ಲೂಕಿನಲ್ಲಿ 50-60 ಬೋರವೆಲಗಳು ಬೇಕೆಂದು ಬೇಡಿಕೆ ಇದೆ. ಬೇಡಿಕೆ ನೂರು ಇದ್ದರೂ ಕೂಡ ಒಂದೊಂದು ತಾಲ್ಲೂಕಿನಲ್ಲಿ 50-60 ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕಾಗುತ್ತಿಲ್ಲ. ಇವತ್ತು ಅಲ್ಲಿರತಕ್ಕ ಮೋಟಾರ್ 1980ನೇ ಇಸವಿಯದು. ಎನಆರಡಬ್ಲ್ಯೂ.ಎಸ್. ಮಾಡಿದ್ದೇವೆ, ಬಜೆಟನಲ್ಲಿ ಹಣ ಇಡುತ್ತೇವೆಂದೂ ಬಜೆಟನಲ್ಲಿ ವರ್ಷಕ್ಕೆಷ್ಟು ಎಂದು ಹಣ ಇಟ್ಟಾದ ಮೇಲೆ ಅದು ಖರ್ಚಾಯಿತೇ ಅಥವಾ ಇಲ್ಲವೇ ಎಂಬುದನ್ನು ನೋಡುವುದು ಬೇಡವೆ? ಎನಆರಡಬ್ಲ್ಯೂಎಸ್. ಗಂದು ಒಂದೆರಡು ಲಕ್ಷ ರೂಪಾಯಿ ಹಣ ಇಟ್ಟಾಗ ಕನಿಷ್ಟ 3 ತಿಂಗಳಿಗೋ 6 ತಿಂಗಳಿಗೋ ಅದನ್ನು ನೋಡದ 5-6 ತಿಂಗಳಲ್ಲಿ ಯೋಜನೆ ಪೂರ್ಣಗೊಳಿಸದಿದ್ದರೆ ಬಜೆಟನಲ್ಲಿ ಹಣ ಇಟ್ಟು ಏನು ಪ್ರಯೋಜನ? ಹೀಗೆ ಎನ್‌ಆರ್‌ಡಬ್ಲ್ಯೂಎಸ್ ಗೆ ಹಣ ಕೊಟ್ಟರೆ ಎಷ್ಟು ಸಮಂಜಸವಾಗುತ್ತದೆ? ಎನ್‌ಆರ್‌ಡಬ್ಲ್ಯೂಎಸ್‌ಗೆ ಅನೇಕ ಜಾಗಗಳಲ್ಲಿ ಪೈಪು ಸರಬರಾಜು ಇಲ್ಲ, ಸಿಮೆಂಟು ಸರಬರಾಜು ಇಲ್ಲ, ಸಿಮೆಂಟ್ ಕೊಟ್ಟರೆ ಸ್ಟೀಲ್ ಸರಬರಾಜು ಇಲ್ಲ, ಸ್ಟೀಲ್ ಕೊಟ್ಟರೆ ಮತ್ತೊಂದು ಇರುವುದಿಲ್ಲ. ಇವತ್ತು ಶಾಲಾ ಕಟ್ಟಡ ಕಟ್ಟುತ್ತಿದ್ದಾರೆ, ಅದಕ್ಕೆ ಸರಿಯಾದ ರೀತಿಯಲ್ಲಿ ಸಿಮೆಂಟ್ ಆಗಲಿ, ಸ್ಟೀಲ್ ಆಗಲಿ ಕೊಡತಕ್ಕ ವ್ಯವಸ್ಥೆ ಇಲ್ಲ, ಎಲ್ಲ ಸ್ಥಗಿತಗೊಂಡಿದೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ತಾವು ಸರ್ಕಾರದವರು ಕಟ್ಟುನಿಟ್ಟಾಗಿ ವ್ಯವಸ್ಥೆ ಮಾಡಬೇಕು. ತಮ್ಮ ಈ ಬಜೆಟ್ ಅಮೌಂಟ್ ಅಥವಾ ಎನಆರಡಬ್ಲ್ಯೂಎಸ್. ಅಮೌಂಟ್ ಅಥವಾ ಯಾವುದೋ ಅಮೌಂಟನ್ನು ಇಂತಿಷ್ಟು ದಿನಗಳಿಗೆ ಎಂದು ನಿರ್ದಿಷ್ಟವಾಗಿರತಕ್ಕ ಕಾಲಕ್ಕೆ ನಿಗದಿ ಮಾಡಿ 3 ತಿಂಗಳಿಗೊಮ್ಮೆ ಅಥವಾ 4 ತಿಂಗಳಿಗೊಮ್ಮೆ ಅಥವಾ 6 ತಿಂಗಳಿಗೊಮ್ಮೆ ಅದನ್ನು ಪರಿಶೀಲಿಸತಕ್ಕ ಕೆಲಸ ಮಾಡಿ ಎಷ್ಟೆಷ್ಟು ಬಜೆಟ್ ಖರ್ಚಾಗಿದೆ, ಎಷ್ಟು ಖರ್ಚಾಗಿಲ್ಲ, ಕಾರಣವೇನು, ಏತಕ್ಕೆ ಅನುಷ್ಠಾನ ಗೊಳಿಸತಕ್ಕ ಅಧಿಕಾರಿಗಳ ತಪ್ಪಿದೆಯೋ ಅಥವಾ ಕಾರ್ಯಾಂಗ ಮಾಡತಕ್ಕ ಅಧಿಕಾರಿಗಳ ತಪ್ಪಿದೆಯೇ ಅಥವಾ ವ್ಯವಸ್ಥೆ ಸರಿಯಾಗಿಲ್ಲವೆ ಎಂದು ಆಲೋಚಿಸಿ ಕ್ರಮ ತೆಗೆದುಕೊಂಡರೆ ಒಳ್ಳೆಯದೆಂದು ನನ್ನ ಸಲಹೆ. ಜೊತೆಗೆ ನಮ್ಮ ವ್ಯವಸ್ಥೆ ಏನಾಗಿದೆ ಎಂಬುದನ್ನು ನೋಡಬೇಕು. ಸಾಮಾಜಿಕ ವ್ಯವಸ್ಥೆಗೆ ನಮ್ಮ ಎಸ್‌ಸಿ, ಎಸ್‌ಟಿ . ಕಾರ್ಪೊರೇಷನ್ ಇದೆ. ಸಾಮಾಜಿಕ ವ್ಯವಸ್ಥೆ ಅಂದರೆ ಹರಿಜನಗಿರಿಜನರ ಉದ್ಧಾರ ಮಾಡುತ್ತೇವೆಂಬ ವ್ಯವಸ್ಥೆ ಇದೆ. ಇವತ್ತು ನಾನು ಅನೇಕ ಕಮಿಟಿಗಳಲ್ಲಿದ್ದೇನೆ. ಅನೇಕ ಪುಸ್ತಕಗಳಲ್ಲಿ ಅಂಕಿಅಂಶಗಳು ಸಿಗುತ್ತವೆ. ಆದರೆ, ವಾಸ್ತವವಾಗಿ ಎಷ್ಟು ಹಣ ಅವರಿಗೆ ಸೇರಿದೆ ಅಥವಾ ಅಲ್ಲಿ ನೀವು ಅನುಷ್ಠಾನಗೊಳಿಸತಕ್ಕ ಕಾರ್ಯಕ್ರಮ ಅಥವಾ ಯೋಜನೆ ಸಾಮಾನ್ಯ ಜನರಿಗೆ ಸೇರಿದೆಯೆ? ಅವರು ಹರಿಜನ ಗಿರಿಜನರಾಗಿರಬಹುದು,

ಅಲ್ಪ ಸಂಖ್ಯಾತರಾಗಿರಬಹುದ ಅಥವಾ ಹಿಂದುಳಿದ ವರ್ಗದವರು ಆಗಿರಬಹುದು ಅವರಿಗ ಸೇರಿದೆಯೇ ಎಂದು ಪರಿಶೀಲನಾ ಕಾರ್ಯಕ್ರಮ ನಡೆದಿಲ್ಲ. ಎಸ್.ಸಿ. /ಎಸ್.ಟಿ. ಕಾರ್ಪೋರೇಷನ್, ಬ್ಯಾಕವರ್ಡ ಕ್ಲಾಸ್ ಮೈನಾರಿಟೀಸ್ ಕಾರ್ಪೋರೇಷನ್ ಅಥವಾ ಬೇರೆ ಬೇರೆ ಕಾರ್ಪೋರೇಷನಗಳು ಇದ್ದರೂ ಕೂಡ ಅವುಗಳಿಂದ ಎಷ್ಟು ನಮ್ಮ ಜನಸಾಮಾನ್ಯರಿಗೆ ಅಥವಾ ಸಾಮಾನ್ಯ ಜನರಿಗೆ ಒತ್ತುಕೊಡಬೇಕೋ ಅದನ್ನು ಕೊಡುತ್ತಿಲ್ಲ. ಅನೇಕ ರೀತಿಯ ಏರುಪೇರುಗಳಿವೆ. ಆ ವ್ಯವಸ್ಥೆಯನ್ನು ಸರಿಪಡಿಸತಕ್ಕ ಕೆಲಸ ಮಾಡಬೇಕೆಂದು ನನ್ನ ಸಲಹೆ. ಜೊತೆಗೆ ನಮ್ಮ ಕುಟುಂಬ ಕಲ್ಯಾಣಕ್ಕೆ ಈಗಾಗಲೇ ಹೇಳಿದ ಯೋಜನೆಗಳಿಗೆ, ಸಣ್ಣ ನೀರಾವರಿಗಳಿಗೆ ಹೆಚ್ಚು ಒತ್ತನ್ನು ಕೊಡಬೇಕಾಗುತ್ತದೆ. ಕೆರೆಗಳಲ್ಲಿ ಹೂಳು ತೆಗೆಯತಕ್ಕ ವ್ಯವಸ್ಥೆಗೆ ಒತ್ತುಕೊಟ್ಟು ಸರ್ಕಾರ ದಿಟ್ಟವಾದ, ದೃಢವಾದ ನಿರ್ಧಾರ ತೆಗೆದುಕೊಳ್ಳಬೇಕೆಂದು ಹೇಳಿ, ನನಗೆ ಇಷ್ಟು ಕಾಲ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಡಿ. ವಿ. ಸದಾನಂದಗೌಡ (ಪುತ್ತೂರು) : ಅದರಿಣೀಯ ಅಧ್ಯಕ್ಷರೆ, ಮಾನ್ಯ ಸಿದ್ದರಾಮಯ್ಯನವರು ಆಯವ್ಯಯ ಮಂಡನೆಯನ್ನು ಮಾಡಿದ್ದಾರೆ. ಪ್ರಾಯಶಃ ಇದು ರಾಜ್ಯದ ಚಾಲ್ತಿ ವರ್ಷದ ಸಾಧನೆ ಹಾಗೂ ಮುಂದಿನ ವರ್ಷದ ಅಭಿವೃದ್ಧಿಯ ಒಂದು ನೀಲಿ ನಕಾಶೆ ಆಗಬೇಕು. ಆದರೆ ಆ ಮುಂಗಡ ಪತ್ರ ಒಂದು ಅಸ್ಪಸ್ಟತೆಯ ಕಂತೆಯಾಗಿದೆ ಮತ್ತು ತೀರಾ ನಿರಾಶಾದಾಯಕವಾಗಿದೆ ಎಂದು ಹೇಳಬೇಕಾಗುತ್ತದೆ. ಕಳೆದ ವರ್ಷದ ದಾಖಲೆ 245 ಕೋಟಿ ರೂಪಾಯಿ ತೆರಿಗೆಯ ಹೇರಿಕೆ, ನಂತರ ಈ ವರ್ಷದ ಚುನಾವಣಾ ಪೂರ್ವ ಬಜೆಟ್. ಈ ದೃಷ್ಟಿಯನ್ನಿಟ್ಟುಕೊಂಡು ಅದು ರೂಪೂಕಿರಣವಾಗಿದೆ ಎಂದು ಹೇಳಿದರೆ ಯಾವುದೇ ಸಂಶಯವಿಲ್ಲ. ಮಾನ್ಯ ಸಿದ್ದರಾಮಯ್ಯನವರು ಬಜೆಟ್ಟಿನಲ್ಲಿ ಹೇಳಿದ್ದಾರೆ, 'ಬಜೆಟ್ ಕೇವಲ ಒಂದು ಯೋಜನಾ ಪಟ್ಟಿ ಅಲ್ಲ. ಜೀವರಹಿತ ಅಂಕಿಅಂಶಗಳ ಹೊತ್ತಿಗೆ ಅಲ್ಲ, ಜನತೆ ಸಂಕಷ್ಟಗಳ, ಆಕಾಂಕ್ಷೆಗಳ ಆಶೋತ್ತರದ ಬಗ್ಗೆ ಸ್ಪಂದನ ಮಾಡುವುದು ಆಗಿರಬೇಕೆಂದು ಹೇಳಿದ್ದಾರೆ' ಖಂಡಿತವಾಗಿ ಸಿದ್ದರಾಮಯ್ಯನವರನ್ನು ಒಂದೆರಡು ವಿಚಾರಗಳಲ್ಲಿ ಶ್ಲಾಘನೆ ಮಾಡಲೇಬೇಕು. ಅಡಿಕೆ ಕೃಷಿಕನಾಗಿ ನಾನು ಪ್ರಾರಂಭಿಕ ಹಂತದಲ್ಲಿ ಮಾನ್ಯ ಸಿದ್ದರಾಮಯ್ಯನವರು 6 ಪರ್ಸೆಂಟ್‌ನಿಂದ ಅಭಿನಂದಿಸುತ್ತಿದ್ದೇನೆ. ಅಭಿನಂದಿಸುವುದರ ಜೊತೆಯಲ್ಲಿ ಈ ಬಗ್ಗೆ ಕಳೆದ ವರ್ಷ ನಾವು ನಮ್ಮೆಲ್ಲ ಜನರ ಪರವಾಗಿ ಪ್ರಸ್ತಾಪ ಮಾಡಿದ್ದೆವು. ಕಳೆದ ವರ್ಷ ಏನು ಹಿಂದಿನ ಸರ್ಕಾರ 5 ಪರ್ಸೆಂಟ್ ತೆರಿಗೆ ನಿಗದಿಪಡಿಸಿತ್ತು ಅದಕ್ಕಿಂತ ಒಂದು ಪರ್ಸೆಂಟ್ ಜಾಸ್ತಿ ಮಾಡಿದಾಗ 4 ಪರ್ಸೆಂಟಗೆ ಇಳಿಸಬೇಕೆಂದು ನಾವು ತಮ್ಮನ್ನು ಕೇಳಿಕೊಂಡಿದ್ದೆವು. ಕೊನೇ ಪಕ್ಷ ಕೊನೆಯ ಹಂತದಲ್ಲಿ ಅದರೂ ಮನವರಿಕೆಯಾಗಿ ತೆರಿಗೆಯನ್ನು ಇಳಿಸಿದ್ದಕ್ಕೆ ನಾನು ಮತ್ತೊಮ್ಮೆ ತಮಗೆ ಅಭಿನಂದಿಸಲಿಚ್ಛಿಸುತ್ತೇನೆ. ಜೊತೆಯಲ್ಲಿ ತೆರಿಗೆ ಸರಳೀಕರಣದ ಬಗ್ಗೆ ಉತ್ತಮವಾದ ವಿಚಾರವನ್ನು ಹಾಕಿಕೊಂಡಿದ್ದಾರೆ. ಅದರ ಬಗ್ಗೆ ಎರಡು ಮಾತು ಇಲ್ಲ. ಆ ಬಗ್ಗೆ ಕೂಡ ಈ ಸಂದರ್ಭದಲ್ಲಿ ಅಭಿನಂದಿಸುವುದಕ್ಕೆ ಇಚ್ಛೆಪಡುತ್ತೇನೆ. ಆದರೆ ಯೋಜನಾ ಗುರಿಗಳ ಬಗ್ಗೆ ಮತ್ತು ಯೋಜನಾ ಅನುಷ್ಠಾನದ ಬಗ್ಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಿಲ್ಲವೆಂದು ನನ್ನ ಭಾವನೆ. ಚಾಲ್ತಿ ವರ್ಷದಲ್ಲಿ ಸರ್ಕಾರ ವರ್ಷದಲ್ಲಿ ಸರ್ಕಾರ ಯೋಜನಾ ಗುರಿಯನ್ನು ಎಷ್ಟು ಇಟ್ಟುಕೊಂಡಿತ್ತು ಎಂದರೆ 3758 ಕೋಟಿ ರೂಪಾಯಿ ಇಟ್ಟುಕೊಂಡಿತ್ತು. ಆದರೆ ಅದನ್ನು ಕೊನೆಯ ಹಂತದಲ್ಲಿ 3001

ಕೋಟಿ ರೂಪಾಯಿಗೆ ಇಳಿಸುವ ಮೂಲಕ ಸರ್ಕಾರ ತನ್ನ ಆಡಳಿತ ವೈಫಲ್ಯಕ್ಕೆ ಕೈಗನ್ನಡಿ ಹಿಡಿದಂತಾಗಿದೆ. ಏಕೆಂದರೆ ಸುಮಾರು 658 ಕೋಟಿ ರೂಪಾಯಿಗಳಷ್ಟು ತಿಳಿಸಿದ್ದು ಪ್ರಾಯಶಃ ಸರ್ಕಾರದ ವಿಫಲತೆಗೆ ಒಂದು ಸಾಕ್ಷಿ ಎಂದು ಭಾವಿಸುತ್ತೇನೆ. ಅದೇ ರೀತಿ ಮುಂದಿನ ವರ್ಷದ ಗುರಿ ಅವರು ಹೇಳಿದ್ದು ಸುಮಾರು 4360 ಕೋಟಿ ರೂಪಾಯಿ. ಆದರೆ ಅದಕ್ಕೆ ಆಂತರಿಕ ಸಂಪನ್ಮೂಲ ಎಷ್ಟು ಒದಗಿಸಿದ್ದಾರೆ? ಕೇವಲ 3359 ಕೋಟಿ ರೂಪಾಯಿ ಮಾತ್ರ. ಪ್ರಾಯಶಃ ಒಂದು ಸಾವಿರ ಕೋಟಿ ವ್ಯತ್ಯಾಸದ ಹಿನ್ನಲೆ ಬಹುಶಃ ಯೋಜನಾ ಗುರಿ ಸಾಧನೆಗೆ ಖಂಡಿತ ಸಾಧ್ಯವಿಲ್ಲ. ಇದು ಮುಗ್ಗರಿಸುವಂತದ್ದು ಎಂದು ಹೇಳುವುದು ನನ್ನ ಸ್ಪಷ್ಟ ಅಭಿಪ್ರಾಯ. ಈ ಬಗ್ಗೆ ಸರ್ಕಾರ ಅತ್ಯಂತ ಗಂಭೀರವಾಗಿ ಆಲೋಚನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರಾಯಶಃ ಈ ಒಂದು ಯೋಜನಾ ಗುರಿ ಮುಗ್ಗರಿಸಿದ್ದರಿಂದ ನಮ್ಮ ನೀರಾವರಿಗೆ ಮತ್ತು ವಿದ್ಯುತ್ ವಲಯಕ್ಕೆ ಅತ್ಯಂತ ಹೆಚ್ಚಿನ ತೊಂದರೆ ಆಗಬಹುದೆಂದು ನನ್ನ ಅನಿಸಿಕೆ. ಈಗಾಗಲೇ ನೀರಾವರಿ ಬಗ್ಗೆ ಸಾಕಷ್ಟು ವಿಚಾರಗಳನ್ನು ಮಾನ್ಯ ಯಡಿಯೂರಪ್ಪನವರು ಮತ್ತು ಖರ್ಗೆಯವರು ಪ್ರಸ್ತಾಪ ಮಾಡಿದ ಕಾರಣ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ವಿದ್ಯುತ್ ವಲಯದಲ್ಲಿ ಇವತ್ತು ಸರ್ಕಾರ ಮಾತನಾಡಿರುವುದು ಕೇವಲ ಆಡಂಬರದ ಮಾತು ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ವಿದ್ಯುತಗೆ ಇಷ್ಟು ಬರಗಾಲ ಇರುವುದರಿಂದ ಈ ಕ್ಷೇತ್ರದಲ್ಲಿ ಹೆಚ್ಚಿಗೆ ಹಣ ಇಡಬೇಕಾಗಿತ್ತು. ಆದರೆ ಇಡಲಿಲ್ಲ. ಅದಕ್ಕೆ ಬದಲಾಗಿ ಕಳೆದ ವರ್ಷ 689 ಕೋಟಿ ರೂಪಾಯಿ ಇದ್ದುದ್ದನ್ನು 590 ಕೋಟಿಗೆ ಈಗ ಇಳಿಸಿರುವುದು ಕಾಣುತ್ತಿದ್ದೇವೆ. ಸರ್ಕಾರ ವಿದ್ಯುತ ಕ್ಷೇತ್ರದ ಕಡೆ ತನ್ನ ಗಮನ ಹರಿಸಿಲ್ಲವೆಂಬುದಕ್ಕೆ ಇದು ಸ್ಪಷ್ಟ ಉದಾಹರಣೆ. ಇದಕ್ಕಾಗಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ವಿದ್ಯುತ್, ಕ್ಷೇತ್ರದ ಬಗ್ಗೆ ಇನ್ನಷ್ಟು ಗಮನ ಹರಿಸುವುದು ಅಗತ್ಯ ಇದೆ. ಇದಕ್ಕೆ ಒಂದು ಉದಾಹರಣೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಹಲವಾರು ವಿದ್ಯುತ್ ಕಾಮಗಾರಿಗಳು ಇವತ್ತು ಸ್ಥಗಿತಗೊಂಡಿರುವುದನ್ನು ನಾವು ಇವತ್ತು ನೋಡುತ್ತಿದ್ದೇವೆ. ಪುತ್ತೂರು ಕ್ಷೇತ್ರದಲ್ಲಿ ಇರುವಂಥ ಒಂದು ವಿದ್ಯುತ್ ಸಬ್‌ಸ್ಟೇಷನ್ ಬಗ್ಗೆ ಹೇಳುತ್ತೇನೆ.

ಸುಮಾರು 1991ನೇ ಇಸವಿಯಲ್ಲಿ ಪ್ರಾರಂಭವಾದಂಥ ಈ ಸಬ್‌ಸ್ಟೇಷನ್ ಇವತ್ತಿಗೂ ಕೂಡ ತನ್ನ ಕಾಮಗಾರಿಯನ್ನು ಪೂರ್ತಿ ಮಾಡಲಿಕ್ಕೆ ಆಗಲಿಲ್ಲ. ಏಕೆ ಅಂತ ಹೇಳಿದರೆ 1991ನೇ ಇಸವಿಯಲ್ಲಿ ಅದನ್ನು ಲೇಬರ್ ಕಾಂಟ್ರಾಕ್ಟ ಕೊಡುವಂಥ ಸಂದರ್ಭದಲ್ಲಿ ಅಂದಿನ ಧಾರಣೆ ಆಧಾರದಲ್ಲಿ ಆ ಕೆಲಸಗಳನ್ನು ಮಾಡಬೇಕು ಎಂದು ನಿಯೋಜಿಸಲಾಗಿತ್ತು ಹಲವಾರು ಕಾರಣಗಳಿಂದ ಆ ಕೆಲಸ ಆಗಿಲಿಲ್ಲ. ಆದರೆ ಇವತ್ತು ಆ ಕೆಲಸಗಳನ್ನು ಮಾಡುವಂಥ ಸಂದರ್ಭದಲ್ಲಿ ಅದೇ ಲೇಬರ್ ಕಾಂಟ್ರಾಕ್ಟರೇಟಿನಲ್ಲಿ ಮಾಡಲಿಕ್ಕೆ ಆಗುತ್ತಿಲ್ಲ. ಇದನ್ನು ಪರಿಷ್ಕರಿಸಬೇಕು ಅಂತ ಹೇಳಿ ಸರ್ಕಾರಕ್ಕೆ ಪದೇ ಪದೇ ಮನವಿ ಮಾಡಿಕೊಂಡರೂ ಕೂಡ ಇಷ್ಟರತನಕ ಈ ಬಗ್ಗೆ ಸರ್ಕಾರ ಗಮನ ಹರಿಸದಿದ್ದುದು ಖಂಡಿತವಾಗಿ ಸರ್ಕಾರ ವಿದ್ಯುತ್ ಕ್ಷೇತ್ರದ ಕಡೆ ಎಷ್ಟು ಗಮನ ಹರಿಸಿದೆ ಎಂಬುವದಕ್ಕೆ ಸಾಕ್ಷಿ. ದಯವಿಟ್ಟು ಈ ಬಗ್ಗೆ ಕೂಡ ಗಮನ ಹರಿಸಿ ವಿದ್ಯುತ್ ಕ್ಷೇತ್ರಕ್ಕೆ ಸ್ವಲ್ಪ ಹೆಚ್ಚಿನ ಒಂದು ಆದ್ಯತೆಯನ್ನು ಕೊಟ್ಟಾಗ ಮತ್ತು ಹೆಚ್ಚಿನ ಬಂಡವಾಳವನ್ನು ಅದರಲ್ಲಿ ಹೂಡಿಕೆ ಮಾಡಿದಾಗ ಮಾತ್ರ ಪ್ರಾಯಶಃ ವಿದ್ಯುತ್ ಕ್ಷೇತ್ರದಲ್ಲಿ ಗಮನಾರ್ಹವಾದಂಥ ಒಂದು ಸಾಧನೆಯನ್ನು ಮಾಡಬಹುದು ಎಂದು ನಾನು ತಿಳಿದುಕೊಂಡಿದ್ದೇನೆ.

ಏಕೆ ಅಂತ ಹೇಳಿದರೆ ಸರ್ಕಾರ ಮತ್ತು ಮಾನ್ಯ ಮುಖ್ಯಮಂತ್ರಿಗಳು ಪದೇ ಪದೇ ಹೇಳುತ್ತಿರುತ್ತಾರೆ, ನಾವು ವಿದ್ಯುತ್ತಿನ ಬಗ್ಗೆ ವಿದೇಶಿ ಕಂಪನಿಗಳೊಂದಿಗೆ ಈಗಾಗಲೇ ಒಪ್ಪಂದ ಮಾಡಿಕೊಂಡಿದ್ದೇವೆ, ನಮಗೆ ಬೇಕಾದಷ್ಟು ವಿದ್ಯುತ್ತನ್ನು ಪಡೆದುಕೊಳ್ಳುತ್ತೇವೆ ಎಂದು ಹೇಳುವಂಥದ್ದು ಬಹುಶಃ ಬರೀ ಈ ಹೇಳಿಕೆಗಳಿಂದ ವಿದ್ಯುತ್ ಸಾಮರ್ಥ್ಯ ಹೆಚ್ಚಿಸಲಿಕ್ಕೆ ಸಾಧ್ಯವಿಲ್ಲ ಎಂದು ನನ್ನ ಭಾವನೆ. ಈ ಹಿನ್ನೆಲೆಯಲ್ಲಿ ವಿದ್ಯುತ್ ಕ್ಷಾಮ ಬಹಳಷ್ಟು ಹೆಚ್ಚಾಗಬಹುದು. ಆದಕಾರಣ ಈ ಕ್ಷೇತ್ರದಲ್ಲಿ ಅತ್ಯಂತ ಒಂದು ಗಂಭೀರವಾದ ಚಿಂತನೆ ಸರ್ಕಾರ ಈ ಆಯವ್ಯಯ ಪತ್ರದಲ್ಲಿ ಮಾಡಬೇಕು ಅಂತ ಹೇಳುವುದನ್ನು ನಾನು ಹೇಳುತ್ತೇನೆ. ಏಕೆ ಅಂತ ಹೇಳಿದರೆ ಈಗಾಗಲೇ ಹಲವಾರು ಬೇರೆಬೇರೆ ವಿದ್ಯುತ್ ಕಂಪನಿಗಳಲ್ಲಿ ಏನು ಅವರು ಒಪ್ಪಂದಗಳನ್ನು ಮಾಡಿಕೊಂಡಿದ್ದಾರೆ ಅದು ನಿಜವಾಗಿ ಕಾನೂನಿನ ಚೌಕಟ್ಟಿನಲ್ಲಿ ಮಾಡಿಕೊಂಡಿಲ್ಲ. ಹೇಳುವುದಾದರೆ ನಮ್ಮ ಪುತ್ತೂರು ತಾಲ್ಲೂಕು ಪರಿಸರದಲ್ಲಿ ಸುಳ್ಯದ ವಿಧಾನಸಭಾ ಕ್ಷೇತ್ರದಲ್ಲಿ ಬರುವಂಥ ಒಂದು ಕುಮಾರಧಾರಾ ಜಲವಿದ್ಯುತ್ ಯೋಜನೆ ಇದೆ. ಸರ್ಕಾರ ಈಗಾಗಲೇ ಬ್ಯುರಾಕೊ ಎನ್ನುವಂಥ ಕಂಪನಿ ಜೊತೆಯಲ್ಲಿ ಒಪ್ಪಂದವನ್ನು ಮಾಡಿಕೊಂಡಿದೆ ಎಂಬುದು ಎಲ್ಲರಿಗೂ ಗೊತ್ತಿರುವಂಥ ವಿಚಾರ. ಆದರೆ ಆ ಒಪ್ಪಂದ ಬರಲಿಕ್ಕೆ ಮೊದಲು ಆ ಕಂಪನಿ, ಜೊತೆ ಸರ್ಕಾರ ಒಪ್ಪಂದ ಮಾಡಲಿಕ್ಕೆ ಮೊದಲು ಏನೆಲ್ಲಾ ಫಾರ್ಮಾಲಿಟೀಸ್ ಕಂಪ್ಲೈ ಮಾಡಬೇಕೋ ಅದನ್ನು ಇನ್ನೂ ಮಾಡಿಲ್ಲ. ಕರ್ನಾಟಕ ಪವರ್ ಕಾರ್ಪೊರೇಷನ್ ಗೆ ಹೋಗಿ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಏನು ಅವರಿಂದ ಅಪ್ರೂವಲ್ ಆದನಂತರ ಈ ಕೆಲಸಗಳನ್ನು ಸರ್ಕಾರ ಅವರೊಟ್ಟಿಗೆ ಅಗ್ರಿಮೆಂಟ್ ಮಾಡಿಕೊಳ್ಳುಬೇಕಿತ್ತೋ ಅಂಥ ಯಾವುದೇ ಒಂದು ಎಸ್ಟಿಮೇಟುಗಳು ಮತ್ತು ಇತರ ವಿಚಾರಗಳು ಅಲ್ಲಿ ಗಮನಕ್ಕೆ ಬರಲಿಲ್ಲ ಅಂತ ಹೇಳುವುದು ಸ್ಪಷ್ಟ ಉದಾಹರಣೆ ಇದರಿಂದಾಗಿ ನಮಗೆ ಕಾಣಿಸುತ್ತದೆ. ಬೇರೇಬೇರೆ ಕಂಪನಿಗಳ ಜೊತೆ ನಾವು ವಿದ್ಯುತ್ತಿನ ಸಾಮರ್ಥ್ಯವನ್ನು ಹೆಚ್ಚು ಮಾಡಲಿಕ್ಕೆ ಒಪ್ಪಂದವನ್ನು ಮಾಡಿಕೊಂಡಿದ್ದೇವೆ ಎಂಬುದು ಸತ್ಯಕ್ಕೆ ದೂರವಾದ ವಿಚಾರ. ಅವರ ಒಂದು ಸ್ಪಷ್ಟವಾದ ವಿಚಾರಗಳ ಹಿನ್ನೆಲೆಯಲ್ಲಿ ಆ ಕಾಮಗಾರಿಗಳು ಕಾರ್ಯಗತ ಆದಾಗ ಮಾತ್ರ ಅದು ಅನುಷ್ಠಾನಕ್ಕೆ ಬರಲಿಕ್ಕೆ ಸಾಧ್ಯ. ಆದಕಾರಣ ಯೋಜನೆ ಮತ್ತು ಯೋಜನೆಯ ಅನುಷ್ಠಾನ ಇವೆರಡರ ಬಗ್ಗೆ ಕೂಡ ಈ ಸಂದರ್ಭದಲ್ಲಿ ನಾವು ಆಲೋಚನೆ ಮಾಡುವುದಾದರೆ ಕೇವಲ ಯೋಜನೆಗಳಿಂದ ಯೋಜನೆ ಅನುಷ್ಠಾನವಾಗುವುದಿಲ್ಲ. ಇದು ಸ್ಪಷ್ಟ ಉದಾಹರಣೆ. ಏಕೆ ಅಂತ ಹೇಳಿದರೆ ಇನ್ನೊಂದು ದೊಡ್ಡ ಉದಾಹರಣೆಯನ್ನು ನಾನು ಕೊಡಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಪ್ರಾಯಶಃ ಈ ಯೋಜನೆ ಮತ್ತು ಯೋಜನೆ ಅನುಷ್ಠಾನದ ಬಗ್ಗೆ ಮಾತನಾಡುವುದಿದ್ದರೆ ವಾರಾಹಿ ನೀರಾವರಿ ಯೋಜನೆ ಬಗ್ಗೆ ಯೋಜನೆ ಬಗ್ಗೆ ನಾನು ಪ್ರಸ್ತಾಪ ಮಾಡಬೇಕಾಗಿದೆ. ವಾರಾಹಿ ನೀರಾವರಿ ಯೋಜನೆಯನ್ನು 23-7-1979 ಕ್ಕೆ ಸುಮಾರು 38 ಸಾವಿರ ಎಕರೆ ನೀರಾವರಿಯಾಗುವುದಕ್ಕೆ ಉಡುಪಿ, ಕುಂದಾಪುರ ಕಾರ್ಕಳಕ್ಕೆ ಸುಮಾರು 9.43 ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಮಾಡಬೇಕೆಂದು ನಿಶ್ಚಯ ಮಾಡಿದ್ದರು. 1980ನೇ ಇಸವಿಯಲ್ಲಿ ಸನ್ಮಾನ್ಯ ಗುಂಡೂರಾಯರ ಅಧ್ಯಕ್ಷತೆಯಲ್ಲಿ ಅದು ಶಂಕುಸ್ಥಾಪನೆಯಾಯಿತು. ಏನು ಆ ಯೋಜನೆಯ ಬದಲಾವಣೆ ಅಂತ ಹೇಳಿದರೆ ಆ ಡ್ಯಾಮಿನ ಹೈಟನ್ನು ಏರಿಸುವಂಥದ್ದು, ಅದನ್ನು ಪಿಕಪ್ ಡ್ಯಾಮ್ ಆಗಿ ಪರಿವರ್ತನೆ ಮಾಡುವಂಥದ್ದು ಎಂದು ಹೇಳುವಂಥ ದೃಷ್ಟಿಯಲ್ಲಿ ಪರಿಸರ ನಾಶವಾಗುತ್ತದೆ ಎನ್ನುವ

ದೃಷ್ಟಿಯಲ್ಲಿ ಅದನ್ನು ಬದಲಾವಣೆ ಮಾಡುವಂಥ ಪ್ರಯತ್ನ ಮಾಡಿದರು. ಆದರೆ 1982ನೇ ಇಸವಿಯಲ್ಲಿ ಈ ಯೋಜನೆಯನ್ನು ಅಲ್ಲಿ ಇಡುವಂಥ ಪ್ರಯತ್ನ ಆಯಿತು. ಯಾವುದೇ ಒಂದು ಯೋಜನೆಯನ್ನು ಒಂದು ಆಯವ್ಯಯದಲ್ಲಿ ಸೇರಿಸಿವಾಗ ಅದರ ಅನುಷ್ಠಾನ ಆಗದೇ ಇದ್ದರೆ ಆ ಅಯವ್ಯಯ ಪತ್ರದಲ್ಲಿ ಶಿಫಾರಸ್ಸು ಮಾಡಿದ ಹಣದ ವ್ಯವಸ್ಥೆಗಳೇನು? ಇದರ ಬಗ್ಗ ಕೂಡ ನಾವು ಚಿಂತನ ಮಾಡಬೇಕಾಗಿದ. 1991 ರವರೆಗೆ ಈ ಯೋಜನೆ ಸ್ಥಗಿತ ಆಯಿತು. ಕಾರ್ಯಗತವೇ ಆಗಲಿಲ್ಲ. ಸಿಬ್ಬಂದಿ ಖರ್ಚು, ಕಟ್ಟಡ, ಇದಕ್ಕೆ ಬೇಕಾದಂಥ ಎಲ್ಲಾ ಇನಫ್ರಾಸ್ಟ್ರಕ್ಚರಗಳನ್ನು ಅಲ್ಲಿ ಮಾಡಿಟ್ಟು ಅದಕ್ಕೆ ಕೊಡುವಂಥ ಖರ್ಚುಗಳನ್ನು ಕೊಡುವುದಾಯಿತು. ಕೇವಲ ಯೋಜನೆಯಲ್ಲಿ ಇದನ್ನು ಸೇರಿಸಿದಾಗ ಏನಾಗುತ್ತದೆ ಎಂದು ಹೇಳುವುದನ್ನು ಕೂಡ ನಾವು ಗಂಭೀರವಾಗಿ ಆಲೋಚನೆ ಮಾಡಬೇಕಾಗಿದೆ. ಕಣ್ಣುಮುಚ್ಚಿ ಸರ್ಕಾರದ ಕೆಲಸಗಳನ್ನು, ಕಾಮಗಾರಿಗಳನ್ನು ಹೇಗೆ ಮಾಡುತ್ತಾರೂ ಅಂತ ಗೊತ್ತಿಲ್ಲ. ಎಂಡದಂಡೆ ಕಾಲುವೆಯ 15 ಕಿಲೋಮೀಟರವರೆಗಿನ ಯೋಜನೆಯನ್ನು ಕೈಬಿಟ್ಟರು. ಯಾವುದೇ ಒಂದು ವಿಚಾರಗಳನ್ನು ಸಾರ್ವಜನಿಕವಾಗಿ ಪ್ರಸ್ತಾಪ ಮಾಡದೆ ಅದನ್ನು ಕೈಬಿಡುವಂಥ ಕೆಲಸ ಆಯಿತು. ಬದಲಾಗಿ ಹೊಳೆಯ ಮೇಲೆ ಅಕ್ವಿಡಕ್ಟ, ಅಂದರೆ ಹೊಳೆಯ ಮೇಲೆ ನೀರು ಹೋಗಲಿಕ್ಕೆ ಒಂದು ಕಾಲುವೆಯನ್ನು ಮಾಡುವುದರ ಮೂಲಕ ಈ ಯೋಜನೆಯನ್ನು ಮುಂದುವರೆಸುವುದು ಅಂತ ನಿಶ್ಚಯ ಮಾಡಿದರು. 1992ರಲ್ಲಿ ಇದನ್ನೂ ಕೈಬಿಟ್ಟರು. ಮತ್ತೆ ನೀರಾವರಿ ಮಾಡುವುದು ಎನ್ನುವಂಥ ದೃಷ್ಟಿಯಲ್ಲಿ ದಾಸನಕಟ್ಟೆ ಎಂದು ಹೇಳುವಲ್ಲಿ ಕೇವಲ 600 ಎಕರಗೆ ಮಾತ್ರ ನೀರಾವರಿ ಆಗುವಂಥ ಯೋಜನೆಯನ್ನು 14.55 ಕೋಟಿ ರೂ.ಗಳಲ್ಲಿ ಅನುಷ್ಠಾನ ಮಾಡಬೇಕು ಅಂತ ಸರ್ಕಾರ ಹೇಳಿತು. ಈ ಹಿನ್ನೆಲೆಯಲ್ಲಿ ನೋಡಿದರೆ ಯಾವಾಗ 1979ರಲ್ಲಿ 9.43 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ನಾವು ಹಾಕಿಕೊಂಡು 38 ಸಾವಿರ ಎಕರೆಗೆ 14.55 ಕೋಟಿ ರೂಪಾಯಿಗಳ ಯೋಜನೆಯಲ್ಲಿ ಅದನ್ನು ಅನುಷ್ಠಾನ ಮಾಡಬೇಕೆಂದು ಹೇಳಿದರೆ ಈ ಯೋಜನೆಗಳು ಕೇವಲ ನಮ್ಮ ಆಯವ್ಯಯ ಪತ್ರದಲ್ಲಿ ಬಂದರೆ ಅಥವಾ ಮತ್ತೊಂದರಲ್ಲಿ ಬಂದರೆ ಏನು ಕಾರ್ಯಗತ ಆಗುತ್ತದೆ? ಇದರ ಹಿನ್ನೆಲೆಯಲ್ಲಿ ನಾವು ಆಲೋಚನೆ ಮಾಡಬೇಕಾಗಿದೆ. ಸ್ಪಷ್ಟವಾಗಿ ಎಲ್ಲಿ ತೊಂದರೆಗಳಿವೆಯೋ ಆ ತೊಂದರೆಗಳ ಬಗ್ಗೆ ಚಿಂತನೆ ಮಾಡುವ ಅವಶ್ಯಕತೆ ಇದೆ. ಇದೊಂದು ದೊಡ್ಡ ಕಾಲಘಟ್ಟ. ಈ ಸಂದರ್ಭದಲ್ಲಿ ತಾವು ಅದನ್ನು ಮಾಡದಿದ್ದರೆ ಪ್ರಾಯಶಃ ನಾವು ಒಪ್ಪುತ್ತೇವೆ. ಇದನ್ನು ಎಡದಂಡೆ ಕಾಲುವೆಗೆ ಪಕ್ಕ ಮಾಡುವುದರ ಮುಖಾಂತರ ಜೋಡಿಸಬೇಕು ಅಂತ ಹೇಳುವುದು. ಕೆಲಸ ಎಲ್ಲಿ ಪ್ರಾರಂಭಿಸಬೇಕೋ ಅಲ್ಲಿ ಕೆಲಸ ಬಿಟ್ಟರು. ಏಳು ಕಿಲೋಮೀಟರ್ ದೂರದಲ್ಲಿ ಈ ಒಂದು ಸುರಕ್ಷಿತ ಕಾಡು ಬರುತ್ತದೆ ಅಂತ ಹೇಳಿ ನಾಲ್ಕು ಕಿಲೋಮೀಟರ್ ಬಿಟ್ಟು ಬಾಕಿ ಏಳು ಕಿಲೋಮೀಟರ್ ಕೆಲಸ ಮಾಡುವಂಥ ಕೆಲಸ ಮಾಡಿದರು. ಇದರ ಬಗ್ಗ ಯಾವುದೇ ಚಿಂತನೆ ಇಲ್ಲ. ಆ ಯೋಜನೆಯ ಅನುಷ್ಠಾನದ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲ. ಇದನ್ನು ಏತಕ್ಕೆ ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ ಅಂತ ಹಳಿದರೆ ಈ ರೀತಿಯ ಯೋಜನೆಗಳು ಖಂಡಿತವಾಗಿ ಜನಸಾಮಾನ್ಯರಿಗೆ ಹಿತ ತರುವಂಥದ್ದಲ್ಲ. ಆದಕಾರಣ ಪ್ರಾರಂಭಿಕ ಹಂತದಲ್ಲೇ ಇಂಥದ್ದನ್ನೆಲ್ಲಾ ನಾವು ನೋಡಬೇಕು. ಏನು ಹಿಂದೆ ಇಂಥ ಯೋಜನೆಗಳು ತಪ್ಪು ದಾರಿ ಹಿಡಿದಿವೆ ಅದು ಯಾರು ತಪ್ಪು ಮಾಡಿದ್ದಾರೆ ಅಂತ ಹೇಳುವುದನ್ನು ತಾವು ತನಿಖೆ

ಮಾಡುವುದರ ಮೂಲಕ ಯೋಜನೆ ಅನುಷ್ಠಾನಕ್ಕೆ ಅಧಿಕಾರಿಗಳನ್ನು ಕೂಡ ತಮ್ಮ ಜೊತೆಯಲ್ಲಿ ಒಂದು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವಂಥ ಕೆಲಸಗಳನ್ನು ಮಾಡಬೇಕು. ಇಲ್ಲದಿದ್ದರೆ ಖಂಡಿತವಾಗಿ ಯೋಜನೆಗಳ ಅನುಷ್ಠಾನವಾಗುವುದಿಲ್ಲ. ಇವರ ಬಗ್ಗೆ ಪ್ರಶ್ನೆಗಳಾಯಿತು. ವಿಧಾನ ಪರಿಷತ್ತಿನಲ್ಲಿ ಸನ್ಮಾನ್ಯ ಕರಂಬಳ್ಳಿ ಸಂಜೀವಶೆಟ್ಟರು 1994 ರಲ್ಲಿ ಅವನ್ನು ಪ್ರಶ್ನೆ ಮಾಡಿದರು. ಟೆಂಡರ್ ಕರೆಯದೇ ಕೆಲಸ ಮಾಡುತ್ತಾರೆ, ಟೆಂಡರ್ ಕರೆದು ಏತಕ್ಕೆ ಕೆಲಸ ಮಾಡಬಾರದು ಅಂತ ಕೇಳಿದರು. ಅವರೂ ಕೂಡ ಯಾವುದೇ ಒಂದು ವಿವೇಚನೆಯಿಂದ ಸರ್ಕಾರ ವರ್ತನೆ ಮಾಡಲಿಲ್ಲ. ಈ ಹಿನ್ನೆಲೆಯಲ್ಲಿ ಯಾವುದೇ ಒಂದು ಯೋಜನೆಗಳನ್ನು ಮಾಡುವಂಥ ಸಂದರ್ಭಗಳಲ್ಲಿ ಯೋಜನೆಗಳ ಅನುಷ್ಠಾನದ ಬಗ್ಗೆ ಕೂಡ ಪೂರ್ವಭಾವಿ ಚಿಂತನೆ ಮಾಡುವುದರ ಮೂಲಕ ಈ ಕೆಲಸಗಳನ್ನು ಮಾಡಬೇಕು ಅಂತ ಹೇಳುವಂಥ ಒಂದು ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುತ್ತಾ ಇದ್ದೇನೆ. ಪಿ.ಡಬ್ಲ್ಯೂ.ಡಿ. ಮಂತ್ರಿಯವರು ಇಲ್ಲಿ ಉಪಸ್ಥಿತರಿದ್ದಾರೆ. ಪ್ರಾಯಶಃ ಈ ಬಾರಿಯು ಅನುದಾನದಲ್ಲಿ ಇದಕ್ಕೆ ಹೆಚ್ಚು ಒತ್ತು ಕೊಡಬೇಕಿತ್ತು ಎಂಬುದು ನನ್ನ ಭಾವನೆ. ಕಳೆದ ಬಾರಿ ವಾಪಸ ತೆರಿಗೆಯಲ್ಲಿ ಸುಮಾರು 90 ಕೋಟಿ ರೂ.ಗಳನ್ನು ಏಕಾಏಕಿ ಸರ್ಕಾರ ವಸಲೂ ಮಾಡಿದೆ. ಆದರೆ ಈ ಬಾರಿ ಯಾವುದೇ ಮಾರ್ಗದಲ್ಲಿ ಸಾಮಾನ್ಯವಾಗಿ ಹೋಗುವಂಥ ಪರಿಸ್ಥಿತಿ ಇಲ್ಲ. ನಮ್ಮ ಮಾನ್ಯ ಮಂತ್ರಿಗಳು ದಕ್ಷಿಣ ಕನ್ನಡ ಜಿಲ್ಲೆಗೆ ಬಂದಿದ್ದರು. ನವೆಂಬರ್ ಕೊನೇ ಹಂತದಲ್ಲಿ ಎಲ್ಲಾ ಪಿ.ಡಬ್ಲ್ಯೂ.ಡಿ. ಮಾರ್ಗಗಳನ್ನು ಒಳ್ಳೆಯ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೇನೆ ಎನ್ನುವ ವಿಚಾರವನ್ನು ಹೇಳಿದ್ದರು. ಅವರು ಒಳ್ಳೆಯ ಮನಸ್ಸಿನಿಂದ ಒಳ್ಳೆಯ ಭಾವನೆಯಲ್ಲಿ ಅವರು ಹೇಳಿದ್ದರು. ಅವರ ಬಗ್ಗೆ ನಾನು ಎರಡು ಮಾತನ್ನಾಡುತ್ತಿಲ್ಲ. ಆದರೆ ಅನಿವಾರ್ಯವಾಗಿ ಇವತ್ತಿನವರೆಗೆ ಡಾಂಬರು ಬರಲಿಲ್ಲ ಎನ್ನುವುದನ್ನು ನಾವೆಲ್ಲಾ ತಿಳಿದುಕೊಂಡಿದ್ದೇವೆ. ಯಾವುದೇ ಮಾರ್ಗಕ್ಕೆ ಡಾಂಬರು ಹಾಕುವಂಥ ವ್ಯವಸ್ಥೆಯಾಗುತ್ತಿಲ್ಲ. ಉಳಿದಂಥ ಕೇವಲ ಕೆಲವೇ ದಿನಗಳಲ್ಲಿ ಬಹುಶಃ ಮಾರ್ಚ್ 31ರೊಳಗೆ ಅದನ್ನೆಲ್ಲಾ ಕಂಪ್ಲೀಟ್ ಮಾಡಬೇಕೆಂದು ಹೇಳಬಯಸುತ್ತೇನೆ. ಆದರೆ ಇಷ್ಟು ಶೀಘ್ರದಲ್ಲಿ ಆ ಕೆಲಸವನ್ನು ಮಾಡಲಿಕ್ಕೆ ಸಾಧ್ಯವಿಲ್ಲ. ಇದಕ್ಕೆ ಪೂರ್ವಬಾವಿ ತಯಾರಿ ಬೇಡವೆ? ಈ ಬಾರಿ ಕೂಡ ನಮ್ಮ ಇಲಾಖೆಗೆ ಇಟ್ಟಂಥ ಹಣ ತುಂಬಾ ಕಡಿಮೆಯಾಗಿದೆ ಎಂದು ನಾನು ಭಾವಿಸುತ್ತಾ ಇದ್ದನೆ. ಪ್ರಾಯಶಃ ವಿನಂತಿ ಮಾಡಿಕೊಳ್ಳುತ್ತಿದ್ದೇನೆ ಮಾನ್ಯ ಸಿದ್ದರಾಮಯ್ಯನವರಲ್ಲಿ. ಖಂಡಿತ ಇದರ ಬಗ್ಗೆ ಅವರ ಗಮನ ಕೊಡುತ್ತಾರೆ, ಗ್ರಾಮಾಂತರ ಪ್ರದೇಶಗಳಲ್ಲಿ ಇರವಂಥ ಆ ಪಿ.ಡಬ್ಲ್ಯೂ.ಡಿ. ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನವನ್ನು.....

ಶ್ರೀ ಪಿ.ಎಸ್. ಪುಟ್ಟೇಗೌಡ : ಈ ಡಾಂಬರೀಕರಣದ ವಿಚಾರದ ಬಗ್ಗೆ ಹೇಳುವುದಾದರೆ ಹಳ್ಳಿಗಾಡುಗಳಲ್ಲಿ ಏನು 20 ಎಂ.ಎಂ. ಥಿಕನೆಸ್ ಅಂತ ಹೇಳಿ ಮಾಡುತ್ತಿದ್ದಾರೆ. ಮಾನ್ಯ ಲೋಕೋಪಯೋಗಿ ಸಚಿವರು ಇಲ್ಲಿದ್ದಾರೆ. ಈ 20 ಎಂ. ಎಂ. ಥಿಕನೆಸಗೆ ಬಹಳಷ್ಟು ದಪ್ಪ ಜೆಲ್ಲಿಯನ್ನು ಹಾಕುತ್ತಾರೆ. ತಾಂತ್ರಿಕವಾಗಿ ಕೂಡ ಪಿ.ಡಬ್ಲ್ಯೂ.ಡಿ ಇಂಜನಿಯರನ್ನು ಕೇಳಿದರೆ ಇದು ಮೊದಲು 30 ಎಂ.ಎಂ. ಎಂದು ಇತ್ತು. ಆ ದಪ್ಪ ಜೆಲ್ಲಿ ಹಾಕುವುದರಿಂದ ಚೆನ್ನಾಗಿ ಬರುತ್ತದೆ 10 ವರ್ಷದವರೆಗೂ ಅಂತ ಹೇಳುತ್ತಾರೆ. ನೀವು ಏನು 20 ಎಂ. ಎಂ. ಹಾಕುತ್ತೀರಾ ಅದನ್ನು ಬೇಕಾದರೆ ಸಿಟಿ ರಸ್ತೆಗಳಿಗೆ ಹಾಕಿಕೊಂಡರೂ ತೊಂದರೆ ಇಲ್ಲ. ಅಥವಾ ಎರಡನೇ ಸಲ ಎರಡನೇ ಕೋಟ್ ಹಾಕುವ ರಸ್ತೆಗೆ ಹಾಕಿದರೂ ಪರ್ವಾಗಿಲ್ಲ

ಹೊಸ ರಸ್ತೆಯನ್ನು ಏನು ಮಾಡುತ್ತೇವೆ ಹಳ್ಳಿಗಾಡಿನಲ್ಲಿ ಅದಕ್ಕೆ 30 ಎಂ. ಎಂ. ಅನ್ನೇ ಮಾಡಬೇಕು. 20 ಎಂ.ಎಂ. ಡೌನ್ ಸೈಜ್ ಜೆಲ್ಲಿಯನ್ನೇ ಹಾಕಬೇಕು. ಇಲ್ಲ ಅಂತ ಅಂದರೆ ಖಂಡಿತ ಹಾಕಿದಂಥ ದುಡ್ಡು ವೇಸ್ಟ್ ಆಗುತ್ತದೆ. ಒಂದು ವರ್ಷಕ್ಕೇ ಹಾಳಾಗಿಹೋಗುತ್ತದೆ. ಇದನ್ನು ಪಿ.ಡಬ್ಲ್ಯೂ.ಡಿ ಇಲಾಖೆ ಮಂತ್ರಿಗಳು, ಸರ್ಕಾರ ದಯವಿಟ್ಟು ಇದಕ್ಕೆ ಗಮನ ಹರಿಸಿ ಇದನ್ನು ಸರಿಪಡಿಸಬೇಕು ಎಂದು ಹೇಳಿ ಅವರು ಹೇಳುತ್ತಾ ಇರತಕ್ಕಂಥ ಮಾತಿಗೆ ನಾನೂ ಕೂಡ ಒತ್ತಾಯ ಮಾಡುತ್ತೇನೆ.

ಶ್ರೀ ಡಿ.ವಿ. ಸದಾನಂದ ಗೌಡ : ಮಾನ್ಯ ಅಧ್ಯಕ್ಷರೆ, ಏತಕ್ಕೆ ನಾನು ಈ ಮಾತನ್ನು ಹೇಳುತ್ತೇನೆ ಅಂದರೆ ಹಿಂದಿನ ಕೆಲವು ಬಿಲ್‌ಗಳು ಇನ್ನೂ ಪಾವತಿ ಆಗಿಲ್ಲ ನನಗೆ ತಿಳಿದಮಟ್ಟಿಗೆ. ಅದೇ ರೀತಿ ದಕ್ಷಿಣ ಕನ್ನಡ ಕೊಡಗು ಹಾಗೂ ಹಾಸನದಲ್ಲಿ ಜಾಸ್ತಿ ಮಳೆ ಬಂದ ಕಾರಣ ಎಲ್ಲಾ ಡಾಂಬರ್ ಮಾರ್ಗಗಳು ಅತ್ಯಂತ ಕಳಪೆ ಸ್ಥಿತಿಯಲ್ಲಿರುವುದನ್ನು ನಾವೆಲ್ಲಾ ಕಂಡ ಕಾರಣ ಈ ಸಂದರ್ಭದಲ್ಲಿ ನಾನು ಈ ಒಂದು ವಿನಂತಿಯನ್ನು ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಅದಲ್ಲದೆ ನಾವು ಹೆಚ್ಚಾಗಿ ಆಲೋಚನೆ ಮಾಡಬೇಕಾದ್ದು ಏನು ಅಂತ ಹೇಳಿದರೆ ಯಾವುದೇ ರೋಡ್ ರಿಪೇರಿಗಳ ಬಗ್ಗೆ ಅಥವಾ ಸಾರಿಗೆ ವ್ಯವಸ್ಥೆ ಯಾವುದೂ ಮಾಸ್ಟರಪ್ಲಾನ್ ನಾವು ಹಾಕಿಕೊಳ್ಳದಿರುವುದು ಖಂಡಿತವಾಗಿ ಒಂದು ವಿಚಿತ್ರ ವ್ಯವಸ್ಥೆ ಎಂದು ಭಾವಿಸುತ್ತಾ ಇದ್ದೇನೆ. ಯಾವುದೇ ಒಂದು ಮಾಸ್ಟರಪ್ಲಾನ್ ಮಾಡದೆ ಯಾವುದೇ ವ್ಯವಸ್ಥೆಗೆ ಪೂರಕವಾದಂಥ ರೀತಿಯಲ್ಲಿ ನಮ್ಮ ಆಯವ್ಯಯಪತ್ರದಲ್ಲಿ ಇಟ್ಟುಕೊಳ್ಳದೆ ನಾವು ಕೇವಲ ಒಂದು ಘೋಷಣೆಗಳನ್ನು ಮಾಡುವುದರ ಮುಖಾಂತರ ಆ ಡಾಂಬರರೀಕರಣಗಳು ಆ ಕಾಮಗಾರಿಗಳು ಆಗಲಿಕ್ಕೆ ಸಾಧ್ಯವಿಲ್ಲ. ರಸ್ತೆ ಅಭಿವೃದ್ಧಿ ಬಗ್ಗೆ ಮಾಸ್ಟರಪ್ಲಾನ್ ಕೂಡ ತಯಾರು ಮಾಡಬೇಕು ಎಂದು ಹೇಳುವಂಥದ್ದು ನನ್ನ ಸ್ಪಷ್ಟ ಅಭಿಪ್ರಾಯ. ಇನ್ನೊಂದು ವಿಚಾರವನ್ನು ಸರ್ಕಾರ ಈಗಾಗಲೇ ಹೇಳಿದೆ. ರಸ್ತೆ ಅಭಿವೃದ್ಧಿಯ ಬಗ್ಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯವರು ಸುಮಾರು 15 ಲಕ್ಷ ರೂಪಾಯಿ ಎಲ್ಲೂ ಕೂಡ ಈ ಕಾಮಗಾರಿಗಳು ಇನ್ನು ಶುರುವಾಗಿಲ್ಲ. ಮಾರ್ಚಿ 31ರ ಕೊನೆಯ ಹಂತಕ್ಕೆ ಇದು ಮುಗಿಯಬೇಕಾಗಿದೆ. ಇದೂ ಕೂಡ ಆ ಯೋಜನೆ ಮತ್ತು ಆ ಯೋಜನೆಯ ಸ್ಪಷ್ಟ ಅನುಷ್ಠಾನದ ಬಗ್ಗೆ ಸರಿಯಾದ ವ್ಯವಸ್ಥೆ ಇಲ್ಲದಂತಾಗಿರುವುದು. ನಮ್ಮ ಜಿಲ್ಲೆಯಲ್ಲಿ ವಿಶಿಷ್ಟವಾದ ಪರಿಸ್ಥಿತಿ ಉದ್ಭವವಾಯಿತೆಂದು ನಾನು ತಿಳಿದಿದ್ದೇನೆ, ಬಹುಶಃ ನಮ್ಮ ಜಿಲ್ಲೆಯ ಶಾಸಕರಾದ ಮಾನ್ಯ ಅಮರನಾಥಶೆಟ್ಟಿಯವರು, ವಸಂತಬಂಗೇರಾರವರು ಆ ಕಡೆ ಕುಳಿತು ನೋಡುತ್ತಿದ್ದಾರೆ. ಪ್ರಾಯಶಃ ಅವರಿಗೆ ಚೆನ್ನಾಗಿ ಗೊತ್ತು. ನಮ್ಮ ಈ ಮಾರ್ಗಗಳ ಕೆಲಸವನ್ನು ಮಾಡಬೇಕೆಂದು ಹೇಳುವಂತಹ ಸಂದರ್ಭದಲ್ಲಿ ಈ ಕೆಲಸವನ್ನು ಯಾರು ಮಾಡಬೇಕೆಂದು ಹೇಳುವಂತಹವರಲಲ್ಲಿ ಭಿನ್ನಾಭಿಪ್ರಾಯ ಬಂತು. ಜಿಲ್ಲಾಪಂಚಾಯಿತಿವರು ಹೇಳಿದರು ನಮಗೆ ಆ ಕೆಲಸ ಕೊಡಬೇಕು ಅದನ್ನು ನಾವು ಮಾಡಬೇಕೆಂದು ಹೇಳಿ, ಲೋಕೋಪಯೋಗಿ ಇಲಾಖೆಯು ಸೂಪರವಿಷನನಲ್ಲಿ ಮಾಡಬೇಕೆಂದು ಮಾನ್ಯ ಮಾರುಕಟ್ಟೆಯ ಸಚಿವರು ಹೇಳಿದರು. ಇಂತಹ ಹಿನ್ನಲೆಯಲ್ಲಿ ಸ್ವಲ್ಪ ತಾತ್ವಿಕವಾದ ಭಿನ್ನಾಭಿಪ್ರಾಯದಿಂದ ಅದು ಇನ್ನೂ ಕೂಡ ಕೆಲಸ ಪ್ರಾರಂಭವಾಗಿಲ್ಲ. ಕೆಲವು ಕಡೆ ಟೆಂಡರ್ ಕರೆದಿದ್ದೇವೆಂದು ಹೇಳುವಂತಹ ವಿಚಾರ ಇದೆ. ಆದರೆ ಎಲ್ಲಿಯೂ ಕಾಮಗಾರಿ ಶುರುವಾದದ್ದು ನಮ್ಮ ಅವಗಾಹನೆಗೆ ಬರಲಿಲ್ಲ. ಆದಕಾರಣ ಯಾವುದೇ ಯೋಜನೆಗಳನ್ನು ಸರ್ಕಾರ ರೂಪೀಕರಣ ಮಾಡುವಂತಹ ಸಂದರ್ಭದಲ್ಲಿ ಅತ್ಯಂತ ಶೀಘ್ರವಾಗಿ

ಇದನ್ನು ಅನುಷ್ಠಾನ ಮಾಡುವಂತಹ ಪ್ರಯತ್ನಗಳು ಅಂದರೆ ಟೈಮ್ ಬಾಂಡ್ ಪ್ರೋಗ್ರಾಮ್ ಇರಬೇಕು. ಮಾರ್ಚಿ 31 ಕ್ಕೆ ಆಗುವುದು ಇದ್ದರೆ ಸಾಧಾರಣ ಜನವರಿ ಅಂತ್ಯದಲ್ಲಿ ಡಾಮರನ್ನು ನಾವು ಕ್ರೋಢೀಕರಣ ಮಾಡಿದರೆ ಆ ರಸ್ತೆಯ ಎಲ್ಲಾ ಕೆಲಸಗಳನ್ನು ಮಾಡಬಹುದು. ಒಮ್ಮೆ ಮಳೆ ಬಿದ್ದರೆ ಮತ್ತೆ ಡಾಮರು ಹಾಕಿದರೆ ಆ ಡಾಮರು ಇರುವುದಿಲ್ಲ. ಅದೆಲ್ಲ ತಿಳಿದಂತಹ ವಿಚಾರ. ಈ ಹಿನ್ನೆಲೆಯಲ್ಲಿ ಒಂದು ಟೈಮ್ ಬೌಂಡ್ ಪ್ರೋಗ್ರಾಮ್ ಹಾಗಿ ಯಾವುದೇ ನಮ್ಮ ಯೋಜನೆಗಳ ವಿಚಾರವನ್ನು ಸೀಮಿತ ಅವಧಿಯೊಳಗೆ ನಾವು ಮಾಡುವಂತಹ ಒಂದು ಪ್ರಯತ್ನವನ್ನು ಮಾಡಬೇಕೆಂದು ಹೇಳುವಂತಹ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೊಂದು ವಿಶೇಷವೆಂದರೆ, ಪ್ರಾಯಶಃ ನಮ್ಮ ಸರ್ಕಾರಕ್ಕೆ ನಮ್ಮ ಈ ರಾಜ್ಯದಲ್ಲಿ 315 ಕಿಲೋಮೀಟರ್ ಉದ್ದದ ಕರಾವಳಿಯಿದೆ ಎನ್ನುವಂತಹದ್ದು ಯಾರಿಗೂ ಗೊತ್ತಿಲ್ಲವೆಂದು ಕಾಣುತ್ತದೆ. ಅದರಲ್ಲೂ ನಾ ಬಾರೀ ಬೇಸರಿಂದ ಹೇಳಬೇಕಾಗಿದೆ, ನಮ್ಮ ಜಿಲ್ಲೆಯವರೇ ಮೀನುಗಾರಿಕಾ ಸಚಿವರಾಗಿದ್ದಾರೆ. ನಮ್ಮ ಪಕ್ಕದ ಜಿಲ್ಲೆಯವರು ಅದೂ ಕೂಡ ಕರಾವಳಿಯ ಬದಿಯವರು ಬೃಹತ್ ಉದ್ದಿಮೆಯ ಮಂತ್ರಿಗಳಾಗಿದ್ದಾರೆ. ಇಬ್ಬರೂ ಮಂತ್ರಿಗಳು ಕೂಡ ಕರಾವಳಿಯ ಬಗ್ಗೆ ಯಾವುದೇ ಚಿಂತನೆ ಮಾಡದಿರುವುದು ಅತ್ಯಂತ ಶೋಚನೀಯವಾದ ಪರಿಸ್ಥಿತಿ ಎಂದು ನಾನು ಹೇಳಲಿಕ್ಕೆ ಇಚ್ಛಿಪಡುತ್ತಿದ್ದೇನೆ. ಇವತ್ತು ನಿರಂತರವಾಗಿ ಸುಮಾರು ನಾಲ್ಕೂವರೆ ಲಕ್ಷಕ್ಕಿಂತ ಮೇಲ್ಪಟ್ಟು ಮೀನುಗಾರು ಅಲ್ಲಿ ತಮ್ಮ ದಿನನಿತ್ಯದ ಜೀವನವನ್ನು ಅದರಿಂದ ಮಾಡುತ್ತಿದ್ದಾರೆ. ಸರ್ಕಾರ ಸ್ಪಷ್ಟವಾಗಿ ತಿಳಿದುಕೊಂಡಿದ್ದು ಏನೆಂದರೆ ಕೇವಲ ಈ ಸಮುದ್ರ ಇರುವಂತಹದ್ದು ತ್ಯಾಜ್ಯ ವಸ್ತುಗಳನ್ನು ಸಮುದ್ರಕ್ಕೆ ಬಿಡಲಿಕ್ಕೆ ಮಾತ್ರ ಇರುವಂತಹದ್ದು ಇದು ಎಂದು. ಇದರಿಂದ ಎಷ್ಟೋ ಜನ ಬದುಕುತ್ತಾರೆಂದು ಹೇಳುವಂತಹ ಭಾವನೆ ಅದರಲ್ಲಿ ಇಲ್ಲವೆಂದು ಹೇಳಲಿಕ್ಕೆ ತುಂಬಾ ಬೇಸರವಾಗುತ್ತಿದೆ. ಪ್ರತಿ ವರ್ಷ ಮಳೆ ಬಿದ್ದ ತಕ್ಷಣ ಕಡಲ ಕೊರತೆಗಳಿಂದ ಎಷ್ಟೋ ಮೀನುಗಾರರ ಮನೆಗಳು ಕೊಚ್ಚಿಕೊಂಡು ಹೋಗುವುದನ್ನು ನಾವು ನೋಡುತ್ತಿದ್ದೇವೆ. ಅವರಿಗೆ ಪುನರ್ವಸತಿ ಮಾಡಿಕೊಡುವ ಕೆಲಸವನ್ನು ನಾವು ಮಾಡುತ್ತಿಲ್ಲ. ಕಡಲ ಕೊರೆತಕ್ಕೆ ಬೇಕಾಗುವಂತಹ ತಡೆಗೋಡೆಗಳನ್ನು ನಿರ್ಮಾಣ ಮಾಡಲಿಕ್ಕೆ ಯಾವುದೇ ವ್ಯವಸ್ಥೆಗಳನ್ನು ಮಾಡುತ್ತಿಲ್ಲ. ಕಳೆದ ಒಂದು ವರ್ಷದ ಅವಧಿಯಲ್ಲಿ ಈ ಸರ್ಕಾರದ ಮುಂದೆ ಬೇರೆ ಬೇರೆ ವೇದಿಕೆಗಳಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದರೂ ಕೂಡ ಈ ಬಗ್ಗೆ ಯಾವುದೇ ಚಿಂತನೆ ಮಾಡದಿರುವುದು ಪ್ರಾಯಶಃ ಕರಾವಳಿಯ ಜನರ ಬಗ್ಗೆ ಯಾವುದೇ ಕಾಳಜಿಯಿಲ್ಲವೆಂದು ಸ್ಪಷ್ಟವಾಗುತ್ತಿದೆ. ನಾನು ಸನ್ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಕಡಲ ಕೊರತಕ್ಕೆ ತಡೆಗೋಡೆ ನಿರ್ಮಾಣಕ್ಕೆ ಹಾಗೂ ಈ ಮೀನುಗಾರರ ಪುನರ್ವಸತಿ ನಿರ್ಮಾಣಕ್ಕೆ ಅದೇರೀತಿ ಅವರ ಬೇರೆ ಬೇರೆ ವಿವಿಧ ಕೆಲಸಗಳಿಗೆ ಸರ್ಕಾರ ಸಹಾಯಧನದ ರೀತಿಯಲ್ಲಿ ಕನಿಷ್ಟ ನೂರು ಕೋಟಿ ರೂಪಾಯಿಗಳನ್ನಾದರೂ ಮೀಸಲಿಡಬೇಕು. ಇಷ್ಟು ಹಣವನ್ನು ಇಟ್ಟಾಗ ಮಾತ್ರ ಲಕ್ಷಗಟ್ಟಲೆ ಜನರ ಒಂದು ನಿರಂತರ ಜೀವನದ ಬಗ್ಗೆ ಸ್ವಲ್ಪ ಕಾಳಜಿ ವಹಿಸಿದಂತಾಗುತ್ತದೆನ್ನುವಂತಹ ಮಾತನ್ನು ಹೇಳುತ್ತೇನೆ. ಏಕೆಂದರೆ ಕಡಲ ಕೊರೆತದ ಬಗ್ಗೆ 10 ಕೋಟಿ ರೂಪಾಯಿಗಳಷ್ಟನ್ನು ಮಾತ್ರ ಇಟ್ಟಿದ್ದಾರೆ. ಪ್ರಾಯಶಃ 10 ಕೋಟಿಯಲ್ಲಿ 10 ಕಿಲೋಮೀಟರ್ ತಡೆಗೋಡೆ ಕೆಲಸವನ್ನು ಮಾಡಲಿಕ್ಕೆ ಮಾತ್ರ ಸಾಧ್ಯವಿದೆ. 315 ಕಿಲೋಮೀಟರ್ ಇರುವಂತಹ ಪ್ರದೇಶದಲ್ಲಿ ಕಳೆದ ಬಾರಿ ಅಲ್ಲಿ

ಹೋದಂತಹ ಬೇರೆ ಬೇರೆ ವಿಚಾರಗಳ ಇಂಜಿನಿಯರುಗಳು ಬೇರೆ ಬೇರೆ ಸ್ಥಳಗಳನ್ನು ನೋಡಿ ಕನಿಷ್ಟ 50 ಕಿಲೋಮೀಟರನಷ್ಟು ತಡೆಗೋಡೆ ಮಾಡಬೇಕೆಂದು ಸರ್ಕಾರಕ್ಕೆ ವಿಚಾರವನ್ನು ಕೊಟ್ಟಾಗಲೂ ಕೂಡ ಸರ್ಕಾರ ಇದರ ಬಗ್ಗೆ ಕಣ್ಣುಮುಚ್ಚಿ ಕುಳಿತುಕೊಂಡಿದೆ. ಮೀನುಗಾರರ ಬಗ್ಗೆ ಸರ್ಕಾರ ಏನೂ ಚಿಂತನೆ ಮಾಡುತ್ತಿಲ್ಲ. ಬೆಳಿಗ್ಗೆ ಸಮುದ್ರಕ್ಕೆ ಹೋದವರು ಜೀವಂತವಾಗಿ ಹಿಂದೆ ಬಂದರೆ ಬಾರೀ ಒಂದು ದೊಡ್ಡ ಸಾಧನೆಯೆಂದು ಹೇಳುವಂತಹ ಒಂದು ವ್ಯವಸ್ಥೆ ಇದೆ. ಮೀನು ತಿಂದು ಸಂತೋಷಪಡುವಂತಹ ಜನ ಅದನ್ನು ಮರೆತರೆ ಅವರು ತಿಂದುದಕ್ಕೆ ಕೂಡ ದೇವರು ಮೆಚ್ಚಲಿಕ್ಕೆ ಇಲ್ಲವೆಂದು ನನ್ನ ಭಾವನೆ. ಇದಕ್ಕಾಗಿ ನಾನು ಒತ್ತಡವನ್ನು ಹೇರುತ್ತಿದ್ದೇನೆ. ಈ ಸರ್ಕಾರ ಬಜೆಟ್ ಮಂಡನೆ ಮಾಡಿರುವ ಈ ಸಂದರ್ಭದಲ್ಲಿ ಕನಿಷ್ಟ ನೂರು ಕೋಟಿಗಳನ್ನಾದರೂ ಮೀನುಗಾರರ ಪುನರ್ ವ್ಯವಸ್ಥೆಯ ಬಗ್ಗೆ ತಡೆಗೋಡೆ ನಿರ್ಮಾಣದ ಬಗ್ಗೆ ಅವರಿಗೆ ಬೇಕಾದ ಬಾಕಿ ವ್ಯವಸ್ಥೆಯ ಬಗ್ಗೆ ಇಲ್ಲಿ ದೊರಕಿಸಿಕೊಡಬೇಕೆಂದು ಹೇಳುವಂತಹ ವಿನಂತಿಯನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಸದಸ್ಯರ ಭಾಷಣ ಕೇಳಿ ಫೈನಾನ್ಸ ಮಿನಿಸ್ಟರ್ ನಿದ್ದೆ ಮಾಡಿಬಿಟ್ಟರು.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅರ್ಥಸಚಿವರು ಸುಮಾರು ದಿವಸಗಳಿಂದ ತುಂಬಾ ಕಷ್ಟಪಟ್ಟಿದ್ದಾರೆಂದು ಹೇಳುವಂತಹದ್ದು ನಿನ್ನೆ ಅವರು ನಾನು ಒಟ್ಟಿಗೆ ಇದ್ದಾಗ ಹೇಳಿದರು. ನಿದ್ರೆ ಮಾಡಿದರೂ ಕೂಡ ಅದನ್ನೆಲ್ಲ ತಿಳಿದುಕೊಳ್ಳುತ್ತಾರೆನ್ನುವಂತಹ ಭರವಸೆ ನನಗಿದೆ. ಮೀನುಗಾರರ ಬಗ್ಗೆ ಹೇಳಿದ್ದೇನೆ. ತಡೆಗೋಡೆ ನಿರ್ಮಾಣಕ್ಕೆ ಪುನರ್ ವ್ಯವಸ್ಥೆ ನಿರ್ಮಾಣಕ್ಕೆ ರಸ್ತೆ ನಿರ್ಮಾಣಕ್ಕೆ ಕನಿಷ್ಟ 100 ಕೋಟಿ ರೂಪಾಯಿಗಳನ್ನು ಇಡಬೇಕೆನ್ನುವ ಒಂದು ವಿನಂತಿಯನ್ನು ಮಾಡಿಕೊಂಡಿದ್ದೇನೆ.

ಇದೇರೀತಿ ಪ್ರವಾಸೋದ್ಯಮದ ಬಗ್ಗೆ ಉಲ್ಲೇಖ ಮಾಡುವಂತಹದ್ದು ಅನಿವಾರ್ಯವೆಂದು ಕಾಣುತ್ತದೆ. ಕರಾವಳಿಯ ಆ 315 ಕಿಲೋಮೀಟರ್ ವ್ಯಾಪ್ತಿಯಲ್ಲಿರುವಂತಹ ವಿವಿಧ ಕ್ಷೇತ್ರಗಳು ಐತಿಹಾಸಿಕ ಸ್ಥಳಗಳು ಸುಂದರ ಕರಾವಳಿ ಅರಮನೆಗಳು ಮತ್ತು ಪವಿತ್ರ ಯಾತ್ರಾ ಸ್ಥಳಗಳು ಸಾಕಷ್ಟು ಇದ್ದಾಗ ಕೂಡ ಈವೊಂದು ವ್ಯವಸ್ಥೆಗೆ ಸಾಕಷ್ಟು ಹಣವನ್ನು ಈ ಆಯವ್ಯಯ ಪತ್ರದಲ್ಲಿ ಇಟ್ಟಿಲ್ಲ. ಯುವಕರಿಗೆ ಉದ್ಯೋಗ ಕೊಡುವ ನೆಪದಲ್ಲಿ ಪ್ರಾಯಶಃ ಪ್ರವಾಸೋದ್ಯಮ ಅತ್ಯಂತ ಉತ್ಕೃಷ್ಟ ಯೋಜನೆ ಅದು ಆಗಬಹುದೆಂದು ನಾನು ಭಾವಿಸುತ್ತಾ ಇದ್ದೇನೆ. ಸುಮಾರು 100 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಸುಮಾರು 10-15 ಸಾವಿರ ಯುವಕರಿಗೆ ಉದ್ಯೋಗವನ್ನು ನಿರ್ಮಾಣ ಮಾಡಲಿಕ್ಕೆ ಕರ್ನಾಟಕ ರಾಜ್ಯದಲ್ಲಿ ಸಾಧ್ಯ. ಆದರೆ ಇದನ್ನು ಮರೆತೇ ಬಿಟ್ಟಿದ್ದಾರೆ. ಪ್ರವಾಸೋದ್ಯಮದ ಬಗ್ಗೆ ಸಾಕಷ್ಟು ಮಾತನಾಡುವಂತಹ ಜನ ಪ್ರವಾಸೋದ್ಯಮದ ಬಗ್ಗೆ ಕಾಳಜಿಯುಂಟು ಎಂದು ಹೇಳುವಂತಹ ಜನ ಪ್ರವಾಸೋದ್ಯಮದ ಬಗ್ಗೆ ಯಾವುದೇ ಒಂದು ಉನ್ನತವಾದ ವಿಚಾರವನ್ನು ಇಟ್ಟುಕೊಳ್ಳದೆ ಈ ಆಯವ್ಯಯ ಪತ್ರದಲ್ಲಿ ಯಾವುದೇ ವಿಚಾರವನ್ನು ಮಂಡನೆ ಮಾಡದಿರುವುದು ಅತ್ಯಂತ ಶೋಚನೀಯ ಸಂಗತಿ. ತಾವು ದಯವಿಟ್ಟು ಈ ಬಗ್ಗೆ ಕೂಡ ಸ್ವಲ್ಪ ಗಮನಹರಿಸಬೇಕೆಂದು ಹೇಳುವಂತಹ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ. ನೀವು ಯುವಕರಿಗೆ ಉದ್ಯೋಗ

ಕೊಡುತ್ತೇವೆಂದು ಹೇಳುವಂತಹ ಮಾತಿಗೆ ಪೂರಕವಾಗಿ ಈ ಕೆಲಸ ಖಂಡಿತವಾಗಿಯೂ ಸಹಾಯವಾಗಬಹುದು ಎಂದು ಹೇಳುವಂತಹ ನಿಟ್ಟಿನಲ್ಲಿ ಈವೊಂದು ವಿನಂತಿಯನ್ನು ತಮ್ಮ ಮುಂದೆ ಮಾಡುತ್ತಿದ್ದೇನೆ. ತಾವು ಇಷ್ಟೆಲ್ಲ ಮಾಡಿದರೂ ಸಹ ಸಣ್ಣ ಜನರಿಗೆ ತುಂಬಾ ತೊಂದರೆ ಮಾಡಿದ್ದೀರಿ. ಏಕೆ ಈ ಮಾತನ್ನು ನಾನು ಹೇಳುತ್ತಿದ್ದೇನೆಂದರೆ, ಜನಸಾಮಾನ್ಯರ ಉಪಯೋಗದ ಕೆಲವು ವಸ್ತುಗಳ ಬಗ್ಗೆ ತಾವು ಸ್ವಲ್ಪ ಹೆಚ್ಚಿಗೆ ಟ್ಯಾಕ್ಸ ಹಾಕಿದ್ದೀರಿ. ಸೀಮೆಎಣ್ಣೆಯ ವ್ಯವಸ್ಥೆಯಿದೆ. ಕರೆಂಟ್ ಇರುವುದೇ ಇಲ್ಲ. ಸಣ್ಣ ರೈತರು ಅರ್ಧ ಎಕರೆ ಒಂದು ಎಕರೆ ಗದ್ದೆಯನ್ನು ಮಾಡುವಂತಹ ಜನ ಅರ್ಧ ಎಕರೆ ಒಂದು ಎಕರೆ ಅಡಿಕೆ ಬೆಳೆಸುವಂತಹ ಜನ ವಿಲಿಯನ್ ಪಂಪನಿಂದ ತಮಗೆ ನೀರಾವರಿಯ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಿದ್ದಾರೆ. ವಿಲಿಯನ್ ಪಂಪಗೆ ಸೀಮೆಎಣ್ಣೆಯನ್ನು ಹಾಕುವಂತಹದ್ದು. ಸ್ಟಾರ್ಟ ಮಾಡಲಿಕ್ಕೆ ಮಾತ್ರ ಪೆಟ್ರೋಲ್ ಹಾಕಿ ಆಮೇಲೆ ಸೀಮೆಎಣ್ಣೆ ಬಿಡುವಂತಹದ್ದು. ಅವರಿಗೆ ದಿನಕ್ಕೆ ಕನಿಷ್ಟ 8-1(ಲೀಟರ್ ಸೀಮೆಎಣ್ಣೆ ಬೇಕಾಗುತ್ತದೆ. ಈ ಸರ್ಕಾರ ಅವರಿಗೆ ರೇಷನ್ ಕಾರ್ಡ ಮುಖಾಂತರ ಯಾವುದೇ ಸೀಮೆಎಣ್ಣೆಯನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಲಿಲ್ಲ. ಓಪನ್ ಮಾರ್ಕೆಟಿನಲ್ಲಿ ಎಷ್ಟು ರೇಟು ಇದೆಯೆಂದು ತಮಗೆಲ್ಲ ಚೆನ್ನಾಗಿ ಗೊತ್ತಿದೆ. ಈ ಹಿನ್ನೆಲೆಯಲ್ಲಿ ತಾವೇನು 6 ರಿಂದ 8ಕ್ಕೆ ಏರಿಸಿದ್ದೀ ಇದನ್ನು 6 ರಿಂದ 1 ಕ್ಕೆ ಇಳಿಸಿ 5 ಪರ್ಸೆಂಟ್ ಮಾಡಬೇಕು ಎನ್ನುವಂತಹ ವಿನಂತಿಯನ್ನು ಸಂದರ್ಭದಲ್ಲಿ ಮಾಡಿಕೊಳ್ಳುತ್ತೇನೆ. ಇದರಿಂದಾಗಿ ರೈತಾಪಿ ಜನರ ಭವಿಷ್ಯದ ಬಗ್ಗೆ ಒಂದು ಚಿಂತನೆ ಇ ಎನ್ನತಕ್ಕದ್ದು ಗೊತ್ತಾಗುತ್ತದೆ. ಮೀನುಗಾರರ ಬೋಟಗಳಿಗೂ ಕೂಡ ಈ ಸೀಮೆಎಣ್ಣೆಯನ್ನು ಹಾಕುವಂತ ವ್ಯವಸ್ಥೆಯಿದೆ. ತಮ್ಮಲ್ಲಿ ವಿನಂತಿ ಇಷ್ಟೆ, ಸರ್ಕಾರ ಏನು ರೈತರ ಪರವಾಗಿದೆ ಮಣ್ಣಿನ ಮಗ ಎಂದ ಹೇಳುವಂತಹ ನಾಯಕರ ನೆಲೆಯಲ್ಲಿ ನಡೆಯುವಂತಹ ಈ ಸರ್ಕಾರ ರೈತರ ಬಗ್ಗೆ ಏನಾದರೂ ಕಾಳ ಇದ್ದರೆ ತಕ್ಷಣ ತಾವು ಈ ಬಗ್ಗೆ ಗಮನಹರಿಸಬೇಕು. ಏನು 6 ಪರ್ಸೆಂಟಿನಿಂದ 8 ಪರ್ಸೆಂಟ ಸೀಮೆಎಣ್ಣೆಗೆ ತಾವು ಏರಿಸಿದ್ದೀರಿ ಅದನ್ನು ತಕ್ಷಣ ತಾವು 5 ಪರ್ಸೆಂಟಗೆ ಇಳಿಸಬೇಕು ಎಂ ಹೇಳುವಂತಹ ಕಳಕಳಿ ವಿನಂತಿಯನ್ನು ರೈತಾಪಿ ಜನರ ಪರವಾಗಿ ತಮ್ಮ ಮುಂದೆ ಇಡುತ್ತಿದ್ದೇ ಮೀನುಗಾರರ ಪರವಾಗಿ ಹೇಳಿದ್ದೇನೆ. ಸಾಬೂನಿನ ಬಗ್ಗೆ ಈಗಾಗಲೇ ಉಲ್ಲೇಖ ಮಾಡಿದ್ದಾರೆ. ತಾ 6ರಿಂದ 8 ಪರ್ಸೆಂಟಗೆ ಇದನ್ನು ಏರಿಸಿದ್ದೀರಿ. ಇದು ಕೂಡ ಅತ್ಯಂತ ಸಮಂಜಸವಾದ ವಿಚಾರವ ಇದನ್ನು ಕನಿಷ್ಟ 6ರಲ್ಲಿಯಾದರೂ ಉಳಿಸಬೇಕು. ಏಕೆಂದರೆ ಇದು ಸಾಮಾನ್ಯ ಜನ ಅನ್ಯಾಯವಾಗುವಂತಹ ವಿಚಾರ. ಆದಕಾರಣ ಅದನ್ನು ತಾವು ಮಾಡಬೇಕು. ಇನ್ನೊಂದು ದೊ ಸಂಗತಿಯೆಂದರೆ ತಾವು ಮಾಡಿದ್ದು ಪವರ್ ಟಿಲ್ಲರಗೆ 2 ರಿಂದ 4 ಪರ್ಸೆಂಟಗೆ ಏರಿಸಿದ್ದೀರಿ. ಟ್ರಾಕ್ಟ ಬಾಕಿಯದು ಪಡೆದುಕೊಳ್ಳುವ ಜನ ದೊಡ್ಡ ಜನ. ದೊಡ್ಡ ಜಮೀನುದಾರರು. ಸಾಮಾನ್ಯ ಮಧ್ಯಮವರ್ಗ ಜನ ಇವತ್ತು ಪವರ್ ಟಿಲ್ಲರನ್ನು ಪಡೆದುಕೊಳ್ಳುತ್ತಾರೆ. ಜೊತೆಗೆ ಇವತ್ತಿನ ಯುವಕರು ಪವ ಟಿಲ್ಲರನ್ನು ಯಾವುದಕ್ಕೆ ಬಳಸಿಕೊಳ್ಳುತ್ತಾರೆ ಪವರ್ ಟಿಲ್ಲರ್ ಇಟ್ಟುಕೊಳ್ಳುತ್ತಾರೆ ಅದಕ್ಕೊಂದು ಹಲ್ಲರ್ ಉಪಯೋಗಿಸುತ್ತಾರೆ. ಅಲ್ಲಿಯ ಪರಿಸರದಲ್ಲಿರುವಂತಹ ಎಲ್ಲಾ ಜನಗಳ ಬತ್ತವನ್ನು ತ ಅಕ್ಕಿ ಮಾಡುವಂತಹ ಕೆಲಸಗಳನ್ನು ಮಾಡಿಕೊಂಡು ತಮ್ಮ ಜೀವನ ನಿರ್ವಹಿಸುವಂತಹ ವ್ಯವಸ್ಥೆ ಇ [illegible] ಕಂಡುಕೊಂಡಿದ್ದೀರಿ ಎಂದು ನಾನು ಭಾವಿಸುತ್ತಿದ್ದೇನೆ. ಪ್ರಾಂ

ತಾವು ಈ ಹೆಪರಟಲ್ಲರಗೆ 2 ರಿಂದ 4ಕ್ಕೆ ಏರಿಸಿದ ಕಾರಣ ರೈತಾಪಿ ಜನರ ಮೇಲೆ ಒಂದು ಸಣ್ಣಮಟ್ಟದ ಪ್ರಹಾರವಾಗುತ್ತದೆ. ಇದನ್ನು ಕೂಡ ತಾವು ಖಂಡಿತಾ ಕಡಿಮೆ ಮಾಡಬೇಕು. ಇನ್ನೊಂದು ದೊಡ್ಡಸಂಗತಿ ಏನೆಂದರೆ ಪಿವಿಸಿ ಪೈಪಿನ ಬಗ್ಗೆ. ಪಿವಿಸಿ ಪೈಪಿಗೆ ತಾವು ಏರಿಸಿದ್ದೀರಿ. ಇದರಿಂದ ಏನಾಗಿದೆ, ದಕ್ಷಿಣ ಕನ್ನಡ ಮತ್ತು ಉತ್ತರಕನ್ನಡ ಎಲ್ಲಾ ಭಾಗಗಳಲ್ಲಿ ಕಾಫಿ ಬೆಳೆಯುವ ಎಲ್ಲಾ ಭಾಗಗಳಲ್ಲಿ ಇವತ್ತು ಸ್ಪ್ರಿಂಕ್ಲರ್ ಅಳವಡಿಸುತ್ತಾರೆ. ಎಲ್ಲಾ ನೀರಾವರಿ ವ್ಯವಸ್ಥೆಗೆ ಪಿವಿಸಿ ಪೈಪುಗಳ ಮುಖಾಂತರ ಮುಖಾಂತರವೇ ಸ್ಪ್ರಿಂಕ್ಲರನ್ನು ಅಳವಡಿಸುವಂತಹ ಒಂದು ವ್ಯವಸ್ಥೆ ಇವತ್ತು ನಮ್ಮಲ್ಲಿದೆ. ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಸಾವಿರಾರು ರೂಪಾಯಿ ವೆಚ್ಚದಲ್ಲಿ ಪಿವಿಸಿ ಪೈಪುಗಳನ್ನು ಅಳವಡಿಸುವ ಮುಖಾಂತರ ಅವರುಗಳು ನೀರಾವರಿ ವ್ಯವಸ್ಥೆಯನ್ನು ಮಾಡಿಕೊಂಡಿರುವಂತಹ ಈ ಸಂದರ್ಭದಲ್ಲಿ ಪ್ರಾಯಶಃ ಪಿವಿಸಿ ಪೈಪಿನ ಬೆಲೆ ಏರಿಕೆಯಿಂದ ರೈತರಿಗೆ ಒಂದು ಮಾರಕವಾದ ಪರವಾಗಿರತಕ್ಕಂಥದ್ದು ಇದರ ಬಗ್ಗೆ ತಾವು ಗಮನಹರಿಸಬೇಕೆಂದು ಹೇಳುವಂತಹ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಇನ್ನೊಂದು ಅತ್ಯಂತ ದೊಡ್ಡ ಸಂಗತಿ ತಮ್ಮ ಆಯವ್ಯಯ ಪತ್ರದಲ್ಲಿರುವಂತಹದ್ದು ತಮಗೆಲ್ಲಾ ತುಂಬಾ ಬೇಸರ ತರಿಸುವಂತಹದ್ದು ಸಹಕಾರಿ ರಂಗದ ಬಗ್ಗೆ ತಮ್ಮ ಅವಗಾಹನೆಗೆ ತರುತ್ತೇನೆ. ಸಹಕಾರ ರಂಗದ ಬಗ್ಗೆ ಏನೂ ಮಾತನಾಡಲಿಲ್ಲ. ಕಳೆದ ಬಾರಿ ಇನ್ನುಮುಂದೆ ನಿಮಗೆ 9 ಪರ್ಸೆಂಟ್ ಸಾಲವನ್ನು ಕೊಡುತ್ತೇವೆ 5 ಪರ್ಸೆಂಟ್ ಇನಸೆಂಟಿವ್ ಕೊಡುತ್ತೇವೆಂದು ಘೋಷಣೆಗಳನ್ನು ಮಾಡಿದಂತಹ ಈ ಸರ್ಕಾರ ತಮ್ಮ ಒಂದೂವರೆ ಪ್ಯಾರಾದಲ್ಲಿ ಅದರ ಬಗ್ಗೆ ಯಾವುದೇ ವಿಚಾರಗಳನ್ನು ಪ್ರಸ್ತಾಪ ಮಾಡಲಿಲ್ಲ. ರೈತರ ಪರವಾಗಿ ಪ್ರಾಯಶಃ ಎಲ್ಲರಿಗಿಂತ ಕಡೆಯಲ್ಲಿರುವಂತಹ ರೈತ ತಾನು ಬೆಳೆಸಿದಂತಹ ಬೆಳೆಗಳನ್ನು ಸಹಕಾರಿ ಸಂಘದ ಮೂಲಕ ಮಾರಾಟ ಮಾಡುವಂತಹ ವ್ಯವಸ್ಥೆಯಿದೆ. ರಸಗೊಬ್ಬರಗಳನ್ನು ಸಹಕಾರಸಂಘಗಳ ಮೂಲಕ ತೆಗೆದುಕೊಳ್ಳುವಂತಹ ವ್ಯವಸ್ಥೆಯಿದೆ. ಅಲ್ಲಿಂದ ಸಾಲ ತೆಗೆದುಕೊಂಡು ಬೆಳೆ ಬಂದಾಗ ಒಮ್ಮೆಲೇ ಅದನ್ನು ಮರುಪಾವತಿ ಮಾಡುವಂತಹ ವ್ಯವಸ್ಥೆಯಿದೆ. ರೈತರ ಯಾವುದೇ ವಿಚಾರಗಳಿಗೆ ತಾವು ಸಹಕಾರಿಯಾಗುತ್ತೀರಿ ಅಂದಾಗ ಸಹಕಾರಿ ರಂಗದ ಪರವಾಗಿ ತಮ್ಮ ಆದ್ಯತೆಯನ್ನು ಕೊಡುವಂತಹ ಅವಶ್ಯಕತೆಯಿದೆ.

ನಾನು ಪ್ರಾರಂಭದಲ್ಲೇ ಉಲ್ಲೇಖ ಮಾಡಿದ್ದೆ. ಈ ಆಯವ್ಯಯ ಪಟ್ಟಿ ಹಿಂದಿನ ವರ್ಷದಸಾಧನೆ, ಮುಂದಿನ ವರ್ಷದ ನೀಲಿ ನಕ್ಷೆಯನ್ನು ಹೇಳಿದ್ದೆ. ಈಗ ನೀಲಿ ನಕ್ಷೆಯನ್ನು ಕಪ್ಪು ನಕ್ಷೆಯನ್ನಾಗಿ ಮಾಡುವ ಪ್ರಯತ್ನ ಮಾಡಿಬೇಡಿ. ಸಹಕಾರಿ ರಂಗಕ್ಕೆ ಕಳೆದ ವರ್ಷ ಏನು ಕೊಟ್ಟಿದ್ದೀರಿ, ಅದನ್ನು ಈ ವರ್ಷ ಕೊಡುವ ಪ್ರಯತ್ನ ಮಾಡಿ. ಏಕೆಂದರೆ ಇವತ್ತು ಹಳ್ಳಿಗಾಡಿನ ಕಡೆಗಳಲ್ಲಿ, ಅದರಲ್ಲೂ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸಹಕಾರ ಸಂಘಗಳಲ್ಲಿ ಪ್ರಾಯಶಃ ಎಲ್ಲಾ ರೈತರು ಅವರ ಮನೆಯನ್ನು ಬ್ಯಾಂಕಿನಲ್ಲಿಟ್ಟಿದ್ದಾರು. ಅವರು ಯಾರೂ ಕೂಡ ನ್ಯಾಷನಲೈಸ್ಡ್ ಬ್ಯಾಂಕ್‌ಗೆ ಹೋಗುವ ವ್ಯವಸ್ಥೆಯನ್ನು ಮಾಡಿಲ್ಲ. ಎಲ್ಲಾ ಪ್ರಾಥಮಿಕ ಸಹಕಾರಿ ಸಂಘಗಳಲ್ಲಿ ಹೆಚ್ಚಿನವು ಸಿಂಗಲ್ ಡೋರ್ ಏಜೆನ್ಸಿ ರೀತಿಯಲ್ಲಿವೆ. ಆದ್ದರಿಂದ ಅವರೆಲ್ಲರ ಪ್ರಾಮುಖ್ಯ ಆದ್ಯತೆಯನ್ನು ಪೂರೈಸುವ ಮತ್ತು ಅದಕ್ಕೆ ಬೇಕಾದಂಥ ವ್ಯವಸ್ಥೆಗಳನ್ನು ಮಾಡಬೇಕು. ಸಹಕಾರ ಸಂಘಗಳ ರೈತರಿಗೆ ಯಾರು ಬೇಗನೆ ಹಣ ಪಾವತಿ ಮಾಡುತ್ತಾರೆ ಅವರಿಗೆ ಇನ್ಸೆಂಟೀವ್ ಕೊಡುತ್ತೇವೆ, ಯಾರು ನಿರಂತರವಾಗಿ ಸಂಪರ್ಕವನ್ನು

ಇಟ್ಟುಕೊಂಡಿರುತ್ತಾರೆ ಅವರಿಗೆ ಇನ್ಸೆಂಟೀವ್ ಕೊಡುತ್ತೇವೆ ಎಂದು ಹೇಳಿದ್ದೀರಿ. ಈಗ ಏಕೆ ಇಷ್ಟು ಬೇಗ ಮರೆತುಬಿಟ್ಟಿರಿ ? ಇವನ್ನು ಮರೆಯಬಾರದು. ಈಗ ಮರೆತರೆ ಲೋಕಸಭೆ ಚುನಾವಣೆ ಬರುತ್ತದೆ, ಈ ವಿಚಾರ ತಿಳಿದಾಗಲೂ ಕೂಡ ತಾವು ಇದರಲ್ಲಿ ತಪ್ಪಿದ್ದೀರಿ. ಆದಕಾರಣ ನಿಮಗೆ ರೈತನ ಬಗ್ಗೆ ಕಾಳಜಿ ಇದ್ದರೆ ಸಹಕಾರ ರಂಗಕ್ಕೆ ಆದ್ಯತೆಯನ್ನು ಕೊಡಬೇಕು. 9 ಪರ್ಸೆಂಟ್ ಬಡ್ಡಿಯಲ್ಲಿ ಸಾಲವನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಬೇಕು. 5 ಪರ್ಸೆಂಟ್ ಇನ್ಸೆಂಟೀವ್ ಕೊಡುವ ವ್ಯವಸ್ಥೆ ಮಾಡಬೇಕು. ಏಕೆಂದರೆ ಗ್ರಾಮೀಣ ಅಭಿವೃದ್ಧಿಗೆ ಹೆಚ್ಚಿನ ಒತ್ತು ಕೊಡುತ್ತೇವೆ ಎಂದು ತಾವು ಹೇಳುತ್ತಿದ್ದೀರಿ. ಗ್ರಾಮೀಣ ಅಭಿವೃದ್ಧಿಗೆ 90 ಪರ್ಸೆಂಟನಷ್ಟು ಪ್ರಮುಖವಾದ ಅಂಗ ಸಹಕಾರ ರಂಗ. ಇದನ್ನು ತಾವು ಸ್ವಲ್ಪ ಪರಿಗಣನೆ ಮಾಡಬೇಕೆಂದು ನಾನು ಹೇಳುತ್ತೇನೆ. ಇನ್ನೊಂದು ವಿಚಾರ ಕಬ್ಬು ಬೆಳೆಯುವ ರೈತರ ಬಗ್ಗೆ ಹೇಳುವುದಾದರೆ, ಸರ್ಕಾರ ಕಬ್ಬು ಬೆಳೆಯುವ ರೈತರ ಬಗ್ಗೆ ಮಾತನಾಡಿದೆ. ಆದರೆ ಕಬ್ಬು ಬೆಳೆಯುವ ರೈತರು ಎಂದಾಗ ಕಾರ್ಖಾನೆಗಳ ಬಗ್ಗೆ ಸಾಧ್ಯವಾಗುತ್ತದೆ. ಅಲ್ಲಿ ಕರೆಂಟ್ ಇಲ್ಲದಿದ್ದರೆ, ನಿಮ್ಮ ಬಜೆಟನಲ್ಲಿ ಏನಾದರೂ ಪವರ್ ಜನರೇಟರ್ ಬಗ್ಗೆ ಪ್ರಸ್ತಾಪ ಇದೆಯೇ? ಇದಕ್ಕೆ ಸಾಕಷ್ಟು ಮೊತ್ತ ಇಟ್ಟು ಎಲ್ಲಿ ಕಾರ್ಖಾನೆ ಸ್ಥಾಪನೆಯಾಗುತ್ತದೆ ಅಲ್ಲಿ ಪವರ್ ಜನರೇಟರಗೆ ಇಷ್ಟು ಅನುದಾನ ಕೊಡುತ್ತೇವೆ ಎಂದು ಅದು ಸಹ ಇಲ್ಲ. ಈ ವಿಚಾರದಲ್ಲಿ ದೊಡ್ಡ ಸಂಗತಿಯನ್ನು ಹೇಳಿದ್ದೀರಿ. ಏನು ಕಾಕಂಬಿ ಹೊರಬರುತ್ತದೆ, ಅದನ್ನು ಚೆಲ್ಲುವಂಥ ಪರಿಸ್ಥಿತಿ ನಿರ್ಮಾಣವಾಗಿದೆ ಮತ್ತು ಇದರಿಂದ ರೈತರಿಗೆ ತುಂಬಾ ತೊಂದರೆಯಾಗುತ್ತಿದೆ. ಆತನ ಉತ್ಪಾದನೆಯಲ್ಲಿ ಕೂಡ ಸಿಕ್ಕಾಪಟ್ಟೆ ತೊಂದರೆಯಾಗಿದೆ. ಈ ಹಿನ್ನೆಲೆಯಲ್ಲಿ ನಾನು ಕೊಡುವ ಸಲಹೆ ಎಂದರೆ ಒಂದೊಂದು ಡಿಸ್ಟಲರಿಯಲ್ಲಿ, ಎಲ್ಲೆಲ್ಲಿ ಸಕ್ಕರೆ ಕಾರ್ಖಾನೆ ಇದೆಯೋ, ಅದಕ್ಕೆ ಜನರೇಟರ್ ಇಟ್ಟುಕೊಳ್ಳುವ ವ್ಯವಸ್ಥೆ ಮಾಡಿ, ಅದಕ್ಕೆ ಪೂರಕವಾದ ಸಹಕಾರವನ್ನು ಸರ್ಕಾರದಿಂದ ಕೊಡುವುದು ಆಗಬೇಕು. ಜೊತೆಯಲ್ಲಿ ಏನು ಕಾಕಂಬಿ ಹೊರಬರುತ್ತದೆ, ಅದನ್ನು ಒಂದು ಡಿಸ್ಟಲರಿ ಮುಖಾಂತರ ಅದನ್ನು ಮಾರಾಟಮಾಡುವಾಗ ವ್ಯವಸ್ಥೆ, ಈ ಎರಡು ಪೂರಕ ವ್ಯವಸ್ಥೆ ಮಾಡಿದರೆ ಕಬ್ಬು ಅರೆಯುವಂಥ ಎಲ್ಲಾ ವ್ಯವಸ್ಥೆ ಸಮರ್ಪಕವಾಗುತ್ತದೆ. ರೈತಾಪಿ ವರ್ಗದ ಜನ ಒಂದು ತಿಂಗಳು, ಎರಡು ತಿಂಗಳು ಕಬ್ಬು ಬೆಳೆಸಿ ಕಾಯಬೇಕಾದ ಪರಿಸ್ಥಿತಿ ಬರುವುದಿಲ್ಲ. ಇದರಿಂದ ಉತ್ಪತ್ತಿ ನಿರಂತರವಾಗಿ ಸಿಗುವ ಸಂದರ್ಭವಾಗುತ್ತದೆ. ಈ ಹಿನ್ನೆಲೆಯಲ್ಲಿ ಇವೆರಡನ್ನು ತಾವು ಜೋಡಿಸಿಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನೊಂದು, ಬಹಳ ಅಲಕ್ಷ್ಯವಾಗಿರುವಂಥಾದ್ದು ನಿಮ್ಮ ಆಯವ್ಯಯದಲ್ಲಿ ಎಂದರೆ ಅದು ಕಾರ್ಮಿಕರ ಬಗ್ಗೆ. ಕಾರ್ಮಿಕರ ಬಗ್ಗೆ ನಾವು ಸಾಕಷ್ಟು ಮಾತನಾಡುತ್ತೇವೆ. ಶೇಕಡ 35 ರಷ್ಟು ಜನ ಕಾರ್ಮಿಕರಾಗಿ ಈ ರಾಜ್ಯದಲ್ಲಿ ಬದುಕುತ್ತಿದ್ದಾರೆ ಎಂಬ ಅಂಕಿಅಂಶಗಳನ್ನು ತಾವೇ ಕೊಟ್ಟಿದ್ದೀರಿ. ರೈತಾಪಿ ಕಾರ್ಮಿಕರು ಇರಬಹುದು, ಬೀಡಿ ಕಾರ್ಮಿಕರು ಇರಬಹುದು, ಅಥವಾ ಬೇರೆ ಯಾವುದೇ ಕಾರ್ಮಿಕರು ಇರಬಹುದು. ಇವರ ಬಗ್ಗೆ ತಾವು ಏನು ಮಾಡಿದ್ದೀರಿ? ಬೀಡಿ ಎಲೆಗೆ ತೆರಿಗೆಯನ್ನು 8 ಪರ್ಸೆಂಟ್‌ನಿಂದ 4 ಪರ್ಸೆಂಟಗೆ ಇಳಿಸಿದ್ದೀರಿ. ಇದರ ಪರೋಕ್ಷ ಪ್ರಯೋಜನ ಯಾರಿಗೆ ಸಿಗುತ್ತದೆ ಎಂದರೆ ಕಂಟ್ರಾಕ್ಟದಾರರಿಗೆ ಮಾತ್ರ. ಇದರ ಪ್ರಯೋಜನ ನೇರವಾಗಿ ಬೀಡಿ ಕಾರ್ಮಿಕರಿಗೇನೂ ಹೋಗುವುದಿಲ್ಲ. ಇದಕ್ಕಾಗಿ ಪ್ರತ್ಯೇಕ ಯೋಜನೆಗಳನ್ನು ತೆಗೆದುಕೊಳ್ಳಬೇಕು. ನೇರವಾಗಿ ಬೀಡಿ ಕಾರ್ಮಿಕರಿಗೆ ಏನು ಸವಲತ್ತು ಹೋಗುತ್ತದೆ ಅಂತಹ ಯೋಜನೆಗಳನ್ನು ನೀವು ತೆಗೆದುಕೊಳ್ಳಬೇಕು.

ಇವರಿಗಾಗಿ ಮನೆ ನಿರ್ಮಾಣ ಮಾಡುವುದಾಗಲೀ, ಅಥವಾ ಬೇರೆ ಜೀವನಾವಶ್ಯಕವಾದಂಥ ವ್ಯವಸ್ಥೆಗಳ ಬಗ್ಗೆ ಅನುಕೂಲ ಮಾಡಬೇಕಾದರೆ ನೀವು ಕೇವಲ ಬೀಡಿ ಎಲೆಯ ತೆರಿಗೆಯನ್ನು ೮ ಪರ್ಸೆಂಟಿನಿಂದ 4 ಪರ್ಸೆಂಟ್‌ಗೆ ಇಳಿಸಿದರೆ, ಅದು ಪರೋಕ್ಷವಾಗಿ ಕಂಟ್ರಾಕ್ಟದಾರರಿಗೆ ಅದರಿಂದ ಬೆಂಬಲವಾಗುತ್ತದೆ ಎಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಈ ಬಗ್ಗೆ ತಾವು ಸ್ವಲ್ಪ ಚಿಂತನೆ ಮಾಡಿ, ಇವರ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಇನ್ನು ಕೊನೆಯದಾಗಿ, ಈ ಸಂದರ್ಭದಲ್ಲಿ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಇಚ್ಛಿಪಡುವುದಿಲ್ಲ. ನಿಗದಿಪಡಿಸಿದ ಅರ್ಧಗಂಟೆಗೆ ಇನ್ನೂ ಐದು ನಿಮಿಷ ಇದೆ. ನಾನು ಮುಖ್ಯವಾಗಿ ಹೇಳಬೇಕಾದ್ದು ಕಾನೂನು ಸುವ್ಯವಸ್ಥೆ ಬಗ್ಗೆ. ಕಾನೂನು ವ್ಯವಸ್ಥೆ ಬಗ್ಗೆ ಪ್ರಸ್ತಾಪ ಮಾಡುವುದು ಅನಿವಾರ್ಯವಾಗಿದೆ. ಯಾರಾದರೂ ಶಾಸಕರಾಗಿ, ಈ ಸಭೆಯೊಳಗೆ ಜನಪ್ರತಿನಿಧಿಯಾಗಿ ವ್ಯವಹಾರ ಮಾಡಬೇಕಾದರೆ ಕೈಕಾಲು ಸರಿಯಾಗಿ ಇದ್ದರೆ ಮಾತ್ರ ಸಾಧ್ಯ, ಇಲ್ಲಿಗೆ ಬಂದು ಮಾತನಾಡುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಇವತ್ತಿನ ಸರ್ಕಾರದ ವ್ಯವಸ್ಥೆಯಲ್ಲಿ ಅದು ಸ್ವಲ್ಪ ದೂರ ಇದೆಯೆಂದು ನನ್ನ ಅನಿಸಿಕೆ. ಎಲ್ಲಿ ನೋಡಿದರೂ ಕೊಲೆ, ಸುಲಿಗೆಗಳು. ಎಲ್ಲಿ ನೋಡಿದರೂ ರಾಜಕೀಯ ಪ್ರೇರೇಪಿತವಾದಂಥ ವ್ಯವಸ್ಥೆ ಇದೆ. ಇದು ಈ ಸರ್ಕಾರದಲ್ಲಿ ಆಗುತ್ತಿರುವುದನ್ನು ನಾವು ಪ್ರತ್ಯಕ್ಷವಾಗಿ ನೋಡುತ್ತಿದ್ದೇವೆ. ಪ್ರಾಯಶಃ ಒಂದೇ ಒಂದು ಉದಾಹರಣೆಯನ್ನು ಉಲ್ಲೇಖ ಮಾಡಲು ಇಷ್ಟಪಡುತ್ತೇನೆ. ಮೊನ್ನೆ ಮೊನ್ನೆ ರಾಮಕೃಷ್ಣ ಕೊಲೆ ಪ್ರಕರಣ ಬಗ್ಗೆ ಆದ ಸಿ.ಓ.ಡಿ. ತನಿಖೆ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಇಚ್ಛಿಪಡುವುದಿಲ್ಲ. ಆದರೆ ಒಂದು ರಾಜಕೀಯ ಪ್ರೇರಿತ ಕೊಲೆಯ ಬಗ್ಗೆ ಈ ಸಂದರ್ಭದಲ್ಲಿ ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇದನ್ನು ಇಲ್ಲಿ ಪ್ರಸ್ತಾಪ ಮಾಡುವುದು ಅತ್ಯಂತ ಅವಶ್ಯಕವೆಂದು ನಾನು ಭಾವಿಸುತ್ತೇನೆ. ಏಕೆಂದರೆ ಎಲ್ಲಾ ವ್ಯವಸ್ಥೆ ಮಾಡುವಾಗ, ಕಾನೂನು ವ್ಯವಸ್ಥೆ ಅದಕ್ಕೆ ಪೂರಕವಾಗಿ ಇರಬೇಕೆಂಬ ಹಿನ್ನೆಲೆಯಲ್ಲಿ ನಾನು ಮಾತನಾಡುತ್ತಿದ್ದೇನೆ. ಬ್ರಹ್ಮಾವರದಲ್ಲಿ ನಡೆದಂಥ, ಶೇರ್ವೆಗಾರರ ಕೊಲೆ ಪ್ರಕರಣ. ಪ್ರಾಯಶಃ ಇದು ಅದ್ವಿತೀಯವಾದಂಥ ಒಂದು ಘಟನೆ ನಡೆದಿದೆ. ಇದರ ವಿಚಾರ ಎಲ್ಲರಿಗೂ ಗೊತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಎಂ.ಆರ್.ಪಿ.ಎಲ್.ನ ಒಂದು ಗಲಾಟೆ ಪರಿಸರವಾದಿಗಳಿಂದ ಆಗುತ್ತಿದಂಥ ಸಂದರ್ಭದಲ್ಲಿ ನಮಗೆಲ್ಲರಿಗೂ ಗೊತ್ತಿದ್ದ ಪ್ರಕಾರ 23ನೇ ತಾರೀಖು ಬೆಳಿಗ್ಗೆ 10 ಗಂಟೆಗೆ ಈ ಒಂದು ಘಟನೆ ನಡೆದಿದೆ. ಸುಮಾರು ಬೆಳಿಗ್ಗೆ 10 ಗಂಟೆಗೆ ಅಲ್ಲಿರುವಂಥ ರಾಜಾರಾಂ ಸೇರ್ವೆಗಾರ್ ಮತ್ತು ಅಲ್ಲಿರುವಂಥ ಜಿಲ್ಲಾ ಜನತಾದಳ ಕಾರ್ಯದರ್ಶಿ ಜ್ಞಾನವಸಂತಶೆಟ್ಟಿ ಎಂದು ಹೇಳುವವರ ಮೇಲೆ ಹಲ್ಲೆಯಾಯಿತು. ಇದರಿಂದ ತೀವ್ರವಾಗಿ ಗಾಯಗೊಂಡ ಜ್ಞಾನವಸಂತಶೆಟ್ಟಿಯವರನ್ನು ಯಾರೂ ಕೂಡ ಆಸ್ಪತ್ರೆಗೆ ಸೇರಿಸುವ ವ್ಯವಸ್ಥೆಯಾಗಲಿಲ್ಲ. ಅಲ್ಲಿರುವಂಥ ಸರ್ಕಲ್ ಇನಸ್ಪೆಕ್ಟರ್ ರಬಿಕಮುಲ್ಲಾ ಅವರ ನೇತೃತ್ವದಲ್ಲಿ ಇದು ಆಯಿತು. ನಮ್ಮ ಒತ್ತಡಕ್ಕೆ ಮಣಿದು ಅವರನ್ನು ಸಸ್ಪೆಂಡ್ ಮಾಡಿದ್ದೀರಿ. ಆದರೆ ಅಷ್ಟು ಮಾತ್ರ ಮಾಡಿದರೆ ಸಾಕಾಗುವುದಿಲ್ಲ. ಇದಕ್ಕಿಂತ ಹೆಚ್ಚಿಗೆ ಅಲ್ಲಿ ಮಾಡಬೇಕಾಗಿರುವ ಕೆಲಸ ಎಂದರೆ, ರಾಜಾರಾಂ ಸೇರ್ವೆಗಾರ್ ಈ ಜ್ಞಾನವಸಂತ ಶೆಟ್ಟಿಗೆ ಹಲ್ಲೆಯಾದ ಹಿನ್ನೆಲೆಯಲ್ಲಿ ಅಲ್ಲಿ ರವೀಂದ್ರ ಸಾನುಬಾಗ್ ಎನ್ನುವ ಪರಿಸರ ವಾದಿಗಳು ಬಂದರು. ಅವರು ಬಂದನಂತರ ಅಲ್ಲಿರುವಂಥ ಬ್ರಹ್ಮಾವರದ ಸಮೀರ ಕಾಂಪ್ಲೆಕ್ಸ್ ಹತ್ತಿರದ ರಾಜಾರಾಂ ಸೇರ್ವೆಗಾರರ ಒಂದು ಅಂಗಡಿ ಇದೆ.. ಅದರ

ಹತ್ತಿರ ಇವರಲ್ಲ ಸೇರಿ ಈ ಜ್ಞಾನವಸಂತ ಶೆಟ್ಟಿಮೇಲೆ ನಡೆದ ಹಲ್ಲೆಯ ಬಗ್ಗೆ ಪ್ರಶ್ನೆ ಮಾಡಿದಾಗ ಅಲ್ಲಿರುವಂಥ ಹಲವಾಲು ಜನ, ನೇರವಾಗಿ ಆಡಳಿತ ಮಾಡುವಂಥ ಪಕ್ಷದ ಕಾರ್ಯಾಲಯದಿಂದಲೇ ಸುಮಾರು 10-30 ಜನ ಗೂಂಡಾಗಳು ನೇರವಾಗಿ ಬರುವಂಥ ವ್ಯವಸ್ಥೆಯಾಯಿತು. ಇದನ್ನು ನೋಡಿದಾಗ ಅಲ್ಲಿದ್ದಂಥ ಈ ಪರಿಸರವಾದಿಗಳು ತಮ್ಮ ಜೀವರಕ್ಷಣೆಗಾಗಿ ಹೊರಟುಹೋದರು. ರವೀಂದ್ರನಾಥ ಶಾನುಭೋಗ್ ಈ ಸರ್ಕಲ್ ಇನಸ್ಪೆಕ್ಟರ್ ಜೊತೆ ಮಾತನಾಡಿದಾಗ ಅವರು ಇವರಿಗೆ ಯಾವುದೇ ಸಮಾಧಾನಕರವಾದ ವಿಚಾರ ಹೇಳದೆ ಅವರಿಗೆ ಮತ್ತಷ್ಟು ತೊಂದರೆ ಕೊಡುವಂಥ ವ್ಯವಸ್ಥೆ ಮಾಡಿದರು. ಆದರೆ ಜ್ಞಾನವಸಂತ ಶೆಟ್ಟಿ ಅವರನ್ನು 1 ಗಂಟೆ 45 ನಿಮಿಷಕ್ಕೆ ಆಸ್ಪತ್ರೆಗೆ ಅವರು ಕರೆದುಕೊಂಡುಹೋದರು. ಇದಾದ ನಂತರ ರಾಜಾರಾಂ ಸೇರ್ವೆಗಾರ, ಯಾರು ಮೃತಪಟ್ಟಿದ್ದಾರೋ, ಅವರು ಮತ್ತು ಇನ್ನಿತರರು ತಮ್ಮ ಆತ್ಮರಕ್ಷಣೆಗಾಗಿ ಸಮೀರಾ ಕಾಂಪ್ಲೆಕ್ಸ್ ಹಿಂದುಗಡೆ ಸೇರಿದರು. ಆಗ ರಬಿಕಮುಲ್ಲಾ ಎಂದು ಹೇಳತಕ್ಕಂಥ ಸರ್ಕಲ್ ಇನಸ್ಪೆಕ್ಟರ್ ಯಾರು ಈಗ ಸಸ್ಪೆಂಡ್ ಆಗಿದ್ದಾರೋ, ಅವರು ರಾಜಾರಾಂ ಸೆರ್ವೇಗಾರ್ ಅವರನ್ನು ಹಿಂಬಾಲಿಸಿಕೊಂಡು ಅವರ ಹತ್ತಿರ ಹೋದರು. ನೇರವಾಗಿ ಇಲ್ಲಿ ಅವರ ಸಮಕ್ಷಮದಲ್ಲೇ ಬೇರೆ ಗೂಂಡಾಗಳು ಬಂದು ಇವರು ರಬಿಕಮುಲ್ಲಾ ಅವರು ರಾಜಾಸಾಂ ಸೆರ್ವೆಗಾರ್ ಹಲ್ಲೆ ಮಾಡುವಂಥ ಪ್ರಯತ್ನ ಆಯಿತು. ಘೀಕರವಾಗಿ ಗಾಯಗೊಂಡ ರಾಜಾರಾಂ ಸೇರ್ವೆಗಾರ್ ನೆಲಕ್ಕೆ ಉರುಳಿದರು. ನಂತರ ಅಲ್ಲಿಂದ ದುಷ್ಕರ್ಮಿಗಳು ನಿಧಾನವಾಗಿ ಹೊರಟುಹೋದರು. ಆದರೆ ಇವರನ್ನು ಬಂಧನ ಮಾಡುವಂಥ ವ್ಯವಸ್ಥೆಯಾಗಲಿಲ್ಲ. ಹಲ್ಲೆ ನಡೆಸಿದ ಗೂಂಡಾಗಳು ರಾಜಾರೋಷವಾಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ ನೂರಾರು ಜನ ನೋಡುತ್ತಿರುವಂತೆ ರಬಿಕಮುಲ್ಲಾ ಅವರ ಜೊತೆಯಲ್ಲೇ ಹೋಗುವಂಥ ವ್ಯವಸ್ಥೆಯಾಯಿತು. ಈ ಮಧ್ಯೆ ನಾಲ್ಕು ಗಂಟೆ ಹೊತ್ತಿಗೆ ರಬಿಕಮುಲ್ಲಾ ಇದನ್ನು ತಿರುಚುವಂಥ ಪ್ರಯತ್ನ ಮಾಡಿ ಎಫ್.ಐ.ಆರ್.ನ್ನು ಬದಲಾವಣೆ ಮಾಡುವ ಪ್ರಯತ್ನ ಆಯಿತು. ಬ್ರಹ್ಮಾವರದಲ್ಲಿ ಹಲ್ಲೆ ನಡೆದಾಗ ಯಾವುದೇ ರೀತಿಯ ರಕ್ಷಣೆ ಅಲ್ಲಿಯ ಸಾರ್ವಜನಿಕರಿಗೆ ಸಿಗದಿರುವಂಥ ವ್ಯವಸ್ಥೆಯಾಯಿತು. ಇದನ್ನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ, ಪ್ರಾಯಶಃ ಈ ರೀತಿ ಕೊಲೆಗಳು ರಾಜಕೀಯ ಪ್ರೇರಿತವಾದಂಥ ಕೊಲೆಗಳು ನಮ್ಮ ರಾಜ್ಯದಲ್ಲಿ, ನಡೆಯುವುದನ್ನು ನೋಡುತ್ತಿದ್ದೇವೆ. ಸಾಧಾರಣವಾಗಿ ಕೆಲವು ಪೋಲೀಸ್ ಸ್ಟೇಷನಗಳಲ್ಲಿ ಕಂಪ್ಲೇಂಟ್ ಕೊಡುವುದಕ್ಕೆ ಹೋದರೆ ಒಬ್ಬ ರಾಜಕಾರಣಿಯೇ ಫೋನು ಮಾಡಿ ಹೇಳಬೇಕಾದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಸಾಧಾರಣವಾಗಿ ಹೆಚ್ಚಿನ ಪೋಲಿಸ್ ಠಾಣೆಗಳು ಇವತ್ತು ಆಡಳಿತ ಪಕ್ಷದ ಕಛೇರಿಯಾಗಿ ಮಾರ್ಪಾಡಾಗಿರುವ ವ್ಯವಸ್ಥೆಯಾಗಿದೆ ಎಂದು ಈ ಸದನದಲ್ಲಿ ಹೇಳುವುದು ಅನಿವಾರ್ಯವಾಗಿದೆ ಎಂದು ನಾನು ಭಾವಿಸುತ್ತೇನೆ. ರಾಜಕೀಯ ಹಿನ್ನಲೆಯಲ್ಲಿ ಆದಂಥ, ಕೊಲೆಗಳ ಬಗ್ಗೆ ಗಂಭೀರವಾಗಿ ಕ್ರಮ ತೆಗೆದುಕೊಳ್ಳಬೇಕಾದ ಅವಶ್ಯಕತೆ ಇದೆ. ಇದನ್ನು ಮಾಡದಿದ್ದರೆ ನಮಗೆ ಯಾರಿಗೂ ಕೂಡ ರಾಜ್ಯದಲ್ಲಿ ರಕ್ಷಣೆ ಸಿಗಲಿಕ್ಕೆ ಸಾಧ್ಯವಿಲ್ಲ. ಹೇಗೆ ಇದರ ಬಗ್ಗೆ ನಾವು ಒತ್ತು ಕೊಟ್ಟಿದ್ದೇವೆ ಮತ್ತು ಈಗಾಗಲೇ ರಬಿಕಮುಲ್ಲಾ ಅವರನ್ನು ಪ್ರಥಮ ಆರೋಪಿಯನ್ನಾಗಿ ಸೇರ್ಪಡೆ ಮಾಡಬೇಕು. ಹೀಗೆ ಸೇರ್ಪಡೆ ಮಾಡಿ ಅವರ ಮೇಲೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸುವುದು ಅನಿವಾರ್ಯವಾಗಿದೆ ಎಂಬುದು ಇದು ನಡೆದುಬಂದ ಹಿನ್ನಲೆಯಲ್ಲಿ ಗೊತ್ತಾಗಿದೆ. ಈ ಕಾನೂನು ವಿಚಾರಗಳನ್ನು ಪ್ರಸ್ತಾಪ

ಮಾಡತಕ್ಕಂಥಾದ್ದು ಅತಿ ಅವಶ್ಯಕತವೆಂಬ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಈ ಒಂದು ಸರ್ಕಾರ ಇನ್ನಷ್ಟು ಏನು ಕೆಲಸ ಮಾಡಿದ್ದಾರೆ ಅದನ್ನು ಸಹ ಬೆಳಕಿಗೆ ತರುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಬೆಳಿಗ್ಗೆ ನಮ್ಮ ನಾಯಕರು ಪ್ರಸ್ತಾಪ ಮಾಡಿದಂಥ ಸರ್ಕಾರಿ ಸುತ್ತೋಲೆಯಲ್ಲಿ ಕೊನೆ ವಾಕ್ಯದಲ್ಲಿ ಏನು ಹೇಳುತ್ತಾರೆ ಎಂದರೆ, ಇದು ಪ್ರಾಯಶಃ ಒಂದು ಸರ್ಕಾರ ಮಾಡುವಂಥ ಕೆಲಸ ಅಲ್ಲ. ಈ ರೀತಿ ಸರ್ಕಾರ ಸೂಚನೆಗಳನ್ನು ಕೊಡುವುದು ಸರಿಯಲ್ಲ. ಕೊನೆ ವಾಕ್ಯವನ್ನು ಮಾತ್ರ ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ``Please ensure that there is a close co-ordination between the police and the local magistrate" ಎಂದು ಹೇಳುವಂಥ ಒಂದು ಆದೇಶವನ್ನು ಇವತ್ತು ಸರ್ಕಾರ ಎಲ್ಲಾ ಅಧಿಕಾರಿಗಳಿಗೆ ಕೊಡುತ್ತಿದೆ ಎಂದರೆ ಪ್ರಾಯಶಃ ಈ ಸರ್ಕಾರ ಏನು ಮಾಡಬೇಕೆಂದು ನಿಶ್ಚಯ ಮಾಡಿದೆ? ಸರ್ಕಾರ ರಾಜಕೀಯ ವಿರೋಧಿಗಳನ್ನು ದಮನ ಮಾಡಬೇಕೆಂದು ಈ ದೃಷ್ಟಿಕೋನದಿಂದ ಪೋಲೀಸ್ ಅಧಿಕಾರಿಗಳನ್ನು ಹಿಡಿತದಲ್ಲಿಟ್ಟುಕೊಂಡು ಅಲ್ಲಿರುವಂಥ ಲೋಕಲ್ ಮ್ಯಾಜಿಸ್ಟ್ರೇಟ್ ಒಡನೆ ಒಳ್ಳೆಯ ಸಂಬಂಧ ಇಟ್ಟುಕೊಳ್ಳಬೇಕೆಂಬ ಧಾಟಿಯಲ್ಲಿ ಈ ಒಂದು ಪ್ರಹಾರ ಮಾಡಿದರೆ ಇದನ್ನು ಖಂಡಿತವಾಗಿಯೂ ಸುಮ್ಮನೆ ಬಿಡುವುದಕ್ಕೆ ಜನರು ತಯಾರಿಲ್ಲ. ಪರಿಸ್ಥಿತಿ ಏನು ಎಂದು ಜನ ಇವತ್ತು ತಿಳಿದುಕೊಂಡಿದ್ದಾರೆ. ಈ ಬಗ್ಗೆ ಸರ್ಕಾರ ಗಂಭೀರವಾಗಿ ಆಲೋಚನೆ ಮಾಡಬೇಕು. ತಾನು ಮಾಡಿದ ತಪ್ಪನ್ನು ಮುಂದೆ ರಾಜಕೀಯ ದ್ವೇಷದ ಹಿನ್ನಲೆಯಲ್ಲಿ, ಮುಚ್ಚಿಕೊಳ್ಳಲು, ಯಾವುದೇ ರೀತಿಯ ವಿರೋಧಿಗಳನ್ನು ದಮನ ಮಾಡುವಂಥ ಪ್ರಯತ್ನವನ್ನು ಕೈಬಿಡಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ತೀವ್ರವಾಗಿ ನಾನು ಹೇಳುತ್ತೇನೆ. ರಾಜಾರಾಂ ಸೇರ್ವೆಗಾರ್ ಕೊಲೆ ಪ್ರಕರಣದಲ್ಲಿ ಅಪರಾಧಿಗಳ ಪಟ್ಟಿಗೆ ರಫೀಕ್ ಮುಲ್ಲಾ ಅವರನ್ನು ಸಹ ಸೇರಿಸಿ ಅವರನ್ನು ತಕ್ಷಣ ಡಿಸಮಿಸ್ ಮಾಡಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ.

4.00 ಪಿ.ಎಂ.

ಈಗಾಗಲೇ ಸಿ.ಒ.ಡಿ. ಯಿಂದ ಅಲ್ಲಿ ತನಿಖೆಯಾಗುತ್ತಾ ಇದೆ. ಈ ಸಿ.ಒ.ಡಿ. ತನಿಖೆಯಲ್ಲೂ ಕೂಡ ರಾಜಕೀಯ ಹಸ್ತಕ್ಷೇಪವಾಗುತ್ತಿದೆ ಎಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ. ಅಲ್ಲಿಯ ರಾಜಕೀಯ ನಾಯಕರು, ಸಿ.ಒ.ಡಿ. ಅಧಿಕಾರಿಗಳ ಮೇಲೆ ತಮ್ಮ ಒತ್ತಡವನ್ನು ಹೇರುತ್ತಾರೆ ಎಂದು ಹೇಳುವಂತಾದ್ದು ಪರೋಕ್ಷವಾಗಿ ನಮಗೆ ತಿಳಿದು ಬಂದಿದೆ. ಈ ಎಲ್ಲಾವಿಚಾರಗಳನ್ನೂ ಸ್ಪಷ್ಟವಾಗಿ ಗಮನದಲ್ಲಿಟ್ಟುಕೊಂಡು, ಯಾವುದು ರಾಜಾರಾಂ ಸೇರ್ವೆಗಾರ್ ಹತ್ಯೆಯಾಗಿದೆ, ಅದನ್ನು ಸಿ.ಒ.ಡಿ ಯಿಂದ ಸಿ.ಬಿ.ಐ.ಗೆ ಹಸ್ತಾಂತರ ಮಾಡುವುದರ ಮುಖಾಂತರ ನ್ಯಾಯೋಚಿತವಾದ ನ್ಯಾಯವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ. ನಾನು ಈಗಾಗಲೇ ಪ್ರಸ್ತಾಪ ಮಾಡಿರತಕ್ಕ ವಿಷಯಗಳ ಬಗ್ಗೆ ನಮ್ಮ ಮಂತ್ರಿಗಳು ಗಮನಹರಿಸುತ್ತಾರೆಂದು ವಿಶ್ವಾಸವನ್ನು ವ್ಯಕ್ತಪಡಿಸುತ್ತೇನೆ. ನಾನು ಮಾಡಿದಂಥ ಕ್ರಿಟಿಸಿಜಮ್ ಬಹುಶಃ ಕನಸ್ಟ್ರಕ್ಟೀವ್ ಕ್ರಿಸಿಜಿಮ್ ಇರಬಹುದು ಎಂದು ಹೇಳಿ ತಮಗೆಲ್ಲಾ ವಂದಿಸಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ, ಧನ್ಯವಾದಗಳನ್ನು ಅರ್ಪಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಕಾಗೋಡು ತಿಮ್ಮಪ್ಪ (ಸಾಗರ್) : ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ಎರಡನೆಯ ಬಾರಿಗೆ ಈ ಸದನದಲ್ಲಿ ಆಯವ್ಯಯವನ್ನು ಮಂಡಿಸತಕ್ಕ ಕಾಲದಲ್ಲಿ ಜನರಿಗೆ ಅಭಾರಿಯನ್ನು ಸಲ್ಲಿಸಿದ್ದಾರೆ. ಒಬ್ಬ ವ್ಯಕ್ತಿಗೆ ಇಂತಹ ಅವಕಾಶ ದೊರೆಯುವಂಥಾದ್ದು ಅಪರೂಪದ ಸಂಗತಿ. ಈ ಸಂದರ್ಭದಲ್ಲಿ ಸಾರ್ಥಕಪಡಿಸಿಕೊಳ್ಳಬೇಕೆಂಬ ಅಪೇಕ್ಷೆ ನನಗಿದೆ. ಆದರೆ, ಅವರ ಮಾತಿಗೂ ಮತ್ತು ಕೃತಿಗೂ ಅಂತರವನ್ನು ನಾವು ಇವತ್ತು ಕಾಣುತ್ತಾ ಇದ್ದೇವೆ. ಕಳೆದ ಸಾಲಿನಲ್ಲಿ ಮಾಡಿದಂಥ ಸಾಧನೆ ನಮಗೆ ಇದರ ಕಲ್ಪನೆಯನ್ನು ತಂದುಕೊಟ್ಟಿದೆ. ಈ ಪ್ರವೃತ್ತಿ ಮುಂದುವರಿಯಬಾರದು ಎನ್ನುವುದು ನಮ್ಮ ಕಳಕಳಿಯ ಮನವಿ. ಈಗ ಕಾಲ ಬದಲಾವಣೆಯಾಗಿದೆ, ಜನರ ಆಸೆಗಳು, ಇಚ್ಛೆಗಳು ದೊಡ್ಡ ಪ್ರಮಾಣದಲ್ಲಿವೆ. ಚುನಾಯಿತ ಸರ್ಕಾರ ಅವುಗಳನ್ನು ಸಫಲ ಮಾಡಿಕೊಡತಕ್ಕಂತಾದ್ದು, ಜನರ ಭಾವನೆಗೆ ಸ್ಪಂಧನ ಮಾಡಿಕೊಳ್ಳತಕ್ಕಂಥಾದ್ದು ಇಂದಿನ ಕಾಲದ ಬಹುದೊಡ್ಡ ಜವಾಬ್ದಾರಿ. ವಿರೋಧಪಕ್ಷದವರು ಹೇಳಿರಲಿ, ಆಡಳಿತ ಪಕ್ಷದವರು ಹೇಳಿರಲಿ, ಇವತ್ತು ನಾವು ಹೆಚ್ಚು ಜವಾಬ್ದಾರಿಯನ್ನು ಅರಿತು ಕೆಲಸ ಮಾಡತಕ್ಕ ಕಾಲ ಬಂದಿದೆ. ಯಾವುದೇ ಸರ್ಕಾರವನ್ನು ಹೆಚ್ಚು ದಿನಗಳ ಕಾಲ ಜನರು ಇಟ್ಟುಕೊಳ್ಳುವುದಿಲ್ಲವೆನ್ನುವ ವಾತಾವರಣ ನಮ್ಮ ರಾಷ್ಟ್ರದಲ್ಲಿ ಉಂಟಾಗಿದೆ. ಆದ್ದರಿಂದ ಸಂದರ್ಭ ಸಿಕ್ಕಿದಾಗ ಜನರ ಸೇವೆ ಮಾಡತಕ್ಕ ಅವಕಾಶ ದೊರೆತಾಗ, ಇದನ್ನು ಸಾರ್ಥಕಪಡಿಸಬೇಕಾದ ಅಗತ್ಯ ಮಾತ್ರ ಇದೆ ಎನ್ನುವುದನ್ನು ನಮ್ಮ ಕಿರಿಯ ಮಿತ್ರರಾದಂಥ ಸಿದ್ದರಾಮಯ್ಯನವರಿಗೆ ಈ ಸಂದರ್ಭದಲ್ಲಿ ಮನವರಿಕೆ ಮಾಡಿಕೊಡುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ವಿರೋಧಪಕ್ಷದ ನಾಯಕರು ಮಾತನಾಡತಕ್ಕ ಕಾಲದಲ್ಲಿ ಒಂದು ಮಾತನ್ನು ಹೇಳಿದ್ದಾರೆ. 1995-96ನೇ ಸಾಲಿನ ಸಾಧನೆ ಏನೂ ಇಲ್ಲ, ಸಾಧನಾರಹಿತವಾದ ವರ್ಷವಾಗಿದೆ ಎನ್ನತಕ್ಕಂಥ ವ್ಯಾಖ್ಯಾನವನ್ನು ಅವರು ಮಾಡಿದ್ದಾರೆ. ಅದರಲ್ಲಿ ಸತ್ಯಕೂಡ ಇದೆ. ತಾವು ಬಹಳವಾಗಿ ಹೇಳಿದ್ದೀರಿ. ನಾವು ಅಧಿಕಾರವನ್ನು ವಹಿಸಿಕೊಳ್ಳತಕ್ಕ ಕಾಲದಲ್ಲಿ ಹಣಕಾಸಿನ ಸ್ಥಿತಿಗತಿ ಚೆನ್ನಾಗಿರಲಿಲ್ಲ, ನಾವು ಅಧಿಕಾರಕ್ಕೆ ಬಂದಮೇಲೆ ಅದನ್ನು ಸರಿಪಡಿಸಿಕೊಂಡು ಹೆಚ್ಚು ಕೆಲಸ ಸಾಧನೆ ಮಾಡಿದ್ದೀರಿ, ಮುಖ್ಯಮಂತ್ರಿಗಳ ನಿನ್ನೆ ರಾಜ್ಯಪಾಲರ ಭಾಷಣಕ್ಕೆ ಉತ್ತರವನ್ನು ಕೊಡತಕ್ಕ ಸಂದರ್ಭದಲ್ಲಿಯೂ ಹೇಳಿದ್ದಾರೆ. ನೀವು ಅದು ಮಾಡಿದ್ದರೆ ಬಹಳ ಒಳ್ಳೆಯದು, ಇಲ್ಲ ಎಂದು ಹೇಳುವುದಿಲ್ಲ. ಆದರೆ, ನೀವು ಆ ರೀತಿ ಮಾಡಿಲ್ಲವಲ್ಲ ಎಂಬ ಚಿಂತೆ ನನ್ನನ್ನು ಬಾಧಿಸುತ್ತಿದೆ. ಏಕೆಂದರೆ, ನೀವು ಒಂದೆರಡು ಒಳ್ಳೆಯ ಕೆಲಸಗಳನ್ನು ಮಾಡಿದ್ದೀರಿ ಅಥವಾ ರೈತರಿಗೆ ಬಡ್ಡಿ, ಸುಸ್ತಿ ಬಡ್ಡಿಯನ್ನು ಮನ್ನಾ ಮಾಡತಕ್ಕ ಕೆಲಸ ಮಾಡಿದ್ದೀರಿ. ಇದು ಸುಮಾರು 10 ಲಕ್ಷ ರೈತರಿಗೆ ಪ್ರಯೋಜನವಾಗಿದೆ, ಇವೆರಡು ದೊಡ್ಡ ಕೆಲಸಗಳನ್ನು ಮಾಡಿದ್ದೀರಿ. ಇದಕ್ಕೆ ತಮಗೆ ಅಭಿನಂದನೆಗಳು. ಆದರೆ, ನನ್ನ ಕ್ಷೇತ್ರದಲ್ಲಿ ಏನು ನಡೆಯುತ್ತಿದೆ, ಅದೇ ನಮಗೆ ಬಹಳ ವ್ಯಸನವಾಗುತ್ತದೆ. ನಾನು ರಾಜ್ಯವನ್ನೆಲ್ಲಾ ತಿರುಗುವುದಕ್ಕೆ ಹೋಗಲಿಲ್ಲವೋ ಅಥವಾ ರಾಜ್ಯದಲ್ಲಿ ಏನಿದೆ. ಬಹುಶಃ ನನ್ನ ಕ್ಷೇತ್ರದಲ್ಲಿ ಆಗಿರತಕ್ಕ ದುರಂತ, ನನ್ನ ಕ್ಷೇತ್ರದಲ್ಲಿ ಆಗಿರುವುದು, ಬೇರೆಯವರ ಕ್ಷೇತ್ರದಲ್ಲೂ ಆಗಿರಬಹುದು. ನಾಗೇಗೌಡರ ಕ್ಷೇತ್ರದಲ್ಲೂ ಆಗಿರಬಹುದು. ಏಕೆಂದರೆ, ಅಭಿವೃದ್ಧಿಯ ಕಾರ್ಯ ಕೇವಲ ಅವೆರಡು ಕಾರ್ಯಕ್ರಮದಿಂದ ಮಾತ್ರ ಸೇರಿಸಿಕೊಂಡಿಲ್ಲ. ಅಭಿವೃದ್ಧಿಯ ಕಾರ್ಯವೆಂದರೆ, ಬಹಳ ವ್ಯಾಪಕವಾಗಿದೆ. ಆರ್ಥಿಕಾಭಿವೃದ್ಧಿ ಕ್ಷೇತ್ರಗಳು ಇವೆ, ಅನೇಕ ಕಾರ್ಯಕ್ರಮಗಳು ಇವೆ. ಅದು ನಿಮ್ಮ ಸರ್ಕಾರ

ಇರಬಹುದು, ನಮ್ಮ ಸರ್ಕಾರ ಇರಬಹುದು. ಯಾವ ಯಾವ ಅಭಿವೃದ್ಧಿ ಕಾರ್ಯಕ್ರಮಗಳು ಪ್ರಾರಂಭವಾಗಿದ್ದವು, ಅವುಗಳನ್ನೆಲ್ಲಾ ಸ್ಥಗಿತಗೊಳಿಸತಕ್ಕ ಅವಶ್ಯಕತೆ ಇರಲಿಲ್ಲ. ಆದರೆ, ತಾವು ಅಧಿಕಾರಕ್ಕೆ ಬಂದ ತರುವಾಯ ಮಾಡಿದಂಥ ದೊಡ್ಡ ಕೆಲಸ ಎಂದರೆ, ಯಾವ ಯಾವ ಅಭಿವೃದ್ಧಿ ಕಾರ್ಯಗಳು ಪ್ರಾರಂಭವಾಗಿದ್ದವೋ ಅವುಗಳನ್ನೆಲ್ಲಾ ನಿಲ್ಲಿಸತಕ್ಕಂತಾದ್ದು. ಅದಕ್ಕೆ ತಾವೆಲ್ಲಾ ಏನು ಹೇಳುತ್ತೀರಿ. ಎಲ್ಲಾ ಬಿಲ್ಲುಗಳನ್ನು ಪಾವತಿ ಮಾಡಿದ್ದೇವೆ, ಕೊಡತಕ್ಕಂತಾದ್ದೆಲ್ಲಾ ಕೊಟ್ಟುಬಿಟ್ಟಿದ್ದೇವೆ, ಎನ್ನತಕ್ಕಂಥ ಕೀರ್ತಿಯನ್ನು ಬಹಳ ಸಾರಿ, ಸಾರಿಸಾರಿ ಹೇಳಿದ್ದೀರಿ. ಈ ಜಗತ್ತಿನಲ್ಲಿ ಎಲ್ಲರೂ, ಅಂದರೆ ತಾವು ಹೇಳಿದಿರಲ್ಲ. ಯಾರಾದರೂ ಒಬ್ಬರು ಹಣಕಾಸಿನ ಸಚಿವರು ರಾಜ್ಯದಲ್ಲಾಗಿರಬಹುದು, ಅಥವಾ ರಾಷ್ಟ್ರ ಸರ್ಕಾರದಲ್ಲಾಗಿರಬಹುದು. ಪ್ರಪಂಚದ ಯಾವುದೇ ರಾಷ್ಟ್ರದಲ್ಲಿರಬಹುದು. ಪ್ರಾರಂಭದಲ್ಲಿ ಎಲ್ಲಾ ಬಂಡವಾಳವನ್ನು ನಾವು ಶೇಖರಣೆ ಮಾಡಿಟ್ಟುಕೊಂಡು, ಖಜಾನೆಯಲ್ಲಿಟ್ಟು ಆಮೇಲೆ ಖರ್ಚುಮಾಡತಕ್ಕ ವ್ಯವಸ್ಥೆ ಇಲ್ಲ. ಆಯವ್ಯಯ ಎಂದು ಹೇಳಿದರೆ, ಖರ್ಚೂ ಇರುತ್ತೆ ಜಮಾನೂ ಇರುತ್ತೆ, ಜಗತ್ತು ಬೆಳವಣಿಗೆಯಾಗತಕ್ಕ ಕಾಲ, ಸಮಾಜ ಬೆಳವಣಿಗೆಯಾಗತಕ್ಕ ಕಾಲ, ಅದರಲ್ಲಿಯೂ ನಮ್ಮಂಥ ಸಮಾಜದಲ್ಲಿ, ನಮ್ಮಂಥ ರಾಷ್ಟ್ರದಲ್ಲಿ, ನಾವು ಮಾಡತಕ್ಕ ಅನೇಕ ಕೆಲಸಗಳು ಅಸಾಧುವಾಗಿವೆ. ಅನಿವಾರ್ಯವಾಗಿ, ಬದಲಾದ ಪರಿಸ್ಥಿತಿಯಲ್ಲಿ ಮಾಡುತ್ತಾ ಹೋಗಬೇಕಾಗುತ್ತದೆ. ಹಣ ಕಡಿಮೆಯಾದಾಗ, ತೆರಿಗೆಯನ್ನು ಹಾಕಬೇಕಾಗುತ್ತದೆ. ಅಥವಾ ಕಡಿಮೆ ಸಾಲವನ್ನೂ ತರಬೇಕಾಗುತ್ತದೆ. ಏನಾದರೂ ಮಾಡಿ, ನಮ್ಮ ಪ್ರಗತಿಯ ದಾರಿಯನ್ನು ಯಾವುದೇ ಕಾರಣಕ್ಕೂ ಮುಚ್ಚದೆ, ಮುಂದೆ ಹೋಗತಕ್ಕಂಥ ಪ್ರಯತ್ನವನ್ನು ಮಾಡಲೇ ಬೇಕಾಗುತ್ತದೆ, ಇದು ಅನಿವಾರ್ಯವಾದಂಥ ಪ್ರಸಂಗ. ಒಂದೇಒಂದು ಸಾಧನೆ ಎಂದು ಹೇಳಿದರೆ, ಬಹಳ ಬಿಲ್ಲುಗಳು ಇಲ್ಲಿ ಕೊಳೆಯುತ್ತಾ ಇವೆ, ಅವುಗಳನ್ನೆಲ್ಲಾ ಪೂರ್ಣಮಾಡೋಣ, ಪಾವತಿ ಮಾಡಿ, ಆಮೇಲೆ ಕೆಲಸ ಮಾಡೋಣವೆಂದು ಒಂದು ವರ್ಷಗಳ ಕಾಲದಲ್ಲಿ ತಾವು ಏನನ್ನೂ ಮಾಡಲಿಲ್ಲ. ಅದಕ್ಕೆ ಉದಾಹರಣೆಯನ್ನು ನಾನು ಏಕೆ ಹೇಳುತ್ತೇನೆ ಎಂದರೆ, ನಾನು ಶ್ರೀಮಾನ್ ಯಡಿಯೂರಪ್ಪನವರ ಕ್ಷೇತ್ರದಲ್ಲಿಯೂ ನೋಡಿದ್ದೇನೆ ಅಥವಾ ಶಿವಮೊಗ್ಗ ಕ್ಷೇತ್ರದಲ್ಲಿಯೂ ನೋಡಿದ್ದೇನೆ, ಸಾಗರ ಕ್ಷೇತ್ರ, ನಮ್ಮ ಕ್ಷೇತ್ರದಲ್ಲಿಯೂ ನಾನು ಕಾಣುತ್ತಾ ಇದ್ದೇನೆ. ಇದು ಎಲ್ಲಾಕಡೆ ಆಗಿದೆ. ಏನಾಗಿದೆ ಎಂದರೆ, ತಾವು ಬಂದತಕ್ಷಣ ಏನೇನು ಮಾಡಿದ್ದೀರಿ. ಯಾವ ಯಾವ ಕೆಲಸಗಳು ಟೆಂಡರ್ ಕರೆದು ಪ್ರಾರಂಭವಾಗಿದ್ದವು, ಹಾಗೆ ಪ್ರಾರಂಭ ಮಾಡಿರತಕ್ಕ ಎಲ್ಲಾ ಕೆಲಸಗಳನ್ನು ಇವತ್ತು ನಿಲ್ಲಿಸಿದ್ದೀರಿ. ಉದಾಹರಣೆಗೆ, ನನ್ನ ಕ್ಷೇತ್ರದಲ್ಲಿ ಒಂದು ಮಹಿಳಾ ಕಾಲೇಜು. ಈ ಕಾಲೇಜಿಗೆ 1993-94ರಲ್ಲಿ 56 ಲಕ್ಷ ರೂಪಾಯಿಗಳು ಮಂಜೂರಾಗಿತ್ತು. ಇದಕ್ಕೆ ಸುಮಾರು 18-20 ಲಕ್ಷ ರೂಪಾಯಿಗಳು ಫೌಂಡೇಶನಗೆ ಪೂರ್ಣವಾಗಿದೆ. ಇವತ್ತು ನಮ್ಮ ಸರ್ಕಾರ ಬಂದು, ಇವತ್ತಿನವರೆಗೆ ಒಂದು ವರ್ಷ ನಾಲ್ಕು ತಿಂಗಳ ಅವಧಿಯವರೆಗೆ ಒಟ್ಟು ಇಟ್ಟಿಗೆ ಚೂರನ್ನು ಅದರ ಮೇಲಿಟ್ಟಿಲ್ಲ ಇದರ ಬಗ್ಗೆ ತಮಗೂ ಕಾಗದ ಬರೆದಿದ್ದೇನೆ. ಮುಖ್ಯಮಂತ್ರಿಯವರಿಗೂ ಕಾಗದ ಬರೆದಿದ್ದೇನೆ. ಇದಕ್ಕೆ ಏನು ಕಾರಣ, 400-500 ಹೆಣ್ಣುಮಕ್ಕಳು ಓದುತ್ತಿದ್ದಾರೆ. ಬೇರೆ ಎದುರು ಕಟ್ಟಡದಲ್ಲಿ ಅವರು ಕುಳಿತುಕೊಳ್ಳುತ್ತಿದ್ದಾರೆ, ಹೆಣ್ಣುಮಕ್ಕಳಿಗೆ ಓದುತ್ತಿದ್ದಾರೆ. ಬೇರೆ ಎದುರು ಕಟ್ಟಡದಲ್ಲಿ ಅವರು ಕುಳಿತುಕೊಳ್ಳುತ್ತಿದ್ದಾರೆ, ಹೆಣ್ಣು ಮಕ್ಕಳಿಗೆ ಒಂದು ಕಟ್ಟಡ ಒದಗಿಸಿಕೊಡೋಣವೆಂದು ಕೆಲಸ ಮಾಡಿದರ,

ನಿಮ್ಮ ಸರ್ಕಾರ ಬಂದಮೇಲೆ ಒಂದು ಇಟ್ಟಿಗೆ ಚೂರನ್ನು ಆ ಕಟ್ಟಡದ ಮೇಲೆ ಇಟ್ಟಿಲ್ಲವೆಂದು ಹೇಳಿದರೆ, ಇದು ಏನನ್ನು ತೋರಿಸುತ್ತದೆ? ಒಂದು ಜ್ಯೂನಿಯರ್ ಕಾಲೇಜು ಕಟ್ಟಡವನ್ನು 56 ಲಕ್ಷಕ್ಕೆ ಪ್ರಾರಂಭ ಮಾಡಿದರೆ, ಅದಕ್ಕೆ ಸುಮಾರು 24 ಲಕ್ಷ ರೂಪಾಯಿ ಖರ್ಚುಮಾಡಿದರೆ, ಇಡೀ ವರ್ಷದಲ್ಲಿ ನೀವು ಕೊಟ್ಟಿಂತಾದ್ದು 2 ಲಕ್ಷ. 18-20 ಲಕ್ಷ ರೂಪಾಯಿ ಖರ್ಚುಮಾಡಿ, ಆ ಕಟ್ಟಡ ಒಂದುಹಂತಕ್ಕೆ ಬಂದು, ಇವತ್ತು ಏನಾಗಬೇಕಾಗಿದೆ. 1,200 ಮಕ್ಕಳು ಓದತಕ್ಕ ಶಾಲೆಗೆ, ಒಂದು ಜೂನಿಯರ್ ಕಾಲೇಜು ಕಟ್ಟಿಡ ಕಟ್ಟಬೇಕೆಂದರೆ, ನಾನು ಅದಕ್ಕೆ ಕಾಗದ ಬರೆದಿದ್ದೇನೆ, ಇವತ್ತು ಬರೆದಿದ್ದೇನೆ. ಕೊನೆಪಕ್ಷ ಗೋಡೆ ಎತ್ತಿಸಿದ್ದಾರೆ, ಕಾಲಂ ಹಾಕಿದ್ದಾರೆ, ಸ್ಲ್ಯಾಬ್ ಹಾಕಿ ಮುಂದಿನ ಕೆಲಸ ಮಾಡುವುದಕ್ಕೆ ೫-೬ ಲಕ್ಷ ರೂಪಾಯಿ ಕೊಡಿ ಎಂದು ಹೇಳಿದರೆ, ಕೊಡುವುದಕ್ಕಾಗದೆ ಇರತಕ್ಕ ಪರಿಸ್ಥಿತಿ ಒದಗಿಬಂದರೆ, ಅದಕ್ಕೆ ನಾವೇನು ಹೇಳಬೇಕು?

ಶಿವಮೊಗ್ಗ ಜಿಲ್ಲಾ ಆಸ್ಪತ್ರೆಗೆ ಸುಮಾರು 17 ಕೋಟಿ ರೂಪಾಯಿಗಳಿಗೆ ಮಂಜೂರಾತಿ ನೀಡಿ ಸುಮಾರು ಐದಾರು ಕೋಟಿ ರೂಪಾಯಿಗಳಲ್ಲಿ ನೆಲ ಅಂತಸ್ತು ಮತ್ತು ಮೊದಲನೆ ಅಂತಸ್ತಿನ ಕೆಲಸವನ್ನು ಈಗಾಗಲೇ ಮಾಡಿದ್ದು ಕಳೆದ 1 ವರ್ಷ 6 ತಿಂಗಳಲ್ಲಿ ಆ ಕಟ್ಟಡಕ್ಕೆ ಒಂದು ಇಟ್ಟಿಗೆ ಚೂರು ಇಟ್ಟಿದ್ದರೆ ಕೆಲಸ ನಿಂತುಹೋಗಿದೆ, ಶಿಕಾರಿಪುರದಲ್ಲೂ ಕೆಲಸಗಳು ನಿಂತು ಹೋಗಿವೆ ಅಭಿವೃದ್ಧಿ ದೃಷ್ಟಿಯಿಂದ ಈ ಒಂದು ವರ್ಷದ ಅವಧಿಯಲ್ಲಿ ಕೆಲಸ ಮಾಡದೆ ಕಳೆದಿರತಕ್ಕಂಥಾದ್ದು ಘೋರ ಅನ್ಯಾಯ ಮತ್ತ ಪಾಪದ ಕೆಲಸವೆಂದು ನಾನು ಹೇಳುತ್ತೇನೆ. ಪ್ರಾರಂಭವಾಗಿರತಕ್ಕಂಥ ಕೆಲಸಗಳಿಗೆ ಹಣ ಇಲ್ಲದಿದ್ದರೆ ಭಿಕ್ಷೆ ಬೇಡಿಯಾದರೂ ಹಣವನ್ನು ಒದಗಿಸಿ ಕೆಲಸವನ್ನು ಮುಂದುವರಿಸತಕ್ಕಂಥ ಜವಾಬ್ದಾರಿ ಸರ್ಕಾರದ ಮೇಲಿದೆ. ಆ ಕೆಲಸವನ್ನು ಮಾಡದೇ ಇರುವುದಕ್ಕೆ ನಾವು ಸರ್ಕಾರವನ್ನು ಏನೆಂದು ಕರೆಯಬೇಕು? ನಮ್ಮ ರಾಜ್ಯದಲ್ಲಿರತಕ್ಕಂಥ 70 ಲಕ್ಷ ರೈತರುಗಳಿಗೆ 36 ಕೋಟಿ ರೂಪಾಯಿಗಳನ್ನು ಸುಸ್ತಿ ಬಡ್ಡಿ ಮನ್ನಾ ಮಾಡುವ ರೂಪದಲ್ಲೇನೋ ಕೊಡಲಾಗಿದೆ. ಇನ್ನು ಉಳಿದವರಿಗೆ ಏನು ಕೊಟ್ಟಿದ್ದೀರಿ? ಕಳೆದ ಒಂದೂವರೆ ವರ್ಷದಲ್ಲಿ ಒಂದೆರಡು ಕ್ಷೇತ್ರಗಳಲ್ಲಿ ಮಾಡಿರುವ ಸಾಧನೆಯನ್ನು ಬಿಟ್ಟರೆ ಒಟ್ಟಾರೆ ಗಮನಹರಿಸಿದರೆ ಸಾಧನೆ ಮಾಡಿರುವುದು ಬಹಳ ಕಡಿಮೆ. ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗೆ ಹೆಚ್ಚಿನ ಶಕ್ತಿಯನ್ನು ಕೊಟ್ಟು ಅವುಗಳ ಮೂಲಕ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಸಾಧಿಸಬೇಕನ್ನುವ ಅಪೇಕ್ಷೆಯನ್ನು ಸರ್ಕಾರ ವ್ಯಕ್ತ ಮಾಡಿದೆ. ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗೆ ಮಾಡಬೇಕಾದ್ದು ಬಹಳ ಇದೆ. ಈಗ ಮಾಡಿರುವುದು ಬಹಳ ಕಡಿಮೆ ಇದೆ. ಸಹಕಾರ ಕ್ಷೇತ್ರಕ್ಕೆ ಏನೂ ಮಾಡಿಲ್ಲವೆಂದು ಮಾನ್ಯ ಸದಸ್ಯರೊಬ್ಬರು ಆಗಲೇ ಹೇಳಿದ್ದು ನಿಜ. ಹೋದ ವರ್ಷ ಬಡ್ಡಿ ಮತ್ತು ಚಕ್ರ ಬಡ್ಡಿಯನ್ನು ಮನ್ನಾ ಮಾಡಿದ್ದರಿಂದ ಸಾಲ ಮರುಪಾವತಿಯಾಗಿದೆಯೆಂದು ಮೂರನೆ ವರ್ಷ ಪುನಃ ಸಾಲವನ್ನೂ ಕೊಡಲಾಯಿತು, ಈಗಾಗಲೇ ನಾವು ಫೆಬ್ರವರಿ ಕಳೆದು ಮಾರ್ಚ 6ನೇ ತಾರೀಖಿನಲ್ಲಿದ್ದೇವೆ. ಇದುವರೆಗೆ ಎಷ್ಟು ವಸೂಲಿಯಾಗಿದೆ ಎಂಬ ಅಂಕಿ ಅಂಶವನ್ನು ತರಿಸಿ ದಯವಿಟ್ಟು ಹೇಳಬೇಕು. ಮಾನ್ಯ ಮುಖ್ಯಮಂತ್ರಿಗಳು ಶಿವಮೊಗ್ಗಕ್ಕೆ ಬಂದು ಪರಿಶೀಲನೆ ಮಾಡಿದಂಥ ಸಂದರ್ಭದಲ್ಲಿ ಈ ರೀತಿ ವಸೂಲಿ ಮಾಡಿದರೆ ಯಥಾವತ್ ಆಗಿ ಈ ವರ್ಷವೂ ರೈತರು ಬಾಕಿದಾರರಾಗಿ ಉಳಿಯುತ್ತಾರೆನ್ನುವ ಮಾತನ್ನು ನಾನು ಹೇಳಿದ್ದೇನೆ. ಪ್ರತಿ ವರ್ಷವೂ ಹೀಗೆ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ

ಮಾಡಲಾಗುತ್ತದೆಯೇ? ಏಕೆಂದರೆ, ಯಾವುದಾದರೂ ಒಂದು ಆರ್ಥಿಕ ನೀತಿಗೆ ಅರ್ಥವಿರಬೇಕಾಗುತ್ತದೆ. ರೈತರುಗಳಿಗೆ ಸಹಾಯ ಮಾಡಬೇಕೆನ್ನುವ ಮನಸ್ಸಿದ್ದರೆ ಪ್ರತಿ ವರ್ಷ ಪ್ರತಿ ಹಿಡುವಳಿದಾರರಿಗೆ ಇಂತಿಷ್ಟು ಸಹಾಯ ಮಾಡುತ್ತೇವೆಂದು ಕೊಟ್ಟುಬಿಡಲಿ. ಎಲ್ಲಾ ರೈತರಿಗೂ ಅದರಿಂದ ಲಾಭ ಸಿಗಲಿ. 'ಕೊಟ್ಟವನು ಕೋಡಂಗಿ ತೆಗೆದು ಕೊಂಡವನು ವೀರಭದ್ರ' ಎನ್ನುವ ಹಾಗೆ ಸಾಲ ತಗೆದುಕೊಂಡಿರುವವರಿಗೆ ಮಾತ್ರ ಈ ಲಾಭ ಸಿಗುತ್ತಿದ್ದು ಉಳಿದವರಿಗೆ ಏನೂ ಸಹಾಯ ಸಿಗುವುದಿಲ್ಲ. ಆದ್ದರಿಂದ ಸಹಕಾರಿ ಕ್ಷೇತ್ರಕ್ಕೆ ಹೊಸ ದೃಷ್ಟಿಕೋನವನ್ನು ಸರ್ಕಾರ ಹರಿಸಬೇಕಾಗುತ್ತದೆ. ಸಹಕಾರ ಕ್ಷೇತ್ರಕ್ಕೆ ಆಯಸ್ಸು ಜಾಸ್ತಿಯಾಗಿದೆಯೇ ಹೊರತು ಅದಕ್ಕೆ ಸಾಕಷ್ಟು ಶಕ್ತಿ ಇಲ್ಲದ ದುರ್ಬಲವಾಗಿದೆ. ಇದೀ ಕೃಷಿ ಕ್ಷೇತ್ರಕ್ಕೆ ಮೂಲ ಆಧಾರ ಸಹಕಾರ ಕ್ಷೇತ್ರ. ಆದರೆ, ಇವತ್ತಿನ ದಿವಸದಲ್ಲಿ ಅತ್ಯಂತ ಹೀನ ಸ್ಥಿತಿಯಲ್ಲಿ ಈ ಸಹಕಾರ ಕ್ಷೇತ್ರ ಇದೆ. ಈ ನೆಲೆಯಲ್ಲಿ ಸಹಕಾರ ಕ್ಷೇತ್ರವನ್ನು ಬಲಪಡಿಸಿ ನಿರಂತರವಾಗಿ ರೈತರುಗಳಿಗೆ ಸಾಲ ಕೊಡುವ ಹಾಗೆ ಗೊಳಿಸತಕ್ಕಂಥ ಅವಶ್ಯಕತೆ ಇದೆ. ಸಹಕಾರ ಕ್ಷೇತ್ರವನ್ನು ಬಲಪಡಿಸದಿದ್ದರೆ ರೈತನಿಗೆ ಯಾವುದೇ ರೀತಿಯಲ್ಲೂ ಶಕ್ತಿಯನ್ನು ತಂದುಕೊಡುವುದಕ್ಕಾಗುವುದಿಲ್ಲವಾದ್ದರಿಂದ ಇದರ ಬಗ್ಗೆ ಹೆಚ್ಚು ಗಮನ ಹರಿಸಬೇಕಾಗುತ್ತದೆ. ಸಹಕಾರ ಕ್ಷೇತ್ರದಲ್ಲಿ ತೊಡಗಿಸುತ್ತಿರುವ ಹಣವು ಬಹಳ ಕಡಿಮೆಯದ್ದಾಗಿದೆ. ಹೆಚ್ಚಿನ ಷೇರು ಬಂಡವಾಳವನ್ನು ಸರ್ಕಾರ ಕೊಡಬೇಕಾಗಿದೆ, ಅವುಗಳಿಗೆ ಅವಶ್ಯವಿರುವಷ್ಟು ಸಿಬ್ಬಂದಿ ವರ್ಗವನ್ನು ಕೊಡಬೇಕಾಗಿದೆ, ಯಾವ ಕಾರಣಕ್ಕಾಗಿ ಹಿಂದೆ ಬಿದ್ದಿವೆ ಎಂಬ ರೋಗವನ್ನು ಪತ್ತೆ ಹಚ್ಚಿ ಸೂಕ್ತವಾದ ಚಿಕಿತ್ಸೆಯನ್ನು ಕೊಡಬೇಕಾಗಿದೆ. ಈ ಎಲ್ಲಾ ಕಾರಣಗಳಿಂದ ಸಹಕಾರ ಕ್ಷೇತ್ರಕ್ಕೆ ಆಯವ್ಯಯದಲ್ಲಿ ಕೊಟ್ಟಿರುವ ಹಣ ತೀರಾ ಕಡಿಮೆಯಾಗಿದೆ. ಆದ್ದರಿಂದ, ಇದರ ಬಗ್ಗೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳದ ಇದ್ದರೆ ಪ್ರತಿ ವರ್ಷವೂ ನಮ್ಮ ಕೃಷಿಕರನ್ನು ಸಾಲದ ಬಲೆಯಲ್ಲಿ ತಳ್ಳಿದಂತಾಗುತ್ತದೆ. ಇನ್ನು ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿ ಬರುವ ರೋಜಗಾರ್ ಹಣವನ್ನು ಬಿಟ್ಟರೆ ಬೇರೆ ಹಣ ಬರುತ್ತಿಲ್ಲ. ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ರಸ್ತೆಗಳನ್ನು ವಹಿಸಿಕೊಡಲಾಗಿದೆ, ಕೆರೆಗಳ ದುರಸ್ತಿ ಕೆಲಸವನ್ನು ವಹಿಸಿಕೊಡಲಾಗಿದೆ, ಈ ಕೆಲಸಗಳ ಪ್ರಮಾಣಕ್ಕೆ ತಕ್ಕಂತೆ ಹಣವನ್ನು ಬಿಡುಗಡೆ ಮಾಡಲಾಗುತ್ತಿದೆಯೇ? ಇವತ್ತಿನ ದಿವಸ ಪ್ರತಿ ತಾಲ್ಲೂಕಿನಲ್ಲಿ 10 ಲಕ್ಷ ರೂಪಾಯಿಗಳ ಬಡ್ಜೆಟರಿ ವರ್ಕನ್ನೂ ತೆಗೆದುಕೊಳ್ಳುವುದಕ್ಕೇ ಸಾಧ್ಯವಿಲ್ಲ. ನಮ್ಮ ಶಿವಮೊಗ್ಗ ಜಿಲ್ಲೆಗೆ 9 ತಾಲ್ಲೂಕುಗಳು ಬರುತ್ತವೆ, ಒಂದೊಂದು ತಾಲ್ಲೂಕಿಗೆ ಕೆರೆ ದುರಸ್ತಿಗಾಗಿ ಒಂದೊಂದು ಲಕ್ಷ ರೂಪಾಯಿಗಳನ್ನು ಕೊಟ್ಟರೆ, ಎಷ್ಟು ಕೆರೆಗಳಲ್ಲಿ ಹೂಳನ್ನು ಎತ್ತುವುದಕ್ಕೆ ಸಾಧ್ಯವಿದೆ? ಎಷ್ಟು ಕೆರೆಗಳ ತೂಬುಗಳನ್ನು ಸರಿಪಡಿಸುವುದಕ್ಕೆ ಸಾಧ್ಯವಿದೆ? ಎಷ್ಟು ಕೆರೆಗಳ ಒಡೆದ ಏರಿಯನ್ನು ಕಟ್ಟಿಸಲು ಸಾಧ್ಯವಿದೆ? ಆದ್ದರಿಂದ, ಒಂದೊಂದು ತಾಲ್ಲೂಕಿಗೆ ಪ್ರತಿ ವರ್ಷ 4 ರಿಂದ 5 ಲಕ್ಷ ರೂಪಾಯಿಗಳನ್ನು ಕೆರೆಗಳ ದುರಸ್ತಿಗಾಗಿಯೇ ಹಣವನ್ನು ಮೀಸಲಿಡಬೇಕಾಗಿದೆ. ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ರಸ್ತೆಗಳನ್ನು ಮತ್ತು ಕೆರೆಗಳನ್ನು ವಹಿಸಿದ ಮೇಲೆ ಅವುಗಳ ದುರಸ್ತಿಗಾಗಿ ಕೊಡಬೇಕಾದ ಹಣವನ್ನು ಕೊಡದೆ ಹೋದರೆ ಆ ಕೆಲಸವನ್ನು ಯಾವ ರೀತಿ ನಿರ್ವಹಿಸುವುದಕ್ಕಾಗುತ್ತದೆಂದು ಅರ್ಥ ಮಾಡಿಕೊಳ್ಳಬೇಕು. ಸರ್ಕಾರ ಕೊಡುವ ಹಣದಲ್ಲಿ ಬಹುಪಾಲು ಸಿಬ್ಬಂದಿ ವೆಚ್ಚಕ್ಕಾಗಿಯೇ ಹೋಗುತ್ತಿದೆ. ಇವತ್ತಿನ ದಿವಸದಲ್ಲಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಮತ್ತು ಮಲೆನಾಡು ಅಭಿವೃದ್ಧಿ ಮಂಡಳಿಗಳ ಹೆಸರಿನಲ್ಲಿ ಹಣ ಬರುತ್ತಿರುವುದರಿಂದ ಮರ್ಯಾದೆಯಿಂದ ಇದ್ದೇವೆ. ಇಲ್ಲದೆ ಹೋಗಿದ್ದರೆ ಜನರಿಗೆ ಉತ್ತರ ಹೇಳುವುದಕ್ಕಾಗದಂಥ ಪರಿಸ್ಥಿತಿಗೆ ಬರುತ್ತದೆ. ತಾಲ್ಲೂಕು ಪಂಚಾಯಿ ವ್ಯಾಪ್ತಿಯಲ್ಲಿ 5 ಕಿಲೋ ಮೀಟರ್ ಡಾಂಬರೀಕರಣ ಮತ್ತು 10

ಕಿಲೋಮೀಟರಿನಷ್ಟು ಜಲ್ಲಿ ರಸ್ತೆ ಮಾಡುವುದಕ್ಕಾಗುವುದಿಲ್ಲ. ಪ್ರತಿ ತಾಲ್ಲೂಕೂ ಸದಸ್ಯರು ತಮ್ಮ ತಮ್ಮ ಕ್ಷೇತ್ರದಲ್ಲಿ 50 ಸಾವಿರ ರೂಪಾಯಿಗಳ ಕೆಲಸವನ್ನೂ ಮಾಡಿಸುವುದಕ್ಕಾಗದಂಥ ಪರಿಸ್ಥಿತಿ ಇದೆ. ಇನ್ನು ಜಿಲ್ಲಾ ಪರಿಷತ್ತಿನ ಸದಸ್ಯರುಗಳು ತಮ್ಮ ತಮ್ಮ ಕ್ಷೇತ್ರದಲ್ಲಿ ಒಂದು ಕಿಲೋಮೀಟರ್ ರಸ್ತೆಗೆ ಡಾಂಬರೀಕರಣ ಮಾಡಿಸಿಕೊಳ್ಳುವುದಕ್ಕಾಗುತ್ತಿಲ್ಲ; ಒಂದು ಕಿಲೋಮೀಟರ್ ಜಲ್ಲಿ ರಸ್ತೆಯನ್ನು ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಈ ರೀತಿ ಇದ್ದರ ಅವರುಗಳಿಗೆ ವಹಿಸಿಕೊಟ್ಟರತಕ್ಕಂಥ ರಸ್ತೆ ಮತ್ತು ಕೆರೆಗಳ ಅವಸ್ಥೆ ಏನಾಗುತ್ತದೆ? ಇನ್ನು ಮೈನರ್ ಇರಿಗೇಷನ್ ಮೂಲಕ 200 ಎಕರೆ ನೀರಾವರಿಯಾಗತಕ್ಕಂಥ ಕೆರೆಗಳನ್ನೆಲ್ಲಾ ಅವರಿಗೇ ವಹಿಸಿಕೊಟ್ಟಿದ್ದೀರಿ. ಇದುವರೆಗೂ ಒಂದು ಕೆರೆ ರಿಪೇರಿ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಅವರ ಕೈಯಲ್ಲಿ ಆಗುತ್ತಿಲ್ಲ. ಕೆರೆಗಳಲ್ಲಿ ಹೆಚ್ಚು ಪ್ರಮಾಣದಲ್ಲಿ ನೀರು ಸಂಗ್ರಹ ಮಾಡುವುದಕ್ಕಾಗಿ ಹೂಳನ್ನು ಎತ್ತುವುದಕ್ಕಾಗಲೀ, ದೊಡ್ಡ ಪ್ರಮಾಣದಲ್ಲಿ ಕೆರೆಗಳನ್ನು ರಿಪೇರಿ ಮಾಡುವುದಕ್ಕಾಗಲೀ ಇವತ್ತಿನ ದಿವಸ ಹಣ ಇಲ್ಲದೆ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಕೇವಲ 25 ಸಾವಿರ ರೂಪಾಯಿಗಳ ಅಂದಾಜಿನ ಕೆಲಸವನ್ನು ಮಂಜೂರಾತಿ ಮಾಡಿಸಿಕೊಳ್ಳುವುದಕ್ಕಾಗಲಿಲ್ಲವೆಂದು ಪಂಚಾಯಿತಿ ಸದಸ್ಯರುಗಳು ಇವತ್ತಿನ ದಿವಸ ಹೇಳುತ್ತಿದ್ದಾರೆ. ಹೀಗಿದ್ದ ಮೇಲೆ ಸಣ್ಣ ನೀರಾವರಿ ಇಲಾಖೆ ಏಕೆ ಬೇಕು? ಅವರಿಗೆ ಕೆರೆಗಳನ್ನು ಏಕೆ ವಹಿಸಿಕೊಡಲಾಗಿದೆ? ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಬರತಕ್ಕಂಥ ರಸ್ತೆಗಳನ್ನು ಮತ್ತು ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯಲ್ಲಿ ಬರತಕ್ಕಂಥ ಕೆರೆಗಳನ್ನೆಲ್ಲಾ ಅವರಿಗೆ ವಹಿಸಿಕೊಟ್ಟು ತತ್ಪ್ರಮಾಣದಲ್ಲಿ ಕೊಡಬೇಕಾದ ಹಣವನ್ನು ಕೊಡದೆ ಆ ಸಂಸ್ಥೆಗಳು ಸಾಯುತಕ್ಕಂಥ ರೀತಿಯಲ್ಲಿ ಮಾಡತಕ್ಕಂಥದ್ದು ಸರಿಯಲ್ಲ.

ಇವತ್ತಿನ ದಿವಸ ಜಿಲ್ಲಾ ಪಂಚಾಯಿತಿ ಅಧ್ಯಕ್ಷರುಗಳನ್ನು ಚೀಫ್ ಎಕ್ಸಿಕ್ಯುಟೀವ್ ಆಫೀಸರಗಳೆಂದು ಕರೆದು ಸರ್ಕಾರ ತೃಪ್ತಿಪಟ್ಟುಕೊಳ್ಳುವುದಕ್ಕೆ ಹೋಗಬಾರದು. ನಿಜವಾದ ಅಭಿವೃದ್ಧಿ ಕೆಲಸವನ್ನು ಮತ್ತು ಪ್ರಗತಿದಾಯಕ ಸಾಧನ ಮಾಡತಕ್ಕಂಥ ಶಕ್ತಿಯನ್ನು ಪಂಚಾಯಿತಿ ವ್ಯವಸ್ಥೆಗೆ ಕೊಟ್ಟಾಗ ಮಾತ್ರ ತೃಪ್ತಿಪಟ್ಟುಕೊಳ್ಳಬೇಕು. ಅದು ಬಿಟ್ಟು ಬರೀ ಚೀಫ್ ಎಕ್ಸಿಕ್ಯುಟಿವ್ ಆಫೀಸರ್ ಎಂದು ಮಾಡಿದರೆ 'ಉಣ್ಣುವುದಕ್ಕಿಲ್ಲ, ತಿನ್ನುವುದಕ್ಕಿಲ್ಲ ನನ್ನ ಗಂಡ ಸರ್ದಾರ' ಎಂದು ಹೇಳುವ ಹಾಗಾಗುತ್ತದೆ. ಆದ್ದರಿಂದ, ಜಿಲ್ಲಾ ಪಂಚಾಯತ್ ವ್ಯವಸ್ಥೆಯನ್ನು ಬಲಪಡಿಸುವ ಬಗ್ಗೆ ನಾವು ಚಿಂತನೆ ಮಾಡಬೇಕಾಗುತ್ತದೆ.

ಡಾ:: ಎಂ. ಶಂಕರನಾಯಕ್ : ಮಾನ್ಯ ಅಧ್ಯಕ್ಷರೆ, ಜಿಲ್ಲಾಪರಿಷತ್ತಿನ ವ್ಯಾಪ್ತಿಯಲ್ಲಿ ಕೆಲಸಗಳು ಆಗುತ್ತಿಲ್ಲವದು ಮಾನ್ಯ ಸದಸ್ಯರು ಆರೋಪ ಮಾಡುತ್ತಿದ್ದಾರೆ. ಹಿಂದಿನ ಸರ್ಕಾರ ಇದ್ದಾಗ ಎರಡು ವರ್ಷಗಳ ಕಾಲ ಜಿಲ್ಲಾ ಪಂಚಾಯಿತಿಯಲ್ಲಿ ಆಡಳಿತ ವರ್ಗದವರು ಇದ್ದದ್ದು ತಮಗೆಲ್ಲರಿಗೂ ಗೊತ್ತಿದೆ. ಆಗ ಬಜೆಟನ್ನು ತಯಾರು ಮಾಡುವಾಗ 1:1 ಅಥವಾ 1:3 ಮಾಕ್ಸಿಮಮ್ ಅಂದರೆ, ಈ ವರ್ಷಕ್ಕೆ ಬಜೆಟ್ ಎಷ್ಟು ಇದೆಯೋ ಅಷ್ಟಕ್ಕೆ ಮಾಡಿ, ಮುಂದೆ ಏನಾದರೂ ಬಜೆಟ್ ಇದ್ದರೆ 1:1 ಮಾಡತಕ್ಕಂಥ ಅಥವಾ ಹಿಂದಿನ ಸರ್ಕಾರ 1:10 ನಂತ ಬೇಗ ಕೆಲಸ ಆಗಲಿ ಎಂದು, ಒಂದು ಲಕ್ಷ ರೂಪಾಯಿ ಕ್ರಿಯಾ ಯೋಜನೆಯ ಬಜೆಟನಲ್ಲಿದ್ದರೆ ಅದಕ್ಕೆ ಅಳವಡಿಸಿಕೊಳ್ಳುತ್ತಿದ್ದು 10 ಸಾವಿರ ಅಥವಾ 15 ಸಾವಿರ. ಆ ತರಹ ಹಿಂದೆ ಏನಾಗಿದೆಯೆಂದರೆ ಸ್ಪಿಲ್ ಓವರ್ ಕೆಲಸಗಳಿಗೆ ಕ್ರಿಯಾ ಯೋಜನೆಯನ್ನು ಅಳವಡಿಸಿಕೊಳ್ಳುವುದಕ್ಕಾಗದಿರುವಂತ ಪರಿಸ್ಥಿತಿ ಎಲ್ಲಾ ಜಿಲ್ಲಾ ಪರಿಷತ್ತುಗಳಲ್ಲಿ ಉಂಟಾಗಿತ್ತು. ಆ

ದೃಷ್ಟಿಯಿಂದ ಕ್ರಿಯಾ ಯೋಜನೆಯನ್ನು 1:3 ಮಾಡಿದ್ದೇ ಆಗಿದ್ದರ ಈ ಸಮಸ್ಯೆ ಇರುತ್ತಿರಲಿಲ್ಲ. ಆದಕ್ಕಾಗಿ ಜಿಲ್ಲಾ ಪಂಚಾಯಿತಿಗಳನ್ನು ಬ್ಲೇಮ್ ಮಾಡತಕ್ಕಂಥಾದ್ದಲ್ಲ. ಏನು ಸ್ಪಿಲ್ ಓವರ್ ತೆಗೆದುಕೊಂಡಿದ್ದಾರೋ ಅದಕ್ಕಾದರೂ ಹಣ ಬಿಡುಗಡೆ ಮಾಡಿ ಆ ಕೆಲಸ ಪೂರ್ತಿಯಾದ ಮೇಲೆ ಹೊಸ ಕೆಲಸ ತೆಗೆದುಕೊಳ್ಳುವುದಕ್ಕೆ ಸರ್ಕಾರದಿಂದ ನಿರ್ದಿಷ್ಟ ಸೂಚನೆ ಹೋದರೆ ಮಾತ್ರ ಆ ಕೆಲಸವಾಗುತ್ತದೆ, ಇಲ್ಲದಿದ್ದರೆ ಆಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಪ್ರತಿ ವರ್ಷ ಅವರಿಗೆ ಕೊಡುವ ಅನುದಾನದ ಮೇಲೆ ಅವಲಂಬಿಸುವುದಕ್ಕಾಗುವುದಿಲ್ಲ. ಸರ್ಕಾರದ ನೀರಾವರಿ ಇಲಾಖೆ ಕಾಮಗಾರಿಗಳಿಗೆ ಮತ್ತು ಲೋಕೋಪಯೋಗಿ ಇಲಾಖೆಗೆ ಸೇರಿದ ಕಾಮಗಾರಿಗಳಿಗೆ ನಾವು ಯಾವರೀತಿ ಬಜೆಟನಲ್ಲಿ ಸೇರಿಸಿಕೊಂಡು ಮಾಡುತ್ತೇವೆಯೋ ಅದೇ ರೀತಿ ಪ್ರತಿ ವರ್ಷವೂ ಜಿಲ್ಲಾ ಪಂಚಾಯತ್ ಮೂಲಕ ತೆಗೆದುಕೊಳ್ಳುವ ಕೆಲಸಗಳಿಗೆ ಸರಿಯಾದ ಪ್ರಮಾಣದಲ್ಲಿ ಹಣವನ್ನು ಕೊಡಬೇಕಾಗುತ್ತದೆ. ಹಣವನ್ನು ಕೊಡದೆ ಹೋದರೆ ಬರೀ ಹೆಸರಿಗೆ ಮಾತ್ರ ಆ ಸಂಸ್ಥೆಗಳನ್ನು ಇಟ್ಟುಕೊಂಡು ಅದರ ಮೂಲಕ ಏನೂ ಕೆಲಸ ಮಾಡಿದ ಹಾಗೆ ಆಗುವುದಿಲ್ಲವೆಂದು ನಾನು ಹೇಳುತ್ತಿದ್ದೇನೆ. ಚುನಾವಣೆ ಸಮಯದಲ್ಲಿ ಪುರಸಭೆಗಳಿಗಾದರೂ ಹಣ ಕೊಟ್ಟಿದ್ದಕ್ಕೆ ನಾನು ಮಾನ್ಯ ಸಚಿವರಾದ ಸಿದ್ದರಾಮಯ್ಯನವರಿಗೆ ವಂದನೆ ಸಲ್ಲಿಸಬೇಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ಹಣ ಹೇಗೆ ಕೊಟ್ಟಿರೆಂದು ಮಾನ್ಯ ಸದಸ್ಯರಿಗೆ ಗೊತ್ತಿಲ್ಲ. ಮುನಿಸಿಪಾಲಿಟಿಗಳಿಗೆ ಕೊಡತಕ್ಕಂಥ ಆಕ್ಟ್ರಾಯಿ ಗ್ರ್ಯಾಂಟನಲ್ಲಿ ಕಡಿತ ಮಾಡಿ, ನಾವು ಡೆವಲಪಮೆಂಟ್ ಗ್ರ್ಯಾಂಟ್ ಕೊಡುತ್ತಿದ್ದೇವೆಂದು ಎಲ್ಲರಿಗೂ ಧಾರಾಳವಾಗಿ ಕೊಡುತ್ತಾ ಹೋದರು. ಈಗ ಅದು ಹೊರಕ್ಕೆ ಬರುತ್ತಿದೆ.

ಶ್ರೀ ಸಿದ್ದರಾಮಯ್ಯ : ಕೊಟ್ಟಂಥ ಒಟ್ಟು 28 ಕೋಟಿ ರೂಪಾಯಿಗಳಲ್ಲಿ 16 ಕೋಟಿ ಅಡಿಷನಲ್ ಗ್ರ್ಯಾಂಟ್ ಇನ್ನು ಉಳಿದ 12 ಕೋಟಿ ರೂಪಾಯಿಗಳು ಆಕ್ಟ್ರಾಯಿ ನಿಂದ ಕೊಡಬೇಕಾದುದು. ಒಟ್ಟಿನಲ್ಲಿ 16 ಕೋಟಿ ರೂಪಾಯಿಗಳನ್ನು ಅಡಿಷನಲ್ ಗ್ರ್ಯಾಂಟ್ ಆಗಿ ಕೊಟ್ಟಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಡೆವಲಪಮೆಂಟ್ ಗ್ರ್ಯಾಂಟ್ ಎಂದು 4 ಲಕ್ಷ 5 ಲಕ್ಷ ಕೊಟ್ಟುಕೊಳ್ಳುತ್ತಾ ಬರುತ್ತಿದ್ದಾರೆ. ಈಗ ಇವರು ಎರಡು-ಮೂರು ಲಕ್ಷ ಕೊಡುವ ಕಡೆ 4-5 ಲಕ್ಷ ಮತ್ತು 10 ಲಕ್ಷ ರೂಪಾಯಿಗಳನ್ನು ಕೊಟ್ಟುಬಿಟ್ಟರು. ಎಲ್ಲಾ ಮುನಿಸಿಪಾಲಿಟಿಗಳಿಗೂ ಹತ್ತತ್ತು ಲಕ್ಷ ಬಂತಲ್ಲಾ ಎಂದು ಜನರು ಖುಷಿ ಪಟ್ಟರು. ಇಲ್ಲಿ ಏನಾಗಿದೆ ಎಂದರೆ, ಆಕ್ಟ್ರಾಯಿ ಗ್ರ್ಯಾಂಟನಿಂದ ಬರತಕ್ಕ ಹಣವನ್ನು ಸೇರಿಸಿ ಡಬಲ್ ಮಾಡಿದ್ದಕ್ಕಾಗಿ ಸರ್ಕಾರ ಹೆಚ್ಚಿಗೆ ಹಣ ಕೊಟ್ಟ ಹಾಗೆ ಆಗಿದೆಯೇ ಹೊರತಾಗಿ ಎಕ್ಸ್‌ಕ್ಲೂಸಿವಲಿ ಬರೀ ಡೆವಲಪಮೆಂಟ್ ಗ್ರ್ಯಾಂಟ್ ಎಂದು ಪೂರ್ತಿ ಕೊಡಲಿಲ್ಲ.

ಶ್ರೀ ಸಿದ್ದರಾಮಯ್ಯ : ಕೊಟ್ಟಿರುವ 16 ಕೋಟಿ ಎಕ್ಸ್‌ಕ್ಲೂಸಿವ್ಲಿ ಅಡಿಷನಲ್ ಗ್ರ್ಯಾಂಟ್. ಈ ಮೊದಲು ಆಕ್ಟ್ರಾಯಿನಿಂದ ಏನು ಕೊಡಬೇಕಾಗಿತ್ತೋ ಅದರಲ್ಲಿ 12 ಕೋಟಿ ರೂಪಾಯಿಗಳನ್ನು ಇವರ ಜೊತೆಗೆ ಕೊಡಲಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಈ ಮೊದಲು ಬಹಳ ಕಷ್ಟಪಟ್ಟು 5 ಲಕ್ಷ ರೂಪಾಯಿಗಳನ್ನು

ಪಡೆಯುತ್ತಿದ್ದೇವು. ಅದೇ ರೀತಿ ಈ ವರ್ಷವೂ 5 ಲಕ್ಷ ರೂಪಾಯಿ ನಾವು ಕೇಳಿದ್ದಕ್ಕೆ ಈ ಸಾರಿ 10 ಲಕ್ಷ ರೂಪಾಯಿಗಳನ್ನು ಸರ್ಕಾರ ಕೊಟ್ಟಿದೆ. ನಾವು ಕೇಳಿದ್ದುದು 5 ಲಕ್ಷ ರೂಪಾಯಿ, ಅವರು 10 ಲಕ್ಷ ರೂಪಾಯಿ ಕೊಟ್ಟಿರುವ ಬಗ್ಗೆ ಕೇಳಿದಾಗ, 5 ಲಕ್ಷ ರೂಪಾಯಿಗಳನ್ನು ಅಕ್ಷಾಯಿ ಗ್ರ್ಯಾಂಟನಲ್ಲಿ ಮುರಿದುಕೊಳ್ಳುತ್ತಾರೆಂದು ತಿಳಿಸಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಪುರಸಭೆ ಮತ್ತು ನಗರ ಸಭೆ ಚುನಾವಣೆಗಳು ಬರುವುದಕ್ಕಿಂಥ ಮುಂಚೆ ಈ ಹಣವನ್ನು ಏಕೆ ಕೊಟ್ಟರೆಂದರೆ, ರಸ್ತೆಗಳಲ್ಲಿ ಗುಂಡಿ ಬಿದ್ದು ಏನು ಕೊಳೆತು ನಾರುತ್ತಿದ್ದವೋ ಅವುಗಳನ್ನೆಲ್ಲಾ ಸರಿಪಡಿಸಿದರೆ ಚುನಾವಣೆಯಲ್ಲಿ ಜನರೆಲ್ಲಾ ಕೈ ಎತ್ತಿ ವೋಟು ಕೊಡುತ್ತಾರೆಂದು ಆ ರೀತಿ ಕೊಟ್ಟಿದ್ದಾರೆ. ಆದರೆ, ಅವರು ಮುಗ್ಗರಿಸಿಬಿದ್ದರು. ಜನರ ಕೈ ಎತ್ತುವ ಕೆಲಸ ಆಗಲಿಲ್ಲ. ಗೆದ್ದವರ ಕೈ ಎತ್ತಿಸಿ ಇವರ ಪಕ್ಷದವರು ಅಧ್ಯಕ್ಷರಾಗುವುದಕ್ಕೆ ಪ್ರಯತ್ನ ಮಾಡಿದರು.

ಶ್ರೀ ಸಿದ್ದರಾಮಯ್ಯ : ಚುನಾವಣೆಯಲ್ಲಿ ಯಾರು ಮುಗ್ಗರಿಸಿದರೆಂದು ಜನಕ್ಕೆ ಗೊತ್ತಾಗಿದೆ. ಚುನಾವಣೆ ದೃಷ್ಟಿ ಇಟ್ಟುಕೊಂಡು ಆ ಹಣವನ್ನು ಕೊಟ್ಟಿದ್ದಲ್ಲ. ಹಣ ಕೊಡುವುದು ನಮ್ಮ ಕಮಿಟಮೆಂಟ್.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಸ್ಥಳೀಯ ಸಂಸ್ಥೆಗಳಿಗೆ ಹಣಕಾಸಿನ ಬಲವನ್ನು ಕೊಡದಿದ್ದರೆ ಅವು ನಿಜವಾದಂಥ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ರಸ್ತೆಗಳು ಮತ್ತು ಕೆರೆಗಳ ಕೆಲಸವನ್ನು ಮಾಡಿಸುವುದಕ್ಕಾಗದಿದ್ದರೆ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಸದಸ್ಯರುಗಳು ಸ್ಥಳೀಯ ಜನರ ನಿಷ್ಠೂರಕ್ಕೆ ಗುರಿಯಾಗುತ್ತಾರೆ. ಯಾವ ರೀತಿ ಮುನಿಸಿಪಾಲಿಟಿಗಳಿಗೆ ಹಣವನ್ನು ಕೊಡಲಾಯಿತೋ ಅದೇರೀತಿ ಪ್ರತಿಯೊಂದು ಜಿಲ್ಲಾಪಂಚಾಯಿತಿಗೆ ಕನಿಷ್ಟ 10 ಕೋಟಿ ರೂಪಾಯಿಗಳನ್ನಾದರೂ ಕೊಟ್ಟು, ಪ್ರತಿ ತಾಲ್ಲೂಕು ಪಂಚಾಯಿತಿಗೆ ಕನಿಷ್ಟ 50 ಲಕ್ಷ ರೂಪಾಯಿಗಳನ್ನಾದರೂ ಕೊಟ್ಟು ಹೊಸ ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಹಾಗೆ ಮಾಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಪ್ಲಾನ್‌ನಲ್ಲಿ 620 ಕೋಟಿ ರೂಪಾಯಿ ಇದ್ದದ್ದನ್ನು 732 ಕೋಟಿ ರೂಪಾಯಿಗೆ ಏರಿಸಿದ್ದೇವೆ. 16 ಪರ್ಸೆಂಟ್ ಬೆಳವಣಿಗೆಯಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಜಿಲ್ಲಾ ಪಂಚಾಯತ್ ಸದಸ್ಯರಾದ ಒಬ್ಬರಿಗೆ ಅವರ ಕ್ಷೇತ್ರದಲ್ಲಿ 2 ಕಿಲೋ ಮೀಟರ್ ರಸ್ತೆಗೆ ಡಾಂಬರೀಕರಣ ಮತ್ತು 5 ಕಿಲೋಮೀಟರ್ ಜಲ್ಲಿ ರಸ್ತೆ ಮಾಡಿಕೊಳ್ಳುವುದಕ್ಕಾದರೂ ಅರ್ಹತೆ ಬೇಡವೋ? ಅಥವಾ ಅವರ ಕ್ಷೇತ್ರದ ಯಾವುದಾದರೂ ಒಂದು ಕೆರೆಯನ್ನು ದುರಸ್ತಿ ಮಾಡಿಸಲು ಕನಿಷ್ಟ ಒಂದು ಲಕ್ಷ ರೂಪಾಯಿ ಅಥವಾ 2 ಲಕ್ಷ ರೂಪಾಯಿಗಳಾದರೂ ಸಿಗಬೇಕೋ ಅಥವಾ ಬೇಡವೋ? ಒಬ್ಬ ಸದಸ್ಯ ಒಂದು ವರ್ಷಕ್ಕೆ 10 ಲಕ್ಷ ರೂಪಾಯಿಗಳ ಕಾರ್ಯಕ್ರಮಗಳನ್ನು ಮಾಡಿಸಿಕೊಳ್ಳದಿದ್ದರೆ ಅವನಿಗೆ ಗೌರವ ಹೇಗೆ ಸಿಗುತ್ತದೆ? ವಸ್ತು ಸ್ಥಿತಿಯನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ತಾಲ್ಲೂಕು ಪಂಚಾಯಿತಿ ಸದಸ್ಯನೊಬ್ಬ ತನ್ನ ಕ್ಷೇತ್ರಕ್ಕೆ 5 ಲಕ್ಷ ರೂಪಾಯಿಗಳ ಕೆಲಸವನ್ನಾದರೂ ಒಂದು ವರ್ಷದಲ್ಲಿ ಮಾಡಿಸಲಿಲ್ಲವೆಂದರೆ, ಅವನು ತಾಲ್ಲೂಕು ಪಂಚಾಯಿತಿ ಸದಸ್ಯನಾಗಿ ಏನು ಪ್ರಯೋಜನ?

4.30 ಪಿ.ಎಂ

ನಾವು ಒಬ್ಬ ಸದಸ್ಯರಾಗಿ ಅಲ್ಲಿನ ಒಂದು ಸಣ್ಣ ರಸ್ತೆಯನ್ನು ಮಾಡಿಸಲು ಆಗದೇ ಹೋದರೆ ನಾವೇನು ಕೆಲಸ ಮಾಡುವುದಕ್ಕೆ ಆಗುತ್ತದೆ? ಆದ್ದರಿಂದ ವಸ್ತುಸ್ಥಿತಿಯನ್ನು ಗಮನಿಸಿ ಈ ಸಂಸ್ಥೆಗಳಿಗೆ ಹೆಚ್ಚು ಹಣವನ್ನು ಕೊಡತಕ್ಕಂಥ ಕೆಲಸವನ್ನು ನೀವು ಮಾಡಿದರೆ ಖಂಡಿತವಾಗಿಯೂ ನಿಮಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ಮುಖ್ಯಮಂತ್ರಿಯವರು ಎಲ್ಲಾ ಕಡೆಗಳಲ್ಲಿ ಜನಸಂಪರ್ಕ ಸಭೆಗಳನ್ನು ಮಾಡಿ ಬಂದಿದ್ದೇನೆ. ಅಲ್ಲಿ ಕುಂಟರನ್ನು, ಕುರುಡರನ್ನು, ಬಡವರನ್ನು, ಹೆಳವರನ್ನು, ಮುಂತಾಗಿ ಎಲ್ಲರನ್ನೂ ನೋಡಿದ ಮೇಲೆ ಇಂಥ ವರ್ಗಗಳ ಜನರ ಕಣ್ಣೀರನ್ನು ಒರೆಸತಕ್ಕಂಥ ಕೆಲಸವನ್ನು ನಾನು ಮಾಡದೇ ಈ ಎಲ್ಲಾ ಕಾರ್ಯಕ್ರಮಗಳನ್ನು ಮಾಡಿದ್ದೇವೆಂದು ಹೇಳಿದ್ದರು. ಒಳ್ಳೆಯ ಕೆಲಸವನ್ನು ಅರ್ಜಿಗಳು ಬರುತ್ತವೆ ಎಂಬುದು ನನಗೆ ಗೊತ್ತಿತ್ತು. ಸೈಟಬಗ್ಗೆ, ಮನೆಗಳ ಬಗ್ಗೆ ನಮಗೆ ಕೊಡಿಸಿ ಎಂದು ಜನರು ಅರ್ಜಿಗಳನ್ನು ಕೊಡುತ್ತಾರೆ. ಹಾಗಾದರೆ ಒಂದು ಸೈಟನ್ನು ಕೊಡುವ ಅಧಿಕಾರ ಪುರಸಭೆಗೆ ಇದೆಯೇ? ಏಕೆಂದರೆ ಅವರ ಒಂದು ಲೆಟರನ್ನು ಅಂದರೆ ಮಾನ್ಯ ಮುಖ್ಯಮಂತ್ರಿಯವರು ಹೋಗಿದ್ದಾಗ ಯಾರೋ ಒಂದು ನಿವೇಶನಕ್ಕೆ ಅರ್ಜಿಯನ್ನು ಕೊಟ್ಟಿದ್ದರಂತೆ. ನಂತರ ಇವರು ಅವರಿಗೆ ನಿವೇಶನ ಕೊಡಿ ಎಂದು ಶಿವಮೊಗ್ಗದ ಕಮಿಷನರರವರಿಗೆ ಪತ್ರವನ್ನು ಹಾಕಿದರಂತೆ ತದನಂತರ ಮುಖ್ಯಮಂತ್ರಿಗಳೇ ಅಲ್ಲಿಗೆ ರಿವ್ಯೂವ್ ಮಾಡುವುದಕ್ಕೆ ಬಂದಾಗ ಎರಡು ತಿಂಗಳ ನಂತರ ಸಂಬಂಧಪಟ್ಟವನು ಆ ಪತ್ರವನ್ನು ಹಿಡಿದುಕೊಂಡು ಬಂದರಂತೆ. ಅವರು ಮುಖ್ಯಮಂತ್ರಿಯವರನ್ನು ಕಂಡು ತಾವು ಅಲ್ಲಿಂದ ಇಲ್ಲಿಗೆ ಆದೇಶವನ್ನು ಕಳುಹಿಸಿಕೊಟ್ಟಿದ್ದೀರಿ, ಸರಕಾರದ ನಿರ್ದೇಶನ ಬಂದಿದ್ದರು ನನಗೆ ಇವೊತ್ತಿನ ವರೆಗೂ ನಿವೇಶನ ಸಿಗಲಿಲ್ಲ ಎಂದರು. ಅದನ್ನು ನೋಡಿದ ಮುಖ್ಯಮಂತ್ರಿಗಳು ನಮ್ಮ ಸಭೆಯಲ್ಲಿ ಮುಖ್ಯಮಂತ್ರಿಗಳ ಕಛೇರಿಯಿಂದ ಬಂದರೂ ಕೂಡ ನಿವೇಶನ ಇವೊತ್ತಿನವರೆಗೂ ನೀವು ಕೊಟ್ಟಿಲ್ಲ ಅಂದರೆ ನಮಗೆ ಮರ್ಯಾದೆಯು ಬರುತ್ತದೆಯೇ? ಎಂದು ಅಲ್ಲಿದ್ದ ಅಧಿಕಾರಿಗಳನ್ನು ಕೇಳಿದರು. ಹಾಗಾದರೆ ನಾವು ಕಮಿಶನರಗೆ ಒಂದು ನಿವೇಶನ ಇಂಥವರಿಗೆ ಕೊಡಿ ಅಂದರೆ ಅವನಿಗೆ ಕೊಡುವ ಅಧಿಕಾರ ಇದೆಯೇ? ಅವನಿಗೆ ಆ ಅರ್ಜಿಯನ್ನು ಕಳುಹಿಸಬೇಕೆ? ಬೇಡವೇ ಎಂದು ನಾವು ವಿಚಾರ ಮಾಡುವುದು ಬೇಡವ? ಒಂದು ನಿವೇಶನ ಕೊಡಬೇಕಾದರೆ 25 ಸಾವಿರ ರೂ.ಗಳೊಳಗೆ ಹರಾಜು ಮಾಡಿದರೆ ಮಾತ್ರ ಅವನು ಕೊಡಬಹುದೇ ವಿನಹ ಉಳಿದವುಗಳಿಗೆ ಸರಕಾರದ ಮಂಜೂರಾತಿಗೆ ಬರಬೇಕೇ ವಿನಹ ಅವರಿಗೇ ಕೊಡುವುದಕ್ಕೆ ಬರುವುದಿಲ್ಲ. ಆದ್ದರಿಂದ ನಿವೇಶನಗಳನ್ನು ಕೊಡುವ ಬಗ್ಗೆ ಪ್ರಸ್ತಾವನೆಯನ್ನು ಸರಕಾರಕ್ಕೆ ಕಳುಹಿಸಿಕೊಟ್ಟು, ಸರಕಾರದವರು ಸಂಬಂಧಪಟ್ಟವರಿಗೆ ಅಧಿಕಾರವನ್ನು ಕೊಟ್ಟರೆ ಆಗುತ್ತದ. ಇವೊತ್ತು ಸಾಗರದಂಥ ಪುರಸಭೆಗಳಲ್ಲಿ ಬಗರಹುಕುಂ ಸಾಗುವಳಿ ಮಾಡಿದ್ದರೆ ಅಥವಾ ನಿವೇಶನಗಳಲ್ಲಿ ಕೊಡಬೇಕೆಂದಿದ್ದರೆ ಅದು ಸರಕಾರದ ಜಮೀನು ಆಗಿದ್ದರೂ ಕೂಡ ಸರಕಾರದ ಮಂಜೂರಾತಿಗೆ ಬರಬೇಕು. ಇದು ಸೆಕ್ಷನ 71ರ ಪ್ರಕಾರ. ಅದರ ನಿಮ್ಮ ನಿಯಮಗಳ ಪ್ರಕಾರ ಹೀಗೆ ಅರ್ಜಿ ಹಾಕಿದವರಿಗೆ ನಿವೇಶನಗಳನ್ನು ಕೊಡಲು ಬರುವುದಿಲ್ಲ. ನಾವು ಇರುವಾಗ ಆಶ್ರಯ ಯೋಜನೆಯಲ್ಲಿ ಸುಲಭವಾಗಿ ಸೈಟಗಳನ್ನು ಕೊಟ್ಟಿದ್ದೆವು.

ಅಪ್ರೋಪ್ರಿಯೇಷನ್ ಮಾಡತಕ್ಕಂಥ ಅಧಿಕಾರವನ್ನು ನಾವು ತಹಶೀಲ್ದಾರರಿಗೆ ಕೊಟ್ಟಿದ್ದೆವು.

ಬಗರಹುಕುಂ ಸಾಗುವಳಿಯನ್ನು ಮಂಜೂರು ಮಾಡಬೇಕಾದರೆ ಗೋಮಾಳದಿಂದ ರಿಡಕ್ಷನ್ ಮಾಡತಕ್ಕಂಥ ಅಧಿಕಾರವನ್ನು, ಅಪ್ರೋಪ್ರಿಯೇಷನ್ ಮಾಡತಕ್ಕಂಥ ಅಧಿಕಾರವನ್ನು ತಹಶೀಲ್ದಾರರಿಗೆ ಕೊಟ್ಟಿದ್ದೇವೆ. ಆ ಕಾರಣದಿಂದಾಗಿ ಬಂದ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಸಾಧ್ಯವಾಯಿತು. ನೀವೇ ಹಿಂದೆ ಸಚಿವರಾಗಿದ್ದಾಗ ಗೋಮಾಳವನ್ನು ಕಡಿಮೆ ಮಾಡತಕ್ಕಂಥ ಸಂದರ್ಭದಲ್ಲಿ ಗೋಮಾಳದಲ್ಲಿನ ಭೂಮಿಯನ್ನು ಕೊಡಬೇಕಾದರ ಸರಕಾರಕ್ಕೆ ಬರಬೇಕೆಂದು ಮಾಡಿದ್ದೀರಿ. ಆಗ ಅದರ ಬಗ್ಗೆ ನಾನು ವಾದ ಮಾಡಿದ್ದೆ. ಆದರೆ ಇವರು ಒಂದು ಸಾರಿ ಜಿಲ್ಲಾಧಿಕಾರಿಗೆ ಕೊಡೋಣ ಎಂದು ಹೇಳಿದರು, ಇನ್ನೊಂದು ಸಾರಿ ಅಸಿಸ್ಟೆಂಟ್ ಕಮಿಶನರಗೆ ಕೊಡೋಣ ಎಂದು ಹೇಳಿದರು. ಸುಮಾರು 11 ಲಕ್ಷಗಳಷ್ಟು ಅರ್ಜಿಗಳಿದ್ದಾರೆ ವಿಲೇವಾರಿ ಮಾಡುವುದು ಕಷ್ಟವಾಗುತ್ತದೆ, ಯಾರು ಮಂಜೂರು ಮಾಡುತ್ತಾರೋ ಅವರಿಗೆ ಕೋಡೋಣ ಎಂದು ಹೇಳಿ ವಾದ ಮಾಡಿ ಹೋರಾಟ ಮಾಡಿದಮೇಲೆ, ತಾವು ಒಪ್ಪಿಕೊಂಡ ಮೇಲೆ ಅವೊತ್ತು ನಿವೇಶನಗಳಿಗೆ ಹಕ್ಕುಪತ್ರ ಕೊಡುವುದಕ್ಕೆ ಬಗರಹುಕುಂ ಚೀಟಿ ಕೊಡುವುದಕ್ಕೆ ಅನುಕೂಲವಾಯಿತು. ಇಲ್ಲದಿದ್ದಲ್ಲಿ ನೂರು ವರ್ಷ ಹೋದರೂ ಕೊಡುವುದಕ್ಕೆ ಆಗುತ್ತಾ ಇರಲಿಲ್ಲ. ಇವೊತ್ತು ಏನು ಮಾಡಿದ್ದೀರಿ. ಒಂದು ನಿವೇಶನವನ್ನು ಕೊಡತಕ್ಕಂಥ ಅಧಿಕಾರವನ್ನು ತಹಶೀಲ್ದಾರರಿಗ ನೀವು ಕೊಟ್ಟಿಲ್ಲ. ಹಳ್ಳಿಗಳಲ್ಲಿನ ಯುವಕ ನಿರುದ್ಯೋಗಿಗೆ ಏಳೂವರೆ ಸಾವಿರ ರೂ.ಗಳನ್ನು ಕೊಟ್ಟು ಉದ್ಯೋಗಕ್ಕೆ ಸಹಾಯ ಮಾಡುತ್ತೇವೆಂದು ಹೇಳಿದ್ದಾರೆ. ಹಳ್ಳಿ-ಪಟ್ಟಣಗಳಲ್ಲಿರತಕ್ಕಂಥ ವಿದ್ಯಾವಂತ ನಿರುದ್ಯೋಗಿಗಳಿಗೆ ಪ್ರಧಾನಿಯವರು ರೋಜಗಾರ್ ಯೋಜನೆಯ ಮೂಲಕ ತಾಲ್ಲೂಕಿಗೆ 700 ಜನರನ್ನು ಆಯ್ಕೆ ಮಾಡಿದ್ದಾರೆ. ಅಂಥವರು ಒಂದು ಹಳ್ಳಿಯಲ್ಲಿ ಒಂದು ಪಟ್ಟಣದಲ್ಲಿ 5 ಗುಂಟೆ ಜಾಗ ಬೇಕು, ಒಂದು ಗುಂಟೆ ಜಾಗ ಬೇಕು ಅಲ್ಲಿ ನಾನೊಂದು ಸಣ್ಣ ಫ್ಲೋರಮಿಲ್ ಹಾಕುತ್ತೇನೆ, ಒಂದು ಸಣ್ಣ ಅಂಗಡಿಯನ್ನು ಹಾಕುತ್ತೇನೆ ಅಂದರೆ ಅದನ್ನು ಕೊಡುವಂಥ ಅಧಿಕಾರವು ತಹಶೀಲ್ದಾರರಿಗೆ ಇದೆಯೇ? ಇಲ್ಲ. ಇವೊತ್ತೇ ಆ ಅಧಿಕಾರವನ್ನು ಅವರಿಗೆ ಕೊಡಿ. ಅವರಿಗೆ ಕೊಟ್ಟುಬಿಟ್ಟರೆ ಎಲ್ಲಾ ಹೋಗಿಬಿಡುತ್ತದೆ ಎಂಬ ಭ್ರಮೆಯೇನಾದರೂ ಇದ್ದರೆ ಅದನ್ನು ಬಿಟ್ಟುಬಿಡಿ. ಒಂದು ವೇಳೆ ಅವರಲ್ಲಿ ಲ್ಯಾಂಡ್ ಇದ್ದರೆ ಕೊಡಲಿ, ಇಲ್ಲವಾದಲ್ಲಿ ಕೊಂಡು ಕೊಡಲಿ. ನಮ್ಮ ಉದಾರೀಕರಣ ನೀತಿಯಿಂದಾಗಿ ನಮಗೆ 24 ಸಾವಿರ ಕೋಟಿ ರೂ.ಗಳು ಬಂದಿವೆ ಎಂದು ಆಯವ್ಯಯದಲ್ಲಿ ಹೇಳಿಕೊಂಡಿದ್ದಾರೆ. ಅದರ ಮೂಲಕ 34 ಸಾವಿರಗಳಷ್ಟು ಉದ್ಯೋಗ ಸೃಷ್ಟಿ ಎಂತಲೂ ಹೇಳಿಕೊಂಡಿದ್ದಾರೆ. ಹಾಗಾದರೆ ಒಬ್ಬರಿಗೆ ಎಷ್ಟು ಕೋಟಿ ಬಂತು ಅಧ್ಯಕ್ಷರೆ? 24 ಸಾವಿರ ಕೋಟಿ. ರೂ.ಗಳ ಉದ್ದಿಮೆಗಳ ಇವರು ಮಂಜೂರಾತಿಯನ್ನು ನೀಡಿದ್ದಾರೆ. ಅದರ ಮೂಲಕ 34 ಸಾವಿರ ಉದ್ಯೋಗಸೃಷ್ಟಿ ಅಂದರೆ ಒಬ್ಬನಿಗೆ ಒಂದು ಕೋಟಿ ರೂ.ಗಳಿಗೆ ಒಂದು ಉದ್ಯೋಗವಾದ ಹಾಗೆ ಆಯಿತು. ಹಾಗಾದರೆ ನಮ್ಮ ರಾಜ್ಯದಲ್ಲಿರತಕ್ಕಂತ ನಿರುದ್ಯೋಗಿಗಳ ಸಂಖ್ಯೆ ಎಷ್ಟಿದೆ? ನಮ್ಮಲ್ಲಿ ಸುಮಾರು 3 ಲಕ್ಷಗಳಷ್ಟು ಅಂಥವರಿದ್ದಾರೆ. ಪಧವೀಧರರು ಒಂದು ಲಕ್ಷದಷ್ಟು ಇದ್ದಾರೆ. ಎರಡು ಲಕ್ಷಗಳಷ್ಟು ಎಸ್‌ಎಸ್‌ಎಲ್‌ಸಿ ಪಾಸ್ ಆದವರು ಇದ್ದಾರೆ.

ಹಾಗೆ ಸುಮಾರು 3-4 ಲಕ್ಷಗಳಷ್ಟು ವಿದ್ಯಾವಂತ ನಿರುದ್ಯೋಗಿಗಳು ಉದ್ಯೋಗಕ್ಕಾಗಿ ಕಾಯುತ್ತಾ ಇದ್ದಾರೆ. ಆದ್ದರಿಂದ ಇದರ ಹತ್ತರೆಷ್ಟು ಉದಾರೀಕರಣ ಬಂದರೂ ಕೂಡ ಇಷ್ಟು ಜನರಿಗೆ ಉದ್ಯೋಗ

ಕೊಡಲು ಸಾಧ್ಯವಿಲ್ಲ. ಅದನ್ನು ಬಿಟ್ಟು ಸಣ್ಣ ಕೈಗಾರಿಕೆ, ಸಣ್ಣ ಬಂಡವಾಳಿಗಳ ಮೂಲಕ ಹೆಚ್ಚು ಉದ್ಯೋಗವನ್ನು ಸೃಷ್ಟಿಸುವ ನೀತಿಯನ್ನು ನಾವು ಕಂಡುಹಿಡಿಯಲೇ ಬೇಕು. ನೀವು ಒಂದು ಯೋಜನಾ ಪುಸ್ತಕವನ್ನು ಮಾಡಿದ್ದೀರಿ. ನಾನೂ ಕೂಡ ಮಾಡಿದ್ದೆ ಅದನ್ನು ಓದುವವರೇ ಇರಲಿಲ್ಲ. ಇವೊತ್ತು ಸಣ್ಣ ಉದ್ಯೋಗವನ್ನು ಮಾಡುತ್ತೇನೆಂದು ಯಾರಾದರೂ ಬಂದರೆ ಒಂದಿಷ್ಟು ಜಾಗವನ್ನು ಕೊಡಿ ಎಂದು ಬಂದವರ ನೀವು ಕೊಡದಿದ್ದರೆ ಅವನು ಬೀದಿಯಲ್ಲಿ ಮಾಡಲು ಆಗುತ್ತದೆಯೇ? ಇಂಥ ಪರಿಸ್ಥಿತಿಯಲ್ಲಿ ಹತ್ತಡಿ ಜಾಗವನ್ನು ಕೊಡತಕ್ಕಂಥ ಅಧಿಕಾರವನ್ನು ತಹಶೀಲ್ದಾರರಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೀರೋ? ಇವೊತ್ತಾದರೂ ಅದನ್ನು ಮಾಡಿ. ನಮ್ಮ ಯುವಕರು ಉದ್ಯೋಗ ಮಾಡಲು ಮುಂದೆ ಬಂದರೆ ಅವರಿಗೆ ಜಾಗ ಬೇಕಾದರೆ ಆ ಜಾಗವನ್ನು ಪುರಸಭೆಯವರು ಕೊಡಲಿ. ಪುರಸಭೆಯನ್ನು ಜಾಗವಿದ್ದು ಅದನ್ನು ಬಡವರಿಗೆ ಕೊಡುವಂಥ ಅಗತ್ಯ ಇದ್ದರೆ ಸದರಿ ಪುರಸಭೆಯವರು ಕೊಡುವಂಥ ಅಧಿಕಾರವಿರಲಿ. ಆಗ ನಿಮ್ಮ ಎಲ್ಲಾ ಕಾರ್ಯಕ್ರಮಗಳು ಸರಿಯಾಗಿ ನಡೆಯುತ್ತವೆ. ಈಗ ಇರುವ ಸ್ಥಿತಿಯಲ್ಲಿ ಮುಖ್ಯಮಂತ್ರಿಯವರಿಗೆ ಬಡವರು ನಿವೇಶನಕ್ಕಾಗಿ ಮನವಿಕೊಟ್ಟರೂ ಕೂಡ ಅದು ಸಿಗುವುದಿಲ್ಲವೆಂದರೆ ಇದರಿಂದ ನಾವೆಲ್ಲರೂ ನಾಚಿಕೆ ಪಡುವಂತಾಗುವುದಿಲ್ಲವೆ? ಈ ಶಾಸ್ತ್ರ, ಈ ಕಾನೂನು ಇಟ್ಟುಕೊಂಡು ಎಷ್ಟು ದಿವಸಗಳನ್ನು ಹೇಳುತ್ತಾ ಹೋಗುತ್ತೀರಿ? ಆದ್ದರಿಂದ ದಯಮಾಡಿ ಇದಕ್ಕೆ ಒಂದು ಹೊಸ ಆಯಾಮವನ್ನು ಕೊಡತಕ್ಕಂಥ ಕೆಲಸವನ್ನು ಮಾಡಿ. ಅದನ್ನು ಮಾಡಿದರ ಮುಖ್ಯಮಂತ್ರಿಯವರು ಇಡಿ ರಾಜ್ಯದಲ್ಲಿ ಜನಸಂಪರ್ಕ ಸಭೆಯನ್ನು ಮಾಡಿ ಕಣ್ಣೀರು ಸುರಿಸಿ ಬರಬೇಕಾದೀತೇ ವಿನಹ ಬೇರೇನೂ ಆಗುವುದಿಲ್ಲ. ನಮ್ಮ ಪತ್ರಿಕೆಯವರು ಈ ಬಗ್ಗೆ ಒಂದು ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಎಲ್ಲಾ ಜಿಲ್ಲೆಗಳಲ್ಲಿನ ಈ ಕುರಿತಾದ ವಿಶ್ಲೇಷಣೆಯನ್ನು ವರದಿ ಮಾಡಿದರು. ಇದರಲ್ಲಿ ಒಟ್ಟಾರೆ ಸಾರಾಂಶ ಏನೂ ಇಲ್ಲ ಎಂಬುದು ವ್ಯಕ್ತವಾಯಿತು. ಏಕೆ ಇಲ್ಲ ಅಂದರೆ ನಾನು ಮೊದಲೇ ಹೇಳಿದ ಕಾರಣಗಳಿಗಾಗಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಜನರಿಂದ ದೂರ ಇದ್ದರೂ ಎಂಬ ಕಾರಣದಿಂದ ಅವರ ಸಂಪರ್ಕ ಮಾಡಲು ಈ ಸಭೆಯನ್ನು ಮಾಡಿದರು.

ಶ್ರೀ ಕಾಗೋಡು ತಿಮ್ಮಪ್ಪ : ಈ ಎಲ್ಲಾ ಹಿನ್ನೆಲೆಯಲ್ಲಿ ಇದನ್ನು ಬದಲಾವಣೆ ಮಾಡತಕ್ಕಂಥ ಅನಿವಾರ್ಯತೆಯು ಇದೆ. ದಯವಿಟ್ಟು ಕುಳಿತುಕೊಂಡು ಈ ಬಗ್ಗೆ ಆಲೋಚನೆ ಮಾಡಿ. ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ಅವರು ಮಾತನಾಡುವಾಗ ಇವರು ಅವರ ಮೇಲೆ ಬೀಳುವುದಕ್ಕೆ ಶುರು ಮಾಡುತ್ತಾರೆ. ಹಾಗೆ ಮಾಡುವುದಕ್ಕಾಗುವುದಿಲ್ಲ, ಅವರು ಹೇಳಿದ್ದನ್ನು ಕೇಳಬೇಕಾಗುತ್ತದೆ. ವಿರೋಧಪಕ್ಷದವರ ವಿಚಾರಗಳು ಕೂಡಬಹುಷ್ಟು ಮುಖ್ಯವಾದವುಗಳು. ಎಲ್ಲರೂ ಹೇಳಿದ್ದನ್ನು ಕೇಳಬೇಕಾಗುತ್ತದೆ. ಮೂಲಭೂತವಾಗಿರತಕ್ಕಂಥ ಸಮಸ್ಯೆಗಳನ್ನು ನಾವು ಬಗೆಹರಿಸದೇ ಹೋದರೆ ನಾವು ಕೊಟ್ಟಂಥ ಮಾತನ್ನು ಉಳಿಸಿಕೊಳ್ಳುವುದಕ್ಕಾಗುವುದಿಲ್ಲ. ವಿಶೇಷವಾಗಿ ತಾವು ಹಿಂದುಳಿದ ವರ್ಗಕ್ಕೆ ಸೇರಿದವರು. ನಿಮಗೆ ಹಣಕಾಸಿನ ಇಲಾಖೆ ಸಿಕ್ಕಿದ್ದು ನಾನು ತುಂಬ ಖುಷಿ ಪಟ್ಟೆ. ಒಬ್ಬರಾದರೂ ಒಳ್ಳೆಯ ಕೆಲಸ ಮಾಡಲಿ ಅಂತ. ನಮ್ಮ ಜಿಗಜಿಣಗಿಯವರು ಹೋದರು, ಅವರು

ದೊಡ್ಡ ಕಾರ್ಯಕ್ರಮ ಹಾಕಿಕೊಂಡಿದ್ದರು, ಒಳ್ಳೆಯದು ಕುಂಟರು ಕುರುಡರಿಗೆಲ್ಲ ಒಂದು ಗುರುತಿನ ಚೀಟಿ ಕೊಡಬೇಕೆಂದು ಆಜ್ಞೆ ಮಾಡಿ ಪ್ರಿಂಟಗೆ ಕೋಟಿದ್ದಾರಲ್ಲ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪ್ರತಿ ಜಿಲ್ಲೆಯಲ್ಲಿ ಒಂದು ಕಮಿಟಿ ಮಾಡಿ, ಈಗ್ಗೆ 1 ವರ್ಷ 4 ತಿಂಗಳಾದರೂ ಕೂಡ ಕುಂಟರು ಕುರುಡರಿಗೆ ಅಂಗವಿಕಲರಿಗೆ ಒಂದು ಗುರುತಿನ ಚೀಟಿ ಕೊಡುವಷ್ಟು ಕೆಲಸವಾಗಲಿಲ್ಲ ಸ್ವಾಮಿ? ಹಣ ಇತ್ತು ಮಂಜೂರಾತಿ ಕೊಟ್ಟಿದ್ದಿರಿ, ಪ್ರಿಂಟಗೆ ಕೊಟ್ಟಿದ್ದಿರಿ. ಗುರುತಿನ ಚೀಟಿ ಕೊಟ್ಟರೆ ಪ್ರತಿ ಸಾರಿ ಅವರು ಹೋಗಿ ತರಬೇಕಾದ ಅಗತ್ಯವಿಲ್ಲ. ತಮಿಳುನಾಡಿನಲ್ಲಿ ಮಾಡಿದ್ದನ್ನು ನೋಡಿ ನಾವೂ ಮಾಡಿದ್ದೆವು. ಇವತ್ತಿನವರೆಗೂ ಅದು ಕೊಡುವುದಕ್ಕೆ ನಿಮ್ಮಿಂದ ಆಗಲಿಲ್ಲ. ಇದಕ್ಕೆ ತಾವೇನೂ ಹೇಳಿದಿರಿ ಸಮೀಕ್ಷೆ ಮಾಡಬೇಕು ಅಂತ, ನಾವೇ ತೀರ್ಮಾನ ಮಾಡಿದ್ದೆವಲ್ಲ ಸಮೀಕ್ಷೆ ಮಾಡಬೇಕೆಂದು ನಮ್ಮ ವಿಶೇಷ ಘಟಕ ಯೋಜನೆಯಿಂದ ಅದಕ್ಕಾಗಿ 5 ಕೋಟಿ ರೂ ಕೊಟ್ಟೆವು. ಏಕೆಂದರೆ ನಮಗೆ ಕನಸರ್ನ ಇತ್ತು. 93-94ರಲ್ಲಿ ಪ್ರತಿ ಇಲಾಖೆಯಿಂದ ಶೇಕಡ 23 ರಷ್ಟು ಹಣ ಸಂಗ್ರಹ ಮಾಡಿ ವಿಶೇಷ ಘಟಕ ಯೋಜನೆಗೆ ಕೇವಲ 40 ಕೋಟಿ ಸಂಗ್ರಹ ಮಾಡಿದ್ದೆವು. ನಾನು ಇಲಾಖೆಯಲ್ಲಿ ವಹಿಸಿಕೊಂಡಾಗ, 94-95ನೇ ಸಾಲಿಗಾಗಿ ಎಲ್ಲಾ ಇಲಾಖೆಗಳಿಂದ ವರದಿ ತರಿಸಿಕೊಂಡು ಅವರ ಹತ್ತಿರ ಚರ್ಚೆ ಜಗಳ ಮಾಡಿಕೊಂಡು ಹಣ ಸಂಗ್ರಹಣೆ ಮಾಡಿ ಅದರಿಂದ 25 ಸಾವಿರ ಮನೆ ಕಟ್ಟುವುದು, 79 ವಿದ್ಯಾರ್ಥಿನಿಲಯಗಳನ್ನು ಪಟ್ಟಿಮಾಡಿ ಅದಕ್ಕೆ ಆಗಲೇ ಕೇಂದ್ರಸರ್ಕಾರದವರು 10 ಕೋಟಿ ಕೊಡುತ್ತೇವೆಂದು ಅದೇ ಪಟ್ಟಿಯನ್ನೇ ನೀವು ಈಗ ಹೇಳುತ್ತಿರುವುದು, ಅದಕ್ಕೆ ಮಂಜೂರಾತಿಯನ್ನು ಕೂಡ ಕೊಟ್ಟಿದ್ದರು. ಆಮೇಲೆ ಪರಿಶಿಷ್ಟವರ್ಗದವರಿಗೆ 4 ಕೋಟಿ ಸಂಗ್ರಹ ಮಾಡಿ ಅವರಿಗೆ ಕೆಲವು ಕೆಲವು ಕಾರ್ಯಕ್ರಮಗಳನ್ನು ರೂಪಿಸಿದ್ದೆ. 95-96ನೇ ಸಾಲಿಗೆ ಎಷ್ಟು ಹಣ ಸಂಗ್ರಹಣೆ ಮಾಡಿದಿರಿ? ಬರೀ 40 ಕೋಟಿ, ಹೋದಸಾರಿಗಿಂತ 10 ಕೋಟಿ ಕಡಿಮೆ ಮಾಡಿದ್ದೀರಿ ನೀವು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಗಂಗಾಕಲ್ಯಾಣವನ್ನು ಇದರಲ್ಲಿ ಸೇರಿಸಬೇಡಿ. ಅದು ನೀರಾವರಿ ಯೋಜನೆ. ಯಾವುದೇ ನೀರಾವರಿ ಪ್ರಾಜೆಕ್ಟ್ ಪರಿಶಿಷ್ಟ ಜಾತಿಗಾಗಿ ಮಾಡುತ್ತಾರೆಯೇ? ಯಾವುದೇ ಕಿರುನೀರಾವರಿ ಯೋಜನೆ ಮಾಡುತ್ತಾರೆಯೇ? ಗಂಗಾಕಲ್ಯಾಣ ಕೂಡ ಒಂದು ನೀರಾವರಿ ಯೋಜನೆ.

ಶ್ರೀ ಸಿದ್ದರಾಮಯ್ಯ : ಯಾವಹಣವನ್ನು ಪೂಲ್ ಮಾಡುತ್ತಿದ್ದೆವೋ ಅದೇ ಹಣದಿಂದ ಗಂಗಾಕಲ್ಯಾಣ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಇದು ಪರಿಶಿಷ್ಟಜಾತಿವರ್ಗದವರಿಗೆ ನೀರಾವರಿ ಸೌಕರ್ಯ ಒದಗಿಸಿಕೊಡುವ ಕಾರ್ಯಕ್ರಮ.

ಶ್ರೀ ಕಾಗೋಡು ತಿಮ್ಮಪ್ಪ : ಈಗ ಆನ್ಯೂಯಲ್ ಪ್ಲಾನ್ 4 ಸಾವಿರ ಕೋಟಿಗೆ ಮಾಡಿದ್ದೀರಿ. ಅದರ ಪ್ರಕಾರ 25 ಪರ್ಸೆಂಟೆಂದರೆ ಎಷ್ಟು ನೀವು ಕೊಡಬೇಕು? 400 ಕೋಟಿ ಬರಲೇಬೇಕು. ಒಟ್ಟಾರೆ 10 ಸಾವಿರ ಕೋಟಿ ನಾವು ಖರ್ಚುಮಾಡುತ್ತೇವೆ. ಕೆಲವು ಭಾಗ ಕಳೆದರೂ ಕನಿಷ್ಠ ಎಂದರೆ 7 ರಿಂದ 8 ಸಾವಿರ ಕೋಟಿ, 8 ಸಾವಿರ ಕೋಟಿ ಅಂದರೆ 23 ಪರ್ಸೆಂಟನಂತೆ, ಕನಿಷ್ಟ 500 ಕೋಟಿಯಷ್ಟು

ಕ್ರೋಢಿಕರಣ ಮಾಡುವ ಪಟ್ಟಿಗೆ ಬರಬೇಕು. ಆ ಹಣ ವರ್ಷವರ್ಷ ಜಾಸ್ತಿ ಮಾಡಬೇಕು. 40 ರಿಂದ 50ಕ್ಕೆ ಹೋದೆವು, 50 ರಿಂದ 70ಕ್ಕೆ ಹೋಗಬೇಕು, 70 ರಿಂದ 100ಕ್ಕೆ ಹೋಗಬೇಕು. ಜಿಲ್ಲಾಮಟ್ಟದ ಹಣವನ್ನು ನಾವು ಕ್ರೋಢೀಕರಣ ಮಾಡುತ್ತಿಲ್ಲ. ಪಂಚಾಯಿತಿ ಮಟ್ಟದ 18 ಪರ್ಸೆಂಟ್ ಹಣವನ್ನು ಸಂಗ್ರಹಣ ಮಾಡುತ್ತಿಲ್ಲ. ಇದು ಬಿಡಿಬಿಡಿಯಾಗಿ ಸಣ್ಣಪುಟ್ಟ ಕೆಲಸಕ್ಕೆ ಹೋಗಿ ಆ ಜನರ ಜೀವನದಲ್ಲಿ ಯಾವ ಮೂಲಭೂತ ಬದಲಾವಣೆ ಆಗುವುದಿಲ್ಲ. ಈಗ ಗಂಗಾಕಲ್ಯಾಣ ಯೋಜನೆ ಬಹಳ ಒಳ್ಳೆಯದು ಅದನ್ನೇ ನಾವು ಬಹಳ ಚೆನ್ನಾಗಿ ಮಾಡಬೇಕಾದ ಕೆಲಸ ಏಕೆಂದರೆ ಹೆಚ್ಚು ಉದ್ಯೋಗ ಸೃಷ್ಟಿಮಾಡುವಂತಹ ಹೆಚ್ಚು ಲಾಭ ತರುವಂತಹ ಕಾಮಗಾರಿಗಳನ್ನೇ ಮಾಡಬೇಕು. ಇವತ್ತು ಕೋಲಾರದಂಥ ಜಿಲ್ಲೆಯಲ್ಲಿ ಅರ್ಧ ಎಕರೆ ಇದ್ದರೆ ಒಂದು ಬೋರ್‌ವೆಲ್ ಹಾಕಿಕೊಟ್ಟರೆ ರೇಷ್ಮೆ ಬೆಳೆಯಿಂದ ಜೀವನ ಮಾಡುತ್ತಿರುವುದನ್ನು ಹೊಸ ಭೂಮಿ ಕೊಡುವುದಕ್ಕೆ ಭೂಮಿ ಎಲ್ಲಿದೆ ನಮಗೆ? ಭೂಮಿ ಹೊಂದಿರುವವರು ಅದರಿಂದ ಸಂಪೂರ್ಣ ಉತ್ಪಾದನೆ ಮಾಡಿದರೆ ಹೆಚ್ಚು ಲಾಭ ಬರುತ್ತದೆ. ಅದಕ್ಕಾಗಿ ಎಸಸಿ/ ಎಸ್.ಟಿ ನಿಗಮವಿದೆಯಲ್ಲ ಅದರಲ್ಲಿ ಫಲಾನುಭವಿಗಳಿಗೆ ನಾವು ಕೊಡುವ 60 ಪರ್ಸೆಂಟ್ ಹಣದ ಜೊತೆಗೆ ಉಳಿದ 40 ಪರ್ಸೆಂಟ್ ಹಣಕ್ಕೆ ಅವರು ಬ್ಯಾಂಕಿಗೆ ಹೋಗಬೇಕಾಗಿತ್ತು. ಅದನ್ನು ಬ್ಯಾಂಕಿನಿಂದ ನಿಗಮವೇ ಪಡೆದು ನೇರವಾಗಿ ಸಬ್ಸಿಡಿ ಮತ್ತು ಸಾಲವೆಂದು ಒಂದೇ ಸಂಸ್ಥೆಯಿಂದ ಕೊಡುವ ಕೆಲಸ ಮಾಡಬೇಕು. ಆಂಧ್ರಪ್ರದೇಶದಲ್ಲಿ ಈ ಯೋಜನೆ ಜಾರಿಯಲ್ಲಿದೆ. ಆ ನಿಗಮದಿಂದ ಪ್ರತಿವರ್ಷ 200-300 ಕೋಟಿ ಸಾಲ ತೆಗೆದುಕೊಂಡು ನಾವು ಸಂಗ್ರಹ ಮಾಡುವ ಜಿಲ್ಲಾಪಂಚಾಯಿತಿ ತಾಲ್ಲೂಕುಪಂಚಾಯಿತಿಗಳಲ್ಲಿ ಖರ್ಚು ಮಾಡುವ ಹಣವನ್ನು ಬೇರೆ ಇಲಾಖೆಯವರು ಸ್ಥಳೀಯವಾಗಿ ಖರ್ಚು ಮಾಡುವ ಎಲ್ಲ ಹಣವನ್ನೂ ನೀವು ಸಂಗ್ರಹಣೆ ಮಾಡಿ ಕನಿಷ್ಠ 500 ಕೋಟಿ ಆಗುವಂತಹ ಸ್ಥಿತಿಗೆ ತಂದು ತನ್ಮೂಲಕ ಹೊಸ ಕಾರ್ಯಕ್ರಮ ರೂಪಿಸಬೇಕು. ಅದಕ್ಕೇ ನಾನು ಅನೇಕ ಮಿತ್ರರಿಗೆ ಹೇಳುತ್ತೇನೆ, ನಮ್ಮ ಜನರ ಯಾವ ಬಗೆಯ ಕಾರ್ಯಕ್ರಮ ಹಾಕಿದರೆ ಆ ಜನರ ಉದ್ಧಾರ ಆಗಬಹುದೆಂಬ ಅಭಿಪ್ರಾಯವನ್ನು ಅವರಿಂದ ಸಂಗ್ರಹಣೆ ಮಾಡಿ ಕೊಡಿರಿ, ಇಲ್ಲದಿದ್ದರೆ ವ್ಯರ್ಥವಾಗುತ್ತದೆ. ಏಕೆಂದರೆ ಐಆರ್‌ಡಿಪಿಯಲ್ಲಿ ನಾವು ಕೊಡುತ್ತಿದ್ದೇವಲ್ಲ ಎಮ್ಮೆ ಎತ್ತು ಎಲ್ಲ ಕೊಟ್ಟು ಯಥಾಸ್ಥಿತಿಯಲ್ಲಿ ಉಳಿಯುವ ಪರಿಸ್ಥಿತಿ ಬಂದಿದೆಯಲ್ಲ ಅದೇ ಆಗುತ್ತದೆ. ಅದಕ್ಕಾಗಿಯೇ ಇವತ್ತು ಈ ವಿಶೇಷ ಘಟಕ ಯೋಜನೆಗೆ ಹೊಸ ರೂಪ ಕೊಡಬೇಕಾದಂತಹ ಅವಶ್ಯಕತೆ ಇದೆ. ಕನಿಷ್ಠವೆಂದರೆ ಈ ವರ್ಷ ಅದು 100 ಕೋಟಿಗೆ ಹೋಗಬೇಕಾಗಿತ್ತು. ನೀವು ಮಾಡಿರುವಂಥದು ಕಡಿಮೆಯಾಗಿದೆ. ಬರೀ ಮಾತಿನಿಂದ ನಾವು ಜನರನ್ನು ತೃಪ್ತಿಪಡಿಸುವುದಕ್ಕೆ ಆಗುವುದಿಲ್ಲ. ಇವತ್ತು ಹೊಸ ಆಯಾಮಗಳು ನಮ್ಮ ಕಣ್ಮುಂದೆ ಇವೆ. ಇದು ಅನಿವಾರ್ಯವಾಗಿ ಒಪ್ಪಿದಂತಹ ಕಾರ್ಯಕ್ರಮ. ಎಷ್ಟು ಜನ ಹರಿಜನರು ನೀರಾವರಿ ಇಲಾಖೆಯಿಂದ ನೀರುಸೌಕರ್ಯ ಪಡೆದಿದ್ದಾರೆ? ಅವರಿಗೆ ಆ ಪ್ರಯೋಜನವಾಗುತ್ತಿದೆ? ಇಬ್ಬರು ಹರಿಜನರಿದ್ದರೆ ಆ ಕೇರಿಗೆಲ್ಲ ವಿದ್ಯುತ್ ಕೊಡುತ್ತೇವೆ ಅಂತ ಹೇಳಿ ಬಾಕಿಯವರಿಗೆ ಕೊಟ್ಟು ಇವರಿಗೂ ಕೊಟ್ಟರೆ ಇನ್ನು ಇಷ್ಟು ದಿವಸ ಈ ರೀತಿ ಹೇಳಿ ಮೋಸ ಮಾಡುವುದಕ್ಕೆ ಆಗುತ್ತದೆ? ಇನ್ನು ಮಾಡಕೂಡದು. ಆದ್ದರಿಂದ ವಿಶೇಷ ಘಟಕ ಯೋಜನೆ ಇದೆಯಲ್ಲ ಇದಕ್ಕೆ ಹೊಸ ಆಯಾಮವನ್ನು ಕೊಟ್ಟು ನಾವು ಸಂಗ್ರಹ ಮಾಡುವ ಹಣ ತಾಲ್ಲೂಕು ಮಟ್ಟದಿಂದ ರಾಜ್ಯಮಟ್ಟದವರಗೆ ಎಲ್ಲ

ಇಲಾಖೆಯವರು ಖರ್ಚುಮಾಡುವ ಹಣವನ್ನು ಒಂದು ಕಡೆ ಕ್ರೋಢಿಕರಿಸಿ ಹೊಸ ಕಾರ್ಯಕ್ರಮ ರೂಪಿಸಿ ಜಾರಿಗೆ ಕೊಡುವಂತಹ ಕೆಲಸವನ್ನು ಇವತ್ತು ಮಾಡಬೇಕಾದಂತಹ ಅನಿವಾರ್ಯತೆ ಇದೆ. ಇಲ್ಲದೇಹೋದರೆ ಈ ವರ್ಗದ ಜನರನ್ನು ಇನ್ನು ನೂರು ವರ್ಷವಾದರೂ ಇದೇ ಸ್ಥಿತಿಗೆ ತಳ್ಳಿ ನಾವು ಸಂತೋಷಪಡಬೇಕಾದ ಪರಿಸ್ಥಿತಿ ಬಂದೀತು. ಆ ಪಾಪದ ಹೊರೆಯನ್ನು ನಾವು ಇನ್ನು ಹೊರಕೂಡದು. ಈಗಲಾದರೂ ನಾವು ಕಣ್ತೆರದು ಹೊಸ ಕಾರ್ಯಕ್ರಮ ರೂಪಿಸಿ ನಿಜವಾದ ಪ್ರತಿಫಲ ಪರಿಹಾರಗಳು ಆ ಜನರಿಗೆ ಹೋಗುವಂತಹ ಸ್ಥಿತಿಗೆ ತಂದಿಡಬೇಕು ಎಂದು ಹೇಳುತ್ತಾ, ಇನ್ನು ಹಿಂದುಳಿದವರ ಬಗ್ಗೆ ಸ್ವಾಮಿ ಸುಪ್ರೀಂಕೋರ್ಟಿನ ಆದೇಶದ ಪ್ರಕಾರ ಈ ರಾಜ್ಯದಲ್ಲಿ ಒಂದು ಶಾಶ್ವತ ಆಯೋಗವನ್ನು ರಚನೆ ಮಾಡಿದೆವು. ನೀವು ಬಂದಾದಮೇಲೆ ಅದನ್ನು ರದ್ದುಮಾಡಿದಿರಿ ತಾನೇ? ಅದು ರಾಷ್ಟ್ರೀಯ ನೀತಿಗನುಸಾರವಾಗಿ ನಾವೊಂದು ಕಾನೂನನ್ನೇ ತರಬೇಕೆಂದು ಮಾಡಿದ್ದೆವು ತಮಿಳುನಾಡಿನ ಮಾದರಿಯಲ್ಲಿ ಅದು ಕೊನೆಗಳಿಗೆವರೆಗೆ ಆಗಲಿಲ್ಲ, ಆದರೆ ವಿಧೇಯಕವೆಲ್ಲ ರೆಡಿ ಇತ್ತು. ನಮ್ಮ ಸಚಿವಸಂಪುಟದಲ್ಲಿ ಅದರ ತೀರ್ಮಾನವೂ ಆಗಿತ್ತು. ಪಾಸಾಗಿದೆ. ಆದರೆ ಇದ್ದ ಆಯೋಗವನ್ನು ರದ್ದುಪಡಿಸಬೇಕಾದ ಅಗತ್ಯ ಇರಲಿಲ್ಲ. ಅದರಲ್ಲೂ ನೀವೆಲ್ಲ ಇದ್ದು ಆ ಸಮಯದಲ್ಲಿ ನಾವೆಲ್ಲ ಕೊಟ್ಟ ಸಲಹೆಯನ್ನನುಸರಿಸಿಯೇ ಮೀಸಲಾತಿ ಹೆಚ್ಚುಕಡಿಮೆ ಮಾಡಿದ್ದು ಇವತ್ತು ಆಯೋಗ ಇದ್ದು ಮೇಲ್ವಿಚಾರಣೆ ನೋಡಬೇಕು. ಹಕ್ಕುಬಾಧ್ಯತೆ ರಕ್ಷಣೆ ಆಗಬೇಕು, ಕಾರ್ಯಕ್ರಮವನ್ನು ರೂಪಿಸಬೇಕು. ಇದು ಅತ್ಯಾವಶ್ಯಕವೆನ್ನುವ ಕಾರಣದಿಂದಲೇ ಆ ಆಯೋಗ ರಚಿಸಿ ಕೆಲಸ ಕೂಡ ಪ್ರಾರಂಭಿಸಿದ್ದೆವು. ನೀವು ಹೊಸ ಸರ್ಕಾರ ಬಂದಮೇಲೆ ರದ್ದುಮಾಡಬೇಕಾದ ಅಗತ್ಯ ಇರಲಿಲ್ಲ. ಇಲ್ಲ, ಬೇರೆಯವರು ಮಾಡಿದ್ದು ನಿಮಗೆ ಬೇಡ ಎಂದರೆ ನೀವು ಬೇರೆ ಮಾಡಬಹುದಿತ್ತಲ್ಲ. ಅದಕ್ಕೆ ಒಂದು ವರ್ಷ 4 ತಿಂಗಳು ಬೇಕೇ?

ಶ್ರೀ ಸಿದ್ದರಾಮಯ್ಯ : ಶಾಶ್ವತವಾದ ಹಿಂದುಳಿದ ಆಯೋಗ ಇರಬೇಕೆಂದು ಸುಪ್ರೀಂ ಕೋರ್ಟಿನವರು ಮಂಡಲ ಕಮಿಷನ್ ವರದಿ ಮೇಲೆ ತೀರ್ಪು ಕೊಟ್ಟಂತಹ ಸಂದರ್ಭದಲ್ಲಿ ಅದರ ಬಗ್ಗೆ ಸಲಹೆ ಕೊಟ್ಟಿದ್ದಾರೆ. ಅದರ ಬಗ್ಗೆ ಕೆಲವು ತಿದ್ದುಪಡಿಗಳಾಗಬೇಕಾಗಿತ್ತು. ಕಳೆದ ಅಧಿವೇಶನದಲ್ಲೇ ತಿದ್ದುಪಡಿಗಳಾಗಿವೆ. ಅಧ್ಯಕ್ಷರನ್ನು ನೇಮಕ ಮಾಡುತ್ತೇವೆ. ಮೀಸಲಾತಿಯಲ್ಲಿ ಬಹಳ ಸ್ಪಷ್ಟತೆ ಮತ್ತು ಸ್ಪಷ್ಟ ನಿಲುವನ್ನು ಇಟ್ಟುಕೊಂಡಿರತಕ್ಕಂತಹವರು ನಾವು. ಅದರ ಬಗ್ಗೆ ಯಾವುದೇ ಅನುಮಾನ ಇಟ್ಟುಕೊಳ್ಳಬೇಕಾದ ಅಗತ್ಯ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಅನುಮಾನ ಪಡುವುದಿಲ್ಲ. ನಾವು ಕೇಳತಕ್ಕಂಥಾದ್ದು ಒಂದು ಆಯೋಗವನ್ನು ಅಸ್ತಿತ್ವಕ್ಕೆ ತಂದು ಅದು ಕೆಲಸ ಮಾಡಲಿ ಎನ್ನುರ ಜವಾಬ್ದಾರಿಯನ್ನು ವಹಿಸಿಕೊಂಡು ಮೇಲೆ, ಕೆಲಸ ಮಾಡತಕ್ಕಂತಹ ಸಂದರ್ಭದಲ್ಲಿ ಹೊಸ ಸರಕಾರ ಬಂದ ಮೇಲೆ ಅದನ್ನು ಕಿತ್ತು ಹಾಕಿ ಹೊಸದನ್ನಾದರೂ ಆಯ್ಕೆ ಮಾಡಬೇಕಾಗಿತ್ತಲ್ಲವೇ? ನಾವೇನು ಅವರನ್ನೇ ಇಟ್ಟುಕೊಳ್ಳಿ ಎಂದು ಹೇಳಲಿಲ್ಲ. ಹೊಸದ್ದನ್ನು ಮಾಡಿದ್ದರೆ ಒಂದು ವರ್ಷ 4 ತಿಂಗಳಲ್ಲಿ ಕೆಲಸ ಮಾಡುತ್ತಿದ್ದರಲ್ಲವೇ? ಅತಿ ಶೀಘ್ರ ಅಂದರೆ ಒಂದು ತಿಂಗಳೇ ಇಲ್ಲ ಒಂದು ವರ್ಷವೇ?

ಶ್ರೀ ಸಿದ್ಧರಾಮಯ್ಯ : ಅವರ ವ್ಯಾಪ್ತಿ ಇರುವುದು ಹಿಂದುಳಿದ ಜಾತಿಯ ಪಟ್ಟಿಯಲ್ಲಿ ಯಾರು

ಸೇರಬೇಕು ಮತ್ತು ಯಾರನ್ನು ತೆಗೆಯಬೇಕು. ಎಲಿಮಿನೇಷನ್ ಮತ್ತು ಅಡಿಷನ್ ಆಗಬೇಕೆನ್ನುವುದು. ಈ ಕಾಲಕ್ಕೆ ಇರತಕ್ಕಂತಹ ಕಾರ್ಯ ವ್ಯಾಪ್ತಿ. ಆದ್ದರಿಂದ ಈ ಕೆಲಸವನ್ನು ಮಾಡಿಸಬೇಕಾಗುತ್ತದೆ. ಹೊಸದಾಗಿ ಯಾರು ಅಡಿಷನ್ ಆಗಬೇಕಾದವರು ಅಥವಾ ಪಟ್ಟಿಯಲ್ಲಿರತಕ್ಕಂತಹವರನ್ನು ತೆಗೆಯಬೇಕೆನ್ನುವ ಕೆಲಸ ಏನು ಇದೆ ಈ ಕೆಲಸ ಶಾಶ್ವತವಾಗಿ ನಡೆದುಕೊಂಡು ಹೋಗಬೇಕು. ಎಲ್ಲಾ ರಾಜ್ಯಗಳಲ್ಲಿ ಈ ಕೆಲಸ ನಡೆದುಕೊಂಡು ಹೋಗಬೇಕೆಂಬ ಉದ್ದೇಶದಿಂದ ಈ ತೀರ್ಪನ್ನು ಸುಪ್ರೀಂ ಕೋರ್ಟ ನ್ಯಾಯಾಧೀಶರುಗಳು ಕೊಟ್ಟಿರತಕ್ಕಂಥಾದ್ದು. ಆದ್ದರಿಂದ ಅದನ್ನು ಮಾಡುತ್ತೇವೆ. ಅದಕ್ಕೆ ಹಿಂದೆ ಬಿದ್ದಿದ್ದೇವೆಂಬ ಅಭಿಪ್ರಾಯ ಇದ್ದರೆ ಅದು ಸರಿಯಲ್ಲ. ಆದಷ್ಟು ಜಾಗ್ರತೆ ಅಧ್ಯಕ್ಷರನ್ನು ಸದಸ್ಯರನ್ನು ನೇಮಕ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಈಗ ಏನು ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಾವು ಸಮಾಜದ ದುರ್ಬಲ ವರ್ಗದವರ ಪರವಾಗಿದ್ದೇವೆ. ನಾವು ಉದಾರೀಕರಣದಿಂದ ಬಂಡವಾಳಶಾಹಿಗಳ ಪರವಾಗಿ ಇದ್ದಾರೆಂಬ ಅಭಿಪ್ರಾಯವನ್ನು ಮಂಡಿಸುತ್ತಿದ್ದಾರೆ ಅದನ್ನು ದೂರ ಮಾಡಲಿ. ನಾವು ನಿಜವಾಗಲೂ ದುರ್ಬಲರ ಪರವಾಗಿದ್ದೇವೆ ಎನ್ನುವುದನ್ನು ಎತ್ತಿ ಎತ್ತಿ ಹೇಳುವಂತಹ ಸನ್ನಿವೇಶದಲ್ಲಿ ನಾವು ಅವರ ಕರ್ಣ ಕುಂಡಲಕ್ಕೆ ಹೇಳಿದಂತಹ ಮಾತುಗಳು ಏನೆಂದರೆ,...

ಶ್ರೀ ಸಿದ್ದರಾಮಯ್ಯ : ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳಲ್ಲಿ ಪ್ರತ್ಯೇಕ ಮೀಸಲಾತಿಯನ್ನು ನಿಜವಾದ ಹಿಂದುಳಿದವರಿಗೆ ಮಾಡಿ 26.4 ಪರ್ಸೆಂಟ್ ಇಟ್ಟಿರತಕ್ಕಂಥಾದ್ದು ಈ ಸರಕಾರ, ನಮ್ಮ ಸರಕಾರವೆಂಬುವನ್ನು ತಾವು ಜ್ಞಾಪಕದಲ್ಲಿಡಬೇಕಾಗುತ್ತದೆ. ಈ ಕಾರಣದಿಂದಲೇ ಈ ಅಧ್ಯಕ್ಷರನ್ನು ಮತ್ತು ಉಪಾಧ್ಯಕ್ಷರನ್ನು ತಂದಿರುವುದು. ಗ್ರಾಮ ಪಂಚಾಯಿತಿ ಮಾಡಿದ್ದಕ್ಕೆ ರಿಸರ್ವೇಶನ್ ಗೊಂದಲ 10.000 ರೂಪಾಯಿ ತೆಗೆದುಕೊಂಡು ಎಲ್ಲ ಶ್ರೀಮಂತರಾಗಿದ್ದರು. ಅದನ್ನು ತೆಗೆದು ಹಾಕಿ ನಿಜವಾಗಿ ಹಿಂದುಳಿದವರಿಗೆ ಅಧಿಕಾರ ಕೊಡತಕ್ಕಂತಹ ಕೆಲಸ ಈ ಸರಕಾರದ ಹೊಣೆ ಅದನ್ನು ಜ್ಞಾಪಕದಲ್ಲಿ ಇಡಬೇಕಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್ : 1989 ರಲ್ಲಿ ಈ ತಿದ್ದುಪಡಿ ರಾಜ್ಯಸಭೆಯಲ್ಲಿ ಬಂದಾಗ ಒಂದು ಮತದಿಂದ ಸೋಲಿಸಿದವರು ಇವರ ಪಕ್ಷವೇ ಎನ್ನುವುದು ಮಾನ್ಯ ಸಿದ್ಧರಾಮಯ್ಯನವರಿಗೆ ಜ್ಞಾಪಕ ಇರಬಹುದು.

ಶ್ರೀ ಸಿದ್ಧರಾಮಯ್ಯ : ಮಂಡಲ ಕಮೀಷನ್ ವರದಿಯನ್ನು ಹತ್ತು ವರ್ಷ ಇಟ್ಟುಕೊಂಡಿದ್ದವರನ್ನು ನಿಮ್ಮ ಸರಕಾರದವರು ಅಲ್ಲವೇ?

ಶ್ರೀ ಕಾಗೋಡು ತಿಮ್ಮಪ್ಪ : ಮೀಸಲಾತಿಯನ್ನು ರಾಷ್ಟ್ರೀಯ ಮಟ್ಟದಲ್ಲಿ ಅಸ್ತಿತ್ವಕ್ಕೆ ತಂದಂತಹವರು ಮಾನ್ಯ ವಿ.ಪಿ.ಸಿಂಗ್‌ರವರು ಅದನ್ನು ನಾನು ಒಪ್ಪುತ್ತೇನೆ. ಆದರೆ ಅದನ್ನು ಕಾರ್ಯರೂಪಕ್ಕೆ ತಂದವರು....

ಶ್ರೀ ಸಿದ್ಧರಾಮಯ್ಯ : ಹತ್ತು ವರ್ಷ ಏಕೆ ಅದನ್ನು ಜಾರಿಗೆ ಕೊಡತಕ್ಕಂತಹ ಕೆಲಸ ಮಾಡಲಿಲ್ಲ? ಇಂದಿರಾ ಗಾಂಧಿಯವರು ಇದ್ದರು, ರಾಜೀವ ಗಾಂಧಿಯವರು ಇದ್ದರು ಏಕೆ ಅದನ್ನು ಜಾರಿಗೆ

ಕೊಡುವುದಕ್ಕೆ ಹೋಗಲಿಲ್ಲ? ಪಾರ್ಲಿಮೆಂಟಿನಲ್ಲಿ ಅದನ್ನು ಇಟ್ಟು ಚರ್ಚೆ ಮಾಡತಕ್ಕಂತಹ ಆ ದೊಡ್ಡತನವನ್ನೂ ಕೂಡ ಹಿಂದುಳಿದವರ ಬಗ್ಗೆ ಮಾಡುವುದಕ್ಕೆ ಹೋಗಲಿಲ್ಲ. ಮಾನ್ಯ ತಿಮ್ಮಪ್ಪನವರೇ ಏಕೆ ಮಾತನಾಡುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ : ಆಯಿತು. ಸುಪ್ರೀಂ ಕೋರ್ಟ್ ಮೀಸಲಾತಿ ಮಾಡಿದ್ದು ಸರಿ ಇದೆಯೇ ಎಂದು ಹೇಳಿ ಅವರೊಂದು ಕ್ರಿಮಿಲೇಯರ್ ಎನ್ನುವ ಸಬ್ಜೆಕ್ಟ್ ಮೇಲೆ ಅದರ ಪ್ರಕಾರ ಆಜ್ಞೆ ಹೊರಟು ಮೊದಲನೇ ಮೀಸಲಾತಿ ಪ್ರಕಾರ ನೇಮಕಾತಿಯಾದಂಥಾದ್ದು ಈಗಿರತಕ್ಕಂತಹ ಕೇಂದ್ರ ಸರಕಾರದಲ್ಲಿ. ನಾನು ನಿಮಗೆ ಕೊಡುವ ಕ್ರೆಡಿಟ್ ಅನ್ನು ಕೊಡುತ್ತಿದ್ದೇನೆ. ತಳ್ಳಿಹಾಕುವುದಿಲ್ಲ. I have got highest regard ಆದ್ದರಿಂದ ನಮಗೆ ಕೊಡುವಂಥ ಕ್ರೆಡಿಟ್ ಅನ್ನು ನೀವು ಕೊಡಬೇಕಲ್ಲ. ತಾವು ಹಣಕಾಸಿನ ಸಚಿವರಾಗಿ ಇದ್ದಂತಹ ಕಾಲವಲ್ಲಿ ವರ್ಗದ ಆಯೋಗ ಒಂದು ವರ್ಷ 4 ತಿಂಗಳಿಂದ ಕುಂಠಿತವಾಯಿತಲ್ಲ. ಇದಕ್ಕೆ ನನಗೆ ವ್ಯಸನವಾಗುತ್ತದೆ. ಬಹಳ ಬೇಗ ಅಂದರೆ ಇದರ ಅರ್ಥ ನಮ್ಮ ಡಿಕ್ಷನರಿಯಲ್ಲಿ ಇಲ್ಲ. ಬಹಳ ಬೇಗ ಎನ್ನುವುದಕ್ಕೆ ಖಚಿತವಾದ ಶಬ್ದ ಇಲ್ಲ ಆ ವ್ಯಾಖ್ಯೆ ಇಲ್ಲ ಎನ್ನುವ ಕಾರಣಕ್ಕಾಗಿ ತಾವು ಅದರಲ್ಲಿ ರಕ್ಷಣೆ ಪಡೆಯುವುದಕ್ಕೆ ಹೇಗಬಾರದು ಒಂದು ವಾರದಲ್ಲಿ ಮಾಡಬೇಕು. Otherwise, I have no option to charge Mr. Deve Gowda and call him as anti-backwardclass ಮಾಡಬೇಕು. ಒಂದು ದಿವಸ ಇಲ್ಲಿ ಹೇಳಿದರು. ಆ ಮಾತನ್ನು ಈಗಲೂ ಹೇಳುತ್ತೇನೆ. ಅವರು ಇದ್ದಾಗ ಮಾಡಬೇಕು ಇಲ್ಲವಾದಲ್ಲಿ ಅದರ ಅಪಖ್ಯಾತ ಅವರಿಗೇ ಬರುತ್ತದೆ. ಬೇರೆಯವರು ಮಾಡಿದರೆ ಅದು ಬೇರೆ. ಅವರು ಮಾಡುವುದನ್ನು ಜನರಿಗೆ ಇಲ್ಲಿ ಹೇಳಬೇಕಾಗುತ್ತದೆ. ಹಿಂದುಳಿದ ವರ್ಗದವರ ಅಭಿವೃದ್ಧಿ ನಿಗಮಕ್ಕೆ 14 ಕೋಟಿ ಸಾಕಾಗುವುದಿಲ್ಲ. ಅದಕ್ಕೆ ಕನಿಷ್ಠವಾದರೂ 50 ಕೋಟಿ ರೂಪಾಯಿ ಬಂಡವಾಳದ ಅವಶ್ಯಕತೆ ಇದೆ. ಮುಕ್ಕಾಲು ಭಾಗದ ಹಣವನ್ನು ಮಾರ್ಜಿನ್ ಮನಿ ಮಾತ್ರ ನಾವು ಅಲ್ಲಿಂದ ಕೊಡುತ್ತೇವೆ ಉಳಿದ ಎಲ್ಲ ಹಣವನ್ನು ಬ್ಯಾಂಕಿನವರು ಕೊಡಬೇಕಾಗಿದೆ. ಇವತ್ತು ಬಹಳ ಬ್ಯಾಂಕಿನವರು ಅವರಿಗೆ ನಿರಾಕರಣೆ ಮಾಡಿದ್ದಾರೆ ನಿಮಗೆ ಆಸ್ತಿ ಇಲ್ಲ, ನೀವು ಎಲ್ಲಿ ಕೆಲಸ ಮಾಡುತ್ತೀರಿ ನಿಮಗೆ ಎಲ್ಲಿ ಆಗುತ್ತೆ ಎಂಬ ಕುಂಟು ನೆಪವನ್ನು ಹೇಳಿಕೊಂಡು ಬಹಳ ಜನರಿಗೆ ಸಾಲ ಸಿಕ್ಕದೇ ಇರತಕ್ಕಂತಹ ಪರಿಸ್ಥಿತಿ ಇದೆ. ನಾನೂ ಆಲೋಚನೆ ಮಾಡಿ ಇದರ ಬಗ್ಗೆ ಚರ್ಚೆಗಳನ್ನು ಮಾಡಿ ನಾವೇ ಸ್ವತಃ ನಿಗಮದವರೇ ಒಟ್ಟಾರೆ ಒಂದು ವರ್ಷದಲ್ಲಿ 5 ಸಾವಿರ ಜನರಿಗೆ ಸಾಲ ಕೊಟ್ಟು ಸಹಾಯ ಮಾಡಬೇಕೆಂದು ಇದ್ದರೆ ಅವರಿಗೆ ಕೊಡುವಂತಹ ಮೊತ್ತವನ್ನು ನಾವು ಬ್ಯಾಂಕಿನಿಂದ ನೇರವಾಗಿ ನಿಗಮದವರೇ ಸಾಲ ಪಡೆದು ಅವರು ನಿಗಮದವರು ಮಾರ್ಜಿನ್ ಮನಿಯನ್ನು ಸಾಲವನ್ನು ನೇರವಾಗಿ ಕೊಡತಕ್ಕಂಥಾದ್ದು ಮತ್ತು ಸರಕಾರ ನಿಗಮಕ್ಕೆ ಗ್ಯಾರಂಟಿಯಾಗಿ ಇದ್ದು ನಾವು ತೆಗೆದುಕೊಳ್ಳುವ ಕೆಲಸ ಮಾಡಬೇಕಾಗುತ್ತದೆ. ಸರಕಾರದಲ್ಲಿ ಎಷ್ಟು ಜನರಿಗೆ ಉದ್ಯೋಗ ಕೊಡುವುದಕ್ಕೆ ಆಗುತ್ತದೆ ಕೊಡುವುದಕ್ಕಾಗುವುದಿಲ್ಲ. ಈ ಜನರನ್ನು ಸ್ವಯಂ ಉದ್ಯೋಗದಲ್ಲಿ ತೊಡಗಿಸಬೇಕಾಗುತ್ತದೆ. ಅದೂ ಅಲ್ಲದೆ ಅನೇಕ ಕ್ಷೇತ್ರದಲ್ಲಿ ಇವತ್ತು ಬರಬೇಕಾಗುತ್ತದೆ. ಬರಹಗಾರರು ಬರಬೇಕಾಗುತ್ತದೆ, ಪದ್ಯ ಬರೆಯುವವರು ಬರಬೇಕಾಗುತ್ತದೆ, ಜರ್ನಲಿಸ್ಟ ಬರಬೇಕಾಗುತ್ತದೆ, ವೋಟ್ ನೀಡುವವರು ಬರಬೇಕಾಗುತ್ತದೆ, ಅನೇಕ ಕ್ಷೇತ್ರವದಲ್ಲಿ ಇವತ್ತು ಹಿಂದುಳಿದ ವರ್ಗದ ಯುವಕರು ಎಂಟರಪ್ರಿನರ್ಸ್ ಹೊಸ

ಹೊಸ ಉದ್ಯೋಗದಲ್ಲಿ ಹೊಸ ಹೊಸ ದಂಧೆಯಲ್ಲಿ ತೊಡಗತಕ್ಕಂತಹ ಕಾಲವನ್ನು ನಾವು ನಿರ್ಮಾಣ ಮಾಡಬೇಕು. ಅದನ್ನು ನಿರ್ಮಾಣ ಮಾಡಬೇಕಾದರೆ ಇಂತಹ ಸಂಸ್ಥೆಗಳಿಗೆ ನಾವು ಹೆಚ್ಚು ಸಹಾಯ ಮಾಡಬೇಕಾಗುತ್ತದೆ. ಆದ್ದರಿಂದ ಇನ್ನೊಂದು ಸಲ ಇದರ ಬಗ್ಗೆ ತೀರ್ಮಾನ ಮಾಡಿ. ಪ್ರತಿ ತಾಲ್ಲೂಕಿನಲ್ಲಿ ಕನಿಷ್ಠ 500 ಮಕ್ಕಳಿಗಾದರೂ ಕೂಡ ಈ ಸಂಸ್ಥೆಯಿಂದ ಸಾಲ ಕೊಡಬೇಕೆಂಬ ಚೈತನ್ಯವಾದಂಥ ಕಾರ್ಯಕ್ರಮವನ್ನು ತಂದಿದ್ದವು ಇವತ್ತು ಅದು ಮೂಲೆಗುಂಪಾಗಿದೆ. ಬರೀ ಮಾತಿನಿಂದ ಜನರನ್ನು ಸಮಾಧಾನಪಡಿಸುವುದಕ್ಕಾಗುವುದಿಲ್ಲ. ಕೃತಿಯಲ್ಲಿ ನೀವು ಸಾಧನೆ ಮಾಡಿ ತೋರಿಸಬೇಕಾಗಿದೆ. ಹಿಂದುಳಿದ ವರ್ಗದ ಅಭಿವೃದ್ಧಿ ನಿಗಮಕ್ಕೆ ಕನಿಷ್ಠ ೫೦ ಕೋಟಿ ಬಂಡವಾಳವನ್ನು ತೊಡಗಿಸಿ ತನ್ಮೂಲಕ ಬ್ಯಾಂಕುಗಳ ಮುಖಾಂತರ ಸರಕಾರ ಹೊಸದಾಗಿ ನೀವೇ ತೆಗೆದುಕೊಂಡು ಸರಕಾರದ ಗ್ಯಾರಂಟಿ ಆಧಾರದ ಮೇಲೆ ಸಾಲ ತೆಗೆದುಕೊಂಡು ಯುವಕರಿಗೆ ಕೊಡಿ. ಸರಕಾರದ ನೀತಿಯಲ್ಲಿ ಬದಲಾವಣೆ ಮಾಡಬೇಕಾಗುತ್ತದೆ, ಇಲ್ಲದೇ ಹೋದರೆ ಬ್ಯಾಂಕಿಗೆ ಯುವಕರನ್ನು ಕಳಿಸಿ ಅಲ್ಲಿ ಸುಮ್ಮನೆ ಅಲೆದಾಡಿಸಿ, ಅವರಿಗೆ ಕೊನೆಗೆ ಸಾಲ ಸಿಕ್ಕದೆ ತೊಂದರೆಗೀಡಾಗುತ್ತಾರೆ. ಅನಿವಾರ್ಯವಾಗಿ ರಾಜ್ಯ ಸರಕಾರದ ಒಂದು ಕಾರ್ಯಕ್ರಮ ಟಾರ್ಗೆಟ್ ಓರಿಯೆಂಟೆಡ್ ಎಂದು ಇದೊಂದು ಆಗಿದೆ. ಅವನಿಗೆ 10 ಸಾವಿರ ಕೊಡುವಂತಹ ಸಂದರ್ಭದಲ್ಲಿ 1-2 ಸಾವಿರ ಕೊಡುತ್ತೇವೆ. ಅಂತೂ ಟಾರ್ಗೆಟ್ ಓರಿಯೆಂಟೆಡ್ ಈ ಮಾರ್ಚ್ ತಿಂಗಳ ಆಖೈರಲ್ಲಿ ಮಾಡಿದ್ದೇವೆಂದು ಹೇಳಿ ಪೂರ್ಣ ಮಾಡಿ. ಈ ಎಲ್ಲಾ ಕಾರ್ಯಕ್ರಮಗಳೂ ವಿಫಲವಾಗುವುದಕ್ಕೆ ಕಾರಣವಾಗಿವೆ. ಮಾನ್ಯ ಸಿದ್ಧರಾಮಯ್ಯನವರೇ ತಾವು ಹಣಕಾಸಿನ ಸಚಿವರಾಗಿದ್ದೀರಿ. ಪ್ರಧಾನ ಮಂತ್ರಿಗಳ ಜವಾಹರ ರೋಜಗಾರ ಯೋಜನೆ ಇವತ್ತು ಜಾರಿಗೆ ಬಂದಿದೆ. ಕಳೆದ 2 ವರ್ಷದಿಂದ ನಡೆಯುತ್ತಿದೆ, 3ನೇ ವರ್ಷ ನಡೆಯುತ್ತಿದೆ ಯಾವ ರೀತಿ ಇದು ನಡೆಯುತ್ತಿದೆ ನೋಡೋಣವೆಂದು ಮೊನ್ನೆ ತಾಲ್ಲೂಕಿನ ಒಂದು ಸೆಮಿನಾರ ಅನ್ನು ಕರೆದು ಕೇಳಿದರೆ ಟಾರ್ಗೆಟೆಡ ಓರಿಯೆಂಟ್ ಅವರು ನಿಗದಿ ಮಾಡಿದ್ದಾರೆ. ಫಿಸಿಕಲ್ ಟಾರ್ಗೆಟ್ ಮಾಡಿದ್ದಾರೆ. ಫೈನಾನಷಿಯಲ್ ಟಾರ್ಗೆಟಗೆ ರೀಚ್ ಆಗಬೇಕೆಂದು ಮಾಡಿದ್ದಾರೆ. 60-70 ಜನರಿಗೆ ಕೊಡಬೇಕು ಕೊಟ್ಟಿದ್ದಾರೆ, ಆದರೆ ಹಣ ಮಾತ್ರ ಕೇಳಬೇಡಿ. ಕೊಟ್ಟಾದ ಮೇಲೆ ಈ ಘಟಕಗಳು ಏನಾಗಿದ್ದಾವೆಂದು ನೋಡುವವರು ಯಾರೂ ಇಲ್ಲ. ಅವನನ್ನು ಕೇಳಿದರ ಅವನಿಗೇನು ತಲೆಯಲ್ಲಿರುತ್ತದೆ. ಅವನನ್ನು ಕೇಳಿದರೆ ಅವರು ರಾ ಹೆಡ್ ಅವನಿಗೇನೂ ಗೊತ್ತಿರುವುದಿಲ್ಲ.

5.00 ಪಿ.ಎಂ.

ಯಾವ ಕೈಗಾರಿಕೆ ಮಾಡಬೇಕು, ಯಾವ ವಸ್ತು ಮಾಡಿದರೆ ಮಾರಾಟವಾಗುತ್ತದೆ, ಮಾರ್ಕೆಟ್ ಇದೆಯೋ ಎಲ್ಲಿಗೆ ಹೋಗಬೇಕೆಂದು ಅವನಿಗ ಗೊತ್ತಿರುವುದೇ ಇಲ್ಲ. ಒಂದು ಅಪ್ಲಿಕೇಷನ್ ಕಳುಹಿಸುತ್ತಾರ. ಇಂಟರವ್ಯೂ ಮಾಡುತ್ತಾರೆ. ಕೋಳಿ ಸಾಕುತ್ತೇನೆ, ಹೋಟೆಲ್ ಇಡುತ್ತೇನೆ ಎಂದು ಹೇಳುತ್ತಾರೆ. ಹೋಟೆಲನ್ನೂ ಇಡುವುದಿಲ್ಲ. ಏನೂ ಇಲ್ಲ. ಸಾಲ ತೆಗೆದುಕೊಳ್ಳುತ್ತಾರೆ. ಇವತ್ತು ಅವನು ನೋಡಲಾರದಂಥ ಪರಿಸ್ಥಿತಿಗೆ ಬಂದಿದ್ದಾನೆ. ಜಿಲ್ಲಾಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಿ. ಇವತ್ತು ಈ ಯೋಜನೆ ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಅದು ವಿಫಲವಾಗುತ್ತಿದೆ. ಸ್ವಯಂ ಉದ್ಯೋಗಕ್ಕೆ ತರಬೇತಿಯನ್ನು ಕೊಟ್ಟು ಸಾಲವನ್ನು ಕೊಟ್ಟಂಥ ಅನೇಕ ಜನ ಯುವಕರು ಇವತ್ತು ಯಥಾವತ್ತಾಗಿ

ನಿರುದ್ಯೋಗಿಗಳಾಗಿಯೇ ಉಳಿದಿದ್ದಾರೆ. ಯಾವ ಕಾರ್ಯಕ್ರಮವೂ ಆಗಿಲ್ಲ ಯಾವ ಕೈಗಾರಿಕೆಗಳೂ ಬಂದಿಲ್ಲ. ಕಾರಣ ಅವರಿಗೆ ಇರುವ ವರ್ಕಿಂಗ್ ಕ್ಯಾಪಿಟಲ್ ಕೊರತೆ, ಹಾಗೂ ಮಾರುಕಟ್ಟೆಯ ಕೊರತೆಯಿಂದಾಗಿ ಅವರು ಇವತ್ತು ಯಶಸ್ವಿಯಾಗಲಿಲ್ಲ. ಇದೇ ಪರಿಸ್ಥಿತಿ ಬರುತ್ತದೆ. ಅದಕ್ಕೋಸ್ಕರ ಇವತ್ತು ತಾವು ದಯವಿಟ್ಟು ಅಂಥ ಕಾರ್ಯಕ್ರಮವನ್ನು ಪರಿಶೀಲನೆ ಮಾಡಿ ಆಗಿಂದಾಗ್ಗೆ ಆ ಜನರ ಏಳಿಗೆ ಆಗತಕ್ಕಂಥದ್ದರ ಬಗ್ಗೆ ವಿಶೇಷ ಆಸಕ್ತಿ ವಹಿಸತಕ್ಕಂಥ ಕೆಲಸ ಸರ್ಕಾರದಿಂದ ಆಗಬೇಕು. ಅದಕ್ಕೆ ತಾವು ವಿಶೇಷ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಒಂದೇ ಒಂದು ವಿಷಯವನ್ನು ಹೇಳಿ ನನ್ನ ಮಾತನ್ನು ಮುಗಿಸಿಬಿಡುತ್ತೇನೆ. ಏಕೆಂದರೆ ಜಾಲಪ್ಪನವರು ಇಲ್ಲೇ ಕುಳಿತಿದ್ದಾರೆ. ಅವರಿಗೆ ಒಂದು ಸರ್ಟಿಫಿಕೇಟ್ ಕೊಡಬೇಕು. ಏಕೆಂದರೆ ತಾವು ಅಧಿಕಾರಕ್ಕೆ ಬಂದಾದಮೇಲೆ ಬಗರಹುಕುಂ ಸಾಗುವಳಿಯಲ್ಲಿ ಎಷ್ಟು ಜನರಿಗೆ ಸಾಗುವಳಿ ಚೀಟಿಯನ್ನು ಕೊಟ್ಟಿದ್ದೀರಿ ಎಂದು ಹೇಳುತ್ತೀರೋ? ಈಗ ಪ್ರತಿ ತಾಲ್ಲೂಕಿನಲ್ಲಿ ಒಂದು ಸಮಿತಿಯನ್ನು ರಚನೆ ಮಾಡುವುದಕ್ಕೆ ಒಂದು ವರ್ಷ ಬೇಕೆ? ಏನಾಗಿದೆ? ನಿಮ್ಮವರನ್ನೇ ಹಾಕಿಕೊಳ್ಳಿ. ನಾವು ಇದ್ದಾಗ ನಾಲ್ಕುವರೆ ಲಕ್ಷ ಅರ್ಜಿಗಳನ್ನು ವಿಲೇವಾರಿ ಮಾಡಿದೆವು. ನಿಮ್ಮ ಜನರನ್ನೇ ಹಾಕಿಕೊಳ್ಳಿ. ಐದಾರು ಲಕ್ಷ ಅರ್ಜಿಗಳು ಬಂದಿದ್ದವೆ ಅವುಗಳು ಹಾಗೆಯೇ ಕೊಳೆಯುತ್ತಿವೆ. ಆ ಅರ್ಜಿಗಳು ಎಷ್ಟೋ ವರ್ಷಗಳಿಂದ ಹಾಗೆಯೇ ಉಳಿದಿವೆ. ತಾವು ಕೂಡ ಸಮಿತಿಗಳನ್ನು ರಚನೆ ಮಾಡಿ ಕೆಲಸ ಮಾಡುವುದಕ್ಕೆ ಹಚ್ಚಲಿಲ್ಲ ಎಂದು ಹೇಳಿದರೆ ಬಹಳಕಷ್ಟವಾಗುತ್ತದೆ. ನಾವು ನಿಮ್ಮನ್ನು ಯಾವ ಭಾಷೆಯಿಂದ ಸಂಬೋಧಿಸಬೇಕು ನೀವೇ ಹೇಳಿ. ಇವರಲ್ಲಿ ಸರ್ಕಾರ ವಿಫಲವಾಗಿದೆ ಎಂದು ಹೇಳಿದರೆ ನಿಮಗೆ ಕೋಪ ಬರುತ್ತದೆ. ನಾನ್ ಪರಫಾರ್ಮೆನ್ಸ್ ಗೌರ್ನಮೆಂಟ್ ಎಂದು ಹೇಳಿದರೆ ನಿಮಗೆ ಸಿಟ್ಟು ಬರುತ್ತದೆ.

ಶ್ರೀ ಸಿದ್ಧರಾಮಯ್ಯ : ತಾವು ವಿರೋಧ ಪಕ್ಷದಲ್ಲಿದ್ದಾಗ ಬಹಳ ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದೀರಿ. ತಾವೇ ಅಧಿಕಾರದಲ್ಲಿದ್ದಾಗ ಏತಕ್ಕೆ ಮಾಡಲಿಲ್ಲ? ತಾವು ಅಧಿಕಾರದಲ್ಲಿದ್ದಾಗ ಏನು ಹೇಳಲಿಲ್ಲ?

ಶ್ರೀ ಕಾಗೋಡು ತಿಮ್ಮಪ್ಪ : ನಾನು ಇದೇ ವಿಚಾರದಲ್ಲಿ ಹೇಳಿದ್ದೇನೆ. ಬಂಗಾರಪ್ಪನವರ ಕಾಲದಲ್ಲಿ ಕೂಡ ಇದೇ ವಿಷಯ ಬಂತು. 1991 ನೇ ಇಸವಿಯಲ್ಲಿ ಕಾನೂನಾಗಿ ತಂದರೂ ಕೂಡ ಒಂದೇ ಒಂದು ಕಡೆಯಲ್ಲಿ ಕೊಟ್ಟಿಲ್ಲ. ನೀವು ತಲೆಮೇಲೆ ಇದ್ದರೂ ಕೂಡ ಅದನ್ನು ಮಾಡುವುದಕ್ಕಾಗುವುದಿಲ್ಲ. ಹತ್ತು ವರ್ಷ ಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅರ್ಥ ಸಚಿವರು ಜೊತೆಗೇ ಇಲ್ಲದಿದ್ದರೂ ಕೂಡ ನಾಗೇಗೌಡರು ನಿಮ್ಮದೆಲ್ಲಕ್ಕೂ ಒಪ್ಪಿಗೆ ಕೊಡುತ್ತಿದ್ದಾರೆ. ತಲೆದೂಗುತ್ತಿದ್ದಾರೆ. ನಾನು ಮಾತನಾಡುವುದೆಲ್ಲಾ ಅವರೇ ಮಾತನಾಡುತ್ತಿದ್ದಾರಲ್ಲ. ಎಂದು ಆನಂದಪಡುತ್ತಿದ್ದಾರೆ. ತಾವು ಮುಂದುವರಿಸಿ.

ಶ್ರೀ ಎಸ್.ಆರ್. ಲಕ್ಷ್ಮಯ್ಯ : ಮಾನ್ಯ ಅಧ್ಯಕ್ಷರೇ, ನಜೀರಸಾಬ್ ಇದ್ದಂಥ ಕಾಲದಲ್ಲಿ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದರು. ಆ ಕಾಲದಲ್ಲಿ ಡ್ವಾಕ್ರಾ ಕಾರ್ಯಾಗಾರ ತಂದು ಅನೇಕ ಕಾರ್ಯಾಗಾರಗಳನ್ನು ತಂದು ಇಡೀ ರಾಜ್ಯಾದ್ಯಂತ ಕಟ್ಟಿಸಿದರು, ತೇಪೆ ಮಾಡುವುದು, ಅಥವಾ ಹಗ್ಗ

ಮಾಡುವುದು, ದೊಸ್ಸೆ ಮಾಡುವುದು, ರಗ್ಗು ಮಾಡುವುದು, ಕಂಬಳಿ ಮಾಡುವುದು. ಬಡವರ ಕೈಗೆ ಕೆಲಸ ಕೊಡಬೇಕೆಂದು. ಆಗ ನಮ್ಮ ಸರ್ಕಾರ ಹೋಯಿತು. 1990ಕ್ಕೆ ನೀವು ಬಂದಿರಿ. ಒಂದೇ ಒಂದು ಕಾರ್ಯಾಗಾರ ನಡೆಯಿತೇ? ಅದು ಬಡವರ ಕಾರ್ಯಕ್ರಮವಲ್ಲವೇ? ಏನು ಮಾಡಿದಿರಿ ಕಾರ್ಯಕ್ರಮ? ಎಲ್ಲಾ ಮುಗಿಸಿಬಿಟ್ಟಿರಿ.

ಶ್ರೀ ಕಾಗೋಡು ತಿಮ್ಮಪ್ಪ : ಡ್ವಾಕ್ರಾ ಇದೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ಕಾಗೋಡು ತಿಮ್ಮಪ್ಪನವರು ಆಡುತ್ತಿರುವ ಮಾತನ್ನು ಕೇಳಿ ನಾನು ಬಹಳ ತಲೆದೂಗುತ್ತಿದ್ದೇನೆ ಎಂದು ಹೇಳಿದರು. ನಿಜ, ತಲೆ ತೂಗುತ್ತಿದ್ದುದು ಏಕೆಂದು ಹೇಳಿದರೆ ಕಾಗೋಡು ಅವರ ಮಾತನ್ನು ಮೊಯಿಲಿಯವರು ಮತ್ತು ಬಂಗಾರಪ್ಪನವರು ಕೇಳದೇ ಅಧಿಕಾರ ಕಳೆದುಕೊಂಡಿದ್ದಕ್ಕೆ ಅವರು ಹೇಳಿದ್ದಕ್ಕೆ ತಲೆದೂಗಿದ್ದು ಅಷ್ಟೆ. ಇನ್ನಾವುದಕ್ಕೂ ಅಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಏಕೆಂದರೆ ಬಹಳ ಸಂಕಟಪಟ್ಟಿದ್ದೇನೆ. ಬಹಳ ನಿಷ್ಠುರ ಪಟ್ಟಿದ್ದೇನೆ. ಏಕೆಂದರೆ ಅಂಥ ಒಂದು ಕಾರ್ಯಕ್ರಮ ಎಷ್ಟು ವರ್ಷದಿಂದ ಬಗರಹುಕುಂ ಸಾಗುವಳಿಯನ್ನು ಮಂಜೂರಾತಿ ಮಾಡಬೇಕು ಎಂದು ಹೋರಾಟ ಮಾಡಿದ್ದೇವೆ. ಇವತ್ತು ಕಾನೂನನ್ನು ತಂದಿದ್ದೇವೆ. ಅದನ್ನು ಜಾರಿಗೆ ಕೊಟ್ಟಂಥ ಸಂದರ್ಭದಲ್ಲಿ ಹೊಸ ಸರ್ಕಾರ ಬಂದು ಆ ಕೆಲಸವನ್ನು ಮುಂದುವರಿಸಿದರೆ ಅವರಿಗ ಆ ಕೀರ್ತಿ ಬರುತ್ತಿತ್ತು. ಈ ಒಂದು ವರ್ಷದ ಅವಧಿಯಲ್ಲಿ ಒಂದು ಸಾಗುವಳಿ ಚೀಟಿಯನ್ನು ಕೊಟ್ಟಿದ್ದರೆ ಅವರಿಗ ಸಾಷ್ಟಾಂಗ ನಮಸ್ಕಾರ ಮಾಡುತ್ತಿದ್ದ.

ಶ್ರೀ ಆರ್.ಎಲ್. ಜಾಲಪ್ಪ : ಸಾಗುವಳಿ ಚೀಟಿಗಳನ್ನು ಕೊಡಬೇಕು. ಹಿಂದೆ ಆಗಿರುವುದೆಲ್ಲಾ ಕೊಟ್ಟುಬಿಡಿ ಎಂದು ಹೇಳಿದ್ದೇವೆ. 175 ರಲ್ಲಿ ಇನ್ನು 12 ಸಮಿತಿಗಳು ರಚನೆಯಾಗಬೇಕಾಗಿದೆ. 175 ಆಗಲೇ ಇಲ್ಲ. ಬರೀ 12. ಇನ್ನೆರಡು ಮೂರು ದಿವಸದಲ್ಲಿ ಅದನ್ನು ಮಾಡುತ್ತಿದ್ದೇವೆ. ನಿಜ, ನಿಧಾನವಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಈಗ ಲೋಕಸಭೆ ಚುನಾವಣೆ ಬರುತ್ತಿದೆ. ಅವರು ಚುನಾವಣೆ ಘೋಷಣೆ ಮಾಡಿದರೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಇವತ್ತು ಆ ಬಡವರಿಗೆ ಆ ಜಮೀನು ಸಿಗುತ್ತಿತ್ತಲ್ಲಾ ಅವರಿಗೆ ಅನ್ಯಾಯ ಮಾಡಿದ್ದೀರಲ್ಲ. ಇದಕ್ಕೆ ನಿಮಗೆ ಯಾವ ದಂಡವನ್ನು ಹಾಕಬೇಕಾಗುತ್ತದೆ? ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ, ಈಗಲಾದರೂ ಕೂಡ ಆ ಸಮಿತಿಗಳು ಕೆಲಸ ಪ್ರಾರಂಭ ಮಾಡಲಿ. ಬಡವರಿಗೆ ಸಾಗುವಳಿ ಚೀಟಿ ಕೊಡುವ ಕೆಲಸವನ್ನು ಶೀಘ್ರಗತಿಯಿಂದ ನಡೆಸಲಿ. ಆಗ ಈ ಕೆಲಸವಾಗುತ್ತದೆ. ಇಷ್ಟು ಮಾತನ್ನು ಈ ಸಂದರ್ಭದಲ್ಲಿ ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಡಾ|| ಎಂ. ಶಂಕರ್ ನಾಯಕ್ (ನೆಲಮಂಗಲ) : ಮಾನ್ಯ ಅಧ್ಯಕ್ಷರೇ, ಬಜೆಟ್ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದೀರಿ. ತುಂಬಾ ವಂದನೆಗಳು. ಈ ಬಜೆಟನ್ನು ಮೊನ್ನೆ ನಮ್ಮ

ವಿತ್ತಮಂತ್ರಿಗಳು ಮಂಡಿದ್ದಾರೆ, ಬಹಳ ಒಳ್ಳೆಯ ಬಜೆಟನ್ನು ಅವರು ಮಂಡಿಸಿದ್ದಾರೆ ಎಂದು ಹೇಳಿ ನನಗೆ ಅನ್ನಿಸಿತು. ಆ ದೃಷ್ಟಿಯಿಂದ ಬಜೆಟ್ ಮಂಡನೆಯಾದಾಗ ನಾವು ಕೆಲವು ರಿಯಾಯಿತಿಯನ್ನು ಕೊಡಬೇಕಾಗುತ್ತದೆ. ಕೆಲವರಿಗೆ ಟ್ಯಾಕ್ಸನ್ನು ಹಾಕಬೇಕಾಗುತ್ತದೆ. ಆದರೆ ನಾವು ಇಲ್ಲಿ ನೋಡಿರುವ ಬಜೆಟನಲ್ಲಿ ಟ್ಯಾಕ್ಸನ್ನು ಹಾಕಿರುವುದಕ್ಕಿಂತ ಹೆಚ್ಚಿಗೆ ರಿಯಾಯಿತಿಗಳನ್ನೇ ನಮ್ಮ ವಿತ್ತಮಂತ್ರಿಗಳು ಕೊಟ್ಟಿದ್ದಾರ. ಅದರಲ್ಲಿ ಕೆಲವು ವರ್ಗದ ಜನರಿಗೆ, ಕೆಲವು ಪದಾರ್ಥಗಳಿಗೆ ಟ್ಯಾಕ್ಸನ್ನು ಕೆಲವು ಸಂದರ್ಭದಲ್ಲಿ ಹಾಕಬೇಕಾಗುತ್ತದೆ. ಅದು ಹಾಕದಿದ್ದರೆ ಸರ್ಕಾರವನ್ನು ನಡೆಸುವುದು ಬಹಳ ಕಷ್ಟವಾಗಬಹುದು ಎಂದು ನಾನು ಅಭಿಪ್ರಾಯ ಪಡುತ್ತೇನೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಸುಮಾರು ಒಂದು ವರ್ಷ ನಾಲ್ಕು ತಿಂಗಳಾಯಿತು ಇವತ್ತಿಗೆ. ಕೆಲವು ರಂಗದಲ್ಲಿ ಬಹಳ ಒಳ್ಳೆಯ ಕೆಲಸ ಮಾಡಿದೆ ಎಂದು ಮಾನ್ಯ ವಿರೋಧ ಪಕ್ಷದ ಕೆಲವು ಸದಸ್ಯರು ಹೇಳಿದ್ದನ್ನು ಇಲ್ಲಿ ಜ್ಞಾಪಿಸುತ್ತಾ ಏನು ಸುಮಾರು ಒಂದು ವರ್ಷ ನಾಲ್ಕುತಿಂಗಳಲ್ಲಿ ನಮ್ಮ ಸಾರ್ವಜನಿಕರ ಕುಂದುಕೊರತೆಯನ್ನು ನಿವಾರಿಸಲಿಕ್ಕಾಗಿ ಮುಖ್ಯಮಂತ್ರಿಗಳು ಏನು ಜನತಾದರ್ಶನವನ್ನು ಮಾಡಿದ್ದಾರೆ, ಹಿಂದೆ ಅನೇಕ ಸರ್ಕಾರ, ಅನೇಕ ಮುಖ್ಯಮಂತ್ರಿಗಳು ಬಂದರೂ ಸಹಿತ ಜಿಲ್ಲಾಮಟ್ಟದಲ್ಲಿ ಮುಖ್ಯಮಂತ್ರಿಗಳು ಹೋಗಿ ಜನತಾದರ್ಶನ ಮಾಡತಕ್ಕಂಥದ್ದನ್ನು ನಾವು ಕೇಳಿಲ್ಲ. ಆದರೆ ಜನತಾದರ್ಶನ ಅದ ತಕ್ಷಣ ಎಲ್ಲಾ ಜನರ ಸಮಸ್ಯೆಗಳು ಪರಿಹಾರವಾಗುತ್ತದೆ, ಕೆಲಸ ಮಾಡುತ್ತದೆ ಎಂದು ನಮ್ಮ ಯಾರ ಭಾವನೆಯೂ ಇಲ್ಲ. ಆದರೆ ನಾವು ಜನತಾದರ್ಶನ ಮಾಡುವ ಸಂದರ್ಭದಲ್ಲಿ ನಾವು ಹಿಂದೆ ಹುಡುಗರು ಇದ್ದಾಗ ಕೇಳುತ್ತಿದ್ದೆವು. ತಮಿಳುನಾಡಿನ ಆಗಿನ ಮುಖ್ಯಮಂತ್ರಿಯಾಗಿದ್ದ ಮಾನ್ಯ ಕಾಮರಾಜನಾಡರವರು ಈ ಜನತಾ ದರ್ಶನವನ್ನು ಜಿಲ್ಲಾ ಮಟ್ಟದಲ್ಲಿ ಮಾಡುವಾಗ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳನ್ನು ಟೈಪಿಸ್ಟ, ಸ್ಟೆನೋ, ಸಂಬಂಧಪಟ್ಟ ಜಿಲ್ಲಾಧಿಕಾರಿಗಳು, ಜಿಲ್ಲಾ ಮಟ್ಟದ, ತಾಲ್ಲೂಕು ಮಟ್ಟದ, ರಾಜ್ಯಮಟ್ಟದ ಅಧಿಕಾರಿಗಳನ್ನು ಜಿಲ್ಲೆಗೆ ತಗೆದುಕೊಂಡು ಹೋಗಿ ಅಲ್ಲಿಯ ಜನತಾ ದರ್ಶನದಲ್ಲಿ ಜನಗಳ ಸಮಸ್ಯೆಗಳು ಏನಿತ್ತು ಎನ್ನುವುದನ್ನು ಕೇಳಿ ಅಲ್ಲಿಯೇ ಆರ್ಡರ್ ಮಾಡುತ್ತಿದ್ದರು ಎನ್ನುವುದನ್ನು ಕೇಳಿದ್ದೆವು. ನಾನಾದರೂ ಹೇಳುವುದು ಇಷ್ಟೇ. ಜಿಲ್ಲಾ ಮಂತ್ರಿಗಳು ಆಗಲಿ ಮುಖ್ಯಮಂತ್ರಿಗಳಾಗಲಿ ಜನತಾ ದರ್ಶನಕ್ಕೆ ಹೋದಾಗ ಒಂದು ದಿವಸ ಅಲ್ಲ ಎರಡು ದಿವಸ ಆದರೂ ಆ ಜಿಲ್ಲೆಯಲ್ಲಿ ತಂಗಿದ್ದು ಸಂಬಂಧಪಟ್ಟ ಎಲ್ಲಾ ಮಟ್ಟದ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಅಲ್ಲಿ ಜನತೆಯ ಯಾವುದೇ ಸಮಸ್ಯೆ ಇದ್ದರೆ ಸ್ಥಳದಲ್ಲಿಯೇ ಬಗೆಹರಿಸತಕ್ಕಂತಹ ಸಮಸ್ಯೆಯನ್ನು ಅಲ್ಲಿಯೇ ಮಾಡಿಕೊಡತಕ್ಕದ್ದು ಬಹಳ ಸೂಕ್ತ ಎಂದು ನನಗಂತೂ ಅನಿಸುತ್ತಿದೆ. ನಾವು 100ಕ್ಕೆ 100 ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಗದೇ ಇದ್ದರೂ ಸಹ ಒಂದು 20-25ರಷ್ಟು ಪರ್ಸೆಂಟ್ ಆದರೂ ಸಮಸ್ಯೆಯನ್ನು ಬಗೆಹರಿಸಿದರೆ ನಾವು ಜನತಾ ದರ್ಶನ ಮಾಡಿದ್ದಕ್ಕೆ ನಿಜವಾಗಿಯೂ ಸಾರ್ಥಕ ಆಗಬಹುದು ಎಂದು ನನ್ನ ಭಾವನೆ. ಜೊತೆಗೆ ನಮ್ಮ ಸರ್ಕಾರ ಬಂದ ಮೇಲೆ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯತಿಯ ಅನೇಕ ಚುನಾವಣೆಗಳನ್ನು ಮಾಡಿದ್ದಾರೆ. ಯಾವ ಗೊಂದಲವೂ ಇಲ್ಲದೇ ಚುನಾವಣೆಗಳು ಆಗಿವೆ, ಅದು ನಮಗೆಲ್ಲಾ ಗೊತ್ತಿರತಕ್ಕ ವಿಚಾರ. ಅದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮೇಲ್ವರ್ಗದ ಒಂದು ಜಾತಿಗೆ ಸಂಬಂಧಪಟ್ಟವರು ಆಗಿದ್ದರೂ ಸಹ (ಎ) ಮತ್ತು (ಬಿ) ಗ್ರೂಪ್ ಎಂದು ಮಾಡಿ ಬಹಳಷ್ಟು

ಹಿಂದುಳಿದವರ್ಗದವರಿಗೆ ಅನುಕೂಲ ಆಗುವ ರೀತಿಯಲ್ಲಿ ಚುನಾವಣೆಯನ್ನು ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಯಲ್ಲಿ ಮಾಡಿದ್ದಾರೆ. (ಎ) ವರ್ಗದಲ್ಲಿ ಬಂದಿರತಕ್ಕಂತಹ ಹಿಂದುಳಿದ ಜನಾಂಗಕ್ಕೆ ಸುಮಾರು 80 ಪರ್ಸೆಂಟ್ ಪ್ರತಿನಿಧಿಗಳನ್ನು ಆರಿಸತಕ್ಕ ಒಂದು ಅನುಕೂಲ ಮತ್ತು(ಬಿ) ವರ್ಗದವರಿಗೆ 20 ಪರ್ಸೆಂಟ್ ಅನ್ನು ಕೊಟ್ಟು ಅಲ್ಲಿ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಅಧ್ಯಕ್ಷರನ್ನು ಹಾಗೂ ಉಪಾಧ್ಯಕ್ಷರನ್ನು ಮಾಡತಕ್ಕ ಒಂದು ವ್ಯವಸ್ಥೆ ನಮ್ಮ ಸರ್ಕಾರದಲ್ಲಿ ಆಗಿದೆ. ಅದು ಏನಾದರೂ ಆಗದೇ ಇದ್ದಿದ್ದಲ್ಲಿ ಅದು ರಿವರ್ಸ್ ಆಗುವುದು ಎಂದು ನನ್ನ ಅಭಿಪ್ರಾಯ. ಏನು (ಎ) ಮತ್ತು (ಬಿ) ನಲ್ಲಿ 80 ಪರ್ಸೆಂಟ್ ಮತ್ತು 20 ಪರ್ಸೆಂಟ್ ಹೋಗತಕ್ಕಂಥ ಪರಿಸ್ಥಿತಿ ಇತ್ತು. ಇದರಿಂದ ಏನಾಗಿದೆ ಎಂದರೆ ಎಲ್ಲಾ ಹಂತದಲ್ಲಿ ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆಲ್ಲಾ ಅಧಿಕಾರವನ್ನು ಕೊಡತಕ್ಕ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ ಎಂದು ನಾನಂತೂ ಬಹಳ ಹೆಮ್ಮೆಯಿಂದ ಹೇಳುತ್ತಿದ್ದೇನೆ. ಜೊತೆಗೆ ಇಲ್ಲಿ ಏನಾಗಿದೆ ಎಂದರೆ, ತಾಲ್ಲೂಕು ಪಂಚಾಯಿತಿಯಲ್ಲಿ ಇವತ್ತು ನಿಮಗೆಲ್ಲರಿಗೂ ಗೊತ್ತಿರತಕ್ಕ ಸಮಸ್ಯೆ. ಅಲ್ಲಿ ಬಿಡಿಓ ಮತ್ತು ಇ ಓ ಎಂದು ಎರಡು ಪೋಸ್ಟಗಳನ್ನು ಹಾಕಿ ಕೆಲಸ ಆಗದೇ ಇರುವ ರೀತಿಯಲಲ್ಲಿ ಗೊಂದಲವನ್ನು ಉಂಟು ಮಾಡತಕ್ಕಂಥ ಒಂದು ಪರಿಸ್ಥಿತಿ ಆಗಿದೆ. ಏನು ನಮ್ಮ ಎಕ್ಸಿಕ್ಯೂಟೀವ್ ಆಫೀಸರ್ ಅನ್ನೇ ನೀವು ಮೇಲ್ ಹಂತದ ಅಧಿಕಾರಿಯನ್ನಾಗಿ ಹಾಕಬೇಕು, ಕಾರಣ ಅಲ್ಲಿರತಕ್ಕಂತಹ ಎಲ್ಲಾ ಅಧಿಕಾರಿಗಳನ್ನು ಕೋಆರ್ಡಿನೇಟ್ ಮಾಡತಕ್ಕ ಒಬ್ಬ ಅಧಿಕಾರಿ ಬೇಕು ಎಂಬ ಉದ್ದೇಶದಿಂದ ಹಾಕಿದ್ದೇವೆ. ನಮ್ಮ ಬಿಡಿಓ ರ್‍ಯಾಂಕನ್ನು ಮೇಲ್ಮಟ್ಟದಲ್ಲಿ ಎಸಿಎಸ, ಅಂದರೆ ಒಬ್ಬ ಅಸಿಸ್ಟೆಂಟ್ ಕಮೀಷನರ್ ಅನ್ನು ಹಾಕಿ ಒಂದು ಹುದ್ದೆಯನ್ನು ಮಾಡಿದರೆ ಇನ್ನೊಂದು ಹುದ್ದೆ ಅಲ್ಲಿಗೆ ಬೇಕಾಗಿಲ್ಲ ಎಂದು ಹೇಳತಕ್ಕ ಭಾವನೆ ಎಲ್ಲಾ ಕಡೆ ಕೇಳಿ ಬರುತ್ತಿದೆ. ಕಾರಣ ತಾಲ್ಲೂಕು ಪಂಚಾಯಿತಿಯಲ್ಲಿ ಆಗತಕ್ಕ ಕೆಲಸಗಳು ಇಬ್ಬರ ಜಗಳದಲ್ಲಿ ಆಗುತ್ತಿಲ್ಲ. ಅದೇ ತರಹ ವಿದ್ಯಾ ಇಲಾಖೆಯಲ್ಲಿ ನಾವು ಎರಡು ಪೋಸ್ಟನ್ನು ಮಾಡಿದ್ದೇವೆ. ಒಂದು ಬಿಇಓ ಮತ್ತು ಎಇಓ ಎಂದು ಹೇಳಿ ಎರಡು ಪೋಸ್ಟ ಮಾಡಿದ್ದೇವೆ. ಇಬ್ಬರಿಗೂ ಕೆಲಸ ಬಹಳಷ್ಟು ಕಡಿಮೆ. ಇರತಕ್ಕ ಕೆಲಸವನ್ನು ಒಬ್ಬರೇ ನಿಭಾಯಿಸಬಹುದು. ಅನೇಕ ಪ್ರೌಢ ಶಾಲೆಗಳಲ್ಲಿ ಇವತ್ತು ಅಧ್ಯಾಪಕರು ಇಲ್ಲ, ಮುಖ್ಯೋಪಾಧ್ಯಾಯರು ಇಲ್ಲ, ಅನೇಕ ಅಧ್ಯಾಪಕರು ಇಲ್ಲದೇ ಇರುವುದನ್ನು ನಾವು ಬೆಳಿಗ್ಗೆ ಎದ್ದ ಕೂಡಲೇ ನೋಡುತ್ತಿದ್ದೇವೆ. ಈ ಎ.ಇ.ಓ ಪೋಸ್ಟ ತೆಗೆದು ಇದರ ಬದಲು ಸರ್ಕಾರೀ ಶಾಲೆಗಳಲ್ಲಿ ಮುಖ್ಯೋಪಾಧ್ಯಾಯರನ್ನು ಹಾಕಿದರೆ ಶಾಲಗಳಲ್ಲಿ ಅಧ್ಯಾಪಕರನ್ನು ತುಂಬುವಂತಹ ಒಂದು ಕೆಲಸ ಆಗಬಹುದು. ಅಲ್ಲಿ ಬರೀ ಬಿ.ಇ.ಓ. ಹುದ್ದೆ ಇದ್ದರೆ ಸಾಕು ಎಂದು ನನಗಂತೂ ಅನಿಸುತ್ತದೆ. ಆ ಒಂದು ದಿಸೆಯಲ್ಲಿ ಸರಕಾರ ಗಮನ ಹರಿಸುತ್ತದೆಯೇ ಎಂದು ಕೇಳುತ್ತಿದ್ದೇನೆ. ಇದರ ಬಗ್ಗೆ ಅನೇಕ ಸದಸ್ಯರ ಅಭಿಪ್ರಾಯವನ್ನು ಸಹ ನಾನು ಕೇಳಿದ್ದೇನೆ. ಈ ಎರಡೆರಡು ಹುದ್ದೆಗಳ ಪೈಕಿ ಒಂದೊಂದು ಹುದ್ದೆಗಳನ್ನು ಮಾಡಿದರೆ ಅನುಕೂಲ ಎನ್ನತಕ್ಕ ಅಭಿಪ್ರಾಯ ಅನೇಕ ಶಾಸಕರಲ್ಲಿ ಇದೆ. ಅದಕ್ಕೆ ಸರ್ಕಾರ ಸ್ವಲ್ಪ ಗಮನ ಹರಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಜೊತೆಗೆ ವಿದ್ಯುಚ್ಛಕ್ತಿ ಸಮಸ್ಯೆ ಬಹಳಷ್ಟು ಇದೆ. ಈ ಒಂದು ಬಜೆಟ್ ನಲ್ಲಿ ಆದ್ಯತೆಯನ್ನು ಕೊಟ್ಟಿದ್ದರೂ ಸಹ ವಿದ್ಯುಚ್ಛಕ್ತಿಯನ್ನು ಸಮರ್ಪಕವಾದ ರೀತಿಯಲ್ಲಿ ಮಾಡಬೇಕೆಂದು ಹೇಳಿದರೂ ಅವರ ಕೈಯಲ್ಲಿ ಆಗುತ್ತಾ ಇಲ್ಲ. ಬೇರೆ ಬೇರೆ ರಾಜ್ಯಗಳಿಂದ

ವಿದ್ಯುಚ್ಛಕ್ತಿಯನ್ನು ಪಡೆದು ಹಂಚುವಂತಹ ಒಂದು ವ್ಯವಸ್ಥೆ ಮಾಡಿದ್ದಾರೆ. ಆದರೆ ವಿದ್ಯುಚ್ಛಕ್ತಿಯನ್ನು ಹಂಚುವಂತಹ ಒಂದು ಸಂದರ್ಭದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿರತಕ್ಕಂತಹದ್ದು ಲೈನಮೆನಗಳ ಕೊರತೆ. ನಾವು ಅನೇಕ ಬಾರಿ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಲೈನಮನಗಳ ಕೊರತೆಯಿಂದ ಅನೇಕ ಕಡೆ ವಿದ್ಯುಚ್ಛಕ್ತಿಯ ಕೊರತೆ ಗ್ರಾಮಾಂತರ ಪ್ರದೇಶಗಳಲ್ಲಿ ಉಂಟಾಗಿದೆ ನನಗೆ ಗೊತ್ತಿರುವ ಹಾಗೆ ಸುಮಾರು ಐದು ಸಾವಿರಕ್ಕಿಂತ ಹೆಚ್ಚು ಲೈನಮನಗಳು ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಬೇಕು. ಅದರಲ್ಲಿ ಈಗ ಇರತಕ್ಕ ಲೈನಮನಗಳ ಕೆಲಸವನ್ನು ತೆಗೆದುಕೊಳ್ಳುವುದು ಬಹಳ ಕಷ್ಟ ಆಗಿದೆ. ಎಲ್ಲರಿಗೂ ಗೊತ್ತಿರತಕ್ಕ ಸಮಾಚಾರ. ಇವರಲ್ಲಿ ಯೂನಿಯನ್ ಎಂದು ಮಾಡಿಬಿಟ್ಟು ಯಾವುದೇ ಇಂಜನಿಯರ್ ಮಾತನ್ನು ಒಬ್ಬ ಲೈನಮನ ಕೇಳುವ ರೀತಿಯಲ್ಲಿಲ್ಲ. ಅವರಿಗೆ ಕೊಡತಕ್ಕ ಸಂಬಳವನ್ನು ನೋಡಿದರೆ ಐ.ಎ.ಎಸ್. ಆಫೀಸರ್ ಗಿಂತ ಹೆಚ್ಚಿನ ಸಂಬಳವನ್ನು ನಮ್ಮ ಸರ್ಕಾರ ಅವರಿಗೆ ಕೊಡುತ್ತಿದ್ದೇವೆ. ಅವರಿಗೆ ಯಾರ ಕಂಟ್ರೋಲೂ ಇಲ್ಲ. ಏನಾಗಿದೆ ಎಂದರೆ " ನಾಯಿಯ ಬಾಲ ಆಡಿಸುವ ಬದಲು ಬಾಲವೇ ನಾಯಿಯನ್ನು ಆಡಿಸುವ ರೀತಿಯಲ್ಲಿ" ವಿದ್ಯುಚ್ಛಕ್ತಿ ಮಂಡಳಿಯಲ್ಲಿ ನಡೆಯುತ್ತಿದೆ. ಯಾವುದೇ ಒಬ್ಬ ಲೈನಮನ ಆಫೀಸನಲ್ಲಿ ಯಾವುದೇ ಒಬ್ಬ ಪ್ರಜೆ ಅಲ್ಲಿ ಹೋಗಿ ಕಂಪ್ಲೈಂಟ್ ಕೊಟ್ಟರೆ ಆ ಇಂಜನಿಯರ್ ಲೈನಮನಅನ್ನು ಕರೆದು ಹೇಳಿದರೂ ಆತ ಕೆಲಸ ಮಾಡತಕ್ಕ ಪರಿಸ್ಥಿತಿಯಲ್ಲಿ ಇಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಈಗ ನನ್ನ ಕ್ಷೇತ್ರದಲ್ಲಿಯೇ ಏನಾಗಿದೆ ಎಂದರೆ ಐದಾರು ಲೈನಮನಗಳಿರತಕ್ಕ ಕಡೆ ಇಬ್ಬರು ಮೂವರನ್ನು ಹಾಕಿದ್ದಾರೆ. ಒಂದು ಕಡೆ ಪೆರಾಲಿಸಿಸ್ ಅಂದರೆ ಲಕ್ವ ಹೊಡೆದವರನ್ನು ಹಾಕಿದ್ದಾರೆ. ಅವನಿಗೆ ಕೆಲಸದಿಂದ ತೆಗೆಯಿರಿ ಅಥವಾ ರಿಟೈರ್ ಮೆಂಟ್ ಕೊಡಿರಿ ಎಂದರೆ ಅವರ ಯೂನಿಯನನಲ್ಲಿ ಗಲಾಟೆ. ತಿಂಗಳಿಗೆ ಒಂದು ಸಾರಿ ಸಂಬಳವನ್ನು ತೆಗೆದುಕೊಂಡು ಹೋಗಿ ಅವರ ಮನೆಗೆ ಕೊಡಬೇಕು. ಅಲ್ಲಿ ಕಂಬ ಹತ್ತಿ ಕೆಲಸ ಮಾಡತಕ್ಕವರು ಯಾರೂ ಇಲ್ಲ. ಈ ಪರಿಸ್ಥಿತಿ ಅನೇಕ ಕಡೆ ಇದೆ. ನಮ್ಮ ಸರ್ಕಾರದಲ್ಲಿ ಏನಾಗಿದೆ ಎಂದರೆ ಕೆಳ ಹಂತದಲ್ಲಿರತಕ್ಕ ಯಾವುದೇ ಅಧಿಕಾರಿಗಳನ್ನು ಭರ್ತಿ ಮಾಡತಕ್ಕ ಕೆಲಸ ಚುರುಕಾಗಿ ನಡೆಯುತ್ತಿಲ್ಲ. ವಿಲೇಜ್ ಅಕೌಂಟೆಂಟ್ ಆಗಿರಬಹುದು, ಆಸ್ಪತ್ರೆ ಸಿಬ್ಬಂದಿ ಆಗಿರಬಹುದು, ಲೈನಮನ ಆಗಿರಬಹುದು ಅಥವಾ ಅಧ್ಯಾಪಕರು ಆಗಿರಬಹುದು. ಆದರೆ ನಾನು ಏನು ಹೇಳುವುದಕ್ಕೆ ಬಯಸುತ್ತೇನೆಂದರೆ ಮೇಲ್ಪಟ್ಟಿದ ಅಧಿಕಾರಿಗಳು ಕೆಲವು ಜನ ಇಲ್ಲದೇ ಇದ್ದರೂ ಪರವಾಗಿಲ್ಲ. ಡೈರೆಕ್ಟರುಗಳು, ಜಾಯಿಂಟ್ ಡೈರೆಕ್ಟರುಗಳು, ಡೆಪ್ಯುಟಿ ಡೈರೆಕ್ಟರುಗಳು ಇಲ್ಲದೇ ಇದ್ದರೂ ಕೆಲಸ ನಡೆದುಕೊಂಡು ಹೋಗುತ್ತದೆ. ಆದರೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂತಹ ಸಣ್ಣ ಪುಟ್ಟ ಕೆಲಸಗಾರರು ಇಲ್ಲದೇ ಇದ್ದಾಗ ಜನಗಳ ಸಮಸ್ಯೆ ಅನೇಕ ಇರುತ್ತವೆ, ಅದನ್ನು ಬಗೆಹರಿಸುವುದಕ್ಕೆ ಆಗುವುದಿಲ್ಲ. ಸರ್ಕಾರಕ್ಕೆ ಏನಾದರೂ ಒಳ್ಳೆಯ ಹೆಸರು ಅಥವಾ ಕೆಟ್ಟ ಹೆಸರು ಬರಬೇಕಾದರೆ ಇಂತಹ ಹಂತದ ಅಧಿಕಾರಿಗಳಿಂದಲೇ ಹೊರತು ಮೇಲ್ಪಟ್ಟಿದ ಅಧಿಕಾರಿಯಿಂದ ಅಲ್ಲ ಎಂದು ಹೇಳಿ ನಾನು ಈ ಸಂದರ್ಭದಲ್ಲಿ ತಮಗೆ ಹೇಳಲು ಬಯಸುತ್ತೇನೆ. ಈ ವಿದ್ಯುಚ್ಛಕ್ತಿಯ ಸಮಸ್ಯೆಗಳನ್ನು ಸಂದರ್ಭ ಇಲ್ಲ. ಒಂದು ವೇಳೆ ನಮ್ಮ ಹತ್ತಿರ ಬೇಕಾದಷ್ಟು ವಿದ್ಯುಚ್ಛಕ್ತಿ ಇದೆ ಎಂದರೂ ಅದನ್ನು ಸರಬರಾಜು ಮಾಡತಕ್ಕಂತಹ ವ್ಯವಸ್ಥೆ ನಮ್ಮಲ್ಲಿ ಇಲ್ಲದೇ ಇರತಕ್ಕದ್ದು ಬಹಳ ಶೋಚನೀಯವಾದ ಪರಿಸ್ಥಿತಿ ಇದೆ ಎಂದು ಈ ಸಂದರ್ಭದಲ್ಲಿ ನಿಮ್ಮ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಜೊತೆಗ ಕೃಷಿ ಮಾರುಕಟ್ಟೆ

ಸಮಿತಿಯಿಂದ ಒಂದು ಅಥವಾ ಎರಡು ಪರ್ಸೆಂಟ್ ಶುಲ್ಕವನ್ನು ವಿಧಿಸಿ 50 ಕಿಲೋ ಮೀಟರ್ ರಸ್ತೆಯನ್ನು ಒಬ್ಬ ಕ್ಷೇತ್ರದ ಶಾಸಕರಿಗೆ ಮಾಡಿಕೊಡುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಅದರಲ್ಲಿರತಕ್ಕ ಮುನ್ನೂರು ಕೋಟಿ ರೂಪಾಯಿಗಳಲ್ಲಿ ಕನಿಷ್ಠ 30 ಕೋಟಿ ರೂಪಾಯಿಗಳನ್ನಾದರೂ ಈ ವರ್ಷ ಖರ್ಚು ಮಾಡುತ್ತೇವೆ ಎನ್ನತಕ್ಕದ್ದನ್ನು ನಮ್ಮ ಗವರ್ನರ್ ಅಡ್ರೆಸನಲ್ಲಿ ಹೇಳಿದ್ದಾರೆ. ಸರ್ಕಾರದವರು ಹೇಳಿರುವುದು ಬಹಳ ಒಳ್ಳೆಯ ಯೋಜನೆ. ಆದರೆ ಅದು 50 ಕಿಲೋ ಮೀಟರ್ ನಿಂದ ಹೋಗಿ ಈಗ 15 ಕಿಲೋ ಮೀಟರಗೆ ಇಳಿದಿತ್ತು ಈ ವರ್ಷದಲ್ಲಿ ಮಾಡತಕ್ಕದ್ದು. ಈಗ ಹದಿನೈದು ಕಿಲೋಮೀಟರ್ ಹೋಗಿ ಮತ್ತೆ ಐದು ಕಿಲೋ ಮೀಟರ್‌ಗೆ ಇಳಿಸತಕ್ಕ ಒಂದು ವ್ಯವಸ್ಥೆ ಆಯಿತು ಎಂದು ನನಗೆ ಕೇಳಿ ಬಂತು. ಈ ಐದು ಕಿಲೋಮೀಟರ್ ಸಹ ಈ ಮಾರ್ಚ ತಿಂಗಳು ಆದರೂ ಆಗುತ್ತಿಲ್ಲ. ಆದ್ದರಿಂದ ಇದರ ಕಡೆಗೆ ಸಂಬಂಧಪಟ್ಟವರು ಬೇಗನೆ ಗಮನ ಹರಿಸಿ ಅದನ್ನಾದರೂ ಮಾಡಿದರೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂತಹ ರಸ್ತೆಗಳಿಗೆ ಅನುಕೂಲ ಆಗಬಹುದೆಂದು ನಾನು ಭಾವಿಸುತ್ತೇನೆ. ನಾವು ಬಹಳಷ್ಟು ಹೊಸ ರಸ್ತೆ ನಿರ್ಮಾಣದ ಕಡೆ ಗಮನ ಹರಿಸುತ್ತೇವೆಯೇ ಹೊರತು ನಿರ್ಮಾಣವಾದಂತಹ ರಸ್ತೆಯ ಮೇಂಟೆನೆನ್ಸ್ ಇದೆಯೇ ಅದು ಏನಾಗಿದೆ ಎಂದು ನೋಡುತ್ತಿಲ್ಲ. ಯಾವುದೇ ಸರ್ಕಾರಿ ಕಟ್ಟಡ ಆಗಿರಬಹುದು, ಆಸ್ಪತ್ರೆ ಆಗಿರಬಹುದು, ದಿನದ ಆಸ್ಪತ್ರೆ ಆಗಿರಬಹುದು ಶಾಲೆ ಆಗಿರಬಹುದು, ರಸ್ತೆಗಳು ಆಗಿರಬಹುದು. ನಾವು ಹೊಸದಾಗಿ ನಿರ್ಮಾಣ ಮಾಡುವವರೆಗೆ ಮಾತ್ರ ಆ ಕಡೆ ಗಮನ ಹರಿಸುತ್ತೇವೆ, ಬಹಳ ಆಸಕ್ತಿಯನ್ನು ತೋರಿಸುತ್ತೇವೆ. ಆದರೆ ಒಂದು ಸಲ ನಿರ್ಮಾಣ ಆದಂತಹ ರಸ್ತೆಯನ್ನು ಯಾವ ತರಹ ಮೇನಟೇನ್ ಮಾಡುತ್ತೇವೆಂದು ನೋಡಿದಾಗ ಯಾವುದೇ ರೀತಿಯ ಕೆಲಸ ಆಗಿರುವುದಿಲ್ಲ.. ಸುಮಾರು 15-20 ವರ್ಷಗಳ ಹಿಂದೆ ಕಟ್ಟಿದ ಶಾಲಾ ಕಟ್ಟಡಗಳು, ಆಸ್ಪತ್ರೆಗಳು, ಇವತ್ತು ರಿಪೇರಿ ಕಾಣದೇ ಇರತಕ್ಕಂಥ ಪರಿಸ್ಥಿತಿ ಇದೆ. ರಸ್ತೆಗಳಿಗೆ ಸಹ ನಾಲ್ಕೈದು ವರ್ಷಗಳ ಹಿಂದೆ ಟಾರ್ ಹಾಕಿದ್ದಾರೆ. ಇವತ್ತು ಅಲ್ಲಿ ಒಂದು ಚೂರೂ ಟಾರ್ ಇಲ್ಲ. ಅದನ್ನು ಕೇಳಲಿಕ್ಕೆ ಹೋದರೆ ಜಿಲ್ಲಾ ಪಂಚಾಯಿತಿಯಲ್ಲಿ ಮೂರು ನಾಲ್ಕು ವರ್ಷಗಳ ಹಿಂದೆ ಟಾರ್ ಹಾಕಿದ್ದೇವೆಂದು ಹೇಳುತ್ತಾರೆ. ಆ ರಸ್ತೆಯಲ್ಲಿ ಬಸ್ ಆಗಲಿ, ಲಾರಿ ಆಗಲಿ ಇನ್ನೊಂದು ವಾಹನ ಓಡಾಡತಕ್ಕ ಪರಿಸ್ಥಿತಿಯಲ್ಲಿಲ್ಲ. ನಾವು ಹೊಸ ಕೆಲಸಗಳಿಗೆ ಎಷ್ಟು ಆದ್ಯತೆಯನ್ನು ಕೊಡುತ್ತೇವೆಯೋ ಅಷ್ಟೇ ಆದ್ಯತೆಯನ್ನು ಹಳೆಯ ಕೆಲಸಗಳಿಗೆ ಕೊಟ್ಟು ಹೆಚ್ಚಿನ ಹಣವನ್ನು ಕೊಟ್ಟು ಅದನ್ನು ಮೇನಟೇನ್ ಮಾಡಿದ್ದೇ ಆದರೆ ನಾವು ಜಾಸ್ತಿ ಹಣ ಖರ್ಚು ಮಾಡದೇ ಅದನ್ನು ಮೇನಟೇನ್ ಮಾಡಿಕೊಂಡು ಹೋಗಬಹುದು. ಇನ್ನೊಂದು ಕೆಲವು ವರ್ಷಗಳು ಹೋಗಿ ಬಿಟ್ಟರೆ ಆ ರಸ್ತೆಗಳೇ ಇರುವುದಿಲ್ಲ. ಮತ್ತೆ ಹೊಸದಾಗಿ ಜಲ್ಲಿ, ಇನ್ನೊಂದು ಕೆಲಸ ಮಾಡಬೇಕಾಗುತ್ತದೆ. ಅದೇ ರೀತಿ ಆಸ್ಪತ್ರೆ ಕೂಡ, ಇನ್ನೊಂದು ಶಾಲಾ ಕಟ್ಟಡ ಕೂಡ. ಪಶುವೈದ್ಯ ಶಾಲೆಗಳನ್ನು ಅಂತೂ ಕೇಳುವವರೇ ಇಲ್ಲ. ಸುಮಾರು 20-30 ವರ್ಷಗಳ ಹಿಂದೆ ಕಟ್ಟಿರತಕ್ಕ ಕಟ್ಟಡ ಎಲ್ಲಾ ಬೀಳುತ್ತಿವೆ. ಅದಕ್ಕೆ ಸುಣ್ಣ ಬಣ್ಣ ಹೊಡೆಸತಕ್ಕ ವ್ಯವಸ್ಥೆ ಇಲ್ಲ. ನಾವು ಈ ಬಜೆಟ್ ಮಾಡುವಾಗ, ಹಣವನ್ನು ನಿಗದಿ ಮಾಡುವಾಗ ಹೊಸ ಕೆಲಸಗಳಿಗೆ ಎಷ್ಟು ಪ್ರಾಮುಖ್ಯತೆಯನ್ನು ಕೊಡುತ್ತೇವೆಯೋ ಅಷ್ಟೇ ಪ್ರಾಮುಖ್ಯತೆಯನ್ನು ಹಳೆಯ ಕೆಲಸಗಳಿಗೆ ಕೊಟ್ಟಿದ್ದೇವೆ ಆದರೆ ಸರ್ಕಾರದ ಆಸ್ತಿಯನ್ನು ಸರಿಯಾದ ರೀತಿಯಲ್ಲಿ ನಾವು ಉಳಿಸಿಕೊಂಡು ಹೋಗಲಿಕ್ಕೆ ಅನುಕೂಲ

ಆಗಬಹುದು ಎನ್ನುವ ಮಾತನ್ನು ನಾನು ಹೇಳುತ್ತೇನೆ. ಜೊತೆಗೆ ಆಸ್ಪತ್ರೆಗಳಲ್ಲಿ ಕಂಟ್ರಾಕ್ಟ ಬೇಸಿಸ್ ಎಂದು ಅನೇಕ ಜಿಲ್ಲೆಗಳಲ್ಲಿ ಡಾಕ್ಟರಗಳನ್ನು ತೆಗೆದುಕೊಂಡಿದ್ದಾರೆ. ಆದರೆ ಬೆಂಗಳೂರು ಪಟ್ಟಣ ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿ ಕಂಟ್ರಾಕ್ಟ ವೈದ್ಯರನ್ನು ತೆಗೆದುಕೊಳ್ಳತಕ್ಕ ವ್ಯವಸ್ಥೆ ಇಲ್ಲ. ಕಾರಣ ಏನು ಎಂದು ನಮಗೆ ಗೊತ್ತಾಗಲಿಲ್ಲ. ಆದರೆ ಸುಮಾರು 45 ರಿಂದ 50 ವೈದ್ಯರು ಇವತ್ತು ನಮ್ಮ ಬೆಂಗಳೂರು ಗ್ರಾಮಾಂತರ ಜಿಲ್ಲಾ ಆಸ್ಪತ್ರೆಗಳಿಲ್ಲಿಲ್ಲ. ನನ್ನ ಕ್ಷೇತ್ರದಲ್ಲಿರತಕ್ಕ ಸುಮಾರು ಮೂರು ಆಸ್ಪತ್ರೆಗಳಲ್ಲಿ ಅಲ್ಲಿ ಜವಾನರು, ಇಲ್ಲ, ಕಾಂಪೌಂಡರುಗಳು ಇಲ್ಲ, ನರ್ಸ್ ಇಲ್ಲ ಡಾಕ್ಟರ್ ಇಲ್ಲ, ಬೀಗ ಹಾಕಿದ್ದಾರೆ. ಈ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಆದಷ್ಟು ಬೇಗನೆ ಕ್ರಮವನ್ನು ತೆಗೆದುಕೊಳ್ಳಬೇಕು. ಜೊತೆಗೆ ಬೆಂಗಳೂರು ಗ್ರಾಮಾಂತರ ಮತ್ತು ನಗರ ಜಿಲ್ಲೆಗಳಲ್ಲಿ ಕಂಟ್ರಾಕ್ಟ ಬೇಸಿಸ್ ಮೇಲೆ ಬರತಕ್ಕ ವೈದ್ಯರನ್ನು ತೆಗೆದುಕೊಳ್ಳತಕ್ಕ ಒಂದು ಕೆಲಸದ ಬಗ್ಗೆ ಸರ್ಕಾರದಲ್ಲಿ ಒಂದು ಆಜ್ಞೆ ಬೇಗನೇ ಆಗಲಿ. ಜೊತೆಗೆ ಆ ಕೆಲಸವನ್ನು ಬೇಗ ಮಾಡಿದರೆ ಏನು ಆಸ್ಪತ್ರೆಯ ಬಾಗಿಲನ್ನು ಪೂರ್ತಿ ಹಾಕಿದ್ದೇವೆ, ಅದನ್ನೆಲ್ಲಾ ತೆಗೆದು ನಾವು ಆಸ್ಪತ್ರೆಯಲ್ಲಿ ಡಾಕ್ಟರಗಳಿಂದ ಕೆಲಸ ಮಾಡಿಸುವ ರೀತಿಯಲ್ಲಿ ಅನುಕೂಲ ಆಗಬಹುದು. ಜೊತೆಗೆ ಆಸ್ಪತ್ರೆಗೆ ಕೊಡತಕ್ಕಂತಹ ಔಷಧಿ ಬಹಳಷ್ಟು ಕಡಿಮೆ. ಈಗ ನಾಲ್ಕೈದು ವರ್ಷಗಳಿಂದ ನಾವು ನೋಡಿದರೆ ಔಷಧಿಯ ಬೆಲೆ ಸುಮಾರು ಐದಾರು ಪಟ್ಟು ಹೆಚ್ಚಾಗಿದೆ. ಆದರೆ, ನೀವು ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಘಟಕಗಳಿಗೆ ಕೊಡುವ ದುಡ್ಡು ಎಷ್ಟಿದೆಯೋ ಅದನ್ನು ಹೆಚ್ಚುಗೊಳಿಸಬೇಕಾಗುತ್ತದೆ. ಇಲ್ಲವೆಂದರೆ, ಒಂದು ವರ್ಷಕ್ಕೆ ಔಷಧಿಗಾಗಿ ಎಷ್ಟು ದುಡ್ಡು ಕೊಡುತ್ತೇವೆಯೋ ಅದಕ್ಕೆ ಸರಿಯಾದ ವೈದ್ಯರಿದ್ದು, ಜನರು ಹೆಚ್ಚು ಜನಸಂಖ್ಯೆಯಲ್ಲಿ ಬಂದರೆ ಹಣ ಒಂದು ತಿಂಗಳಿಗೆ ಸಾಕಾಗುವುದಿಲ್ಲ. ಆ ಒಂದು ದೃಷ್ಟಿಯಿಂದ ಬಜೆಟನಲ್ಲಿ ಎಷ್ಟು ಹಣವನ್ನು ನಿಗದಿಪಡಿಸಿದ್ದೀರೋ ಅದಕ್ಕಿಂತ 2-3 ಪಟ್ಟು ಹೆಚ್ಚಿಗೆ ಹಣವನ್ನು ಆಸ್ಪತ್ರೆಗಳಿಗೆ ಕೊಡಬೇಕಾಗುತ್ತದೆ. ಇನ್ನು ವಿಷಯ ಸಮಿತಿಗಳ ಕುರಿತು ಹೇಳುವುದಾದರೆ, ಅನೇಕ ವಿಷಯ ಸಮಿತಿಗಳಿದ್ದು ಸಮಿತಿಯ ವರದಿಗಳಲ್ಲಿ ನಾವು ಸರ್ಕಾರಕ್ಕೆ ಶಿಫಾರಸ್ಸುಗಳನ್ನು ಮಾಡಿ ಸರ್ಕಾರಕ್ಕೆ ಕೊಡುತ್ತೇವೆ. ವಿಷಯ ಸಮಿತಿ ಬಗ್ಗೆ ಅಧ್ಯಕ್ಷರಾದ ತಮ್ಮ ಗಮನಕ್ಕೆ ತರುತ್ತೇನೆ. ಇದರ ಬಗ್ಗೆ ಒಂದು ಸಲ ಹೇಳಿದ್ದೆ. ವಿಷಯ ಸಮಿತಿಗಳನ್ನು ತಾವು ರಚಿಸಿರುವ ಉದ್ದೇಶ ವಿಧಾನಸಭೆ ವಿಧಾನ ಪರಿಷತ್ತಿನಲ್ಲಿ ಸದಸ್ಯರುಗಳು ಮಾತನಾಡಲು ಸಮಯಾಭಾವವಿರುವುದರಿಂದ ಮಾಡಿದ್ದೀರಿ. ಸರ್ಕಾರಕ್ಕೆ ವಿಷಯ ಸಮಿತಿಗಳ ವರದಿಗಳು ತಲುಪಿದ ನಂತರ ಒಂದೊಂದು ಸಮಿತಿಗೆ ಸಂಬಂಧಿಸಿದಂತೆ ಸದನದಲ್ಲಿ ಒಂದು ದಿವಸವಾದರೂ ಚರ್ಚಿಸುವುದಕ್ಕೆ ಸದಸ್ಯರುಗಳಿಗೆ ಅವಕಾಶ ಮಾಡಿಕೊಡುಬೇಕಾಗುತ್ತದೆ. ಆದರೆ, ಚರ್ಚಿಸಲು ಸಮಯವಿಲ್ಲವೆಂದು ತಾವು ಹೇಳಿದಿರಿ. ಈಗ ಏನಾಗಿದೆಯೆಂದರೆ, ವಿಷಯ ಸಮಿತಿಗಳು ಬರೀ ಟಿಎ:ಡಿಎ ಸಮಿತಿಗಳಾಗಿವೆಯೆಂದು ಅನೇಕ ಸದಸ್ಯರುಗಳು ಭಾವಿಸಿದ್ದಾರೆ. ಜೊತೆಗೆ ವಿಷಯ ಸಮಿತಿಗಳಿಂದ ವರ್ಷಕ್ಕೊಂದು ಸಲ ಹೊರ ರಾಜ್ಯಗಳಿಗೆ ಪ್ರವಾಸಕ್ಕಾಗಿ ಕಳುಹಿಸುತ್ತಿದ್ದು, ಇದು ಟಿಎ:ಡಿಎ ತೆಗೆದುಕೊಳ್ಳುವುದಕ್ಕೆ ಮಾತ್ರ ಎಂಬಂತಾಗಿದೆ. ನಾವು ವಿಷಯ ಸಮಿತಿಗಳ ಮುಂದೆ ಸಂಬಂಧಪಟ್ಟ ಇಲಾಖಾಧಿಕಾರಿಗಳನ್ನು ಕರೆಯಿಸಿ ಚರ್ಚಿಸಿ ಕಷ್ಟಪಟ್ಟು ಸರ್ಕಾರಕ್ಕೆ ವರದಿ ಕೊಟ್ಟಾಗ ಅದು ಸದನದಲ್ಲಿ ಮಂಡನೆಯಾಗದೆ ಮತ್ತು ವರದಿಯನ್ನು ತೆಗದುಕೊಂಡು ಯಾರೂ ನೋಡುವುದಿಲ್ಲವೆಂದರೆ ವಿಷಯ ಸಮಿತಿಯಲ್ಲಿ ಚರ್ಚಿಸಿ ಏನು

ಪ್ರಯೋಜನವಿಲ್ಲವೆಂದು ನಾನು ಭಾವಿಸುತ್ತೇನೆ. ಅದಕ್ಕಾಗಿ ತಾವು ಒಂದು ಕೆಲಸವನ್ನಾದರೂ ಮಾಡಬಹುದು. ನಾವು ವಿಷಯ ಸಮಿತಿಗಳ ಮೂಲಕ ಸಂಬಂಧಪಟ್ಟ ಇಲಾಖಾ ಮಂತ್ರಿಗಳಿಗೆ ಏನು ವರದಿ ನಾವು ಕೊಡುತ್ತೇವೆ, ವರದಿಯನ್ನು ನೋಡಿ ಸಮಿತಿಯ ಶಿಫಾರಸ್ಸು ಮಾಡಿರುವಂಥ ವಿಷಯಗಳಲ್ಲಿ ಯಾವುದನ್ನು ಅನುಷ್ಠಾನಗೊಳಿಸಬಹುದು? ಯಾವುದನ್ನು ಅನುಷ್ಠಾನ ಗೊಳಿಸುವುದಕ್ಕಾಗುವುದಿಲ್ಲ? ಅನುಷ್ಠಾನಗೊಳಿಸುವುದಕ್ಕಾಗುವುದಿಲ್ಲವೆಂದರೆ ಕಾರಣವೇನು? ಎಂದು ಇದರ ಬಗ್ಗೆ ಸಂಬಂಧಿಸಿದ ಮಂತ್ರಿಗಳಾದರೂ ಹೇಳಿದರೆ ನಾವು ವಿಷಯ ಸಮಿತಿಗಳಲ್ಲಿ ಚರ್ಚಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದರಲ್ಲಿ ಏನಾದರೂ ಪ್ರಯೋಜನವಾದಿತೆಂದು ಭಾವಿಸುತ್ತೇನೆ. ತಾವು ವಿಷಯ ಸಮಿತಿಗಳ ಬಗ್ಗೆ ಹೆಚ್ಚಿಗೆ ತಿಳಿದಿದ್ದೀರಿ. ಇದರ ಬಗ್ಗೆ ನಾನು ಅನೇಕ ಸಲ ತಮ್ಮ ಗಮನಹರಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ತಾವು ಏನಾದರೂ ಮಾಡುತ್ತೀರೆಂಬ ಭರವಸೆಯಿಂದ ನಾನು ತಮ್ಮಲ್ಲಿ ಕೇಳಲು ಇಷ್ಟಪಡುತ್ತೇನೆ. ಇನ್ನು ಕೆಲವು ಶಾಲಾ ಶಿಕ್ಷಕರ ನೇಮಕಾತಿ ಆಗಲೇ ಆಗಿದ್ದು, ಇನ್ನು ಅನೇಕ ಹುದ್ದೆಗಳು ಖಾಲಿ ಇವೆ. ಪ್ರಸಕ್ತ ವರ್ಷದಲ್ಲಿ ನಮ್ಮ ಸರ್ಕಾರ 9000 ಶಿಕ್ಷಕರುಗಳನ್ನು ನೇಮಕಗೊಳಿಸಲಾಗುವುದೆಂದು ಹೇಳಿದೆ. ನೇಮಕಗೊಳಿಸಿದರೆ ಸ್ವಲ್ಪ ಸರಿಯಾಗಬಹುದು. ಮತ್ತು ಶಾಲಾ ಕಟ್ಟಡಗಳನ್ನು ನಿರ್ಮಿಸುವುದಕ್ಕೆ ಕೊಡತಕ್ಕಂಥ ಹಣದ ಬಗ್ಗೆ ಹೋದ ವರ್ಷದಿಂದಲೂ ಹೇಳುತ್ತಿದ್ದೇನೆ. ಸುಮಾರು ಐದು ವರ್ಷಗಳ ಹಿಂದಿನಿಂದಲೂ ಶಾಲಾ ಕಟ್ಟಡಗಳನ್ನು ನಿರ್ಮಿಸುವುದಕ್ಕೋಸ್ಕರ ನಲವತ್ತು ಸಾವಿರ ರೂಪಾಯಿಗಳನ್ನು ಕೊಡುತ್ತಿರುವುದನ್ನು ನೋಡಿದ್ದೇನೆ. ಕಳೆದ ವರ್ಷ ಆ ಹಣವನ್ನು ಅರವತ್ತೈದು ಸಾವಿರ ರೂಪಾಯಿಗಳನ್ನು ಕೊಡಲಾಗುವುದೆಂದು ಹೇಳಿದೆ. ಇವೊತ್ತು ಒಂದು ಚದರ ಕಟ್ಟರಡ ಕಟ್ಟಬೇಕಾದರೂ ಕನಿಷ್ಟ ನಲವತ್ತು-ಐವತ್ತು ಸಾವಿರ ರೂಪಾಯಿಗಳಾದರೂ ಬೇಕಾಗುತ್ತದೆ. ಎರಡೂವರೆ ಚದರದಿಂದ ಮೂರು ಚದರದಲ್ಲಿ ಶಾಲಾ ಕಟ್ಟಡ ಕಟ್ಟಬೇಕಾಗಿದರೆ ಇವೊತ್ತು ಸಿಮೆಂಟ್ ದರ ಒಂದು ಚೀಲಕ್ಕೆ ಸುಮಾರು 150 ರಿಂದ 170 ರೂಪಾಯಿಗಳವರೆಗೆ ಏರಿದೆ ಜೊತೆಗೆ ಇತರೆ ಸಾಮಗ್ರಿಗಳ ಬೆಲೆಯೂ ಜಾಸ್ತಿಯಾಗಿದೆ. ಗುಣಮಟ್ಟದ ಕೆಲಸವಾಗಬೇಕೆಂದು ನಾವು ಹೇಳುತ್ತೇವೆ. ಆದರೆ, ಸರ್ಕಾರ ಶಾಲಾ ಕಟ್ಟಡ ನಿರ್ಮಾಣಕ್ಕಾಗಿ ಒದಗಿಸುವ ಅರವತ್ತೈದು ಸಾವಿರ ರೂಪಾಯಿಗಳು ಸಾಕಾಗುವುದಿಲ್ಲವೆಂಬುದು ಒಂದು ಅಭಿಪ್ರಾಯವಾಗಿದೆ. ಆ ಹಣವನ್ನು ಎಂಭತ್ತು ರೀತಿಯಲ್ಲಿ ಕಟ್ಟಬಹುದು. ಇಲ್ಲವೆಂದರೆ, ಹಣವನ್ನು ಕಡಿಮೆ ಕೊಟ್ಟೆಂತಲ್ಲಾ ಗುತ್ತಿಗೆದಾರರು ಬಿಲ್ಲಿನ ಹಣ ತೆಗೆದುಕೊಳ್ಳುವರೆಗೆ ಅಂದರೆ ಸುಮಾರು ಒಂದೆರಡು ವರ್ಷಗಳವರೆಗೆ ಮಾತ್ರ ಕಟ್ಟಡ ಭದ್ರವಾಗಿ ನಿಲ್ಲಬಹುದು. ಆದಕೆ, ಗುತ್ತಿಗೆದಾರರು ಬಿಲ್ಲಿನ ಹಣ ತೆಗೆದುಕೊಂಡ ನಂತರ ನಾವು ನೋಡುವಂತೆ ಅನೇಕ ಕಡೆ ನಿರ್ಮಿಸುವ ಶಾಲಾ ಕಟ್ಟಡಗಳ ಮೇಲ್ಚಾವಣಿ ಕುಸಿಯುವುದು, ಗೋಡೆ ಕುಸಿಯುವುದು, ಸೋರುವಿಕೆ ಮುಂತಾದುವನ್ನು ನೋಡುತ್ತೇವೆ. ಆದುದರಿಂದ, ಗುಣಮಟ್ಟ ಕಾಪಾಡಬೇಕಾದರೆ ಸರಿಯಾದ ರೀತಿಯಲ್ಲಿ ಹಣವನ್ನು ಒದಗಿಸಬೇಕಾಗುತ್ತದೆ. ಇವೊತ್ತು ಶಾಲಾ ಕಟ್ಟಡ ನಿರ್ಮಾಣಕ್ಕಾಗಿ ಅರವತ್ತೈದು ಸಾವಿರ ರೂಪಾಯಿಗಳನ್ನು ಏನು ಒದಗಿಸುತ್ತಿದ್ದೀರಿ, ಆ ಹಣ ಸಾಕಾಗುವುದಿಲ್ಲವೆಂಬುದು ನನ್ನ ಅಭಿಪ್ರಾಯವಾಗಿರುವುದರಿಂದ ಅದನ್ನು ಎಂಬತ್ತು ಸಾವಿರ ರೂಪಾಯಿಗಳಿಗೆ ಏರಿಸಿದರೆ ಶಾಲಾ ಕಟ್ಟಡವನ್ನು ಒಳ್ಳೆಯ ರೀತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ನಾವು ಹತ್ತು ಸಂಖ್ಯೆಯಲ್ಲಿ ಕಟ್ಟುವ

ಬದಲು ಶಾಶ್ವತವಾಗಿರುವ ಐದಾರು ಕಟ್ಟಡಗಳನ್ನು ಕಟ್ಟಿದರೆ ಪ್ರಯೋಜನವಾಗಬಹುದೆಂದು ದೃಷ್ಟಿಯಿಂದ ಒದಗಿಸುವ ಹಣವನ್ನು ಎಂಬತ್ತು ಸಾವಿರ ರೂಪಾಯಿಗಳನ್ನಾಗಿ ಮಾಡಿದರೆ ಅನುಕೂಲವಾಗುತ್ತದೆಂದು ಭಾವಿಸುತ್ತೇನೆ. ಇನ್ನು ಮನೆ ಹಾಗೂ ನಿವೇಶನಗಳನ್ನು ಕುರಿತು ಹೇಳುವುದಾದರೆ, ನಿವೇಶನಗಳನ್ನು ಹಾಗೂ ಮನೆಗಳನ್ನು ಹಂಚುವ ಕಾರ್ಯಕ್ರಮದಲ್ಲಿ ಸರ್ಕಾರದವರು ಆಯವ್ಯಯದಲ್ಲಿ ಸಾಕಷ್ಟು ಹಣವನ್ನು ಒದಗಿಸಿದ್ದಾರೆ. ಪ್ರಸಕ್ತ ವರ್ಷದಲ್ಲಿ ಸುಮಾರು ಒಂದು ಲಕ್ಷದ ಇಪ್ಪತ್ತು ಸಾವಿರ ಮನೆಗಳನ್ನು ಕಟ್ಟಬೇಕೆನ್ನುವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಹಿಂದೆ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ 'ಆಶ್ರಯ ಯೋಜನೆ' ಜಾರಿಗೆ ಬಂತು. ಅದಕ್ಕಿಂತ ಮುಂಚಿತವಾಗಿ ಮಂಡಲ ಪಂಚಾಯಿತಿಯವರು ನಿವೇಶನಗಳನ್ನು ವಿತರಿಸುತ್ತಿದ್ದರು. ಮಂಡಲ ಪಂಚಾಯಿತಿಯವರು ನಿವೇಶನಗಳನ್ನು ವಿತರಿಸುತ್ತಿದ್ದಂಥ ಸಂದರ್ಭದಲ್ಲಿ ಗ್ರಾಮ ಠಾಣದಲ್ಲಿ ಅಥವಾ ಗೋಮಾಳದಲ್ಲಿ ನಿವೇಶನವಿದ್ದರೆ ಮಾಡುವುದಕ್ಕಾಗುತ್ತಿತ್ತೇ ಹೊರತು ಬೇರೆ ಜಾಗವನ್ನು ಸ್ವಾಧೀನಪಡಿಸಿಕೊಂಡಾಗಲಿ ಅಥವಾ ಸರ್ಕಾರ ಜಾಗದ ನಿವೇಶನದಲ್ಲಿ ಮಾಡುವುದಕ್ಕಾಗುತ್ತಿರಲಿಲ್ಲ. ನಂತರ, ಸರ್ಕಾರದವರು ಆಯಾ ಕ್ಷೇತ್ರದ ಶಾಸಕರುಗಳ ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ರಚಿಸಿ ನಿವೇಶನ ಹಾಗೂ ಮನೆಗಳನ್ನು ಹಂಚತಕ್ಕಂಥ ಕೆಲಸವನ್ನು ವಹಿಸಿಕೊಟ್ಟರು. ಹಿಂದಿನ ಸರ್ಕಾರವಿದ್ದಾಗ ನಿವೇಶನವನ್ನು ಹೆಚ್ಚಿನ ಸಂಖ್ಯೆಯಲ್ಲಿ ತ್ವರಿತವಾಗಿ ಹಂಚಿರುವುದನ್ನು ನಾವು ನೋಡಿದ್ದೇವೆ. ತದನಂತರ, ಈ ನಿವೇಶನ ಹಾಗೂ ಮನೆಗಳನ್ನು ಹಂಚುವ ಕೆಲಸವನ್ನು ತಾಲ್ಲೂಕು ಪಂಚಾಯಿತಿಗೆ ವಹಿಸಿಕೊಟ್ಟಿದ್ದೀರಿ. ಇದರಿಂದ ಒಂದೇ ಒಂದು ನಿವೇಶನವನ್ನೂ ಸಹ ಕೊಡುವುದಕ್ಕಾಗಲಿಲ್ಲ. ಕಾರಣ, ಆಗಲೇ ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಇದರ ಬಗ್ಗೆ ಹೇಳಿದರು. ಹಿಂದಿನ ಸರ್ಕಾರವಿದ್ದಾಗ ಸದರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಅಧಿಕಾರವನ್ನು ತಹಶೀಲ್ದಾರರಿಗೆ ಕೊಟ್ಟು ಸರ್ಕಾರಿ ನಿವೇಶನ ಹಾಗೂ ಜಮೀನುಗಳನ್ನು ಗುರ್ತಿಸಬೇಕೆಂದು ಹೇಳಿದ್ದರು. ಅದೇ ಕೆಲಸವನ್ನು ನಾವೇನಾದರೂ ಮಾಡಿದ್ದೆ ಆದರೆ, ಏಕೆಂದರೆ, ತಾಲ್ಲೂಕು ಪಂಚಾಯಿತಿಯಲ್ಲಿರುವ ಅಧಿಕಾರ ಬಹಳ ಸೀಮಿತಿವಾದುದಾಗಿದೆ. ಅವರು ತಹಶೀಲ್ದಾರ್‌ಗಾಗಲೀ, ಜಿಲ್ಲಾಧಿಕಾರಿಗಳಿಗಾಗಲಿ ಕಮ್ಯಾಂಡ್ ಮಾಡಿ ಇರತಕ್ಕಂತ ನಿವೇಶನಗಳನ್ನಾಗಲೀ, ಜಾಗಗಳನ್ನಾಗಲಿ ಅಥವಾ ಅವುಗಳನ್ನು ಸ್ವಾಧೀನಪಡಿಸಿಕೊಂಡು ಅದಕ್ಕೆ ಬೇಕಾದಂಥ ಹಣ ಕೊಡುವಂಥ ಕೆಲಸವನ್ನು ತಾಲ್ಲೂಕು ಪಂಚಾಯಿತಿಯಲ್ಲಿ ಮಾಡುವುದಕ್ಕಾಗುವುದಿಲ್ಲ. ಅಲ್ಲದೆ, ಮನೆಗಳ ವಿಚಾರದಲ್ಲೂ ಅಷ್ಟೆ. ನಿಮ್ಮ ಕ್ಷೇತ್ರದಲ್ಲಿ ಯಾವ ರೀತಿಯಾಗಿದೆಯೆಂದು ನನಗೆ ಗೊತ್ತಿಲ್ಲ. ನಾನು ಈಗ ವಿಧಾನಸಭಾ ಸದಸ್ಯನಾಗಿದ್ದು ನನ್ನ ಕ್ಷೇತ್ರದ ವ್ಯಾಪ್ತಿಗೆ ನಾಲ್ಕು ತಾಲ್ಲೂಕು ಪಂಚಾಯಿತಿಗಳು ಬರುತ್ತದೆಂದು ನನಗನ್ನಿಸುತ್ತದೆ. ನಮ್ಮ ರಾಜ್ಯದಲ್ಲಿ ನಾಲ್ಕು ತಾಲ್ಲುಕುಗಳಿರುವ ಕ್ಷೇತ್ರ ನನ್ನದೊಂದೇ ಎಂದು ಭಾವಿಸುತ್ತೇನೆ. ಹಾಗಾಗಿ, ನಾನು ನಾಲ್ಕು ತಾಲ್ಲೂಕ ಪಂಚಾಯಿತಿಗಳ ಸಭೆಗಳಿಗೂ ಹೋಗಬೇಕಾಗುತ್ತದೆ. ತಾಲ್ಲೂಕು ಪಂಚಾಯಿತಿಗಳಲ್ಲಿ ಏನಾಗಿದೆಯೆಂದರೆ ನೀವು ಕೊಟ್ಟಿರುವ ಮನೆಗಳನ್ನು ಅಲ್ಲಿರುವ ಸದಸ್ಯರುಗಳು ಸದಸ್ಯವಾರು ರೀತ್ಯ ಹಂಚಿಕೊಂಡಿದ್ದಾರೆ. ಇಲ್ಲಿ ನೀವೇನು ಹೇಳುತ್ತಿದ್ದೀರೆಂದರೆ, ಗ್ರಾಮಸಭೆ ಮುಖಾಂತರ ಬಡವನಿಗೆ... ಅಥವಾ ದಿವಂಗತ ಅಬ್ದುಲ್ ನಜೀರ್ ಸಾಬರವರ ಭಾಷೆಯಲ್ಲಿ ಹೇಳಬಹುದಾದರೆ ಕಟ್ಟಕಡೆಯ ದಟ್ಟ ದರಿದ್ರನಿಗೆ ಈ ಸೌಲಭ್ಯ ಹೋಗಬೇಕೆಂಬುದು. ಅಲ್ಲಿರುವ ತಾಲ್ಲೂಕು ಪಂಚಾಯಿತಿ

ಸದಸ್ಯರುಗಳು 10-20 ಮನೆಗಳನ್ನು ಆರಿಸಿಕೊಂಡು ಅವರಿಗೆ ಬೇಕಾದಂಥ ವ್ಯಕ್ತಿಗಳಿಗೆ ಮನೆಗಳನ್ನು ಕೊಡಬಹುದು. ಉದಾಹರಣೆಗೆ ಹೇಳುವುದಾದರೆ, ಈಗ ನಾನು ಸದಸ್ಯನಾಗಿದ್ದರೆ ಏನು ಮಾಡುತ್ತೇನೆಂದರೆ, 10-20 ಮನೆಗಳನ್ನು ನನ್ನ ಬಂಧುಗಳಿಗೆ, ಸಂಬಂಧಿಕರಿಗೆ, ನೆಂಟರಿಗೆ ಮತ್ತು ನನ್ನ ಮನೆಯಲ್ಲಿ ಕೆಲಸ ಮಾಡುವವರಿಗೆ ಅಂತಹವರಿಗೆ ಕೊಡುತ್ತೇನೆಯೇ ಹೊರತು ಬಡವರಿಗೆ ಮನೆಗಳನ್ನು ಕೊಡುವ ಕೆಲಸ ಮಾಡುವುದಿಲ್ಲ.

ಆದರ ನಾನು ಹಾಗೆ ಯಾವತ್ತೂ ಮಾಡುವುದಿಲ್ಲ. ಅದೇ ರೀತಿ ನನ್ನ ಕ್ಷೇತ್ರದ ತಾಲ್ಲೂಕು ಪಂಚಾಯಿತಿಗಳಲ್ಲಿ ನಡೆದಿದೆ. ಈಗ ಮನೆಗಳ ಹಂಚಿಕೆ ಕಾರ್ಯ ಏನು ನಡೆಯುತ್ತಿದೆ, ಇದು ಕಡ್ಡಾಯವಾಗಿ ಗ್ರಾಮಸಭೆಯ ಮುಖಾಂತರವೇ ಆಗಬೇಕೆಂದು ಮಾಡಿದ್ದೇ ಆದರೆ, ಆ ಊರುಗಳಲ್ಲಿ ಯಾರು ಬಡವರಿದ್ದಾರೆಂದು ಗ್ರಾಮಸಭೆಗಳಲ್ಲಿ ಗುರ್ತಿಸಿದ್ದೇ ಆದರೆ ಅಂತಹ ಬಡವರಿಗೆ ನಾವು ಮನೆಗಳನ್ನು ಕೊಡತಕ್ಕಂಥ ಕೆಲಸವಾಗಬಹುದು. ಈ ಕೆಲಸ ಆಗದೆ ಇದ್ದು ಪಕ್ಷದಲ್ಲಿ ಹಿಂದೆ ಶಾಸಕರುಗಳ ಅಧ್ಯಕ್ಷತೆಯಲ್ಲಿ ಮನೆಗಳು ಹಾಗೂ ನಿವೇಶನಗಳನ್ನು ಹಂಚುವುದಕ್ಕಾಗಿ ರಚಿಸಿದ್ದ ಸಮಿತಿಯಂತೆ ಮಾಡಿದರೆ ನಾವು ಬಡವರಿಗೆ ಹೆಚ್ಚಿನ ಸಂಖ್ಯೆಯಲ್ಲಿ ನಿವೇಶನ ಕೊಡುವುದಕ್ಕೆ ಅನುಕೂಲವಾಗಬಹುದು. ನಾನು ವಿಕೇಂದ್ರಿಕರಣದ ವಿರುದ್ಧ ಮಾತನಾಡುವುದಕ್ಕೆ ತಯಾರಿಲ್ಲ. ವಾಸ್ತವಿಕವಾಗಿ ಏನು ಸಮಸ್ಯೆಗಳಿವೆಯೆಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದನ್ನು ಮಾಡುವಾಗ ಐಆರ್‌ಡಿಪಿ ಆಗಲೀ, ಮನೆಗಳ ವಿತರಣೆ ಕೆಲಸವಾಗಲೀ, ನಿವೇಶನಗಳ ವಿತರಣೆ ಕೆಲಸವಾಗಲಿ ಇದನ್ನು ಗ್ರಾಮಸಭೆಯ ಮುಖಾಂತರ ಕಡ್ಡಾಯವಾಗಿ ಮಾಡದೇ ಇದ್ದರೆ ಸೂಕ್ತ ಫಲಾನುಭವಿಗಳಿಗೆ ಯಾವ ಸವಲತ್ತು ಸೇರಬೇಕೋ ಅದು ಸೇರುವುದಿಲ್ಲವಾದ್ದರಿಂದ ಈ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು 'ನಿರ್ಮಲ ಗ್ರಾಮ ಯೋಜನೆ' ಎಂಬ ಕಾರ್ಯಕ್ರಮ ಹಮ್ಮಿಕೊಂಡು ಮಂಡಲ ಪಂಚಾಯಿತಿಗಳಲ್ಲಿ ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ. ನಿರ್ಮಲ ಗ್ರಾಮ ಯೋಜನೆಯಲ್ಲಿ ನೀರಿಲ್ಲದೆ ಮಲೀನವಾಗಲು ಶುರುವಾಗಿದೆ. ಕುಡಿಯುವ ನೀರಿನ ಸಮಸ್ಯೆಯಿರುವ ಅನೇಕ ಹಳ್ಳಿಗಳಲ್ಲಿ ಶೌಚಾಲಯ ನಿರ್ಮಿಸಬೇಕಾದರೆ, ಅಲ್ಲಿದೆ ಆಸ್ಪತ್ರೆಯಾಗಲೀ, ಶಾಲಾ ಕಟ್ಟಡ ಸಾಧ್ಯವಿಲ್ಲ. ನೀರಿನ ಸಮಸ್ಯೆ ಎಲ್ಲಿಯವರೆಗೆ ಬಗೆಹರಿಯುವುದಿಲ್ಲವೋ ಅಲ್ಲಿಯವರೆಗೆ ಸದರಿ ಯೋಜನೆ ಕಾರ್ಯಗತವಾಗುವುದು ಕಷ್ಟ. ಕುಡಿಯುವ ನೀರಿನ ಸಮಸ್ಯೆ ಜೊತೆಗೆ ಇನ್ನೂ ಅನೇಕ ಸಮಸ್ಯೆಗಳಿವೆ. ಏಕೆಂದರೆ, ಇವೊತ್ತು ಬೋರ್ ವೆಲಗಳನ್ನು ಕೊರೆದರೂ ಸುಮಾರು ನಾಲ್ಕು ಅಥವಾ ಐದು ಸಾವಿರ ಗ್ಯಾಲನನಷ್ಟು ನೀರು ಇದೆಯೆಂದರೆ ಮುಂದಿನ ಇನ್ನೊಂದು ವರ್ಷಕ್ಕೆ ಬತ್ತಿಹೋಗಿರುತ್ತದೆ. ಈ ದಿಶೆಯಲ್ಲಿ ಇದಕ್ಕೇನಾದರೂ ಬೇರೆಮಾರ್ಗ ಕಂಡುಹಿಡಿದು ಕೆರೆ ಅಥವಾ ನದಿಗಳ ಮುಖಾಂತರ ಹಳ್ಳಿಗಳಲ್ಲಿರುವ ನೀರಿನ ಸಮಸ್ಯೆಯನ್ನು ಬಗೆಹರಿಸುವ ಕಡೆ ಹೆಚ್ಚಿನ ಆದ್ಯತೆ ಕೊಟ್ಟು ಶೌಚಾಲಯ ಮತ್ತು ನಿರ್ಮಲ ಗ್ರಾಮ ಯೋಜನೆಯನ್ನು ಕಾರ್ಯಗತಗೊಳಿಸುವುದು ಬಹಳ ಸೂಕ್ತವೆಂದು ನಾನು ಭಾವಿಸುತ್ತೇನೆ. ಇದರ ಜೊತೆಗೆ ಗ್ರಾಮಾಂತರ ಪ್ರದೇಶದ ಅನೇಕ ಶಾಲೆಗಳಲ್ಲಿ ಅಧ್ಯಾಪಕರುಗಳನ್ನು ನೇಮಿಸುವುದಕ್ಕಾಗುತ್ತಿಲ್ಲ, ಶಾಲಾ ಕಟ್ಟಡಗಳಲ್ಲಿ, ಇನ್ನು ಮುಂತಾದ ಅನೇಕ ಸಮಸ್ಯೆಗಳಿವೆ. ಇಂತಹ

ಸಂದರ್ಭದಲ್ಲಿ ಗ್ರಾಮಾಂತರ ಪ್ರದೇಶದಲ್ಲಿರುವ ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಪಡೆಯುವುದಕ್ಕಾಗುತ್ತಿಲ್ಲ. ಅವರಿಗೆ ಸರ್ಕಾರದಿಂದ ಯಾವುದೇ ಸಂದರ್ಶನ ಕರೆ ಬಂದಾಗ ಗ್ರಾಮೀಣ ಯುವಕರಿಗೆ ಸರ್ಕಾರಿ ನೌಕರಿ ಸಿಗುವುದು ಬಹಳ ಕಷ್ಟದ ಸಂದರ್ಶನ ಕರೆ ಬಂದಾಗ ಗ್ರಾಮೀಣ ಯುವಕರಿಗೆ ಸರ್ಕಾರಿ ನೌಕರಿ ಸಿಗುವುದು ಬಹಳ ಕಷ್ಟದ ಕೆಲಸ. ಇದು ನಮಗೆಲ್ಲಾ ಗೊತ್ತಿದೆ. ಆದುದರಿಂದ, ಗ್ರಾಮೀ ಅಭ್ಯರ್ಥಿಗಳಿಗೆ ನೇಮಕಾತಿ ಸಮಯದಲ್ಲಿ ಅವರಿಗೆ ವೇಟೇಜ್ ಅಂಕಗಳನ್ನು ಕೊಡಬೇಕೆಂಬ ತೀರ್ಮಾನ ಮಾಡಿದೆ. ಇದು ನಿಜವಾಗಿಯೂ ಒಳ್ಳೆಯ ಕೆಲಸವಾಗಿದ್ದು, ವೇಟೇಜ್ ಅಂಕಗಳನ್ನು ಕೊಡುವಂತಾದರೆ ಗ್ರಾಮೀಣ ಪ್ರದೇಶದ ವಿದ್ಯಾರ್ಥಿ ಹಾಗೂ ಯುವಕರಿಗೆ ಹೆಚ್ಚು ಅನುಕೂಲವಾಗುತ್ತದಾದ್ದರಿಂದ ವೇಟೇಜ್ ಅಂಕಗಳನ್ನು ಹೆಚ್ಚು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಬಡವರಿಗೆ ಕಡಿಮೆ ದರದಲ್ಲಿ ಅಂದರೆ ಒಂದು ಕಿಲೋಗ್ರಾಂ ಅಕ್ಕಿಗೆ ರೂ. 3.20 ಪೈಸೆಯಲ್ಲಿ ವಿತರಿಸಲಾಗುವುದೆಂದು ಚುನಾವಣಾ ಸಂದರ್ಭದಲ್ಲಿ ನಮ್ಮ ಸರ್ಕಾರ ಘೋಷಿಸಿತ್ತು. ಇದನ್ನು ಸಬ್ಸಿಡಿ ರೀತ್ಯ ಕೊಡುವಂತೆ ಆಯವ್ಯಯದಲ್ಲಿ ಸಾಕಷ್ಟು ಹಣವನ್ನು ಒದಗಿಸಿದ್ದಾರೆ. ಹಸಿರು ಕಾರ್ಡುದಾರರಿಗೆ ಜನವರಿ-ಮಾರ್ಚಿ ಹೊತ್ತಿಗೆ ಸದರಿ ಸೌಲಭ್ಯ ಕಲ್ಪಿಸಿಕೊಡುತ್ತೇವೆಂದು ಏನು ಘೋಷಿಸಿದ್ದೀರಿ, ಹಾಗೆ ಘೋಷಣೆಯಂತೆ ಮಾಡುವುದಕ್ಕಾಗಲಿಲ್ಲ. ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಮಂತ್ರಿಗಳು ಸದನದಲ್ಲಿದ್ದಾರೆ. ಮಾರ್ಚಿ-ಎಪ್ರಿಲ್ ತಿಂಗಳೊಳಗೆ ಹಸಿರು ಕಾರ್ಡುದಾರರನ್ನು ಗುರ್ತಿಸಲು ಏನು ಸಮೀಕ್ಷೆಯಾಗಿದೆ, ಹಾಗೆ ಸಮೀಕ್ಷೆಯಾಗದಿರುವ ಕಡೆ ಅಧಿಕಾರಿಗಳನ್ನು ಕಳುಹಿಸಿ ಸಮೀಕ್ಷೆ ಮಾಡಬೇಕೆಂದು ತಿಳಿಸಿ, ಸಮೀಕ್ಷಾ ಕಾರ್ಯ ವಿಳಂಬವಾಗುವುದಕ್ಕೆ ಕಾರಣ ಕೇಳಿದಾಗ ಕಂದಾಯ ಮತ್ತು ಆಹಾರ ಇಲಾಖಾ ನೌಕರರ ನಡುವೆ ಸಮಸ್ಯೆಯಿದ್ದು ವಿತರಣಾ ಚೀಟಿಯನ್ನು ಸರಿಯಾದ ರೀತಿಯಲ್ಲಿ ಮಾಡುವುದಕ್ಕಾಗಲಿಲ್ಲವೆಂದು ಹೇಳಿದರು. ಈಗ ವಿತರಣಾ ಕಾರ್ಯಕ್ರಮ ಆರಂಭವಾಗಿದ್ದು, ಎಲ್ಲಾ ಹಳ್ಳಿಗಳಲ್ಲೂ ಸಮೀಕ್ಷೆ ಕಾರ್ಯ ಮುಗಿದಿದ್ದು ಮಾರ್ಚಿ ತಿಂಗಳ ಅಂತ್ಯದೊಳಗೆ ಹಸಿರು ಚೀಟಿಗಳನ್ನು ವಿತರಿಸಿದರೆ ಅನುಕೂಲವಾಗುತ್ತದೆ. ಜೊತೆಗೆ ನಗರ ಪ್ರದೇಶಗಳಲ್ಲಿರುವ ಐದು ಲಕ್ಷ ಬಡ ಕುಟುಂಬದವರಿಗೆ ಹಸಿರು ಕಾರ್ಡು ವಿತರಿಸುವ ಏನು ಕಾರ್ಯಕ್ರಮ ಹಾಕಿಕೊಂಡಿದೆ, ಇದು ಬಹಳ ಒಳ್ಳೆಯ ಯೋಜನೆಯಾಗಿರುವುದರಿಂದ ಅದನ್ನು ತ್ವರಿತವಾಗಿ ಜಾರಿಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

5.30 ಪಿ.ಎಂ.

ಜೊತೆಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರಿಗೆ 180 ವಿದ್ಯಾರ್ಥಿ ನಿಲಯಗಳನ್ನು ಮಾಡಿರತಕ್ಕದ್ದು, ಹಿಂದುಳಿದ ವರ್ಗಗಳಿಗೆ 75 ವಿದ್ಯಾರ್ಥಿ ನಿಲಯಗಳನ್ನು ಮಾಡಿರತಕ್ಕದ್ದು, ಪರಿಶಿಷ್ಟಜಾತಿ/ ಪರಿಶಿಷ್ಟ ಪಂಗಡವರಿಗೆ 70 ಸಾವಿರ ಮನೆಗಳನ್ನು ನಿರ್ಮಾಣ ಮಾಡಿರತಕ್ಕಂಥಹ ಒಳ್ಳೆಯ ಕಾರ್ಯಕ್ರಮವನ್ನು ಸರ್ಕಾರ ಮಾಡಿದೆ. ಇದರ ಜೊತೆಗೆ 'ಗಂಗಾ ಕಲ್ಯಾಣ' ಎಂಬ ಯೋಜನೆಯೊಂದನ್ನು ಆರಂಭಿಸಲಾಗಿದೆ. ಇದಕ್ಕೆ ಸಾಕಷ್ಟು ಹಣವನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ ಎಂದು ಆಗಲೇ ನಮ್ಮ ವಿತ್ತ ಮಂತ್ರಿಗಳು ತಿಳಿಸಿದ್ದಾರೆ. ತಾವು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದವರು ಎಂದು ಸುಳ್ಳು ಜಾತಿ

ಸರ್ಟಿಫಿಕೇಟಗಳನ್ನು ಬಳಸಿಕೊಂಡು ನೌಕರಿಯನ್ನು ಪಡೆಯುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿರುವುದು ಮಾನ್ಯ ಅಧ್ಯಕ್ಷರ ಗಮನಕ್ಕೆ ಬಂದಿರಬಹುದು ಅಥವಾ ತಮ್ಮ ಕ್ಷೇತ್ರದಲ್ಲೂ ಈ ರೀತಿಯ ಪ್ರಕರಣಗಳು ನಡೆದಿರಬಹುದು. 'ಜಂಗಮ ಜಾತಿಯವರು 'ಬೇಡ ಜಂಗಮ' ಎಂದು ಹೇಳಿಕೊಂಡು ಸುಳ್ಳು ಜಾತಿ ಸರ್ಟಿಫಿಕೇಟ್ ಪಡೆದುಕೊಳ್ಳುತ್ತಾರೆ. ಅದೇ ರೀತಿ ಮುಸಾಲ್ಮಾನರು 'ದರ್ವೇಸಿ' ಎಂದು ಹಾಗೂ ಕುರುಬರು 'ಕಾಡು ಕುರುಬ' ಎಂದು ಸುಳ್ಳು ಜಾತಿ ಸರ್ಟಿಫಿಕೇಟಗಳನ್ನು ಪಡೆದುಕೊಂಡು ನೌಕರಿಗೆ ಸೇರುತ್ತಿದ್ದಾರೆ. ಇದು ಕೇವಲ ನೌಕರಿ ಸೇರಲಿಕ್ಕೆ ಮಾತ್ರವಲ್ಲ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಇರುವ ಹಲವಾರು ಸೌಲಭ್ಯಗಳನ್ನು ಪಡೆದು ಕೊಳ್ಳಲೂ ಸಹ ಈ ಸುಳ್ಳು ಜಾತಿ ಸರ್ಟಿಫೀಕೇಟ್ ಗಳನ್ನು ಬಳಸಿಕೊಳ್ಳಲಾಗುತ್ತಿದೆ. ಈ ರೀತಿಯ ಸುಳ್ಳು ಜಾತಿ ಸರ್ಟಿಫಿಕೇಟ್ ತೆಗೆದುಕೊಂಡವನಿಗೂ ಮತ್ತು ಅಂತಹ ಸರ್ಟಿಫಿಕೇಟ್‌ಗಳನ್ನು ಕೊಟ್ಟಂತಹ ಅಧಿಕಾರಿಗಳನ್ನು ಸೂಕ್ತ ರೀತಿಯ ಶಿಕ್ಷಿಸಿದ್ದೇ ಆದರೆ, ಈ ರೀತಿಯ ಪ್ರಕರಣಗಳು ಕಡಿಮೆಯಾಗಬಹುದು ಎಂಬುದು ನನ್ನ ಭಾವನೆಯಾಗಿದೆ. ಸರ್ಕಾರದವರು ಇದರ ಕಡೆಗೆ ಗಮನ ಹರಿಸಿ ಸರಿಯಾದ ವ್ಯಕ್ತಿಗಳಿಗೆ, ಆಯಾಯ ವರ್ಗಕ್ಕೆ ಸೇರಿದ ವ್ಯಕ್ತಿಗಳಿಗೆ ಮಾತ್ರವೇ ಜಾತಿ ಸರ್ಟಿಫಿಕೇಟ್ ಗಳನ್ನು ಕೊಡತಕ್ಕ ಕೆಲಸವನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಕೊನೆಯದಾಗಿ ಕೆರೆಗಳ ಒತ್ತುವರಿ ಬಗ್ಗೆ ಹೇಳಲಿಚ್ಛಿಸುತ್ತೇನೆ. ಇವತ್ತು ಅನೇಕ ಕೆರೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ಒತ್ತುವರಿ ಆಗಿದೆ. ನಾವು ಇವುಗಳ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳದೇ ಮುಂದಿನ 4-5 ವರ್ಷಗಳವರೆಗೆ ಇದೇ ರೀತಿ ಬಿಟ್ಟಿದ್ದೇ ಆದರೆ, ಕೆರೆ ಈ ಗ್ರಾಮದಲ್ಲಿ ಇತ್ತೇ? ಎಂದು ನಾವು ಹುಡುಕತಕ್ಕ ಪರಿಸ್ಥಿತಿ ಬರಬಹುದು. ಈ ರೀತಿ ಕೆರೆಗಳನ್ನು ಒತ್ತುವರಿ ಮಾಡಿಕೊಂಡಿರತಕ್ಕ ಪ್ರಭಾವಿ ವ್ಯಕ್ತಿಗಳೇನಿದ್ದಾರೆ, ಅವರುಗಳ ಮೇಲೆ ಗೂಂಡಾ ಆಕ್ಟ ಅನ್ವಯ ಕ್ರಮ ಜರುಗಿಸಿ ಕೆರೆಗಳ ಒತ್ತುವರಿ ಮಾಡಿಕೊಂಡಿರುವುದನ್ನು ತೆರವು ಮಾಡಿಸುವುದಾಗಿ ಮಾನ್ಯ ಕಂದಾಯ ಮಂತ್ರಿಗಳು ಒಂದು ಸಲ ಹೇಳಿದ್ದರು. ನಾವು ಆ ರೀತಿ ಮಾಡದೇ ಇದ್ದಲ್ಲಿ ಯಾವ ಹಳ್ಳಿಯಲ್ಲೂ ಕೆರೆಗಳು ಉಳಿಯುವುದಿಲ್ಲ ಎಂಬ ಮಾತನ್ನು ಹೇಳಲಿಚ್ಛಿಸುತ್ತೇನೆ. ಅದಕ್ಕಾಗಿ ತಾಲ್ಲೂಕಿಗೆ ಗೊಬ್ಬರವಾದರೂ ಸರ್ವೇಯರಗಳನ್ನು ಕೆರೆಗಳ ಸರ್ವೆ ಮಾಡುವುದಕ್ಕೋಸ್ಕರ ನೇಮಿಸಿ, ಆ ಕೆರೆಗಳ ಒತ್ತುವರಿ ಆಗಿರುವುದನ್ನು ಬಿಡಿಸಿದ್ದೇ ಆದರೆ, ಆಯಾ ಊರುಗಳಲ್ಲಿ ಕೆರೆಗಳು ಉಳಿಯತಕ್ಕ ಕೆಲಸ ಆಗಬಹುದು ಎಂದು ನಾನು ಭಾವಿಸುತ್ತೇನೆ. ಇದರ ಜೊತೆಗೆ ಮಾನ್ಯ ವಿತ್ತ ಮಂತ್ರಿಗಳು ಮತ್ತೊಂದು ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅದೇನೆಂದರೆ ಹಣಕಾಸು ಆಯೋಗದ ರಚನೆ. ನಾವು ಬಹಳ ವರ್ಷಗಳಿಂದ ಈ ಆಯೋಗದ ರಚನೆಯಾಗಲೀ ಎಂದು ಕೇಳುತ್ತಿದ್ದೆವು. ಸ್ಥಳೀಯ ಸಂಸ್ಥೆಗಳಿಗೆ ಇದರಿಂದ ಅನುಕೂಲ ಆಗುತ್ತದೆ ಎನ್ನತಕ್ಕಂಥ ಅಭಿಪ್ರಾಯದಿಂದ ಆಯೋಗದ ರಚನೆ ಇದರಿಂದ ಅನುಕೂಲ ಆಗುತ್ತದೆ ಎಂದು ಕೇಳುತ್ತಿದ್ದೆವು. ಆಯೋಗದ ರಚನೆ ಮಾಡಲು ಬೇಡಿಕೆ ಇತ್ತು. ಈಗ ವಿತ್ತ ಮಂತ್ರಿಗಳು ಅಂತಹ ಆಯೋಗದ ರಚನೆ ಮಾಡಿದ್ದಾರೆ. ಜೊತೆಗೆ 60 ಕೋಟಿ ರೂಪಾಯಿಗಳ ಹೆಚ್ಚುವರಿ ಹಣವನ್ನೂ ಸಹ ಇದಕ್ಕೆ ನಿಗದಿ ಮಾಡಿದ್ದಾರೆ. ನಿಜವಾಗಿ ಅದಕ್ಕೆ ನಾವು ಸ್ವಾಗತವನ್ನು ಮಾಡುತ್ತೇವೆ. ಸರ್ಕಾರ ಏನು ಈಗ ಗ್ರಾಮೀಣಾಭಿವೃದ್ಧಿ, ಕುಡಿಯುವ ನೀರಿನ ಸರಬರಾಜು, ಶಿಕ್ಷಣ ಮತ್ತು ಗ್ರಾಮಾಂತರ ಉದ್ಯೋಗದ ಕಡೆಗೆ ಹೆಚ್ಚಿನ ಗಮನಹರಿಸಬೇಕೆಂದು ಈ ಆಯವ್ಯಯದಲ್ಲಿ ತಂದಿದ್ದಾರೆ, ಅದನ್ನು ನಾನು ಸ್ವಾಗತ

ಮಾಡುತ್ತಾ ನನಗೆ ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶಾಸನ ರಚನೆ ಕಾರ್ಯಕಲಾಪಗಳು

ಮೈಸೂರು (ವೈಯಕ್ತಿಕ ಮತ್ತು ಸಂಕೀರ್ಣ) ಇನಾಮುಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕ 1996.

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1996 ಮೈಸೂರು (ವೈಯಕ್ತಿಕ ಮತ್ತು ಸಂಕೀರ್ಣ) ಇನಾಮುಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1996ರ ಮೈಸೂರು (ವೈಯಕ್ತಿಕ ಮತ್ತು ಸಂಕೀರ್ಣ) ಇನಾಮುಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1996ರ ಮೈಸೂರು (ವೈಯಕ್ತಿಕ ಮತ್ತು ಸಂಕೀರ್ಣ) ಇನಾಮುಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : **ವಿಧೇಯಕವನ್ನು ಮಂಡಿಸಲಾಗಿದೆ**

ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಭೂಸುಧಾರಣೆಗಳ (ತಿದ್ದುಪಡಿ) ವಿಧೇಯಕ, 1996

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1996ನೇ ಸಾಲಿನ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ (ವಿಧಾನ ಪರಿಷತ್ತಿನಿಂದ ತಿರಸ್ಕೃತವಾಗಿರುವ) ವನ್ನು ಪುನರ್ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಕಂದಾಯ ಮಂತ್ರಿಗಳು ಈ ಮೊದಲು ಮಂಡಿಸಿದ ಮೈಸೂರು ಇನಾಮುಗಳ ರದ್ದಿಯಾತಿ ವಿದೇಯಕದ ಬಗ್ಗೆ ಎಕ್ಸಪ್ಲೈನ್ ಮಾಡಲಿ.